ಹುಬ್ಬಳ್ಳಿ
ಶುಕ್ರವಾರ, 3 ಏಪ್ರಿಲ್ 2026
ಸಂಪುಟ 16, ಸಂಚಿಕೆ 9, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ

ದೀದಿಗೆ ಸುಪ್ರೀಂಕೋರ್ಟ್ ಛೀಮಾರಿ | ೦೩
ಗಡಿಯಲ್ಲಿ ದುಷ್ಕೃತ್ಯ ನಡೆಸಿದರೆ ಹುಷಾರ್ | ೦೩
ಎ.16ರಿಂದ ಮತ್ತೆ ಸಂಸತ್ ಅಧಿವೇಶನ | ೦೩

ಹನುಮಾನ್ ಚಾಲಿಸ್ ಪಠಣ ಕಾರ್ಯಕ್ರಮದಲ್ಲಿ ಮಾಲಾಧಾರಿಗಳ ಭಾಗಿ
ಅಂಜನಾದ್ರಿಯಲ್ಲಿ ಹನುಮ ಜಯಂತಿ

ಕೊಪ್ಪಳ: ಹನುಮ ಹುಟ್ಟಿದ ನಾಡು ಅಂಜನಾದ್ರಿಯಲ್ಲಿ ವಿಜೃಂಭಣೆಯಿಂದ ಹನುಮ ಜಯಂತಿ ಜರುಗಿತು.

ಗುರುವಾರ ಪ್ರಾತಃಕಾಲದಲ್ಲಿ ಅಂಜನೇಯ ಪ್ರಾಣಮೂರ್ತಿ ಎಳೆನೀರು ಅಭಿಷೇಕ, ಕುಂಕುಮಾರ್ಚನೆ, ಮಂಗಳಾರತಿ, ಅಭಿಷೇಕ, ಸಿಂಧೂರ ಸೇವೆ, ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ಪೂಜಾ ಕಾರ್ಯಕ್ರಮಗಳು ಜರುಗಿದವು.

ಸಾಧು-ಸಂತರಿಂದ, ಮಾಲಾಧಾರಿಗಳಿಂದ ಹೋಮ, ಹವನ ನಡೆಯಿತು. ಸಾಧುಗಳು ಹನುಮಾನ್ ಚಾಲಿಸ್ ಪಠಣ ಮಾಡಿದರು. ಹನುಮ ಜಯಂತಿ ನಿಮಿತ್ತ ದೇವಸ್ಥಾನ ಗರ್ಭಗುಡಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು.



ಹನುಮ ಮಾಲಾ ವಿಸರ್ಜನೆ

ಹನುಮ ಮಾಲಾಧಾರಿಗಳು ಸೂರ್ಯೋದಯಕ್ಕೂ ಮುನ್ನ ಬೆಟ್ಟದ ಸಮೀಪದ ಸಣ್ಣ ಕಾಲುವೆ, ಹತ್ತಿರದ ತುಂಗಭದ್ರಾ ನದಿಗಳಲ್ಲಿ ಪುಣ್ಯಸ್ನಾನ ಮಾಡಿ, ಜೈ ಶ್ರೀ ರಾಮ್, ಜೈ ಹನುಮಾನ್ ಘೋಷಣೆ ಕೂಗಿದರು. ಮಾಲೆಯ ವ್ರತದ ಇರುಮುಡಿ ಬಿಚ್ಚಿ, ಮಾಲೆಯನ್ನು ವಿಸರ್ಜಿಸಿ, ಬೆಟ್ಟದಲ್ಲಿ ನಡೆದ ಹೋಮ ಮತ್ತು ಹನುಮಾನ್ ಚಾಲಿಸ್ ಪಠಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸುರಕ್ಷಿತ ಕೈಗಳಲ್ಲಿದ್ದಾರೆ ಭಾರತೀಯ ಸ್ನೇಹಿತರು



ಟೆಹ್ರಾನ್/ಹೊಸದಿಲ್ಲಿ: ಇರಾನ್ ತನ್ನ 'ಭಾರತೀಯ ಸ್ನೇಹಿತರಿಗೆ' ಹಾರ್ಮುಜ್ ಜಲಸಂಧಿ ಮೂಲಕ ಸಾಗಾಟದ ಬಗ್ಗೆ ಯಾವುದೇ ಚಿಂತೆಯಿಲ್ಲ ಎಂದು ಭರವಸೆ ನೀಡಿದ್ದು, ಅವರು 'ಸುರಕ್ಷಿತ ಕೈಗಳಲ್ಲಿ' ಇದ್ದಾರೆ ಎಂದು ಹೇಳಿದೆ.

ವಿವರ ಪುಟ ೩

ಕಿರುಸುದ್ದಿ

ಹನುಮ ಜಯಂತಿ



• **ಕಲಘಟಗಿ:** ಪಟ್ಟಣದ ಗ್ರಾಮದೇವಿ ಗುಡಿ ಓಣಿಯಲ್ಲಿರುವ ದೊಡ್ಡ ಹನುಮಂತ ದೇವರ ದೇವಸ್ಥಾನದಲ್ಲಿ ಹನುಮ ಜಯಂತಿ ಉತ್ಸವ ವಿಜೃಂಭಣೆಯಿಂದ ಜರುಗಿತು. ಪುರಾತನ ದೇವಸ್ಥಾನ ಜೀರ್ಣೋದ್ಧಾರ ಮತ್ತು ನೂತನ ಕಟ್ಟಡ ಲೋಕಾರ್ಪಣೆಯ 5ನೇ ವರ್ಷದ ವಾರ್ಷಿಕೋತ್ಸವ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬೆಳಗ್ಗೆ 6 ಗಂಟೆಗೆ ಹೋಮ, ಮಹಾಪೂಜೆ, ತೊಟ್ಟಿಲೋತ್ಸವಗಳೊಂದಿಗೆ ಪೂಜಾ ಕಾರ್ಯ ನಡೆದವು. ಭಕ್ತಾದಿಗಳು ಮಹಾಪ್ರಸಾದ ಸ್ವೀಕರಿಸಿ ಕೃತಾರ್ಥರಾದರು.

ರಥೋತ್ಸವ ಇಂದು



• **ಕುಂದಗೋಳ:** ಪಟ್ಟಣದ ಕಾಳಿದಾಸ ನಗರದಲ್ಲಿರುವ ಮಾರುತಿ ದೇವಸ್ಥಾನದ ರಥೋತ್ಸವವು ಏ.4ರಂದು ನಡೆಯಲಿದೆ. ಪಟ್ಟಣದ ಶಿತಿಕಂಠೇಶ್ವರ ಶ್ರೀಗಳು, ಶಿವಾನಂದ ಶ್ರೀಗಳು ಹಾಗೂ ಬಸವಣ್ಣಜ್ಜನವರು ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಬಳಿಕ ಕುದುರೆಗಳ ಮೆರವಣಿಗೆ, ಡೊಳ್ಳು-ವಿವಿಧ ವಾದ್ಯ ಮೇಳಗಳೊಂದಿಗೆ ರಥೋತ್ಸವ ವಿಜೃಂಭಣೆಯಿಂದ ನೆರವೇರಲಿದೆ. ಏ.5ರಂದು ಕಾಯಿ ಹರಿಯುವ ಕಾರ್ಯಕ್ರಮ, ಓಕಳಿ ಹಾಗೂ ಕಡುಬಿನ ಕಳಗ ಸೇರಿದಂತೆ ವಿವಿಧ ಸಾಂಪ್ರದಾಯಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಪ್ರಕಟಣೆ ತಿಳಿಸಿದೆ.

ಅಕ್ಕಮಹಾದೇವಿ ಜಯಂತಿ



• **ಧಾರವಾಡ:** ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದಿಂದ ಅಕ್ಕಮಹಾದೇವಿ ಜಯಂತಿ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಏ.5ಕ್ಕೆ ಹಮ್ಮಿಕೊಂಡಿದೆ ಎಂದು ಮಹಾಸಭಾ ರಾಜ್ಯ ಉಪಾಧ್ಯಕ್ಷೆ ಸವಿತಾ ಅಮರಶೆಟ್ಟಿ ಹೇಳಿದರು.
ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೈದ್ಯೆ ಡಾ.ವಿಜಯಲಕ್ಷ್ಮೀ ಬಾಳೆಕುಂದ್ರಿ ಉದ್ಘಾಟಿಸಿ, ಅಕ್ಕಮಹಾದೇವಿ ಚಿಂತನೆ ಬಗ್ಗೆ ಉಪನ್ಯಾಸ ನೀಡುವರು. ಮಹಾನಗರ ಹು-ಧಾ ಪಾಲಿಕೆ ಉಪಆಯುಕ್ತೆ ಅನುರಾಧಾ ವಸ್ತ್ರದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಅಧ್ಯಕ್ಷ ಪ್ರದೀಪ ಪಾಟೀಲ ಅಧ್ಯಕ್ಷತೆ ವಹಿಸುವರು. ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಭಾಗವಹಿಸಲಿದ್ದು, ರತಿಕಾ ನೃತ್ಯ ನಿಕೇತನ ವಿದ್ಯಾರ್ಥಿಗಳಿಂದ ವಚನನೃತ್ಯ ಜರುಗಲಿದೆ ಎಂದರು. ನಂತರ ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರಿಗೆ ಸನ್ಮಾನಿಸುವುದಾಗಿ ಹೇಳಿದರು. ಡಾ.ಪಾವತಿ ಹಾಲಭಾವಿ, ಡಾ.ಸುವರ್ಣ ಬಿರಾದಾರ, ವಿಜಯಲಕ್ಷ್ಮೀ ಕಲ್ಯಾಣಶೆಟ್ಟರ್, ಸುಧಾ ಕಬ್ಬೂರ, ನಾಗರತ್ನ ಹಡಗಲಿ, ಸಂಧ್ಯಾ ಅಂಬಡಗಟ್ಟಿ, ಜಯಶ್ರೀ ಪಾಟೀಲ ಇದ್ದರು.

ವಾರ್ಷಿಕ ಸಂಗೀತೋತ್ಸವ



• **ಧಾರವಾಡ:** ಸ್ವರ ಲಯಾರಾಧನೆ ಸಂಗೀತ ಸಂಸ್ಥೆಯ ಸಂಗೀತ ಹಾಗೂ ಸುಮಧ್ವ ಸಂಗೀತ ವಿದ್ಯಾಲಯ ಆಶ್ರಯದಲ್ಲಿ ಸಂಗೀತೋತ್ಸವ ಏ.5ಕ್ಕೆ ನಗರದ ಆಲೂರು ವೆಂಕಟರಾವ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆ ಅಧ್ಯಕ್ಷ ಜಯತೀರ್ಥ ಪಂಚಮುಖಿ ಹೇಳಿದರು.
ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 9ಕ್ಕೆ ಗಾಯಕಿ ರಾಧಿಕಾ ಕಾಖಂಡಕಿ ಹಾಗೂ ನಿವೃತ್ತ ಪ್ರಾಧ್ಯಾಪಕ ಮುರುಳೀಧರ ಪಂಚಮುಖಿ ಚಾಲನೆ ನೀಡಲಿದ್ದು, ನಂತರ ವಿದ್ಯಾಲಯದ ಮಕ್ಕಳಿಂದ ಗಾಯನ ಮತ್ತು ತಬಲಾ ವಾದನ ನಡೆಯಲಿದೆ. ಮಧ್ಯಾಹ್ನ 12ಕ್ಕೆ ಕಲಾವಿದ ಪಂ. ಸದಾಶಿವ ಐಹೊಳಿ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಜರುಗಲಿದ್ದು, ಸಂಜೆ 6ಕ್ಕೆ ಸಭಾ ಕಾರ್ಯಕ್ರಮಕ್ಕೆ ಪದ್ಮಶ್ರೀ ಪಂ. ಎಂ.ವೆಂಕಟೇಶಕುಮಾರ್ ಉದ್ಘಾಟಿಸಲಿದ್ದು, ವೇದಮೂರ್ತಿ ರಮೇಶ ಭಟ್ ಜೋಶಿ ಪಾಲ್ಗೊಳ್ಳಲಿದ್ದಾರೆ ಎಂದರು. ನ್ಯಾಯವಾದಿ ಡಾ.ಉದಯಕುಮಾರ ದೇಸಾಯಿ, ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ, ಕಲಾವಿದ ಪಂ.ಅನಂತ ಕುಲಕರ್ಣಿ ಪಾಲ್ಗೊಳ್ಳಲಿದ್ದು, ಅರ್ಜುನ ಕಾಳಿಪ್ರಸಾದ ಅವರಿಂದ ತಬಲಾ ಸ್ವತಂತ್ರ ವಾದನ ಜರುಲಗಿದೆ ಎಂದರು. ಸಂಜೆ 6.30ಕ್ಕೆ ಬಾಗಲಕೋಟೆಯ ಪಂ. ಅನಂತ ಕುಲಕರ್ಣಿ ಹರಿದಾಸಗಾನ ವೈಭವ ಜುರಗಲಿದೆ. ಸುಮಧ್ವ ಸಂಗೀತ ವಿದ್ಯಾಲಯದ ಮಕ್ಕಳು ಗಾಯನ, ತಬಲಾ ವಾದನ ಜರುಗಲಿದ್ದು, ಕಿರಿಯರಿಗೆ ವೇದಿಕೆ ಕಲ್ಪಿಸುವುದು ಕಾರ್ಯಕ್ರಮದ ಉದ್ದೇಶ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕಾರ್ಯದರ್ಶಿ ವೈಷ್ಣವಿ ಪಂಚಮುಖಿ, ಅರವಿಂದ ಕುಲಕರ್ಣಿ ಇದ್ದರು.



ಅಳ್ನಾವರ: ಇಲ್ಲಿನ ಅಕ್ಕಮಹಾದೇವಿ ದೇವಸ್ಥಾನದಲ್ಲಿ ವಚನಗಾರ್ತಿ ಶರಣೆ ಅಕ್ಕಮಹಾದೇವಿಯ ಜಯಂತಿ ಆಚರಿಸಲಾಯಿತು. ಬೆಳಗ್ಗೆ ತೊಟ್ಟಿಲೋತ್ಸವ ನಂತರ ಪೂಜಾ ಕಾರ್ಯಕ್ರಮ ಜರುಗಿತು. ಸ್ಥಳೀಯ ಅಕ್ಕಮಹಾದೇವಿ ಮಹಿಳಾ ಮಂಡಳದ ಸುಮಾ ಸೋಪ್ಪಿ, ಸುವರ್ಣಾ ತೇಗೂರ, ಮಂಜುಳಾ ಅಂಬಡಗಟ್ಟಿ, ಪೂರ್ಣಿಮಾ ಮುತ್ನಾಳ, ಲೀಲಾವತಿ ಹಸಬಿಮಠ, ಸವಿತಾ ಲಿಂಗನಮಠ, ಪುಷ್ಪಾ ಲಿಂಗನಮಠ, ಅನ್ನಪೂರ್ಣಾ ಹಾನಗಲ್, ಸುವರ್ಣಾ ಪಗಡಿ, ಪುಷ್ಪಾ ಹಿರೇಮಠ, ಶೋಭಾ ಬೈಲೂರ ಪಾಲ್ಗೊಂಡಿದ್ದರು.

ಏ.5ಕ್ಕೆ ಮಾತೃಬಂಟ ಪ್ರತಿಭಾ ಸ್ಪಂದನ ಲಿಖಿತ ಪರೀಕ್ಷೆ

• **ಹುಬ್ಬಳ್ಳಿ:** ಹುಬ್ಬಳ್ಳಿ-ಧಾರವಾಡ ಬಂಟರ ಸಂಘ ಹಾಗೂ ಮಾತೃಭೂಮಿ ಚಾರಿಟೇಬಲ್ ಟ್ರಸ್ಟ್ ಸಹಯೋಗದ ಆರ್.ಎನ್.ಎಸ್ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲೆಯ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಮಾತೃಬಂಟ ಪ್ರತಿಭಾ ಸ್ಪಂದನ ಲಿಖಿತ ಪರೀಕ್ಷೆಯನ್ನು ಏ.5ರಂದು ಹಮ್ಮಿಕೊಳ್ಳಲಾಗಿದೆ ಎಂದು ಆಡಳಿತ ಮಂಡಳಿಯ ಮ್ಯಾನೇಜಿಂಗ್ ಟ್ರಸ್ಟಿ ಎಂ. ಸತೀಶ್ಚಂದ್ರ ಶೆಟ್ಟಿ ತಿಳಿಸಿದ್ದಾರೆ.
ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಶಿಕ್ಷಣ, ಸಾಂಸ್ಕೃತಿಕ, ಕ್ರೀಡೆಯಲ್ಲಿ ಸಾಧಕರಾಗಿದ್ದು, ಆರ್ಥಿಕವಾಗಿ ಸಬಲರಲ್ಲದ 5 ವಿದ್ಯಾರ್ಥಿಗಳಿಗೆ ಸಂಪೂರ್ಣ ಉಚಿತ ಶಿಕ್ಷಣ ನೀಡಲಾಗುತ್ತದೆ. ಶೈಕ್ಷಣಿಕವಾಗಿ ಸಾಧನೆ ಮಾಡಿದ 3 ವಿದ್ಯಾರ್ಥಿಗಳು ಹಾಗೂ ಕ್ರೀಡಾ ಸಾಧನೆ ಮಾಡಿದ ಒಬ್ಬ ವಿದ್ಯಾರ್ಥಿ ಹಾಗೂ ಸಾಂಸ್ಕೃತಿಕವಾಗಿ ಸಾಧನೆ ಮಾಡಿದ ಇನ್ನೊಬ್ಬ ವಿದ್ಯಾರ್ಥಿ ಸೇರಿ ಒಟ್ಟು 5 ವಿದ್ಯಾರ್ಥಿಗಳ ಆಯ್ಕೆ ನಡೆಯಲಿದೆ. ಪ್ರತಿಭಾವಂತ ಅರ್ಹ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿಯ ಅವಕಾಶವಿದೆ. ಆಸಕ್ತ ವಿದ್ಯಾರ್ಥಿಗಳು ಅಂದು ಬೆಳಗ್ಗೆ 10 ಗಂಟೆಗೆ ಆರ್.ಎನ್.ಎಸ್ ಪದವಿ ಪೂರ್ವ ಕಾಲೇಜಿನಲ್ಲಿ ಮಾತೃಬಂಟ ಪ್ರತಿಭಾ ಸ್ಪಂದನ ಪ್ರವೇಶ ಪರೀಕ್ಷೆಯನ್ನು ಬರೆಯಬೇಕು. ಈ ಬಗ್ಗೆ ಗೂಗಲ್ ಫಾರಂ ಮೂಲಕ ನೋಂದಾಯಿಸಿಕೊಳ್ಳಬೇಕು. ಗಣಿತ ಹಾಗೂ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತ ಪರೀಕ್ಷೆ ನಡೆಸಲಾಗುವುದು. ಕ್ರೀಡಾ ಹಾಗೂ ಸಾಂಸ್ಕೃತಿಕ ಸಾಧಕ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವ ಸಮಯದಲ್ಲಿ ಅಗತ್ಯ ದಾಖಲೆಗಳನ್ನು (ಶಾಲಾ ಗುರುತಿನ ಚೀಟಿ ಹಾಗೂ ಆಧಾರ ಕಾರ್ಡ್) ತರಬೇಕು ಎಂದು ತಿಳಿಸಿದ್ದಾರೆ.



ಹುಬ್ಬಳ್ಳಿ: ಇಲ್ಲಿಯ ಬೆಂಗೇರಿಯಲ್ಲಿ ಅದ್ದೂರಿಯಾಗಿ ಆಚರಿಸಿದ ಹನುಮ ಜಯಂತಿ ಉತ್ಸವದಲ್ಲಿ ಸರ್ವಧರ್ಮ ಸಮಾಜ ಸೇವಕ ಡಾ.ರಮೇಶ್ ಮಹಾದೇವಪ್ಪನವರ ಪಾಲ್ಗೊಂಡು ಮಾರುತಿ ದೇವರ ಆಶೀರ್ವಾದ ಪಡೆದುಕೊಂಡರು.

ದೇವಸ್ಥಾನಗಳಲ್ಲಿ ಭಕ್ತರ ದಂಡು | ಆಂಜನೇಯನಿಗೆ ವಿಶೇಷ ಅಲಂಕಾರ

ಹನುಮನ ಪೂಜಿಸಿದ ಭಕ್ತಗಣ



• **ಧಾರವಾಡ:** ದವನದ ಹುಣ್ಣಿಮೆ ದಿನ ಹನುಮ ಜಯಂತಿ ಪ್ರಯುಕ್ತ ಇಲ್ಲಿನ ವಿವಿಧ ಮಾರುತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ನಡೆದವು.
ಗುರುವಾರ ಮಾರುತಿ ಮಂದಿರಗಳಲ್ಲಿ ಬೆಳಗ್ಗೆ ಆಂಜನೇಯ ಸ್ವಾಮಿಗೆ ಪಂಚಾಮೃತ ಅಭಿಷೇಕ, ಎಲೆಪೂಜೆ ಹಾಗೂ ಸಿಂಧೂರ ಅಲಂಕಾರ ಸಂಭ್ರಮದಿಂದ ಜರುಗಿತು.
ನುಗ್ಗಿಕೇರಿ, ಉಪನಗರದ ಮಾರುತಿ ದೇವಸ್ಥಾನ, ಮಾಳಮಡ್ಡಿಯ ಆಂಜನೇಯ ಗುಡಿಗಳಲ್ಲಿ ಹೂವು-ವಿದ್ಯುತ್ ದೀಪಾಲಂಕಾರ ಗಮನ ಸೆಳೆಯಿತು. ನೂರಾರು ಭಕ್ತರು ಸರತಿಯಲ್ಲಿ ನಿಂತು ದರ್ಶನ ಪಡೆದರು.

ಹನುಮಾನ್ ಚಾಲೀಸಾ ಪಠಣ
ದೇವಸ್ಥಾನದಲ್ಲಿ ಭಕ್ತರಿಂದ ಸಾಮೂಹಿಕವಾಗಿ ಹನುಮಾನ್ ಚಾಲೀಸಾ ಹಾಗೂ ಸುಂದರಕಾಂಡ ಪಠಣ ನಡೆಯುತ್ತಿದೆ. ದೇವಸ್ಥಾನ ಸಮಿತಿಗಳಿಂದ ಅನ್ನಸಂತರ್ಪಣೆ ವ್ಯವಸ್ಥೆಯೂ ಮಾಡಲಾಗಿತ್ತು.

ಜೈನ್ ಬಜಾರ್ ಅದ್ದೂರಿ ರಥೋತ್ಸವ
ಜೈನ್ ಬಜಾರ್ ಮಾರುತಿ ದೇವಸ್ಥಾನದಲ್ಲಿ ಹನುಮ ಜಯಂತಿ ಅಂಗವಾಗಿ ವೈಭವದ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಗುರುವಾರ ಜರುಗಿತು. ಸಾವಿರಾರು ಭಕ್ತರು ಜೈ ಶ್ರೀರಾಮ, ಜಯ ರಾಮ, ಬಜರಂಗಬಲಿ ಕೀ ಜೈ ಎಂಬ ಘೋಷಣೆಗಳೊಂದಿಗೆ ನಗರದ ಜೈನ್ ಬಜಾರ್ ಪ್ರಮುಖ ರಸ್ತೆಗಳಲ್ಲಿ ರಥವನ್ನು ಎಳೆದರು.



- ರಥಕ್ಕೆ ಉತ್ತತ್ತಿ, ಬಾಳೆಹಣ್ಣು ಸಮರ್ಪಿಸಿ ಭಕ್ತಿ ಮೆರೆದ ಭಕ್ತರು
- ಜಾತ್ರೆಗೆ ಮೆರಗು ತಂದ ರಥಕ್ಕೆ ಚೆಂಡೆ ವಾದನ, ಜಗ್ಗಲಗಿ ಮೇಳ, ಬೊಂಬೆ ಕುಣಿತ ಮಹಾಪೂಜಿ
- ರಥೋತ್ಸವಕ್ಕೆ ಚಾಲನೆ ನೀಡುವ ಮುನ್ನ ರಥಕ್ಕೆ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ, ಬಣ್ಣದ ಧ್ವಜಗಳು ಹಾಗೂ ಹೂವುಗಳಿಂದ ಮಾರುತಿ ರಥ ಶೃಂಗರಿಸಲಾಗಿತ್ತು
- ಭಕ್ತರಿಗೆ ಅಲ್ಲಲ್ಲಿ ಪಾನಕ-ಮಜ್ಜಿಗೆ ವಿತರಣೆ ವ್ಯವಸ್ಥೆ, ಮಧ್ಯಾಹ್ನ ಮಹಾಪ್ರಸಾದ ವ್ಯವಸ್ಥೆ ಮಾಡಿತ್ತು.
- ಹನುಮನ ದರ್ಶನ ಪಡೆದು ಪುನೀತರಾದ ನೂರಾರು ಭಕ್ತರು

ಶಾಂತಿ, ಸೌಹಾರ್ದತೆ ಕಾಪಾಡುವುದು ಅವಶ್ಯ

• **ಹುಬ್ಬಳ್ಳಿ:** ಪೊಲೀಸರು ಸಮಾಜದೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರಬೇಕು. ಕಾನೂನು ಪಾಲನೆ, ಸಾರ್ವಜನಿಕ ಆಸ್ತಿ ಪಾಸ್ತಿಗಳ ಸಂರಕ್ಷಣೆ ಜೊತೆಗೆ ಜನ ಜೀವನದಲ್ಲಿ ಶಾಂತಿ, ಸೌಹಾರ್ದತೆಯನ್ನು ಕಾಪಾಡುವುದು ಅತೀ ಅವಶ್ಯಕವಾಗಿದೆ ಎಂದು ನಿವೃತ್ತ ಪೊಲೀಸ್ ಸಬ್ ಇನ್ಸಪೆಕ್ಟರ್ ಎಂ.ಐ.ಪಠಾಣ ಹೇಳಿದರು.
ಗುರುವಾರ ಕಾರವಾರ ರಸ್ತೆಯ ಹಳೆಯ ಸಶಸ್ತ್ರ ಮೀಸಲು ಪಡೆಯ ಕವಾಯತು ಮೈದಾನದಲ್ಲಿ ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತಾಲಯದಿಂದ ಆಯೋಜಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.
ಉದ್ಯಮಿ ವಿ.ಎಸ್.ವಿ.ಪ್ರಸಾದ ಮಾತನಾಡಿ, ಹುಬ್ಬಳ್ಳಿ ಧಾರವಾಡ ಪೊಲೀಸರು ದೈಹಿಕ ಸಾಮರ್ಥ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಾರೆ. ಹೀಗಾಗಿ ಪೊಲೀಸರು ಯಾವಾಗಲೂ ದೈಹಿಕವಾಗಿ ಸದೃಢರಾಗಿರುತ್ತಾರೆ. ಸಮಾಜಕ್ಕಾಗಿ ಇಡೀ ಜೀವಮಾನವನ್ನೇ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಹಾಗೂ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಪೊಲೀಸರಿಗೆ ನಾವು ಚಿರ ಋಣಿಯಾಗಿರಬೇಕು ಎಂದರು. ನಿವೃತ್ತ ಪೊಲೀಸ್ ಅಧಿಕಾರಿ ರವಿಕುಮಾರ ನಾಯ್ಕ ಮಾತನಾಡಿದರು. ಇದೇ ಸಂದರ್ಭದಲ್ಲಿ ಸಾಂಕೇತಿಕವಾಗಿ ಪೊಲೀಸ್ ಧ್ವಜಗಳನ್ನು ಬಿಡುಗಡೆ ಮಾಡಿ ವಿತರಿಸಲಾಯಿತು. ನಿವೃತ್ತ ಪೊಲೀಸ್ ಅಧಿಕಾರಿಗಳ ಕಲ್ಯಾಣ ನಿಧಿಗೆ ಉದ್ಯಮಿ ವಿ.ಎಸ್.ವಿ. ಪ್ರಸಾದ್ ಅವರು 1,11,600 ರೂ. , ಶಾಂತರಾಜ ಪೋಳ ಅವರು 1 ಲಕ್ಷ ರೂ., ನಿವೃತ್ತ ಡಿವೈಎಸ್‌ಪಿ ವೀರೇಶ ಬೆಳವಡಿ ಅವರು 50 ಸಾವಿರ ರೂ. ಹಾಗೂ ವಿಠ್ಠಲ ಲದ್ವಾ ಅವರು 50 ಸಾವಿರ ರೂ.ಮೊತ್ತದ ಚೆಕ್ ನೀಡಿದರು. ಹು-ಧಾ ಪೊಲೀಸ್ ಆಯುಕ್ತ ಎನ್. ಶಶಿಕುಮಾರ, ಡಿಸಿಪಿ ರವೀಶ ಸಿ.ಆರ್., ಎಸಿಪಿ ಶಿವಾನಂದ ಚಲವಾದಿ, ಉಮೇಶ ಚಿಕ್ಕಮಠ, ಪ್ರಶಾಂತ ಸಿದ್ದನಗೌಡರ ಇದ್ದರು.

> ಸಾರ್ವಜನಿಕರು ತಮ್ಮ ಅಹವಾಲುಗಳನ್ನು ತೆಗೆದುಕೊಂಡು ಪೊಲೀಸ್ ಕಚೇರಿಗೆ ಬಂದಾಗ ಅವರ ಸಮಸ್ಯೆಗಳಿಗೆ ತಾಳ್ಮೆಯಿಂದ ವಿಚಾರಿಸಿ ಸ್ಪಂದಿಸಬೇಕು. ಪೊಲೀಸರು ತಮ್ಮ ಆರೋಗ್ಯದ ಕಾಳಜಿ ವಹಿಸಬೇಕು.
> ■ ಎಂ.ಐ.ಪಠಾಣ, ನಿವೃತ್ತ ಪೊಲೀಸ್ ಸಬ್ ಇನ್ಸಪೆಕ್ಟರ್





ಕಲಘಟಗಿ: ತಾಲೂಕಿನ ಬಮ್ಮಿಗಟ್ಟಿ ಗ್ರಾಮದಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ ನಿರಾಶ್ರಿತರಿಗೆ ವಾತ್ಸಲ್ಯ ಕಿಟ್ ವಿತರಣೆ ಮಾಡಲಾಯಿತು.


ಕುಸುಗಲ್‌ನ ತಂಗೆಮ್ಮ ದೇವಿ ರಥೋತ್ಸವ

• **ಹುಬ್ಬಳ್ಳಿ:** ತಾಲೂಕಿನ ಕುಸುಗಲ್ ಗ್ರಾಮದ ಐತಿಹಾಸಿಕ ತಂಗೆಮ್ಮ ದೇವಿ ರಥೋತ್ಸವ ಗುರುವಾರ ನೂರಾರು ಭಕ್ತರ ನಡುವೆ ಅದ್ದೂರಿಯಾಗಿ ಜರುಗಿತು.
ಬೆಳಗ್ಗೆ ದೇವಿಗೆ ಗ್ರಾಮಸ್ಥರಿಂದ ವಿಶೇಷ ಪೂಜೆ ಸಲ್ಲಿಸಲಾಯಿತು. ಗ್ರಾಮದ ಹಿರಿಯರು, ಚಿಕ್ಕಮಕ್ಕಳು, ಮಹಿಳೆಯರು, ಪುರುಷರು ಹೊಸ ಬಟ್ಟೆ ಧರಿಸಿ ದೇವಸ್ಥಾನಕ್ಕೆ ಭೇಟಿ ನೀಡಿ ದೇವಿಯ ದರ್ಶನ ಪಡೆದರು. ಮಹಿಳೆಯರು ಉಡಿ ತುಂಬುವ ಕಾರ್ಯಕ್ರಮ ನಡೆಸಿದರು. ಸಂಜೆ 5.30ಕ್ಕೆ ಗ್ರಾಮದ ಹಿರಿಯ ಮುಖಂಡರು ರಥೋತ್ಸವಕ್ಕೆ ಚಾಲನೆ ನೀಡಿದರು. ರಥೋತ್ಸವ ದೇವಸ್ಥಾನದಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹತ್ತಿರ ಪಾದಗಟ್ಟಿ ವರೆಗೂ ಬಂದು, ಬಳಿಕ ದೇವಸ್ಥಾನಕ್ಕೆ ವಾಪಾಸ್ ಆಗಿತು. ಮುಖ್ಯ ಬೀದಿಯಲ್ಲಿ ನಿಂತಿದ್ದ ಭಕ್ತರು ಉತ್ತತ್ತಿ, ಬಾಳೆಹಣ್ಣು, ಫಲ ಪುಷ್ಪಗಳನ್ನು ರಥಕ್ಕೆ ಎಸೆದು ಪ್ರಾರ್ಥಿಸಿದರು. ಜಾತ್ರ ಮಹೋತ್ಸವ ಅಂಗವಾಗಿ ಗ್ರಾಮವೆಲ್ಲ ತೋರಣದಿಂದ ಅಲಂಕರಿಸಲಾಗಿತ್ತು. ಡೊಳ್ಳಿನ ವಾದ್ಯ, ಮತ್ತಿತರ ವಾದ್ಯ ಮೇಳಗಳು ರಥೋತ್ಸವದ ಮುಂದೆ ಸಾಗಿ ವಿಶೇಷ ಮೆರುಗು ನೀಡಿದವು. ಬಿಸಿಲು ಜಾಸ್ತಿ ಇರುವ ಹಿನ್ನೆಲೆ ದೇವಸ್ಥಾನ ಮಾರ್ಗದಲ್ಲಿ ಪೆಂಡಲ್‌ಗಳ ಅಳವಡಿಸಲಾಗಿತ್ತು. ದೇವಸ್ಥಾನಕ್ಕೆ ಬರುವ ಭಕ್ತರಿಗೆ ನೀರು, ಪಾನಕ, ಹಣ್ಣಿನ ಪಾನಿಯ ವ್ಯವಸ್ಥೆ ಕಲ್ಪಿಸಲಾಗಿತ್ತು. ಸಣ್ಣ ಮಕ್ಕಳಿಂದ ಹಿರಿಯರವರೆಗೂ ಜಾತ್ರೆಯಲ್ಲಿ ಅಲೆದಾಡಿ ವಿವಿಧ ವಸ್ತುಗಳ ಖರೀದಿಸಿದರು. ಇನ್ನು ಚಿಕ್ಕಮಕ್ಕಳು ಆಟಗಳ ಆಡುವ ಮೂಲಕ ಸಂಭ್ರಮಿಸಿದರು.



ಸಂಭ್ರಮದ ರಾಮನವಮಿ: ಮಾಜಿ ಸೈನಿಕರಿಗೆ ಸನ್ಮಾನ

• **ಕಲಘಟಗಿ:** ಪಟ್ಟಣದ ಪ್ರಧಾನಮಂತ್ರಿ ಜನೌಷಧಿ ಕೇಂದ್ರದ ಹತ್ತಿರ ಶ್ರೀ ರಾಮನವಮಿ ಉತ್ಸವ ಸಮಿತಿ ಆಶ್ರಯದಲ್ಲಿ ಐದನೇ ವರ್ಷದ ಶ್ರೀ ರಾಮನವಮಿಯನ್ನು ಅತೀ ಸಂಭ್ರಮದಿಂದ ಆಚರಿಸಲಾಯಿತು.
ಕಾರ್ಯಕ್ರಮದಲ್ಲಿ ದೇಶದ ರಕ್ಷಾಕವಚವಾಗಿ ಕೆಲಸ ಮಾಡಿದ ಮಾಜಿ ಸೈನಿಕರಾದ ಚಂದ್ರಶೇಖರ್ ಮುಂಗಲಿ, ಉಮೇಶ್ವರ ಮುಂಗಲಿ, ಚನ್ನಬಸಪ್ಪ ಕುಂಬಾರ, ಬಸವರಾಜ ಜಿನ್ನೂರ ಹಾಗೂ ವಿಶ್ವ ರಂಗಭೂಮಿ ದಿನಾಚರಣೆಯ ಅಂಗವಾಗಿ ನವಲಗುಂದ ಶ್ರೀ ಗುರು ಕುಮಾರೇಶ್ವರ ನಾಟ್ಯ ಸಂಘ ಮಾಲಕರಾದ ಪ್ರವೀಣ್ ಬಾಗಲಕೋಟೆ ಅವರನ್ನು ಸನ್ಮಾನಿಸಲಾಯಿತು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಾನಪದ ವಿದ್ವಾಂಸ ಮಲ್ಲಯ್ಯಸ್ವಾಮಿ ತೋಟಗಂಟಿ ವಹಿಸಿದ್ದರು. ನಿವೃತ್ತ ಶಿಕ್ಷಕ ಸಿ.ಬಿ. ಹೊನ್ನಳ್ಳಿ, ನಿವೃತ್ತ ಪ್ರಾಂಶುಪಾಲ ಎಸ್.ವಿ. ತಡಸಮಠ, ವಕೀಲರ ಸಂಘದ ಅಧ್ಯಕ್ಷ ವಿ.ಬಿ. ಶಿವನಗೌಡ್ರ, ನೋಟರಿ ವಕೀಲ ಕೆ.ಬಿ. ಗುಡಿಹಾಳ, ನ್ಯಾಯವಾದಿ ಮಂಜುನಾಥ ಚೌಧರಿ, ರವೀಂದ್ರಯ್ಯ ತೋಟಗಂಟಿ, ಎಚ್.ಎನ್. ಸುನಗದ, ಜಿ.ಎನ್.ಗಾಳಿ, ಉದ್ದಿಮೆದಾರ ಸಂಗಮೇಶ ತೋಟಗಂಟಿ, ತಾನಾಜಿ ಮೋತೆನವರ, ಬಸವರಾಜ್ ಕಡ್ಲಾಸ್ಕರ್, ಪ್ರಹ್ಲಾದಗೌಡ ಗೊಲ್ಲಗೌಡರ, ಡಾ. ಮಾಲಿಪಾಟೀಲ್, ಬಸವಣ್ಣಯ್ಯ ಚಿಕ್ಕಮಠ, ವಿ.ಎಸ್. ನಾಗಲೋಟಿಮಠ, ಶಿವಪುತ್ರಯ್ಯ ತೇಗೂರಮಠ, ಪ್ರಕಾಶ ಗುರುನಾಥನವರ, ಬಸವರಾಜ ತಹಸೀಲ್ದಾರ, ಮಹದೇವ ತಹಸೀಲ್ದಾರ ಇದ್ದರು.



ಹನುಮ ಜಯಂತಿ: ಸಾಮೂಹಿಕ ಗದಾಪೂಜೆ

• **ಹುಬ್ಬಳ್ಳಿ:** ಹನುಮ ಜಯಂತಿ ಅಂಗವಾಗಿ ಹಿಂದು ಜನ ಜಾಗೃತಿ ಸಮಿತಿ ವಯಿಂದ ನಗರದಲ್ಲಿ ಸಾಮೂಹಿಕ ಗದಾಪೂಜೆ ನೆರವೇಸಲಾಯಿತು. ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ದೇಶಾದ್ಯಂತ 100ಕ್ಕೂ ಅಧಿಕ ಸ್ಥಳಗಳಲ್ಲಿ ಹಾಗೂ 25 ಜಿಲ್ಲೆಗಳಲ್ಲಿ ಸಾಮೂಹಿಕ 'ಗದಾಪೂಜೆ' ನಡೆಸಲಾಯಿತು.
ಗದಾಪೂಜೆ ವಿಧಿ, ಶ್ರೀ ಹನುಮಂತನ ಆರತಿ, ಮಾರುತಿ ಸ್ತೋತ್ರ ಪಠಣ, ಶಂಖನಾದ ಮತ್ತು ಸಾಮೂಹಿಕ ಪ್ರಾರ್ಥನೆಯ ನಂತರ ಶ್ರೀ ಹನುಮತೇ ನಮಃ ಎಂಬ ಸಾಮೂಹಿಕ ನಾಮಜಪವನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ರಾಮರಾಜ್ಯದ ಸ್ಥಾಪನೆಗಾಗಿ ಮಾರುತಿಯ ಗುಣಗಳನ್ನು ಹೇಗೆ ಅಳವಡಿಸಿಕೊಳ್ಳಬೇಕು ಎಂಬ ವಿಷಯದ ಕುರಿತು ಮಾರ್ಗದರ್ಶನ ನೀಡಲಾಯಿತು.
ಕಾರ್ಯಕ್ರಮದ ಕೊನೆಯಲ್ಲಿ 'ರಾಮರಾಜ್ಯದ ಸ್ಥಾಪನೆಗಾಗಿ ಸಾಮೂಹಿಕ ಪ್ರತಿಜ್ಞೆ' ಸ್ವೀಕರಿಸಲಾಯಿತು. ಹಿಂದೂ ಜನಜಾಗೃತಿ ಸಮಿತಿಯು ಕಳೆದ 4 ವರ್ಷಗಳಿಂದ ದೇಶಾದ್ಯಂತ ಸಾಮೂಹಿಕ 'ಗದಾಪೂಜೆ' ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸುತ್ತಾ ಬಂದಿದ್ದು, ಈ ವರ್ಷವೂ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿನ ಹಲವು ಹನುಮಂತನ ದೇವಸ್ಥಾನಗಳಲ್ಲಿ ಗದಾ ಪೂಜೆ ಆಯೋಜಿಸಿದ್ದು ಹಿಂದುತ್ವನಿಷ್ಠರು ಮತ್ತು ಶ್ರದ್ಧಾಳುಗಳ ಉತ್ಸಾಹಭರಿತ ಸಹಭಾಗಿತ್ವ ಕಂಡುಬಂದಿತು. ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ಪ್ರತಿನಿಧಿಗಳು, ಹಿಂದುತ್ವನಿಷ್ಠರು, ಭಕ್ತಾದಿಗಳು ಉಪಸ್ಥಿತರಿದ್ದರು.



ತೊಂದರೆಗಳಿಗೆ ಭಗವದ್ಗೀತೆಯಲ್ಲಿದೆ ಪರಿಹಾರ



• **ಹುಬ್ಬಳ್ಳಿ:** ನಗರದ ಪ್ರತಿಷ್ಠಿತ ಕೆ.ಎಲ್. ಇ. ಸಂಸ್ಥೆಯ ಶ್ರೀಮತಿ ಸಿ.ಐ. ಮುನವಳ್ಳಿ ಪಾಲಿಟೆಕ್ನಿಕ್‌ನಲ್ಲಿ ಅಂತಿಮ ವರ್ಷದ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಬೀಳ್ಕೊಡಿಗೆ ಹಾಗೂ ವಾರ್ಷಿಕ ಸಮ್ಮೇಳನ "ಚಿಗುರು -2026" ಸಮಾರಂಭ ನಡೆಯಿತು.
ಇಸ್ಕಾನ್ ಮಂದಿರದ ಗೋವಿಂದದಾಸ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಇಂದಿನ ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಯುವಪೀಳಿಗೆ ಬಹಳ ಮಾನಸಿಕ ತೊಂದರೆಗಳಿಂದ ಬಳಲುತ್ತಿದ್ದಾರೆ. ಈ ಎಲ್ಲ ತೊಂದರೆಗಳಿಗೆ ಭಗವದ್ಗೀತೆಯಲ್ಲಿ ಎಲ್ಲದಕ್ಕೂ ಪರಿಹಾರವಿದೆ ಎಂದರು.
ಅಧ್ಯಕ್ಷತೆ ವಹಿಸಿದ್ದ ಕೆ.ಎಲ್.ಇ. ಸಂಸ್ಥೆಯ ನಿರ್ದೇಶಕ ಮಂಜುನಾಥ ಮುನವಳ್ಳಿ ಮಾತನಾಡಿ, ವಿದ್ಯಾರ್ಥಿಗಳ ಮೂರು ವರ್ಷದ ಶ್ರಮ ಮುಂದಿನ ಮೂವತ್ತು ವರ್ಷಗಳವರೆಗೆ ನಿಮ್ಮನ್ನು ಕಾಪಾಡುತ್ತದೆ ಎಂದರು. ಎಲ್ಲಾ ವಿಭಾಗಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಿದರು. ಪ್ರಾಚಾರ್ಯರಾದ ವೀರೇಶ ಅಂಗಡಿಯವರು ವಾರ್ಷಿಕ ವರದಿ ಸಲ್ಲಿಸಿದರು. ಸಾಂಸ್ಕೃತಿಕ ಚಟುವಟಿಕೆಗಳ ಅಧ್ಯಕ್ಷ ಪ್ರೊ. ಸ್ಫೂರ್ತಿ ಮನಗುಳಿ ಹಾಗೂ ಕ್ರೀಡಾ ಚಟುವಟಿಕೆಗಳ ಅಧ್ಯಕ್ಷ ಪ್ರೊ. ಶಿವಕುಮಾರ ರಾಶಿ ಉಪಸ್ಥಿತರಿದ್ದರು. ವಿದ್ಯಾರ್ಥಿ ಸಮರ್ಥ, ಶ್ರೀದೀಕ್ಷಾ, ನತಾಶ ಹಾಗೂ ವರ್ಷ ನಿರೂಪಿಸಿದರು.

ಆಟೋ ಚಾಲಕರಿಂದ ಪ್ರತಿಭಟನೆ

• **ಧಾರವಾಡ:** ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಇದೀಗ ಧಾರವಾಡದಲ್ಲಿ ಆಟೋ ಎಲ್‌ಪಿಜಿಗೆ ತೀವ್ರ ಹಾಹಾಕಾರ ಶುರುವಾಗಿದ್ದು, ಗುರುವಾರ ಆಟೋ ಚಾಲಕರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಸಹ ನಡೆಸಿದರು.
ಪೆಟ್ರೋಲ್ ಮೂಲಕ ಆಟೋ ಓಡಿಸಲು ಸಾಧ್ಯವಾಗದೇ ಎಲ್‌ಪಿಜಿ ಸೌಲಭ್ಯವುಳ್ಳ ಆಟೋ ಖರೀದಿಸಿದ್ದೇವೆ. ಇದೀಗ ಎಲ್‌ಪಿಜಿ ಸಿಗುತ್ತಿಲ್ಲ. ಇರುವ ಕೆಲವೇ ಆಟೋ ಎಲ್‌ಪಿಜಿ ಕೇಂದ್ರಗಳಲ್ಲಿ ದರವನ್ನು ಲೀಟರ್‌ಗೆ ಸುಮಾರು 10-15 ರೂ.ವರೆಗೆ ಏರಿಸಲಾಗಿದೆ. ಬಾಡಿಗೆ ಹೊಡೆಯಲು ಅಲ್ಲದೇ ನಿತ್ಯ ಶಾಲೆಗಳಿಗೆ ಮಕ್ಕಳನ್ನು ಬಿಟ್ಟು ಬರಲು ಸಾಧ್ಯವಾಗುತ್ತಿಲ್ಲ. ನಗರದಲ್ಲಿ ಐದು ಎಲ್‌ಪಿಜಿ ಪಂಪ್‌ಗಳಿದ್ದು ಎಲ್ಲೂ ಸಮರ್ಪಕವಾಗಿ ಎಲ್‌ಪಿಜಿ ಸಿಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.
ಕಳೆದ 15 ದಿನಗಳಿಂದ ಈ ಸಮಸ್ಯೆ ಆಗುತ್ತಿದ್ದು, 2500 ಎಲ್‌ಪಿಜಿ ಆಟೋಗಳು ಹಾಗೂ ಅವರ ಕುಟುಂಬದರು ಸಂಕಷ್ಟದಲ್ಲಿದ್ದಾರೆ. ಶೀಘ್ರ ಸಮಸ್ಯೆಗೆ ಪರಿಹಾರ ಒದಗಿಸಬೇಕು. ಇಲ್ಲದೇ ಹೋದಲ್ಲಿ ಮತ್ತೇ ತೀವ್ರ ಸ್ವರೂಪದ ಹೋರಾಟ ಮಾಡಬೇಕಾಗುತ್ತದೆ ಎಂದು ಆಟೋ ಚಾಲಕರು ಎಚ್ಚರಿಸಿದರು.



ಲಾಲಗುಡಿ ಹನುಮಂತನಿಗೆ ಪೂಜೆ



• **ನವಲಗುಂದ:** ದವನದ ಹುಣ್ಣಿಮೆ ಅಂಗವಾಗಿ ನಗರದ ಲಾಲಗುಡಿ ಹನಮಂತ ದೇವರ ದೇವಸ್ಥಾನದಲ್ಲಿ ಗುರುವಾರ ಹನುಮ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.
ಹನಮಂತ ದೇವರ ಮೂರ್ತಿಗೆ ಪಂಚಾಮೃತ ಅಭಿಷೇಕ, ಅಲಂಕಾರ ಸೇವೆ, ಬಾಲ ಹನುಮನ ತೊಟ್ಟಿಲೋತ್ಸವ ಜರುಗಿತು.ಭಕ್ತರು ಶ್ರದ್ಧಾಭಕ್ತಿಯಿಂದ ಹಾಡು-ಹಾಡಿ ಬಾಲ ಹನುಮಂತ ರೂಪವನ್ನು ಮನದಲ್ಲಿ ತುಂಬಿಕೊಂಡರು. ನಂತರ ಅನ್ನ ಪ್ರಸಾದ ಸೇವೆ ಜರುಗಿತು. ಸಂಜೆ ಶಾಸಕರ ಪುತ್ರ, ಯುವನಾಯಕ ನವೀನ ಕೋನರಡ್ಡಿ ಹಾಗೂ ತಾಲೂಕಿನ ಭಕ್ತರ ಸಮ್ಮುಖದಲ್ಲಿ ರಥೋತ್ಸವ ಜರುಗಿತು. ಪಿಎಸ್ಐ ಜನಾರ್ಧನ್ ಭಟ್ರಳ್ಳಿ, ರಾಯನಗೌಡ ಪಾಟೀಲ, ಜೀವನ ಪವಾರ, ಆನಂದ ಹವಳಕೋಡ, ಅಪ್ಪಣ್ಣ ಹಳ್ಳದ, ಮೋಹನ ಬಸವಂತಕರ, ಬಾಬಣ್ಣ ಪಾರಿಗೊಂಡ, ಮಂಜುನಾಥ ಆರೇರ, ಪ್ರಶಾಂತ ಸಾಳೋಂಕೆ, ರಾಜು ಹಿರಗಣ್ಣವರ, ಶಂಕರ ಹುಣಸೀಮರದ, ಶಿವಪ್ಪ ಸಂಗಟಿ, ಐ.ಡಿ. ಪ್ರಭುಗೌಡ, ಕುಮಾರ ಲಕ್ಕಮ್ಮನವರ, ಚಂದ್ರು ಅಸುಂಡಿ, ಚನ್ನಪ್ಪ ನಾಗರಹಳ್ಳಿ ಸೇರಿದಂತೆ ಇತರರಿದ್ದರು. ಲಾಲಗುಡಿ ಹನುಮಂತ ದೇವರ ದೇವಸ್ಥಾನಕ್ಕೆ ಗಣ್ಯಮಾನ್ಯರೊಂದಿಗೆ ಶಾಸಕ ಎನ್. ಎಚ್. ಕೋನರಡ್ಡಿ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಹನುಮ ಜಯಂತಿ: ತೊಟ್ಟಿಲೋತ್ಸವ

• **ಉಪ್ಪಿನಬೆಟಗೇರಿ:** ಆಂಜನೇಯ ದೇವಸ್ಥಾನದಲ್ಲಿ ಹನುಮ ಜಯಂತಿ ಬುಧವಾರ ಸಂಭ್ರಮದಿಂದ ಆಚರಿಸಲಾಯಿತು. ಆಂಜನೇಯ ಮೂರ್ತಿಗೆ ಅಭಿಷೇಕ ಹಾಗೂ ಹೂವಿನ ಅಲಂಕಾರದೊಂದಿಗೆ ಅರ್ಚಕರು ಪೂಜೆ ಸಲ್ಲಿಸಿದರು. ನಂತರ ಗ್ರಾಮದ ತಾಯಿಂದರಿಂದ ನಡೆದ ಬಾಲ ಹನುಮನ ತೊಟ್ಟಿಲೋತ್ಸವ ಕಾರ್ಯಕ್ರಮದಲ್ಲಿ ಮುತ್ತೈದೆಯರು ತೊಟ್ಟಿಲು ತೂಗಿ ಜೋಗುಳ ಹಾಡಿದರು. ಗ್ರಾಮಸ್ಥರು ಮಲಪ್ರಭಾ ನದಿಯ ನೀರನ್ನು ತಂದು ಗುಡಿಯ ಮುಂಭಾಗದಲ್ಲಿ ಹೊಂಡ ತುಂಬಿಸಿದರು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ನಡೆಯಿತು. ಭಕ್ತರು ಅನ್ನ ಪ್ರಸಾದ ಸ್ವೀಕರಿಸಿದರು. ಮೂರು ಸಾವಿರ ವಿರಕ್ತಮಠದ ಕುಮಾರ ವಿರೂಪಾಕ್ಷ ಸ್ವಾಮೀಜಿ, ವೀರಣ್ಣಾ ಪರಾಂಡೆ, ಮಲ್ಲಣ್ಣಾ ಅಷ್ಟಗಿ, ಮಲ್ಲಿಕಾರ್ಜುನ ಪಟ್ಟಣಶೆಟ್ಟಿ, ಯಲ್ಲಪ್ಪ ಮೇಟಿ, ರಾಮಲಿಂಗಪ್ಪ ನವಲಗುಂದ, ಡಾ.ನಾಗಯ್ಯ ಗಚ್ಚಿನಮಠ, ಮಲ್ಲಯ್ಯ ಮಠಪತಿ, ಬಸವರಾಜ ತಳವಾರ,ರಾವುಲ್ ಅಷ್ಟಗಿ, ಭೀಮರಾಯಪ್ಪ ಪೂಜಾರ,ಬಸಪ್ಪ ಯಮೋಜಿ ಹಾಗೂ ಶ್ರೀ ಗಜಾನನ ಮತ್ತು ರಾಮನಗರ ಯುವಕ ಮಂಡಳಿ ಸದಸ್ಯರು ಇದ್ದರು.



ಹುಬ್ಬಳ್ಳಿ
ಶುಕ್ರವಾರ, 3 ಏಪ್ರಿಲ್ 2026
ಸಂಪುಟ 16, ಸಂಚಿಕೆ 9, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ರಕ್ಷಣಾ ರಫ್ತು ದಾಖಲೆ ಏರಿಕೆ | 02
ಇಂಡೋನೇಷ್ಯಾ ಭೂಕಂಪ; ಓರ್ವ ಸಾವು | 02
ಬೂಕರ್: ಅಂತಿಮ ಪಟ್ಟಿಗೆ ಭಾರತೀಯ ಲೇಖಕಿ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಚಿತ್ರೆ

ದಿನದ ಮಾತು

ಬಂದ ಸುಖವ ಬಿಡಬೇಡ. ಬಾರದುದನ್ನು ಬೇಕೆಂದು ಬಯಸಬೇಡ.
▲ ರತ್ನಾಕರವರ್ಣಿ

ಕಾರ್ಯಕರ್ತನೇ? ಆತ ಬಂಗಾಳದಲ್ಲಿದ್ದಾನೆ!

ಉಘೇ ವೀರ ಭೂಮಿಗೆ
• ಸಂತೋಷ್ ತಮ್ಮಯ್ಯ
• ಪುಟ ೬

ಕಿರುಸುದ್ದಿ

ಬುಡಕಟ್ಟು ಕ್ರೀಡಾ ಪ್ರತಿಭೆ: ನಮ್ಮ ರಾಷ್ಟ್ರೀಯ ಹೆಮ್ಮೆ

• **ದ್ರೌಪದಿ ಮುರ್ಮು, ರಾಷ್ಟ್ರಪತಿ**
ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಅರಣ್ಯ ಪ್ರದೇಶಗಳಲ್ಲಿ ಮಕ್ಕಳು ಹೆಚ್ಚಿನ ಸಮಯವನ್ನು ಪ್ರಕೃತಿಯ ಮಡಿಲಿನಲ್ಲಿ ಕಳೆಯುತ್ತಾರೆ ಎಂಬುದು ಗಮನಿಸಿದ್ದೇನೆ. ಆಟವಾಡಲು ಅವರು ಸರಳ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ. ನೆಲದ ಮೇಲೆ ಗೆರೆಗಳನ್ನು ಎಳೆದು, ಆಕಾರಗಳನ್ನು ರಚಿಸಿ ಆಟದ ಅಖಾಡಗಳನ್ನು ತಯಾರಿಸುತ್ತಾರೆ. ಒಣಗಿದ ಹಣ್ಣಿನ ಬೀಜಗಳನ್ನು ಪಗಡೆ ಮತ್ತು ಚಿಕ್ಕ ತುಂಡುಗಳಾಗಿ ಬಳಸುತ್ತಾರೆ. ಒಣ ಎಲೆಗಳು, ಮರದ ಬೇರುಗಳು ಮತ್ತು ಹಳೆಯ ಬಟ್ಟೆಯ ತುಂಡುಗಳಿಂದ ಚೆಂಡುಗಳನ್ನು ತಯಾರಿಸುತ್ತಾರೆ. ಬಿದಿರನ್ನು ಬಳಸಿ ಅವರು ಹಾಕಿ ಮತ್ತು ಫುಟ್ಬಾಲ್ ಗೋಲ್‌ಪೋಸ್ಟ್‌ಗಳನ್ನು ನಿರ್ಮಿಸುತ್ತಾರೆ. ಹೀಗೆ ವಿವಿಧ ನೈಸರ್ಗಿಕ ವಸ್ತುಗಳನ್ನು ಬಳಸಿ ತಮ್ಮದೇ ಕ್ರೀಡಾ ಜಗತ್ತನ್ನು ಸೃಷ್ಟಿಸಿಕೊಳ್ಳುತ್ತಾರೆ. ಅನೇಕ ಮಕ್ಕಳು ಚಪ್ಪಲಿ ಅಥವಾ ಜೆರ್ಸಿ ಇಲ್ಲದೆಯೇ ಉತ್ಸಾಹದಿಂದ ಆಟವಾಡುತ್ತಾರೆ. ಕೆರೆ ಮತ್ತು ಸರೋವರಗಳಲ್ಲಿ ಈಜಾಡುತ್ತಾರೆ.
• ಪುಟ ೧೦

ಸಂಸತ್ ಭವನದಲ್ಲಿ ಆಜಾದ್ ಭಾರತ್ ಸಿನಿಮಾ ಪ್ರದರ್ಶನ

• **ಹೊಸದಿಲ್ಲಿ:** ದೇಶಭಕ್ತಿ, ರಾಷ್ಟ್ರೀಯ ಸೇವಾ ಮೌಲ್ಯಗಳಿಗೆ ಸದಾ ಪ್ರೇರಣೆಯಾಗಿರುವ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಗೌರವಾರ್ಥ ಕರ್ನಾಟಕದ ಡಾ.ರೂಪಾ ಅಯ್ಯರ್ ನಿರ್ಮಿಸಿ, ನಿರ್ದೇಶಿಸಿದ ಆಜಾದ್ ಭಾರತ್ ಹಿಂದಿ ಚಲನಚಿತ್ರ ಪ್ರದರ್ಶನಕ್ಕೆ ಸಂಸತ್ ಭವನ ಸಾಕ್ಷಿಯಾಯಿತು.
• ಪುಟ ೫

ಆಡಳಿತ ವ್ಯವಸ್ಥೆಗಳ ನಿರಂತರ ಸುಧಾರಣೆ ಅಗತ್ಯ: ಮೋದಿ

• ಪುಟ ೭

ಹನುಮಾನ್ ಮಂದಿರ ಮೇಲೆ ಧ್ವಜಾರೋಹಣ

• ಪುಟ ೭

ರಾಜ್ಯಸಭೆ ಉಪನಾಯಕ ಸ್ಥಾನದಿಂದ ಛಡ್ಡಾ ಹೊರಕ್ಕೆ!

• ಪುಟ ೭

ಪೆಟ್ರೋಕೆಮಿಕಲ್ಸ್ ಮೇಲಿನ ಕಸ್ಟಮ್ಸ್ ಸುಂಕ ಕೈಬಿಟ್ಟ ಕೇಂದ್ರ

• ಪುಟ ೭

ನ್ಯಾಯಾಂಗ ಅಧಿಕಾರಿಗಳ ಮೇಲೆ ದಾಳಿಗೆ ಕಿಡಿ | ತನಿಖೆಗೆ ಆದೇಶ

ದೀದಿಗೆ ಸುಪ್ರೀಂ ಛೀಮಾರಿ



• **ಹೊಸದಿಲ್ಲಿ/ಕೋಲ್ಕತ್ತಾ:** ಪಶ್ಚಿಮ ಬಂಗಾಳವನ್ನು ''ದೇಶದಲ್ಲೇ ಅತ್ಯಂತ ಧ್ರುವೀಕೃತ ರಾಜ್ಯ'' ಎಂದು ಕಿಡಿಕಾರಿದ ಸುಪ್ರೀಂ ಕೋರ್ಟ್, ಮಾಲ್ಡಾ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಕಾರ್ಯದಲ್ಲಿ ತೊಡಗಿದ್ದ ಏಳು ನ್ಯಾಯಾಂಗ ಅಧಿಕಾರಿಗಳನ್ನು ಪ್ರತಿಭಟನಾಕಾರರು ಗಂಟೆಗಳ ಕಾಲ ಸುತ್ತುವರಿದು ಬಂಧಿಸಿದ ಘಟನೆಯನ್ನು ತೀವ್ರವಾಗಿ ಖಂಡಿಸಿದೆ. ಇದೇ ವೇಳೆ ಈ ಪ್ರಕರಣದ ತನಿಖೆಯನ್ನು ಸಿಬಿಐ ಅಥವಾ ಎನ್‌ಐಎಗೆ ವಹಿಸಲು ಆದೇಶಿಸಿದೆ.

ಈ ಘಟನೆ ಆಡಳಿತದ 'ಸಂಪೂರ್ಣ ವಿಫಲತೆ' ಹಾಗೂ ನಿರ್ಲಕ್ಷ್ಯವನ್ನು ತೋರಿಸುತ್ತದೆ ಎಂದು ಕೋರ್ಟ್ ಗಂಭೀರವಾಗಿ ಆಕ್ಷೇಪಿಸಿದೆ. ನ್ಯಾಯಾಂಗ ಅಧಿಕಾರಿಗಳ ಮೇಲೆ ನಡೆದ ದಾಳಿ ಮತ್ತು ಸುತ್ತುವರಿಕೆ ''ಅತ್ಯಂತ ದುರಂತಕರ' ಎಂದು ಅಭಿಪ್ರಾಯಪಟ್ಟಿದೆ.

ಮಾಲ್ಡಾ ಜಿಲ್ಲೆಯ ಕಾಳಿಯಾಚೌಕ್ ಪ್ರದೇಶದಲ್ಲಿ ಬುಧವಾರ ಸಂಜೆ 3:30ರಿಂದ ಆರಂಭವಾದ ಈ ಘಟನೆಯಲ್ಲಿ, ಏಳು ನ್ಯಾಯಾಂಗ ಅಧಿಕಾರಿಗಳನ್ನು ಅಭಿವೃದ್ಧಿ ಕಚೇರಿಯಲ್ಲಿ ಕೆಲ ದುಷ್ಕರ್ಮಿಗಳು ಸುತ್ತುವರಿದು, ಒಂಬತ್ತು ಗಂಟೆಗಳಿಗೂ ಹೆಚ್ಚು ಕಾಲ ಒತ್ತೆಯಿಟ್ಟುಕೊಂಡಿದ್ದರು. ಆಹಾರ ಹಾಗೂ ನೀರಿಲ್ಲದೇ ಅವರು ಸಂಕಷ್ಟಕ್ಕೆ ಸಿಲುಕಿದ್ದರು.

ಭದ್ರತಾ ಪಡೆಗಳು ಮಧ್ಯರಾತ್ರಿ ವೇಳೆಗೆ ಅಧಿಕಾರಿಗಳನ್ನು ರಕ್ಷಿಸಿವೆ. ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲಾಗಿದೆ ಎಂಬ ಆರೋಪವೇ ಈ ಗದ್ದಲಕ್ಕೆ ಕಾರಣವಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ➡ಪುಟ ೪

ಏನಿದರ ಹಿನ್ನೆಲೆ?

ಮತದಾರರ ಪಟ್ಟಿಯ ಎಸ್‌ಐಆರ್ ಪ್ರಕ್ರಿಯೆಯಲ್ಲಿ 60 ಲಕ್ಷಕ್ಕೂ ಹೆಚ್ಚು ಆಕ್ಷೇಪಣೆಗಳನ್ನು ಪರಿಶೀಲಿಸಲು ಪಶ್ಚಿಮ ಬಂಗಾಳ, ಒಡಿಶಾ ಹಾಗೂ ಜಾರ್ಖಂಡ್ ರಾಜ್ಯಗಳಿಂದ ಸುಮಾರು 700 ನ್ಯಾಯಾಂಗ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಅದರಂತೆ ಬುಧವಾರ ಮಾಲ್ಡಾ ಜಿಲ್ಲೆಗೆ ನ್ಯಾಯಾಂಗ ಅಧಿಕಾರಿಗಳು ತೆರಳಿದ್ದರು.

ನ್ಯಾಯಪೀಠ ಗರಂ



ಈ ಘಟನೆ ''ಸಾಮಾನ್ಯ ಘಟನೆ ಅಲ್ಲ; ನ್ಯಾಯಾಂಗ ಅಧಿಕಾರಿಗಳನ್ನು ಬೆದರಿಸಲು ರೂಪಿಸಿದ ಸಂಚು'' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ ಅಭಿಪ್ರಾಯಪಟ್ಟಿದೆ. ''ಇದು ರಾಜಕೀಯವಲ್ಲದ ಪ್ರತಿಭಟನೆ ಎಂದಾದರೆ, ರಾಜಕೀಯ ನಾಯಕರು ಅಲ್ಲಿ ಏನು ಮಾಡುತ್ತಿದ್ದರು? ಕಾನೂನು ಸುವ್ಯವಸ್ಥೆ ಕಾಪಾಡುವುದು ಅವರ ಕರ್ತವ್ಯವಲ್ಲವೇ?'' ಎಂದು ನ್ಯಾಯಪೀಠ ಪ್ರಶ್ನಿಸಿದೆ.

ಆಗಿದ್ದೇನು?

ಮಾಲ್ಡಾ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ವೇಳೆ ನ್ಯಾಯಾಂಗ ಅಧಿಕಾರಿಗಳನ್ನು ಗುಂಪೊಂದು ಸುತ್ತುವರಿದು ಒಂಬತ್ತು ಗಂಟೆಗಳ ಕಾಲ ಬಂಧಿಸಿತ್ತು. ಭದ್ರತಾ ಪಡೆಗಳು ಮಧ್ಯರಾತ್ರಿ ಅವರನ್ನು ರಕ್ಷಿಸಿವೆ.

ಅಧಿಕಾರಿಗಳಿಗೆ ನೋಟಿಸ್

ರಾಜ್ಯದ ಮುಖ್ಯ ಕಾರ್ಯದರ್ಶಿ, ಡಿಜಿಪಿ, ಮಾಲ್ಡಾ ಡಿಸಿ, ಎಸ್‌ಎಸ್‌ಪಿ ಅವರಿಗೆ ನಿಮ್ಮ ವಿರುದ್ಧ ಏಕೆ ಕ್ರಮ ಕೈಗೊಳ್ಳಬಾರದು ಎಂದು ಕಾರಣ ಸೂಚಿಸಲು ಕೋರ್ಟ್ ನೋಟಿಸ್ ನೀಡಿದೆ. ಏ.6ರಂದು ಸದರಿ ಅಧಿಕಾರಿಗಳು ಆನ್‌ಲೈನ್ ಮೂಲಕ ವಿಚಾರಣೆಗೆ ಹಾಜರಾಗಬೇಕೆಂದು ಸೂಚಿಸಲಾಗಿದೆ.

ಸುಪ್ರೀಂ ಆದೇಶವೇನು?

ಪ್ರಕರಣದ ತನಿಖೆಯನ್ನು ಸಿಬಿಐ ಅಥವಾ ಎನ್‌ಐಎಗೆ ವಹಿಸಿ, ಕೇಂದ್ರ ಪಡೆ ನಿಯೋಜನೆ ಹಾಗೂ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲು ಸುಪ್ರೀಂ ಕೋರ್ಟ್ ಸೂಚಿಸಿದೆ.

ರಾಜಕೀಯ ಆರೋಪ-ಪ್ರತ್ಯಾರೋಪ

- ಸಿಎಂ ಮಮತಾ ಈ ಘಟನೆಯಿಂದ ದೂರ ಉಳಿದು, ಕಾನೂನು ಸುವ್ಯವಸ್ಥೆ ವೈಫಲ್ಯಕ್ಕೆ ಚುನಾವಣಾ ಆಯೋಗವೇ ಕಾರಣ ಎಂದಿದ್ದಾರೆ
- ಬಿಜೆಪಿ ನಾಯಕ ಸುವೇಂದು ಅಧಿಕಾರಿಯವರು ಈ ಘಟನೆ ಟಿಎಂಸಿ ರೂಪಿಸಿದ ಸಂಚು ಎಂದು ಆರೋಪಿಸಿದ್ದಾರೆ
- ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಇದನ್ನು ''ದೇಶದ ಇತಿಹಾಸದ ಕಪ್ಪು ಅಧ್ಯಾಯ'' ಎಂದು ಟೀಕಿಸಿದ್ದಾರೆ

ಹಾರ್ಮುಜ್ ಸಂಚಾರ ಬಗ್ಗೆ ಇರಾನ್ ಭರವಸೆ

ಸುರಕ್ಷಿತ ಕೈಗಳಲ್ಲಿದ್ದಾರೆ ಭಾರತೀಯ ಸ್ನೇಹಿತರು

• **ಟೆಹ್ರಾನ್/ಹೊಸದಿಲ್ಲಿ:** ಇರಾನ್ ತನ್ನ 'ಭಾರತೀಯ ಸ್ನೇಹಿತರಿಗೆ' ಹಾರ್ಮುಜ್ ಜಲಸಂಧಿ ಮೂಲಕ ಸಾಗಾಟದ ಬಗ್ಗೆ ಯಾವುದೇ ಚಿಂತೆಯಿಲ್ಲ ಎಂದು ಭರವಸೆ ನೀಡಿದ್ದು, ಅವರು 'ಸುರಕ್ಷಿತ ಕೈಗಳಲ್ಲಿ' ಇದ್ದಾರೆ ಎಂದು ಹೇಳಿದೆ.


ಹಾರ್ಮುಜ್ ಜಲಸಂಧಿ ಪರಿಸ್ಥಿತಿಯ ಬಗ್ಗೆ ಭಾರತೀಯರು ಚಿಂತಿಸಬೇಕಾಗಿಲ್ಲ, ''ನಮ್ಮ ಭಾರತೀಯ ಸ್ನೇಹಿತರು ಸುರಕ್ಷಿತ ಕೈಗಳಲ್ಲಿ ಇದ್ದಾರೆ, ಯಾವುದೇ ಚಿಂತೆ ಬೇಡ,'' ಎಂದು ಇರಾನ್‌ನ ಭಾರತದಲ್ಲಿನ ರಾಯಭಾರಿ ಕಚೇರಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಅಂತೆಯೇ ''ಹಾರ್ಮುಜ್ ಜಲಸಂಧಿಯ ಭವಿಷ್ಯವನ್ನು ಕೇವಲ ಇರಾನ್ ಮತ್ತು ಒಮಾನ್ ನಿರ್ಧರಿಸುತ್ತವೆ'' ಎಂದೂ ಪೋಸ್ಟ್‌ನಲ್ಲಿ ಉಲ್ಲೇಖಿಸಲಾಗಿದೆ.



ಇರಾನ್, ಅಮೆರಿಕ ಮತ್ತು ಇಸ್ರೇಲ್ ಜತೆಗಿನ ನಡೆಯುತ್ತಿರುವ ಸಂಘರ್ಷದ ನಡುವೆ ಹಾರ್ಮುಜ್ ಜಲಸಂಧಿ ಮೂಲಕ ತನ್ನ ಹಡಗುಗಳನ್ನು ಸಾಗಿಸಲು ಅನುಮತಿ ಪಡೆದ ಕೆಲವು ರಾಷ್ಟ್ರಗಳಲ್ಲಿ ಭಾರತವು ಇರಾನ್‌ನ ಒಂದಾಗಿದೆ. ಸೈನಿಕ ಉದ್ವಿಗ್ನತೆ ಹೆಚ್ಚಾಗಿದ್ದರೂ, ಟೆಹ್ರಾನ್ ಈ ಪ್ರಮುಖ ಸಮುದ್ರ ಮಾರ್ಗವನ್ನು ಬಳಸಲು ಅವಕಾಶ ನೀಡಿತ್ತು. ಈ ಬೆಳವಣಿಗೆ, ಭಾರತ, ಇರಾನ್ ನಡುವಿನ ಇಂಧನ ಸಹಕಾರದ ಪುನರುಜ್ಜೀವನದ ನಡುವೆಯೇ ಬಂದಿದೆ. ಬ್ಲೂಂಬರ್ಗ್ ವರದಿ ಪ್ರಕಾರ, 2018ರ ನಂತರ ಮೊದಲ ಬಾರಿಗೆ ಭಾರತ ಇರಾನ್‌ನಿಂದ ಎಲ್‌ಪಿಜಿ ಖರೀದಿಸಿದೆ. 2019ರಲ್ಲಿ ಪಾಶ್ಚಾತ್ಯ ನಿರ್ಬಂಧಗಳ ನಂತರ ಈ ಆಮದು ನಿಲ್ಲಿಸಲಾಗಿತ್ತು. ಹಾರ್ಮುಜ್ ಜಲಸಂಧಿ ಜಾಗತಿಕ ತೈಲ ಸಾಗಾಟದ ಪ್ರಮುಖ ಮಾರ್ಗವಾಗಿದೆ. ಅಮೆರಿಕ-ಇಸ್ರೇಲ್ ದಾಳಿ ಹಿನ್ನೆಲೆ ಇದು ಇನ್ನಷ್ಟು ಅಸ್ಥಿರವಾಗಿದೆ. ಇರಾನ್ ಪ್ರತಿದಾಳಿಗಳು ಈ ಜಲಮಾರ್ಗವನ್ನು ತಡೆಹಿಡಿಯುವ ಸಾಧ್ಯತೆ ಉಂಟು ಮಾಡಿದ್ದು, ದೀರ್ಘಕಾಲದ ಅಡಚಣೆ ಜಾಗತಿಕ ಇಂಧನ ಸರಬರಾಜಿಗೆ ಗಂಭೀರ ಪರಿಣಾಮ ಬೀರುವ ಭೀತಿಯನ್ನು ಹೆಚ್ಚಿಸಿದೆ.

ಇರಾನ್ ಯುದ್ಧ ಶೀಘ್ರ ಪೂರ್ಣ: ಟ್ರಂಪ್

• ಪುಟ ೭



ಭಾರತದ ಹಡಗುಗಳಿಗೆ ಸುಂಕ ವಿಧಿಸುವ ಬಗ್ಗೆ ಚರ್ಚೆ ಆಗಿಲ್ಲ: ಎಂಇಎ

ಇರಾನ್‌ನೊಂದಿಗೆ ಹಾರ್ಮುಜ್ ಜಲಸಂಧಿಯಲ್ಲಿ ಭಾರತೀಯ ಹಡಗುಗಳಿಗೆ ಟೋಲ್ ವಿಧಿಸುವ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ ಎಂದು ಕೇಂದ್ರ ಸರ್ಕಾರ ಗುರುವಾರ ಸ್ಪಷ್ಟಪಡಿಸಿದೆ. ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿಯಲ್ಲಿ ಹರಿದಾಡುತ್ತಿದ್ದ ವರದಿಗಳನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಖಂಡಿಸಿದ್ದು, ಇಂತಹ ಯಾವುದೇ ಚರ್ಚೆ ನಡೆದಿಲ್ಲ ಎಂದು ಅವರು ಹೇಳಿದರು. ಇತ್ತೀಚೆಗೆ ಇರಾನ್‌ನ ಸರ್ಕಾರಿ ಮಾಧ್ಯಮಗಳು, ಹಾರ್ಮುಜ್ ಜಲಸಂಧಿ ಮೂಲಕ ಸಾಗುವ ಹಡಗುಗಳ ಮೇಲೆ ಸುಂಕ ವಿಧಿಸುವ ಪ್ರಸ್ತಾವನೆ ಅಂಗೀಕರಿಸಲಾಗಿದೆ ಎಂದು ವರದಿ ಮಾಡಿದ್ದವು. ➡ಪುಟ ೪

ಸ್ಥಳ ನಿಯುಕ್ತಿಗೊಳಿಸದೇ ನೌಕರರ ವರ್ಗಾವಣೆ ಮಾಡಿದರೆ ಕ್ರಮ

ಸಕ್ಷಮ ಪ್ರಾಧಿಕಾರದಿಂದ ವೇತನ ಭತ್ಯೆ

• **ಬೆಂಗಳೂರು:** ಸ್ಥಳ ನಿಯುಕ್ತಿಗೊಳಿಸದೇ ಸರ್ಕಾರಿ ನೌಕರರನ್ನು ವರ್ಗಾವಣೆ ಮಾಡಿದರೆ, ಸ್ಥಳ ನಿರೀಕ್ಷೆಯಲ್ಲಿರಿಸಿದರೆ, ಅಂತಹವರಿಗೆ ಆ ಸಮಯದಲ್ಲಿ ನೀಡುವ ವೇತನವನ್ನು ಹಾಗೂ ಭತ್ಯೆಯನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದಲೇ ವಸೂಲಿ ಮಾಡಲು ಸರ್ಕಾರ ನಿರ್ಧರಿಸಿದೆ.



ಈ ಕುರಿತು ಸುತ್ತೋಲೆ ಹೊರಡಿಸಿರುವ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, ಯಾವುದೇ ಸರ್ಕಾರಿ ನೌಕರನನ್ನು ವರ್ಗಾವಣೆ ಮಾಡಿದ ಬಳಿಕ, ಸ್ಥಳ ನಿಯುಕ್ತಿಗಾಗಿ ಕಾಯುವಂತೆ ಮಾಡದೆ ಕಡ್ಡಾಯವಾಗಿ ಹುದ್ದೆ ನೀಡಬೇಕು ಎಂದು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಸೂಚಿಸಿದ್ದಾರೆ. ಅಲ್ಲದೇ, ಈ ಸೂಚನೆಯನ್ನು ಉಲ್ಲಂಘಿಸಿ ಸ್ಥಳ ನಿಯುಕ್ತಿ ಮಾಡದೆ, ಕಡ್ಡಾಯ ನಿರೀಕ್ಷಣೆಯಲ್ಲಿ ಇರಿಸಿದರೆ ಇತ್ತೀಚೆಗೆ ಹೈಕೋರ್ಟ್ ನೀಡಿರುವ ನಿರ್ದೇಶನದಂತೆ, ಅಂತಹ ಅಧಿಕಾರಿ, ನೌಕರರಿಗೆ ನಿರೀಕ್ಷಣೆಯ ಅವಧಿಗೆ ಪಾವತಿಸಿದ ವೇತನ ಮತ್ತು ಭತ್ಯೆಯನ್ನು ಸಂಬಂಧಿತ ಸಕ್ಷಮ ಪ್ರಾಧಿಕಾರಗಳಿಂದ ವಸೂಲಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ➡ಪುಟ ೪

ಹುದ್ದೆ ತೋರದೇ ವರ್ಗಾವಣೆಯಿಂದ ಸರ್ಕಾರಕ್ಕೆ ನಷ್ಟ

ಹುದ್ದೆ ತೋರಿಸದೆ ಅಧಿಕಾರಿಗಳನ್ನು ವರ್ಗಾಯಿಸುವಂತಿಲ್ಲ. ಈ ರೀತಿಯ ಕ್ರಮಗಳಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಲಿದೆ ಎಂದು ಕರ್ನಾಟಕ ಹೈಕೋರ್ಟ್‌ನ ವಿಭಾಗೀಯ ಪೀಠ ಮಹತ್ವದ ಆದೇಶ ಮಾಡಿತ್ತು. ಈ ರೀತಿಯ ವರ್ಗಾವಣೆಗಳಿಂದ ತೆರಿಗೆದಾರರ, ಸಾರ್ವಜನಿಕರ ಹಣ ದುರ್ವಿನಿಯೋಗವಾದಂತಾಗಲಿದೆ. ➡ಪುಟ ೪

ಪಾಕಿಸ್ತಾನಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಖಡಕ್ ಎಚ್ಚರಿಕೆ

ಗಡಿಯಲ್ಲಿ ದುಷ್ಕೃತ್ಯ ನಡೆಸಿದರೆ ಹುಷಾರ್

• **ತಿರುವನಂತಪುರಂ:** ಗಡಿಯಲ್ಲಿ ಯಾವುದೇ ದುಷ್ಕೃತ್ಯ ನಡೆದರೆ ಭಾರತ ತಕ್ಕ ಪ್ರತಿಕ್ರಿಯೆ ನೀಡುವುದು ಖಚಿತ ಎಂದು ಪಾಕಿಸ್ತಾನಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಪಾಕಿಸ್ತಾನದಿಂದ ಯಾವುದೇ ದೇಶವಿರೋಧಿ ಚಟುವಟಿಕೆ ನಡೆದರೆ,



ಭಾರತದ ಪ್ರತಿಕ್ರಿಯೆಯನ್ನು ಅವರು ಊಹಿಸಲಸಾಧ್ಯ, ಅಷ್ಟರ ಮಟ್ಟಿಗೆ ನಮ್ಮ ಪ್ರತಿಕ್ರಿಯೆ ತೀಕ್ಷ್ಣವಾಗಿರುತ್ತದೆ ಎಂದು ಎಚ್ಚರಿಸಿದರು.

ಸೈನಿಕ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಅವರು, ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಭಯೋತ್ಪಾದನೆಯ ಬಗ್ಗೆ ಶೂನ್ಯ ಸಹಿಷ್ಣುತೆ ಹೊಂದಿದೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸಲಾಗಿದೆ. ಸರ್ಕಾರದ ವರ್ತನೆ ಮತ್ತು ಕಾರ್ಯವಿಧಾನಗಳು ಬದಲಾಗಿವೆ ಎಂದು ಹೇಳಿದರು. ➡ಪುಟ ೪

ಇಂಧನ ಕೊರತೆ ಇಲ್ಲ

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಹೊರತಾಗಿಯೂ ಭಾರತವು ಇಂಧನ ತಕ್ಷಣದ ಕೊರತೆಯನ್ನು ಎದುರಿಸುತ್ತಿಲ್ಲ ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ. ಮುಂಬರುವ ಯಾವುದೇ ಸಂಭಾವ್ಯ ಬಿಕ್ಕಟ್ಟನ್ನು ನಿಭಾಯಿಸಲು ದೇಶವು ಸಂಪೂರ್ಣವಾಗಿ ಸಿದ್ಧವಾಗಿದೆ ಎಂದು ಹೇಳಿದರು. ಪ್ರಧಾನಿ ಮೋದಿಯವರು ಕೊಲ್ಲಿ ಪ್ರದೇಶದಲ್ಲಿ ಭಾರತದ ಹಿತಾಸಕ್ತಿಗಳನ್ನು ರಕ್ಷಿಸಲು ತಮ್ಮ ರಾಜತಾಂತ್ರಿಕ ಕೌಶಲಗಳನ್ನು ಬಳಸುತ್ತಿದ್ದಾರೆ ಎಂದು ಹೇಳಿದರು.

ಭಾರತೀಯರ ರಕ್ಷಣೆಗೆ ಆದ್ಯತೆ

• ಪುಟ ೭

ಏ.16ರಿಂದ ಮತ್ತೆ ಅಧಿವೇಶನ

- ಅನಿರ್ದಿಷ್ಟಾವಧಿಗೆ ಕಲಾಪ ಮುಂದೂಡಿಕೆ ಇಲ್ಲ, ನಿರ್ದಿಷ್ಟ ಅವಧಿಗೆ ಮಾತ್ರ ಮುಂದಕ್ಕೆ
- 2 ರಿಂದ 3 ದಿನ ಮತ್ತೆ ಸಭೆ ಸೇರುವ ಬಗ್ಗೆ ರಿಜಿಜು ಸುಳಿವು
- ಮಹಿಳಾ ಮಸೂದೆ ಜಾರಿಗೆ ತರುವ ಬಗ್ಗೆ ಚರ್ಚೆ



• **ಹೊಸದಿಲ್ಲಿ:** ಸಂಸತ್ತಿನ ಬಜೆಟ್ ಅಧಿವೇಶನವು ಸ್ವಲ್ಪ ವಿರಾಮದ ನಂತರ ಏ.16ರಂದು ಪುನರಾರಂಭವಾಗಲಿದೆ. ಮಹಿಳಾ ಮೀಸಲಾತಿ ಕಾಯ್ದೆಯನ್ನು ಶೀಘ್ರ ಜಾರಿಗೆ ತರುವ ಉದ್ದೇಶದಿಂದ ಲೋಕಸಭೆ ಸದಸ್ಯರ ಸಂಖ್ಯೆಯನ್ನು 543ರಿಂದ 816ಕ್ಕೆ ಹೆಚ್ಚಿಸಲು ವಿಧೇಯಕಗಳನ್ನು ಅಂಗೀಕರಿಸಲು ಈ ಅಧಿವೇಶನ ನಡೆಯಲಿದೆ. ಮೂಲಗಳ ಪ್ರಕಾರ, ಉಭಯ ಸದನಗಳು (ಲೋಕಸಭೆ ಮತ್ತು ರಾಜ್ಯಸಭೆ) 2 ಅಥವಾ 3 ದಿನಗಳ ಕಾಲ ಮರು ಅಧಿವೇಶನಗೊಂಡು ಪ್ರಸ್ತಾವಿತ ವಿಧೇಯಕಗಳನ್ನು ಪರಿಗಣಿಸಲಿವೆ. ➡ಪುಟ ೪

ಸಚಿನ್, ಕೊಹ್ಲಿ, ಲಾರಾ ಸೇರಿದರೆ ಸಿದ್ದರಾಮಯ್ಯ

• **ಬಾಗಲಕೋಟೆ:** ಸಚಿನ್, ವಿರಾಟ್ ಕೊಹ್ಲಿ, ಬ್ರಿಯಾನ್ ಲಾರಾ ಸೇರಿ ಅನೇಕರು ಸೇರಿ ಒಬ್ಬರು ಸಿದ್ದರಾಮಯ್ಯ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಗುಣಗಾನ ಮಾಡಿದರು. ಬಾಗಲ ಕೋಟೆಯಲ್ಲಿ ಗುರುವಾರ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಬಗ್ಗೆ ಬಿಜೆಪಿಗರು ಹಗುರವಾಗಿ ಮಾತುಗಳನ್ನಾಡುತ್ತಾರೆ. ಗುಜರಾತ್‌ಗೂ ಕರ್ನಾಟಕಕ್ಕೂ ಹೋಲಿಕೆ ಮಾಡಿ ನೋಡಿ ಸಾಕು ಎಂದರು.



ಚುನಾವಣೆ ವೇಳೆ ಮಾತ್ರ ಬಿಜೆಪಿಗರು ಗೋಮಾತೆ ಬಗ್ಗೆ ಮಾತನಾಡುತ್ತಾರೆ. ಇಡೀ ಜಗತ್ತಿನಲ್ಲಿ ನಮ್ಮ ದೇಶ ಗೋಮಾಂಸ ರಫ್ತಿನಲ್ಲಿ 2ನೇ ಸ್ಥಾನದಲ್ಲಿದೆ ಗೋಮಾತೆಯನ್ನ ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಿಬಿಡಿ ಎಂದು ಟಾಂಗ್ ಕೊಟ್ಟರು. ಗೋವು ಸಾಗಾಣಿಕೆ ತಡೆಯುವ ಹೆಸರಲ್ಲಿ ಹಣ ವಸೂಲಿ ಮಾಡಿದ್ದಾರೆ. ಅದರ ಹಣದಿಂದ 800 ಬಿಜೆಪಿ ಕಚೇರಿ ಕಟ್ಟಿದ್ದಾರೆ ಎಂದು ಸಚಿವ ಸಂತೋಷ್ ಲಾಡ್ ಆರೋಪಿಸಿದರು.

ಪ್ರಶ್ನಿಸುವುದು ಸಹಜವಾದ ಹಕ್ಕು: ನರೇಂದ್ರ ಮೋದಿಯವರು ದೇವರಾ? ಅವರನ್ನು ಪ್ರಶ್ನೆ ಮಾಡುವಂತಿಲ್ಲವೇ? ಎಂದು ಸಚಿವ ಸಂತೋಷ್ ಲಾಡ್ ಕಿಡಿಕಾರಿದರು. ನಗರದ ಕಾಂಗ್ರೆಸ್ ಕಾರ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವದಲ್ಲಿ ಯಾರನ್ನಾದರೂ ಪ್ರಶ್ನಿಸುವುದು ಸಹಜವಾದ ಹಕ್ಕು ಎಂದರು.

ನರೇಂದ್ರ ಮೋದಿ ದೇವರಲ್ಲ, ಈ ದೇಶದಲ್ಲಿ ಪ್ರತಿಯೊಬ್ಬರನ್ನೂ ಪ್ರಶ್ನಿಸಬಹುದು. ಆದರೆ, ಇಲ್ಲಿ ಪ್ರಶ್ನೆ ಮಾಡುವವರನ್ನೇ ವಿರೋಧಿಗಳಂತೆ ನೋಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ➡ಪುಟ ೪

ರಾಜ್ಯ ಸರ್ಕಾರಕ್ಕೆ ಸಂಸದ ಗೋವಿಂದ ಕಾರಜೋಳ ಸವಾಲು

ಏ.8ರಂದು ಬಹಿರಂಗ ಚರ್ಚೆಗೆ ಬನ್ನಿ


• **ಬಾಗಲಕೋಟೆ:** ಆಲಮಟ್ಟಿ ಜಲಾಶಯದ ಅಡಿಗಲ್ಲು ಸಮಾರಂಭದಿಂದ ಹಿಡಿದು ಇಲ್ಲಿಯವರೆಗೆ ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕೆ ಯಾವ ಸರ್ಕಾರದಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ. ಯಾವ್ಯಾವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂಬುದರ ಕುರಿತು ವಿಸ್ತೃತ ಚರ್ಚೆ ನಡೆಸಲು ಏ.8ರಂದು 11ಗಂಟೆಗೆ ಬಾಗಲಕೋಟೆಯಲ್ಲಿ ಬನ್ನಿ ಎಂದು ರಾಜ್ಯ ಸರ್ಕಾರಕ್ಕೆ ಸಂಸದ ಗೋವಿಂದ ಕಾರಜೋಳ ಸವಾಲು ಹಾಕಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗೋವಿಂದ ಕಾರಜೋಳ ನೀರಾವರಿ ಮಂತ್ರಿಯಾಗಿದ್ದಾಗ ಹಾಗೂ ಬಿಜೆಪಿ ಸರ್ಕಾರದ ಅವಧಿಯಲ್ಲಿ ಯುಕೆಪಿ ಕಾಮಗಾರಿಯನ್ನು ಮಾಡಿಲ್ಲ, ಈ ಕುರಿತು ಚರ್ಚೆಗೆ ಸಿದ್ಧರಿದ್ದೇವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರ ಹೇಳಿಕೆಗೆ ಉತ್ತರಿಸಿದ ಕಾರಜೋಳ, ಸರ್ಕಾರದ ದಾಖಲೆಗಳನ್ನು ಹಿಡಿದುಕೊಂಡು ಬಹಿರಂಗ ಚರ್ಚೆಗೆ ಬನ್ನಿ ಸಚಿವರಿಗೆ ಹೇಳಿದರು.



ಕಾಂಗ್ರೆಸ್‌ಗೆ ಬಾಗಲಕೋಟೆಯಲ್ಲಿ ಸೋಲಿನ ಭಯದಿಂದ ಆಶಾ, ಅಂಗನವಾಡಿ, ಸರ್ಕಾರಿ ನೌಕರರನ್ನು ಬಳಸಿಕೊಂಡು ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕದಿದ್ದರೆ ಗ್ಯಾರಂಟಿ ಯೋಜನೆ ರದ್ದು ಆಗಲಿದೆ ಎಂದು ಹೇಳುವುದು ಸರ್ಕಾರಕ್ಕೆ ನಾಚಿಕೆಯಾಗಬೇಕು ಎಂದು ಹೇಳಿದರು.

ಬಾಗಲಕೋಟೆಯ ಕಾಲೇಜಿನಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಮತದಾರರು ಪಟ್ಟಿಯಲ್ಲಿದ್ದಾರೆ. ಎಲ್ಲಿ ಇರುತ್ತಾರೆ ಅಲ್ಲಿ ಮತದಾನ ಹಕ್ಕನ್ನು ಪಡೆದುಕೊಳ್ಳುತ್ತಾರೆ. ವಿದ್ಯಾರ್ಥಿಗಳಿಗೆ ಬೆದಿರುಸುವುದು, ಅರೆಸ್ಟ್ ಮಾಡಿಸುತ್ತೇವೆ ಎಂಬ ಹೇಳಿಕೆ ನೀಡಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆಯನ್ನು ಖಂಡಿಸಿ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಣಕಿಸುವಂತೆ ಇರಬಾರದು. ಧೈರ್ಯವಿದ್ದರೆ ವಿದ್ಯಾರ್ಥಿಗಳನ್ನು ಬಂಧನ ಮಾಡಿ ನೋಡಿ ಎಂದು ಎಚ್ಚರಿಕೆ ನೀಡಿದರು. ➡ಪುಟ ೪



ಚುನಾವಣಾ ಪ್ರಚಾರ ಸಭೆಯಲ್ಲಿ ರಾಮಲಿಂಗಾರೆಡ್ಡಿ

ನೀರಾವರಿ ಸೇರಿ ಸಾಕಷ್ಟು ಅಭಿವೃದ್ಧಿ

• **ಬಾಗಲಕೋಟೆ:** ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ನೀರಾವರಿ ಸೇರಿದಂತೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸಮೀಪದ ಬೇವೂರು ಗ್ರಾಮದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು. ಕಳೆದ ಬಾರಿ ಬಿಜೆಪಿ ಸರ್ಕಾರ ನೀಡಿದ್ದ 600 ಆಶ್ವಾಸನೆಗಳಲ್ಲಿ ಕೇವಲ 60 ಬೇಡಿಕೆಗಳನ್ನು ಈಡೇರಿಸಿದೆ. ನಮ್ಮ ಸರ್ಕಾರ ಬಹುತೇಕ ಭರವಸೆಗಳನ್ನು ಈಡೇರಿಸಿ ಬಡವರಿಗಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಗ್ರಾಮೀಣ ಅಭಿವೃದ್ಧಿಗೆ ಕಾಂಗ್ರೆಸ್ ಅಭ್ಯರ್ಥಿಗೆ ಉಮೇಶ ಮೇಟಿ ಅವರಿಗೆ ಮತ ನೀಡಬೇಕು ಎಂದು ಕೋರಿದರು. ಮಾಜಿ ಸಚಿವರಾದ ಎಸ್.ಆರ್.ಪಾಟೀಲ, ಅಜಯಕುಮಾರ್ ಸರನಾಯಕ, ಶಾಸಕ ಜೆ.ಟಿ.ಪಾಟೀಲ, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಭಗವತಿ, ಭೈರಮಟ್ಟಿ ಗ್ರಾಮದಲ್ಲಿ ಮನೆ ಮನೆ ಪ್ರಚಾರ ಕೈಗೊಂಡ ಶಾಸಕ ಜೆ.ಟಿ.ಪಾಟೀಲ, ಉಮೇಶ ಮೇಟಿ ಅವರ ಕೈ ಬಲಪಡಿಸಬೇಕು ಎಂದು ಮತದಾರರಲ್ಲಿ ವಿನಂತಿಸಿದರು.



ಪಂಚ ಗ್ಯಾರಂಟಿ ಯೋಜನೆಗಳ ಬಗ್ಗೆ ಗ್ರಾಮದ ಹಿರಿಯರಿಗೆ ತಿಳಿಸಿ ಹಸ್ತದ ಗುರುತಿಗೆ ಮತ ನೀಡುವಂತೆ ಕೋರಿದರು.

ವಿದೇಶದಲ್ಲಿ ನಿತ್ಯ 20 ಭಾರತೀಯರ ಸಾವು!

• **ಹೊಸದಿಲ್ಲಿ:** ಕಳೆದ ಐದು ವರ್ಷಗಳಲ್ಲಿ ಪ್ರತಿದಿನ 20ಕ್ಕೂ ಹೆಚ್ಚು ಭಾರತೀಯರು ವಿದೇಶಗಳಲ್ಲಿ ಮೃತಪಟ್ಟಿದ್ದಾರೆ. ಈ ಪೈಕಿ ಹೆಚ್ಚಿನ ಸಾವುಗಳು ಕೊಲ್ಲಿ ರಾಷ್ಟ್ರಗಳಲ್ಲಿ ಸಂಭವಿಸಿವೆ ಎಂಬ ಆತಂಕಕಾರಿ ಮಾಹಿತಿ ಬಹಿರಂಗಗೊಂಡಿದೆ. ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ಅವರು ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ನೀಡಿದ ಮಾಹಿತಿಯ ಪ್ರಕಾರ, 2021 ಮತ್ತು 2025ರ ನಡುವೆ ವಿದೇಶದಲ್ಲಿ ಭಾರತೀಯ ಕಾರ್ಮಿಕರ ಸಾವುನೋವುಗಳ ಒಟ್ಟು ಸಂಖ್ಯೆ 37,740ಕ್ಕೆ ತಲುಪಿದೆ. ಈ ಸಾವುಗಳಿಗೆ ಕಾರಣದ ವಿವರವನ್ನು ಒದಗಿಸಲಾಗಿಲ್ಲ.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,50,000(2,55,000) ಅಪರಂಜಿ ಚಿನ್ನ: 1,48,970(1,52,950) ಆಭರಣ ಚಿನ್ನ: 1,36,550(1,40,200) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 73,319 (185↑) ಎನ್‌ಎಸ್‌ಇ 22,713 (33↑)

$1 = ₹94.84

ಉಪ ಚುನಾವಣೆಯಲ್ಲಿ ಬಿಜೆಪಿಗೆ ಗೆಲುವು: ಛಲವಾದಿ

ಬೆಂಗಳೂರು: ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿಗೆ ಅಭೂತಪೂರ್ವ ಗೆಲುವು ಖಚಿತ. ಹಳ್ಳಿಗಳಲ್ಲಿ ಸೋಲು ಖಚಿತವೆಂದು ಗೊತ್ತಾದ ಬಳಿಕ ಮುಖ್ಯಮಂತ್ರಿಗಳು ಐದು ದಿನ ಅಲ್ಲೇ ಠಿಕಾಣಿ ಹೂಡಿದ್ದಾರೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದ್ದಾರೆ.



ಗುರುವಾರ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಾಗಲಕೋಟೆಯಲ್ಲಿ ಮುಖ್ಯಮಂತ್ರಿಗಳು ಠಿಕಾಣಿ ಹೂಡಿದ್ದಾರೆ ಎನ್ನುವ ಕಾರಣಕ್ಕೆ ಕೆಲವೆಡೆ ರಸ್ತೆಗಳನ್ನು ಕೆಂಪು ಮಣ್ಣಿನಿಂದ ಮುಚ್ಚಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಕಾರ್ಯಕರ್ತರು ಸಿಗುತ್ತಿಲ್ಲ, ಆದ್ದರಿಂದ ಸರ್ಕಾರಿ ನೌಕರರು, ಶಿಕ್ಷಕರನ್ನು ಬಳಸಿಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿ ಭೇಟಿಗೂ ಮೊದಲು ಒಂದೊಂದು ಹಳ್ಳಿಗೆ 5ರಿಂದ 10 ಲಕ್ಷ ಹಣ ಹಂಚುತ್ತಿದ್ದಾರೆ ಎಂದು ಆರೋಪಿಸಿದರು. ಚರಂತಿಮಠ ಅವರನ್ನು ಗೆಲ್ಲಿಸಲು ಜನರು ತೀರ್ಮಾನ ಮಾಡಿದ್ದು, ಮುಸಲ್ಮಾನರೂ ಬಿಜೆಪಿ ಬೆಂಬಲಕ್ಕೆ ನಿಂತಿದ್ದಾರೆ ಎಂದು ತಿಳಿಸಿದರು.

ದಾವಣಗೆರೆಯಲ್ಲಿ ಸಾದಿಕ್ ಪೈಲ್ವಾನ ಅವರನ್ನು ಕಾಂಗ್ರೆಸ್ಸಿನವರು ತಪ್ಪು ದಾರಿಗೆ ಎಳೆದ ಭಾವನೆ ಇದೆ. ಮುಸಲ್ಮಾನರು ಅಲ್ಲಿ ಮತ ಹಾಕದೇ ಇರಲು ತೀರ್ಮಾನಕ್ಕೆ ಬಂದಿದ್ದಾರೆ. ಎಸ್‌ಡಿಪಿಐ ಅಭ್ಯರ್ಥಿಯೂ ಇದ್ದಾರೆ. ನಲಪಾಡ್ ಮುಸಲ್ಮಾನರನ್ನೇ ಬೈದಿದ್ದಾರೆ. ಇದರಿಂದ ಮುಸಲ್ಮಾನರು ಇನ್ನಷ್ಟು ಕೋಪಗೊಂಡಿದ್ದಾರೆ. ಇವೆಲ್ಲವೂ ಕಾಂಗ್ರೆಸ್ಸಿನ ಸೋಲಿಗೆ ಕಾರಣ ಆಗಬಹುದೆಂದು ವಿಶ್ಲೇಷಿಸಿದರು. ಕಾಂಗ್ರೆಸ್ಸಿನಲ್ಲಿ ಅಭ್ಯರ್ಥಿ ವಿಚಾರದಲ್ಲಿ ಅಸಮಾಧಾನವಿದೆ. ಕಾಂಗ್ರೆಸ್ಸಿನವರೇ ಸೇರಿ ಬಿಜೆಪಿಯನ್ನು ಎರಡೂ ಕಡೆ ಗೆಲ್ಲಿಸಬಹುದು ಎಂದರು. ರಾಹುಲ್ ಗಾಂಧಿ ಬಾಯಿಗೆ ಬಂದ ಹಾಗೆ ಅಸಂಬದ್ಧವಾಗಿ ಮಾತನಾಡುತ್ತಿದ್ದಾರೆ. ಅಷ್ಟು ಕೆಟ್ಟದಾಗಿ ಮಾತನಾಡುವುದಕ್ಕೂ ನರೇಂದ್ರ ಮೋದಿ ಕಾರಣರೇ ಎಂದು ಪ್ರಶ್ನಿಸಿದರು.

ಕೇಂದ್ರದಿಂದ ಷರತ್ತುಬದ್ಧ ಒಪ್ಪಿಗೆ

ಬೆಂಗಳೂರು: ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಯಲ್ಲಿ ಗುರುತ್ವಾಕರ್ಷಣ ಕಾಲುವೆ ನಿರ್ಮಾಣಕ್ಕಾಗಿ ಹಾಸನ ಮತ್ತು ತುಮಕೂರು ಜಿಲ್ಲೆಯಲ್ಲಿ 111.0277 ಹೆಕ್ಟೇರ್ ಅರಣ್ಯ ಭೂಮಿ ಬಳಸಲು ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ ಬುಧವಾರ ಷರತ್ತು ಬದ್ಧ ಅನುಮತಿ ನೀಡಿದೆ.

ಹಾಸನ, ತುಮಕೂರು ಜಿಲ್ಲೆಗಳಲ್ಲಿ ಗುರುತ್ವಾ ಕಾಲುವೆಯ ನಿರ್ಮಾಣಕ್ಕೆ 0 ರಿಂದ 261.690 ಕಿ.ಮೀ.ವರೆಗಿನ 173.3105 ಹೆಕ್ಟೇರ್ ಅರಣ್ಯ ಭೂಮಿ ಬಳಕೆಗೆ ವಿಶ್ವೇಶ್ವರಯ್ಯ ಜಲ ನಿಗಮದ ಪರವಾಗಿ ರಾಜ್ಯ ಸರ್ಕಾರ 2025ರ ಮಾ.18ರಂದು ಪೂರ್ವಾನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿತ್ತು. ಈ ಪೈಕಿ 111.0277 ಹೆಕ್ಟೇರ್ ಅರಣ್ಯ ಭೂಮಿ ಉಪಯೋಗಿಸುವುದಕ್ಕೆ ಷರತ್ತುಬದ್ಧ ಅನುಮತಿ ನೀಡಲಾಗಿದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯವು ಎರಡು ಹಂತಗಳಲ್ಲಿ 35 ಷರತ್ತುಗಳನ್ನು ವಿಧಿಸಿದೆ. ಅವುಗಳಲ್ಲಿ ಕೆಲವು ಅರಣ್ಯ ಭೂಮಿ ಬಳಕೆಗೆ ಮೊದಲು ಪೂರೈಸಬೇಕಿದ್ದರೆ, ಇನ್ನು ಕೆಲವು ಬಳಕೆಯ ಬಳಿಕ ಅನುಸರಿಸಬೇಕಿದೆ. ಮುಖ್ಯವಾಗಿ ಪರಿವರ್ತಿಸಿ ಅರಣ್ಯ ಭೂಮಿಯ ಕಾನೂನು ಸ್ಥಿತಿ ಬದಲಾಗದೆ ಮೊದಲಿನಂತೆಯೇ ಉಳಿಯುತ್ತದೆ. ಬಳಕೆ ಮಾಡುವ ಅರಣ್ಯ ಭೂಮಿಯಷ್ಟೇ ಪ್ರಮಾಣದಲ್ಲಿ ಅರಣ್ಯೇತರ ಭೂಮಿಯಲ್ಲಿ ಪರಿಹಾರ ಅರಣ್ಯೀಕರಣ ಮಾಡಬೇಕು. ಪರಿಹಾರ ಅರಣ್ಯೀಕರಣಕ್ಕಾಗಿ ಗುರುತಿಸಲಾದ ಅರಣ್ಯೇತರ ಭೂಮಿಯನ್ನು ರಾಜ್ಯ ಅರಣ್ಯ ಇಲಾಖೆಯ ಪರವಾಗಿ ಅರಣ್ಯ ಭೂಮಿಯಾಗಿ ವರ್ಗಾಯಿಸಿ, ಪರಿವರ್ತಿಸಬೇಕು. ಅದನ್ನು ಭಾರತೀಯ ಅರಣ್ಯ ಕಾಯ್ದೆ, 1927 ರ ಸೆಕ್ಷನ್– 29 ರಡಿಯಲ್ಲಿ ಅಥವಾ ಸ್ಥಳೀಯ ಅರಣ್ಯ ಕಾಯ್ದೆಯ ಸಂಬಂಧಿತ ಸೆಕ್ಷನ್‌ಗಳಡಿಯಲ್ಲಿ ಸಂರಕ್ಷಿತ ಅರಣ್ಯಗಳೆಂದು ಅಧಿಸೂಚಿಸಬೇಕು. ಪರಿಹಾರ ಅರಣ್ಯೀಕರಣವನ್ನು 10 ವರ್ಷಗಳ ಕಾಲ ನಿರ್ವಹಣೆ ಮಾಡಬೇಕು.


ಪೂರ್ವಾನುಮತಿ ಇಲ್ಲದೆ ಬಳಸಿರುವ ಉಳಿದ ಅರಣ್ಯ ಪ್ರದೇಶವನ್ನು ಜಲ ನಿಗಮದಿಂದ ವಾಪಸ್ ಪಡೆದು ಸೂಕ್ತ ಮರು ಸ್ಥಾಪನೆ ಮಾಡಬೇಕು. ಇದಕ್ಕೆ ತಗಲುವ ವೆಚ್ಚವನ್ನು ಜಲ ನಿಗಮದಿಂದಲೇ ವಸೂಲಿ ಮಾಡಬೇಕು. ವಿಶ್ವೇಶ್ವರಯ್ಯ ಜಲ ನಿಗಮವು ನಿಯಮ ಉಲ್ಲಂಘಿಸಿ ಬಳಸಿದ ಅರಣ್ಯ ಪ್ರದೇಶಕ್ಕೆ ದಂಡ ವಸೂಲಿ ಮಾಡಲಾಗುತ್ತದೆ. ಈ ಮೊತ್ತವು ಅರಣ್ಯ ಭೂಮಿಯ ಈಗಿನ ಒಟ್ಟು ಮೌಲ್ಯದ (ಎನ್‌ಪಿವಿ) ಐದು ಪಟ್ಟು ಆಗಿರುತ್ತದೆ. ಈ ಮೊತ್ತವನ್ನು ಕಾಂಪಾ ಖಾತೆಗೆ ವರ್ಗಾವಣೆ ಮಾಡುವವರೆಗೆ ಶೇ. 12 ಬಡ್ಡಿ ವಸೂಲಿ ಮಾಡಬೇಕು.

ವನ್ಯಜೀವಿಗಳ ಸಂರಕ್ಷಣೆಗಾಗಿ ವನ್ಯಜೀವಿ ಸಂರಕ್ಷಣಾ ಯೋಜನೆಯನ್ನು ರಾಜ್ಯ ಸರ್ಕಾರ ಸಲ್ಲಿಸಬೇಕು. ಇದನ್ನು ಭಾರತೀಯ ವನ್ಯಜೀವಿ ಸಂಸ್ಥೆಯಿಂದ ಪರಿಶೀಲನೆಗೆ ಒಳಪಡಿಸಬೇಕು. ಸಂಪೂರ್ಣ ಅನುಸರಣಾ ವರದಿಯನ್ನು ಪರಿವೇಶ್ ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು.

ಭಾಗ್ಯಗಳ ತಡೆಗೆ ಕೋರ್ಟ್ ನಕಾರ

ಬೆಂಗಳೂರು: ನ್ಯಾಯಾಲಯ ಮಾಡುವ ಯಾವುದೇ ಆದೇಶವು ಅಂತಿಮವಾಗಿ ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಹಾನಿ ಮಾಡಲಿದೆ. ರಾಜ್ಯ ಸರ್ಕಾರ ನೀತಿ ಜಾರಿಗೊಳಿಸಿದ್ದು, ಅದನ್ನು ಮುಂದುವರಿಸುತ್ತಿದೆ ಎಂದಿರುವ ಹೈಕೋರ್ಟ್ ಗ್ಯಾರಂಟಿ ಯೋಜನೆಗಳ ಭಾಗವಾಗಿ ನಗದು ಬಿಡುಗಡೆ ಮಾಡದಂತೆ ತಡೆ ನೀಡಬೇಕು ಎಂಬುದಕ್ಕೆ ನಿರಾಕರಿಸಿದೆ.

ಆರೇಳು ತಿಂಗಳಿಂದ ಗ್ಯಾರಂಟಿ ಯೋಜನೆಗಳ ಭಾಗವಾಗಿ ನಗದು ಬಿಡುಗಡೆಯನ್ನು ತಡೆಹಿಡಿಯಲಾಗಿದೆ. ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವಾಗ ಉಪಚುನಾವಣೆಯನ್ನು



ಕೇಂದ್ರೀಕರಿಸಿ ಏಕಕಾಲಕ್ಕೆ ಬಾಕಿ ಪಾವತಿಸುವ ಮೂಲಕ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಆಕ್ಷೇಪಿಸಿ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿರುವ ಗೌತಮ್ ಕುಮಾರ್ ಜೈನ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾ.ಸಚಿನ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ಚುನಾವಣಾ ಆಯೋಗವು ಶಕ್ತಿಯುತವಾಗಿದ್ದು, ಕಾನೂನಿನ ಅನ್ವಯ ಅವರು ಕ್ರಮಕೈಗೊಳ್ಳಲಿದ್ದಾರೆ. ಆರು ತಿಂಗಳಿಂದ ಗ್ಯಾರಂಟಿ ಯೋಜನೆಗಳ ಹಣ ನೀಡಲಾಗಿಲ್ಲ ಎಂಬುದಕ್ಕೆ ದಾಖಲೆ ಸಲ್ಲಿಸಬೇಕು. ಅದನ್ನು ನಾವು ತೋರಿಸಿದರೆ ಅರ್ಜಿದಾರರಿಗೆ ದಂಡ ಹಾಕಬೇಕು, ಫೆಬ್ರವರಿವರೆಗೆ ಎಲ್ಲವನ್ನೂ ವಿತರಿಸಿರುವುದಕ್ಕೆ ದಾಖಲೆ ಸಲ್ಲಿಸುತ್ತೇನೆ ಎಂದರು. ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ಅವರು ಗೃಹಲಕ್ಷ್ಮೀ, ಯುವನಿಧಿ, ಅನ್ನಭಾಗ್ಯ ಯೋಜನೆಗಳನ್ನು ಸರ್ಕಾರವು ಸರಿಯಾಗಿ ಜಾರಿಗೊಳಿಸಿಲ್ಲ, ಆರು ತಿಂಗಳಿಂದ ಅನ್ನಭಾಗ್ಯ ನೀಡಲಾಗಿಲ್ಲ, ನೀತಿ ಸಂಹಿತೆ ಜಾರಿಯಾದ ಮೇಲೆ ಹಣ ನೀಡುವುದೇ ಅಥವಾ ನೀತಿ ಸಂಹಿತೆ ಜಾರಿಯಾಗುವುದಕ್ಕೆ ಮೊದಲೇ ನೀಡುವುದೇ ಎಂಬುದು ಇಲ್ಲಿ ವಿಷಯವಾಗಿದೆ. ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡುವುದಕ್ಕೂ ಮುನ್ನ ಸರ್ಕಾರವು ಆಯೋಗದಿಂದ ಅನುಮತಿ ಪಡೆದಿಲ್ಲ, ಚುನಾವಣೆ ಮುಗಿಯುವವರೆಗೆ ಹಣ ಬಿಡುಗಡೆ ಮಾಡಬಾರದು ಎಂಬುದು ನಮ್ಮ ಕೋರಿಕೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಮೋದಿಯ ಆರ್ಥಿಕ ನೀತಿ, ವಿದೇಶ ನೀತಿ ವಿಫಲವಾಗಿದೆ. ಅವರ ಯಾವ ನೀತಿಯೂ ಅನುಕೂಲವಾಗಿಲ್ಲ – ಮಲ್ಲಿಕಾರ್ಜುನ ಖರ್ಗೆ

– ಪಕ್ಷ ನಿಷ್ಠೆಯ ದೃಷ್ಟಿಯಲ್ಲಿ ನೋಡಿದಾಗ ವಿಫಲವೆಂದು ಕಾಣಿಸಿರಬಹುದು, ಆದರೆ ದೇಶ ನಿಷ್ಠೆಯ ದೃಷ್ಟಿಯಲ್ಲಿ ನೋಡಿದಾಗ ಸಂಪೂರ್ಣ ಸಫಲವೆಂಬುದನ್ನು ಕಾಣಬಹುದು!

ದಿನ ಭವಿಷ್ಯ

ಮೇಷ
ವೃತ್ತಿಯಲ್ಲಿ ವಿಘ್ನ ತಲೆದೋರಿದರೂ ಹೆಚ್ಚಿನ ಹಾನಿ ತರದು. ಆಪ್ತರ ಸೂಕ್ತ ಸಹಕಾರ ಸಿಗಲಿದೆ. ಖರ್ಚು ನಿಮ್ಮ ಮಿತಿಯೊಳಗಿರಲಿ.

ವೃಷಭ
ವೃತ್ತಿಯಲ್ಲಿ ಪ್ರಗತಿ. ಬಾಕಿ ಉಳಿದ ಕಾರ್ಯ ಪೂರ್ಣ. ಪ್ರೀತಿಯಲ್ಲೂ ಸಂತೋಷದ ಬೆಳವಣಿಗೆ. ವಿವಾಹ ಸಂಬಂಧ ಕೂಡಿಬರಬಹುದು.

ಮಿಥುನ
ನಿಮ್ಮ ಉತ್ತಮ ನಿರ್ವಹಣೆಗೆ ಸೂಕ್ತ ಪ್ರತಿಫಲ ಸಿಗಲಿದೆ. ಸಂತಾನ ಅಪೇಕ್ಷಿತರಿಗೆ ಶುಭಪ್ರದ ಬೆಳವಣಿಗೆ. ಆದಾಯ ಹೆಚ್ಚಳ.

ಕಟಕ
ಸಣ್ಣ ವಿಷಯ ಹೆಚ್ಚು ಜಟಿಲಗೊಳಿಸಬೇಡಿ. ಸಂತೋಷ ಪಡಲು ನಿಮ್ಮ ಮನಸ್ಥಿತಿ ಬದಲಿಸುವುದೂ ಅಗತ್ಯ. ವೃತ್ತಿಯಲ್ಲಿ ಅಧಿಕ ಹೊಣೆಗಾರಿಕೆ.

ಸಿಂಹ
ದಿನವಿಡೀ ಉತ್ಸಾಹ. ಹೊಣೆಗಾರಿಕೆ ಮುಗಿದು ನಿರಾಳತೆಯ ಭಾವ. ಬಯಸಿದ ಗುರಿ ಸಾಧಿಸುವಿರಿ. ಆದಾಯದಲ್ಲಿ ಹೆಚ್ಚಳ

ಕನ್ಯಾ
ವೃತ್ತಿ ಒತ್ತಡ ಅಧಿಕವಿದ್ದರೂ ಕುಟುಂಬದ ಸಂಗಡ ಆತ್ಮೀಯ ಕಾಲ ಕಳೆಯುವ ಅವಕಾಶವೂ ಸಿಗಲಿದೆ. ಆರ್ಥಿಕ ಒತ್ತಡ.

ತುಲಾ
ಆದಾಯದಲ್ಲಿ ಹೆಚ್ಚಳ. ಆಪ್ತರ ಜತೆಗಿನ ಭಿನ್ನಮತ ಸುಗಮ ಪರಿಹಾರ. ಕಠಿಣ ಕಾರ್ಯ ಇಂದು ಕೈಗೆತ್ತಿಕೊಳ್ಳಬೇಡಿ. ಕಾದುನೋಡಿರಿ.

ವೃಶ್ಚಿಕ
ಯಾರದೋ ಮಾತು ಮನಸ್ಸು ಕೆಡಿಸಬಹುದು. ಅಂತಹ ಮಾತಿಗೆ ಆಸ್ಪದ ಕೊಡದಂತೆ ವರ್ತಿಸಿರಿ. ದೌರ್ಬಲ್ಯಕ್ಕೆ ಸುಲಭ ಬಲಿಯಾಗಬೇಡಿ.

ಧನು
ನೀವು ಹಿಂದೆ ತೋರಿದ ಧೋರಣೆಗೆ ಕೆಲವರ ಅತೃಪ್ತಿ, ಟೀಕೆ. ಬಳಿಕ ಸರಿಯಾಗಲಿದೆ. ಆತ್ಮೀಯರ ಸಂಗದಲ್ಲಿ ನಿರಾಳತೆ.

ಮಕರ
ಮನೆ ವ್ಯವಹಾರಕ್ಕೆ ಸಂಬಂಧಿಸಿ ಮಹತ್ವದ ನಿರ್ಧಾರ ತಾಳಬೇಕಾದೀತು. ಆರ್ಥಿಕ ಪ್ರಗತಿ. ಅನಾರೋಗ್ಯ ನಿವಾರಣೆ. ಧನಪ್ರಾಪ್ತಿ.

ಕುಂಭ
ನೀವು ಅಚ್ಚರಿಪಡುವ ಬೆಳವಣಿಗೆ ಉಂಟಾದೀತು. ವೃತ್ತಿಯಲ್ಲಿ ಕಿರುಕುಳ ಎದುರಿಸುವಿರಿ. ಕುಟುಂಬ ಸಂಬಂಧ ಬಲಗೊಳಿಸಿ. ಭಾವುಕತೆ ನಿಯಂತ್ರಿಸಿ.

ಮೀನ
ಚಿಂತೆ ತಂದಿದ್ದ ವಿಷಯ ಇತ್ಯರ್ಥ. ಆತ್ಮವಿಶ್ವಾಸ ಹೆಚ್ಚಿಸುವ ಪ್ರಸಂಗ. ಆರ್ಥಿಕ ವ್ಯವಹಾರದಲ್ಲಿ ಲಾಭ. ಕೌಟುಂಬಿಕ ಸೌಹಾರ್ದ.

ರಾಹುಕಾಲ: 10.30–12.00
ಗುಳಿಕಕಾಲ: 7.30–9.00

ಅದೃಷ್ಟ ಸಂಖ್ಯೆ : 1,8,3,6

ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್

ಗರ್ಭಿಣಿಯರಲ್ಲಿ ರಕ್ತಹೀನತೆ

ಬೆಂಗಳೂರು: ಮಹಿಳೆಯರ ಆರೋಗ್ಯದ ವಿಚಾರದಲ್ಲಿ ಇಂದು ನಾವು ಎದುರಿಸುತ್ತಿರುವ ಅತ್ಯಂತ ಗಂಭೀರ ಸವಾಲು ಎಂದರೆ ರಕ್ತಹೀನತೆ (ಅನಿಮಿಯಾ). ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿಯಲ್ಲಿ ತಿಳಿಸಿದಂತೆ, ನಮ್ಮ ರಾಜ್ಯದಲ್ಲಿ ಶೇ. 67ಕ್ಕಿಂತ ಹೆಚ್ಚು ಗರ್ಭಿಣಿಯರು ರಕ್ತಹೀನತೆಯಿಂದ ಬಳಲುತ್ತಿರುವುದು ಆತಂಕಕಾರಿ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಹೇಳಿದರು.

ಗುರುವಾರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ತಾಯಿಯಿಂದ ಹುಟ್ಟುವ ಮಕ್ಕಳಿಗೂ ರಕ್ತಹೀನತೆ ಸಮಸ್ಯೆದ ಬಗ್ಗೆ ಗಂಭೀರವಾಗಿ ಚಿಂತಿಸಬೇಕಿದ್ದು, ಆರೋಗ್ಯಕರ ಪೀಳಿಗೆಯನ್ನು ನಿರ್ಮಿಸುವ ಮೊದಲು ಮಹಿಳೆಯರ ಆರೋಗ್ಯವನ್ನು ಕಾಪಾಡುವುದು ನಮ್ಮ ಅಗತ್ಯವಾಗಬೇಕು ಎಂದರು.

ನಮ್ಮಲ್ಲಿ ಹಲವು ಮಹಿಳೆಯರಿಗೆ ಅಪಾರ ಪ್ರತಿಭೆ ಇದೆ. ಆದರೆ, ನಮ್ಮ ಸುತ್ತಮುತ್ತಲಿನ ಕುಟುಂಬದ ಸದಸ್ಯರಿಂದ ಬೆಂಬಲ ಸಿಗುವುದಿಲ್ಲ. ಬೆಂಬಲ ಸಿಕ್ಕರೆ ಸಾಧನೆಗಳಿಗೆ ಅಂತ್ಯವೇ ಇಲ್ಲ. ನಮ್ಮ ದೇಶದ ಸಾಂಪ್ರದಾಯಿಕ ವೈದ್ಯ ಪದ್ಧತಿಗಳಲ್ಲಿ ಸರಳ ಮತ್ತು ಪರಿಣಾಮಕಾರಿ ತಡೆಗಟ್ಟುವಿಕೆ ಹಾಗೂ ಚಿಕಿತ್ಸಾ ವಿಧಾನಗಳಿದ್ದು, ಅವುಗಳನ್ನು ನಾವು ಮರೆತಿರುವುದೇ ಇಂದಿನ ಅನೇಕ ಆರೋಗ್ಯ ಸಮಸ್ಯೆಗಳ ಮೂಲಕಾರಣವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವೈದ್ಯಕೀಯ ಶಿಕ್ಷಣಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್ ಮಾತನಾಡಿ, ಈಗ ಮಹಿಳೆಯರ ಸಾಧನೆಗಳನ್ನು ಸಡಗರದಿಂದ ಆಚರಿಸುವ ಸಮಯ ಬಂದಿದೆ. ಮಹಿಳೆಯರು ಆಡಳಿತದಲ್ಲಿ, ರಾಜಕೀಯದಲ್ಲಿ ಮತ್ತು ಜೀವನದ ಎಲ್ಲ ಕ್ಷೇತ್ರಗಳಲ್ಲಿ ಇನ್ನಷ್ಟು ಸಕ್ರೀಯವಾಗಿ ಭಾಗವಹಿಸುವಂತಾಗಬೇಕು. ಎಲ್ಲರಿಗೂ ಸಮಾನ ಅವಕಾಶ ದೊರಕುವ ದಿನಗಳು ಇನ್ನಷ್ಟು ವೇಗವಾಗಿ ಬರಬೇಕು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ವೈದ್ಯಕೀಯ, ದಂತ ವೈದ್ಯಕೀಯ, ಫಾರ್ಮಸಿ, ಯುನಾನಿ ಸೇರಿದಂತೆ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆಗೈದ ಹಲವು ಮಹಿಳೆಯರಿಗೆ ಪ್ರಶಸ್ತಿ ನೀಡಿ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿ ವಿಜೇತೆ ಡಾ. ಪ್ರೇಮ ಧನರಾಜ್, ಕುಲಪತಿ ಡಾ. ಭಗವಾನ್ ಬಿ.ಸಿ., ಕುಲಸಚಿವ ಅರ್ಜುನ್ ಒಡೆಯರ್ ಸೇರಿದಂತೆ ಇತರರಿದ್ದರು.



ವೈದ್ಯರಲ್ಲಿ ಮೃದುತ್ವ ಗುಣ ಮುಖ್ಯ

ರೋಗಿಗಳನ್ನು ಗುಣಪಡಿಸಲು ವೈದ್ಯರಲ್ಲಿ ಮೃದುತ್ವ ಗುಣ ಬಹಳ ಮುಖ್ಯವಾಗಿದೆ. ಇದರಿಂದ ಸಹಜವಾಗಿಯೇ ಎದುರಿನ ವ್ಯಕ್ತಿಯ ನೋವು ಮತ್ತು ಅದರ ಆಳವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಇರುತ್ತದೆ. ಪ್ರೀತಿ, ಮಾನವೀಯತೆ, ಮಮಕಾರ, ಅಕ್ಕರೆ ಹಾಗೂ ಆರೈಕೆ ಇವು ಮಹಿಳೆಯರ ಸಹಜ ಗುಣಗಳು. ವೈದ್ಯಾಧಿಕಾರಿಗಳು ಮತ್ತು ವೈದ್ಯರು ಈ ಗುಣಗಳನ್ನು ಅಳವಡಿಸಿಕೊಂಡರೆ ಮಾತ್ರ ಅವರು ನಿಜವಾದ ಅರ್ಥದಲ್ಲಿ ವೈದ್ಯರಾಗಲು ಸಾಧ್ಯ ಎಂದು ಶಾಲಿನಿ ರಜನೀಶ್ ಹೇಳಿದರು.

ಸೂಪರ್ ವುಮನ್ ಎಂಬುದು ಒಂದು ಭ್ರಮೆ. ಅದೊಂದು ಅಸಾಧ್ಯ ನಿರೀಕ್ಷೆಗಳ ಭಾರ. ಅದಕ್ಕೆ ಈಡಾಗಬೇಡಿ. ನಾವೆಲ್ಲರೂ ನಮ್ಮದೇ ಆದ ಸಾಮರ್ಥ್ಯಗಳು ಮತ್ತು ಮಿತಿಗಳಿರುವ ಸಾಮಾನ್ಯ ಮನುಷ್ಯರು. ಈ ಸತ್ಯವನ್ನು ಒಪ್ಪಿಕೊಳ್ಳುವುದರಿಂದ ಜೀವನದಲ್ಲಿ ಸಮತೋಲನ ಮತ್ತು ಶಾಂತಿ ದೊರೆಯುತ್ತದೆ.

■ **ಡಾ. ಭಗವಾನ್ ಬಿ.ಸಿ, ಕುಲಪತಿ, ರಾಜೀವ್ ಗಾಂಧಿ ಆರೋಗ್ಯ ವಿವಿ**

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಗ್ಯಾರಂಟಿಗೆ 52 ಸಾವಿರ ಕೋಟಿ ರೂ. ಮೀಸಲು

ದಾವಣಗೆರೆ: ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಜಾರಿಯಾಗುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.



ನಗರದಲ್ಲಿ ಗುರುವಾರ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಪ್ರಚಾರಕ್ಕೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಯಾವುದೇ ಚುನಾವಣೆಯಾದರೂ, ನಮ್ಮ ಗ್ಯಾರಂಟಿಗಳು ನಿರಂತರವಾಗಿ ಮುಂದುವರಿದಿದೆ. ಇದಕ್ಕಾಗಿ 52 ಸಾವಿರ ಕೋಟಿ ರೂ. ಮೀಸಲಿಟ್ಟಿದ್ದು, ಈವರೆಗೆ 1.31 ಸಾವಿರ ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ ಎಂದರು.

ರಾಜ್ಯ ಸರ್ಕಾರ ಮಿತಿಯೊಳಗೆ ಸಾಲ ಮಾಡಬೇಕು. ಆರ್ಥಿಕ ಹೊಣೆಗಾರಿಕೆ ಕಾಯ್ದೆಯ ಮಾನದಂಡದಂತೆ ರಾಜ್ಯದ ಜಿಡಿಪಿಯ ಶೇ.25 ಮಿತಿಯೊಳಗೆ ಸಾಲದ ಮೊತ್ತವಿದೆ. ನಮ್ಮ ವಿತ್ತೀಯ ಕೊರತೆ 2.95 ರಷ್ಟಿದೆ. ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ನ್ಯಾಯಬದ್ಧ ಅನುದಾನಗಳು ಬರದ ಕಾರಣ ರೆವಿನ್ಯೂ ಸಾಧನೆ ಸಾಧ್ಯವಾಗಲಿಲ್ಲ. ಬಿಹಾರ ಚುನಾವಣೆಯ ಸಂಬಂಧ ಜಿಎಸ್‌ಟಿ ದರವನ್ನು ಕಡಿತಗೊಳಿಸಿದರು. ಇದರಿಂದಾಗಿ ರಾಜ್ಯದ ಬೊಕ್ಕಸಕ್ಕೆ 10,000 ಕೋಟಿ ರೂ. ನಷ್ಟವಾಗಿದೆ. ಜಿ.ಎಸ್.ಟಿ ಕಡಿತದ ಮುಂಚೆ ಶೇ.10 ಇದ್ದ ಬೆಳವಣಿಗೆ ಈಗ ಶೇ.4ಕ್ಕೆ ಕುಸಿದಿದೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ಜಿಎಸ್‌ಟಿ ಪರಿಹಾರ ಅನುದಾನ ನೀಡಿಲ್ಲ ಎಂದು ಆರೋಪಿಸಿದರು.

ರಾಜ್ಯದ ಆರ್ಥಿಕತೆಯ ಸ್ಥಿತಿಗತಿಗಳ ಎಲ್ಲ ಅಂಶಗಳ ದಾಖಲೆಗಳನ್ನು ಬಜೆಟ್ ನಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಬಿಜೆಪಿಯವರ ಅವಧಿಯಲ್ಲಿ ಗುತ್ತಿಗೆದಾರರ 29 ಸಾವಿರ ಕೋಟಿಯಷ್ಟು ಬಾಕಿ ಉಳಿಸಲಾಗಿತ್ತು. ಅದರಲ್ಲಿ 24 ಸಾವಿರ ಕೋಟಿ ರೂ. ಬಾಕಿ ಬಿಲ್ ಪಾವತಿಸಿದ್ದು, ಈ ಬಗ್ಗೆ ದಾಖಲಾತಿಯ ಆಧಾರದಲ್ಲಿ ಸ್ಪಷ್ಟ ಉತ್ತರವನ್ನು ಅಧಿವೇಶನದಲ್ಲಿ ನೀಡಲಾಗಿದೆ ಎಂದರು.

ಬೆಲೆ ಏರಿಕೆ ನಿಯಂತ್ರಿಸುವ ಹೊಣೆಗಾರಿಕೆ ಕೇಂದ್ರದ್ದು

ಬೆಲೆ ಏರಿಕೆ ನಿಯಂತ್ರಿಸುವ ಹೊಣೆಗಾರಿಕೆ ಕೇಂದ್ರ ಸರ್ಕಾರಕ್ಕೆ ಸೇರಿದ್ದು. ನೆರೆರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಬೆಲೆಗಳು ಕಡಿಮೆ ಇವೆ. ರಾಜ್ಯದಲ್ಲಿ ಒಳಮೀಸಲಾತಿ ಜಾರಿಗೊಳಿಸಲು ಸರ್ಕಾರ ಬದ್ಧವಾಗಿದೆ. ಬಿಜೆಪಿಯವರಿಗೆ ಅಹಿಂದ ವರ್ಗಗಳ ಮೇಲೆ ಕಾಳಜಿಯಿಲ್ಲ. ಬಿಜೆಪಿಯವರು ಎಂದಿಗೂ ಶ್ರೀಮಂತರ ಪರ. ನಮ್ಮ ಸರ್ಕಾರ ತಳಸಮುದಾಯದವರಿಗೆ ಅನುಕೂಲ ಕಲ್ಪಿಸುತ್ತಿದೆ. ಸರ್ವರಿಗೂ ಗ್ಯಾರಂಟಿ ಯೋಜನೆಗಳನ್ನು ನೀಡುವ ಮೂಲಕ ಬಡತನ ರೇಖೆಗಿಂತ ಕೆಳಗಿನ ಜನರನ್ನು ಸಬಲೀಕರಣಗೊಳಿಸಲಾಗುತ್ತಿದೆ ಎಂದು ಅವರು ವಿವರಿಸಿದರು.

ಏ.16ರಿಂದ ಮತ್ತೆ ಅಧಿವೇಶನ

ಪುಟ ೧ ಸಂಸತ್ತಿನ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಗುರುವಾರ ರಾಜ್ಯಸಭೆಯಲ್ಲಿ ಮಾತನಾಡುವ ವೇಳೆ, ಪ್ರಮುಖ ವಿಧೇಯಕವೊಂದನ್ನು ಪರಿಗಣಿಸಲು ಸದನವು ಶೀಘ್ರದಲ್ಲೇ ಮರುಸಭೆ ಸೇರಲಿದೆ ಎಂದು ತಿಳಿಸಿದ್ದಾರೆ.

ನಮ್ಮ ಬಳಿ ಕೆಲವು ವಿಧೇಯಕಗಳು ಮತ್ತು ಪ್ರಮುಖ ವಿಷಯಗಳಿವೆ ಮತ್ತು ಇದನ್ನು ನಾವು ವಿರೋಧ ಪಕ್ಷದೊಂದಿಗೆ ಹಂಚಿಕೊಂಡಿದ್ದೇವೆ. ಮುಂದಿನ ಎರಡು–ಮೂರು ವಾರಗಳಲ್ಲಿ ನಾವು ಬಹಳ ಮಹತ್ವದ ವಿಧೇಯಕವೊಂದನ್ನು ತರಲಿದ್ದೇವೆ ಎಂದು ರಿಜಿಜು ಹೇಳಿದರು.

ಮೂಲತಃ ಏಪ್ರಿಲ್ 2ರಂದು ಮುಕ್ತಾಯಗೊಳ್ಳಬೇಕಿದ್ದ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಅಂತ್ಯಗೊಳಿಸದೆ, ವಿರಾಮ ನೀಡಿ ಶೀಘ್ರದಲ್ಲೇ 'ನಿರ್ದಿಷ್ಟ ಅವಧಿಗೆ' ಮತ್ತೆ ಕರೆಯಲಾಗುತ್ತದೆ. ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿ ಚರ್ಚೆಯ ಕುರಿತು ನೇರವಾಗಿ ಉಲ್ಲೇಖಿಸದಿದ್ದರೂ, 'ಈ ದೇಶದ ಮಹಿಳೆಯರಿಗೆ ಸಂಸತ್ತು ಕೊಟ್ಟ ಮಾತನ್ನು ನಿಭಾಯಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು.

ಇದಕ್ಕೆ ಮಧ್ಯೆ, ಅಧಿವೇಶನದ ಅವಧಿ ಕುರಿತು ಸ್ಪಷ್ಟತೆ ನೀಡಬೇಕು ಎಂದು ಕಾಂಗ್ರೆಸ್ ಹಲವು ಬಾರಿ ಒತ್ತಾಯಿಸಿತು. ರಾಜ್ಯಸಭೆಯಲ್ಲಿ ಕಾಂಗ್ರೆಸ್ ಮುಖ್ಯ ಸಚೇತಕ ಜೈರಾಮ್ ರಮೇಶ್ ಮಾಧ್ಯಮ ವರದಿಗಳನ್ನು ಉಲ್ಲೇಖಿಸಿ ಅಧಿವೇಶನ ವಿಸ್ತರಣೆ ಕುರಿತು ಪ್ರಶ್ನಿಸಿದರು. ಸದನ ನಾಯಕ ಜೆ.ಪಿ. ನಡ್ಡಾ, ಸರ್ಕಾರ ಉತ್ತರ ನೀಡಲಿದೆ ಎಂದು ತಿಳಿಸಿದ್ದಾರೆ.

ಮತ್ತೊಮ್ಮೆ ವಿಷಯ ಎತ್ತಿದ ರಮೇಶ್, ಅಧಿವೇಶನ ವೇಳಾಪಟ್ಟಿ ಬಗ್ಗೆ ಅನಿಶ್ಚಿತತೆ ಸಂಸತ್ತಿನ ಕಾರ್ಯಚಟುವಟಿಕೆಗಳಿಗೆ ಹಾನಿಕಾರಕ ಎಂದು ಹೇಳಿದ್ದಾರೆ. ಇದೇ ವೇಳೆ, ಎಐಸಿಸಿ ಅಧ್ಯಕ್ಷ ಹಾಗೂ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಏ.29ರ ಚುನಾವಣಾ ಪ್ರಕ್ರಿಯೆ ಬಳಿಕ ಸರ್ವಪಕ್ಷ ಸಭೆ ನಡೆಸಲು ರಿಜಿಜು ಅವರಿಗೆ ಪತ್ರ ಬರೆದಿರುವುದನ್ನೂ ಅವರು ಉಲ್ಲೇಖಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಿಜಿಜು, ಸರ್ಕಾರ ಈಗಾಗಲೇ ತನ್ನ ಶಾಸನ ಕಾರ್ಯಕ್ರಮವನ್ನು ವಿರೋಧಪಕ್ಷಗಳೊಂದಿಗೆ ಹಂಚಿಕೊಂಡಿದ್ದು, ವ್ಯಾಪಕ ಮಟ್ಟದಲ್ಲಿ ಚರ್ಚೆಗಳು ನಡೆದಿವೆ ಎಂದರು. ಮುಂದಿನ 2–3 ವಾರಗಳಲ್ಲಿ ಮಹತ್ವದ ಅಧಿವೇಶನ ನಡೆಯಲಿದ್ದು, ಸುಮಾರು ಶೇ.80 ರಾಜಕೀಯ ಪಕ್ಷಗಳು ಸಲಹೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರೆ ಎಂದು ಹೇಳಿದರು. ಕಾಂಗ್ರೆಸ್ ಮಾತ್ರ ಇದರಲ್ಲಿ ಭಾಗವಹಿಸಿಲ್ಲ ಎಂದು ಅವರು ಆರೋಪಿಸಿದ್ದಾರೆ.

ಗಡಿಯಲ್ಲಿ ದುಷ್ಕೃತ್ಯ ನಡೆಸಿದರೆ ಹುಷಾರ್

ಪುಟ ೧ ಪ್ರಸ್ತುತ ಪ್ರಾದೇಶಿಕ ಸಂಬಂಧ ಅಸ್ಥಿರವಾಗಿದ್ದು, ಹೆಚ್ಚುತ್ತಿರುವ ಅನಿಶ್ಚಿತ ಭೌಗೋಳಿಕ ರಾಜಕೀಯ ವಾತಾವರಣದಲ್ಲಿ ರಾಷ್ಟ್ರೀಯ ಭದ್ರತೆ ಮತ್ತು ಕಾರ್ಯತಂತ್ರದ ಹಿತಾಸಕ್ತಿಗಳನ್ನು ಕಾಪಾಡುವ ಸಂದರ್ಭದಲ್ಲಿ ಯಾವುದೇ ಪ್ರಚೋದನೆ ಎದುರಿಸಲು ಭಾರತ ಸಂಪೂರ್ಣವಾಗಿ ಸಿದ್ಧವಾಗಿದೆ ಎಂದರು.

ಭಾರತೀಯರ ರಕ್ಷಣೆಗೆ ಆದ್ಯತೆ

ನಾವು ಪಶ್ಚಿಮ ಏಷ್ಯಾದ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ



ಗಮನಿಸುತ್ತಿದ್ದೇವೆ. ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಿದ್ದೇವೆ ಎಂದು ರಾಜನಾಥ್ ಸಿಂಗ್ ಹೇಳಿದರು. ಸಂಕಷ್ಟದಲ್ಲಿರುವ ತನ್ನ ನಾಗರಿಕರಿಗೆ ಸಹಾಯ ಮಾಡಲು ಭಾರತ ಏನು ಬೇಕಾದರೂ ಮಾಡುತ್ತದೆ ಎಂದು ಭರವಸೆ ನೀಡಿದ್ದಾರೆ.

ದೀದಿಗೆ ಸುಪ್ರೀಂ ಛೀಮಾರಿ

ಪುಟ ೧ **ಕೇಂದ್ರ ಪಡೆ ನಿಯೋಜನೆಗೆ ಸೂಚನೆ:** ನ್ಯಾಯಾಂಗ ಅಧಿಕಾರಿಗಳು ವಿಚಾರಣೆ ನಡೆಸುವ



ಎಲ್ಲಾ ಪ್ರದೇಶಗಳಲ್ಲಿ ಸಮರ್ಪಕ ಕೇಂದ್ರ ಪಡೆಗಳನ್ನು ನಿಯೋಜಿಸಲು ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ. ಅದೇ ವೇಳೆ, ಘಟನೆಯ ತನಿಖೆಯನ್ನು ಸ್ವತಂತ್ರ ಸಂಸ್ಥೆಗೆ(ಸಿಬಿಐ ಅಥವಾ ಎನ್ಐಎ) ವಹಿಸಿ ಪ್ರಾಥಮಿಕ ವರದಿ ನೇರವಾಗಿ ಕೋರ್ಟ್‌ಗೆ ಸಲ್ಲಿಸಲು ಆದೇಶಿಸಿದೆ.

ಸಕ್ಷಮ ಪ್ರಾಧಿಕಾರದಿಂದ ವೇತನ ಭತ್ಯೆ

ಪುಟ ೧ ಈ ಹಿಂದೆ ಹೈಕೋರ್ಟ್ ವಿಭಾಗೀಯ ಪೀಠ ನೀಡಿರುವ ತೀರ್ಪನ್ನು ಸುತ್ತೋಲೆಯಲ್ಲಿ ಉಲ್ಲೇಖಿಸಿರುವ ಶಾಲಿನಿ ರಜನೀಶ್, ಯಾವುದೇ ಸರ್ಕಾರಿ ನೌಕರ ವರ್ಗಾವಣೆಯಾದ ಸಂದರ್ಭಗಳಲ್ಲಿ ತಕ್ಷಣವೇ ಕಡ್ಡಾಯವಾಗಿ ಸ್ಥಳ ನಿಯುಕ್ತಿ ನೀಡಬೇಕೆಂದು ಈ ಹಿಂದೆಯೇ ಸ್ಪಷ್ಟವಾದ ಸೂಚನೆ ನೀಡಲಾಗಿದೆ. ಆದರೂ ಅಧಿಕಾರಿಗಳು ಇದನ್ನು ಪಾಲಿಸುತ್ತಿಲ್ಲ. ಇನ್ನು ಮುಂದೆ ಇದು ಪುನರಾವರ್ತನೆಯಾದರೆ, ಸಂಬಂಧಿಸಿದ ಅಧಿಕಾರಿಗಳೆ ಹೊಣೆಗಾರರು ಎಂದು ಹೇಳಿದ್ದಾರೆ.

ಹುದ್ದೆ ತೋರದೇ ವರ್ಗಾವಣೆಯಿಂದ ಸರ್ಕಾರಕ್ಕೆ ನಷ್ಟ

ಪುಟ ೧ ಕೆಲಸ ಪಡೆಯದೇ ಮನೆಯಲ್ಲಿ ಕುಳಿತವರಿಗೆ ಸಂಬಳ ನೀಡಿದಂತಾಗುತ್ತದೆ. ಹೀಗಾಗಿ ಹುದ್ದೆ ತೋರಿಸುವವರೆಗೆ ಹಿಂದಿನ ಹುದ್ದೆಯಿಂದ ಬಿಡುಗಡೆ ಮಾಡದಂತೆ ಆದೇಶಿಸಿದೆ. ಅಬಕಾರಿ ಉಪ ಆಯುಕ್ತರಾಗಿದ್ದ ಕೆ. ಅರುಣ್ ಕುಮಾರ್ ಅವರನ್ನು ಹುದ್ದೆ ತೋರಿಸದೇ 2025ರ ಜ.29ರಂದು ವರ್ಗಾವಣೆ ಮಾಡಲಾಗಿತ್ತು. ಅಂದಿನಿಂದಲೂ ಹುದ್ದೆಯಿಲ್ಲದ ಕಾರಣ ಅವರು ಪೋಸ್ಟಿಂಗ್‌ಗಾಗಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಅಲ್ಲದೆ, ಹುದ್ದೆ ತೋರಿಸದೇ ವರ್ಗಾವಣೆ ಮಾಡಿದರೆ ಇಲಾಖೆಯ ಮುಖ್ಯಸ್ಥರೇ ಹೊಣೆಗಾರರಾಗುತ್ತಾರೆ. ಕಾಯುವಿಕೆಯ ಅವಧಿಯ ವೇತನವನ್ನು ಸಂಬಂಧಿಸಿದ ಅಧಿಕಾರಿಯಿಂದಲೇ ವಸೂಲು ಮಾಡಿ ಎಂದು ನ್ಯಾ. ಎಸ್.ಜಿ. ಪಂಡಿತ್ ಮತ್ತು ನ್ಯಾ. ಕೆ.ವಿ. ಅರವಿಂದ್ ಅವರಿದ್ದ ಪೀಠ ಆದೇಶಿಸಿತ್ತು.

ಭಾರತದ ಹಡಗುಗಳಿಗೆ ಸುಂಕ ವಿಧಿಸುವ ಬಗ್ಗೆ ಚರ್ಚೆ ಆಗಿಲ್ಲ: ಎಂಇಎ

ಪುಟ ೧ ಈ ಯೋಜನೆದಲ್ಲಿ ರಿಯಲ್ ಆಧಾರಿತ ಪಾವತಿ ವ್ಯವಸ್ಥೆ ಸೇರಿದಂತೆ ಕೆಲವು ಕ್ರಮಗಳನ್ನು ಒಳಗೊಂಡಿದ್ದು, ಒಮಾನ್ ದೇಶದೊಂದಿಗೆ ಸಹಕಾರದ ಮಾತುಕತೆಗಳೂ ಉಲ್ಲೇಖವಾಗಿದ್ದವು. ಜತೆಗೆ ಅಮೇರಿಕ ಮತ್ತು ಇಸ್ರೇಲ್ ವಿರುದ್ಧ ನಿರ್ಬಂಧಗಳ ಸಾಧ್ಯತೆಯನ್ನೂ ಸೂಚಿಸಲಾಗಿತ್ತು. ಈ ಮಧ್ಯೆ, ಭಾರತ ತನ್ನ ಹಡಗುಗಳ ಸುರಕ್ಷತೆಗಾಗಿ ಇರಾನ್ ಸೇರಿದಂತೆ ಇತರೆ ದೇಶಗಳೊಂದಿಗೆ ಸಂಪರ್ಕದಲ್ಲಿದೆ ಎಂದು ಜೈಸ್ವಾಲ್ ಹೇಳಿದರು. ಎಲ್‌ಪಿಜಿ, ಎಲ್‌ಎನ್‌ಜಿ ಸೇರಿದಂತೆ ನಮ್ಮ ಹಡಗುಗಳ ನಿರ್ಬಂಧರಹಿತ ಸಾಗಣೆಯನ್ನು ಖಚಿತಪಡಿಸಲು ಕ್ರಮ ಕೈಗೊಳ್ಳುತ್ತಿದ್ದೇವೆ ಎಂದರು. ಇತ್ತೀಚಿನ ದಿನಗಳಲ್ಲಿ ಆರು ಭಾರತೀಯ ಹಡಗುಗಳು ಸುರಕ್ಷಿತವಾಗಿ ಈ ಮಾರ್ಗವನ್ನು ದಾಟಿವೆ. ಹಾರ್ಮುಜ್ ಜಲಸಂಧಿ ಜಾಗತಿಕ ತೈಲ ಸಾಗಣೆಯಲ್ಲಿ ಪ್ರಮುಖ ಮಾರ್ಗವಾಗಿದ್ದು, ಇತ್ತೀಚಿನ ಸಂಘರ್ಷದಿಂದ ಸಾಗಣೆ ಪ್ರಮಾಣವು ಸುಮಾರು 95% ಇಳಿಕೆಯಾಗಿದೆ. ಇದು ಜಾಗತಿಕ ಇಂಧನ ಸರಬರಾಜಿನ ಮೇಲೆ ಆತಂಕ ಮೂಡಿಸಿದೆ. ಇದಲ್ಲದೆ, ಲೆಬನಾನ್‌ನಲ್ಲಿ ಯುಎನ್ ಶಾಂತಿಪಾಲನಾ ಪಡೆಗಳಲ್ಲಿ ಸುಮಾರು 600 ಭಾರತೀಯ ಸೈನಿಕರು ಸೇವೆ ಸಲ್ಲಿಸುತ್ತಿದ್ದಾರೆ ಎಂದು ಭಾರತ ತಿಳಿಸಿದೆ. ಅವರ ಸುರಕ್ಷತೆ ಅತ್ಯಂತ ಮುಖ್ಯವೆಂದು ಸರ್ಕಾರ ಒತ್ತಿಹೇಳಿದೆ.

ಸಚಿನ್, ಕೊಹ್ಲಿ, ಲಾರಾ ಸೇರಿದರೆ ಸಿದ್ದರಾಮಯ್ಯ

ಪುಟ ೧ ಕಳೆದ 12 ವರ್ಷಗಳಿಂದ ಮೋದಿಯವರೇ ಪ್ರಚಾರದಲ್ಲಿದ್ದಾರೆ. ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಮುನ್ಸಿಪಾಲಿಟಿ ಮಟ್ಟದ ಚುನಾವಣೆಗಳು ಬರುವ ಸಾಧ್ಯತೆ ಇದ್ದು ಪ್ರಧಾನಿಯೇ ಪ್ರಚಾರಕ್ಕೆ ಬರಬೇಕು ಎಂದು ವ್ಯಂಗ್ಯವಾಡಿದರು. ಇದೇ ವೇಳೆ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದ ಅವರು, ದೇಶದ ಸಂಪತ್ತನ್ನು ಕೆಲ ಉದ್ಯಮಿಗಳ ಕೈಯಲ್ಲಿ ಕೇಂದ್ರೀಕರಿಸಲಾಗಿದೆ ಎಂದು ಆರೋಪಿಸಿದರು.

ಏ.8ರಂದು ಬಹಿರಂಗ ಚರ್ಚೆಗೆ ಬನ್ನಿ

ಪುಟ ೧ ರಾಜ್ಯದಲ್ಲಿ ಆಡಳಿತಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ 3 ವರ್ಷದಲ್ಲಿ ಏನೂ ಅಭಿವೃದ್ಧಿ ಕೆಲಸ ಮಾಡಿಲ್ಲ. ಬಾಗಲಕೋಟೆ ಮತಕ್ಷೇತ್ರದಲ್ಲಿಯೂ ಅಭಿವೃದ್ಧಿ ಇಲ್ಲ. ಮೆಡಿಕಲ್ ಕಾಲೇಜ್ ಶಂಕುಸ್ಥಾಪನೆ ಕೇವಲ ಚುನಾವಣೆಯ ಗಿಮಿಕ್ ಎಂದರು. ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ಏ.9ರಂದು ಮತದಾರರ ಪಟ್ಟಿಯಲ್ಲಿರುವವರನ್ನು ಸಾಲಾಗಿ ಕರೆದುಕೊಂಡು ಹೋಗಿ ಮತದಾನ ಮಾಡಿಸುತ್ತೇವೆ. ಧೈರ್ಯವಿದ್ದರೆ ನನ್ನನ್ನು ಜೈಲಿಗೆ ಹಾಕಿ ಎಂದು ಡಿ.ಕೆ.ಶಿವಕುಮಾರ್ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಸಚಿವ ಮಹೇಶ ಮಾತನಾಡಿ, ಬಾಗಲಕೋಟೆಯಲ್ಲಿ ಶಾಂತಿ ವಾತಾವರಣ ಇದೆ. ಅಶಾಂತಿಯನ್ನು ಸೃಷ್ಟಿಸಲು ಇದು ಕನಕಪುರ ಕ್ಷೇತ್ರವಲ್ಲ. ತಮ್ಮ ಗುಂಡಾ ಪ್ರವೃತ್ತಿಯನ್ನು ಬಾಗಲಕೋಟೆಯಲ್ಲಿ ನಡೆಸಬೇಡಿ. ಕಾಂಗ್ರೆಸ್ ಪಕ್ಷದ ಸರ್ಕಾರ ಈಗ ಹಗಲು ದರೋಡೆಗಾಗಿ ನಿಂತಿದೆ. ಜನರಿಗಾಗಿ ದುಡಿಯುವ ವೀರಣ್ಣ ಚರಂತಿಮಠರನ್ನು ಜನ ಗೆಲ್ಲಿಸಲಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ಹೇಳಿಕೆಗೆ ಟಾಂಗ್ ನೀಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಅರುಣ್ ಶಹಾಪುರ, ಶರಣು ತಳ್ಳಿಕೇರಿ, ಚಿಂಟು ನೀಲನಾಯಕ, ಯಲ್ಲಪ್ಪ ಬೆಂಡಿಗೇರಿ, ಬಸವರಾಜ ಪರ್ವತಿಮಠ ಇದ್ದರು.

ಮುಸ್ಲಿಮರಿಂದ ಕೈಗೆ ತಕ್ಕ ಪಾಠ: ವಿಜಯೇಂದ್ರ

ಶಿವಮೊಗ್ಗ: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವುದು ನಿಚ್ಚಳವಾಗಿದ್ದು, ಇದೊಂದು



ದಾಖಲೆಯಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಗುರುವಾರ ಸಂಜೆ ನಗರದ ಫ್ರೀಡಂ ಪಾರ್ಕ್ ನಲ್ಲಿ ಆಯೋಜಿಸಿದ್ದ ಶೆಟ್ಟರ ಸಂತೆ ಉದ್ಘಾಟಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ಆ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ವಿರೋಧಿ ಮಾತುಗಳು ಕೇಳಿ ಬರುತ್ತಿವೆ. ಅದರಲ್ಲೂ ಮುಸ್ಲಿಮರೇ ಹೆಚ್ಚಿರುವ ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಉಲ್ಟಾ ಆಗಲಿದೆ ಎಂದರು. ಈ ಎರಡೂ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಿರುವ ಸಿಎಂ ಸಿದ್ದರಾಮಯ್ಯನವರು ಅಲ್ಲಿನ ವಾತಾವರಣದಿಂದ ಹತಾಶರಾಗಿದ್ದಾರೆ. ಇದಕ್ಕಾಗಿಯೇ ಆ ಎರಡೂ ಕ್ಷೇತ್ರಗಳನ್ನು ಬಿಟ್ಟು ಹೋಗದಂತೆ ಹಲವು ಸಚಿವರಿಗೆ ತಾಕೀತು ಮಾಡಿದ್ದಾರೆ. ಆದರೂ ಮತದಾರರು ಒಲವು ಬಿಜೆಪಿ ಕಡೆ ಇದೆ ಎಂದು ತಿಳಿಸಿದರು.

ಆಸ್ಟ್ರೇಲಿಯಾ ವಿವಿ ಜತೆ ಬೆಸ್ಕಾಂ ಒಪ್ಪಂದ

ಬೆಂಗಳೂರು: ನವೀಕರಿಸಬಹುದಾದ ಇಂಧನ ವಲಯದ ನವೋದ್ಯಮಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್ ವಿಶ್ವವಿದ್ಯಾಲಯ, ಎಫ್‌ಎಸ್‌ಐಡಿ, ಐಐಎಂಬಿ ಜತೆಗೆ ಒಪ್ಪಂದಕ್ಕೆ ಸಹಿ ಹಾಕಿದೆ.



ಬೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ಗುರುವಾರ ಈ ಒಪ್ಪಂದಕ್ಕೆ ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಹಾಗೂ ಯುಎನ್‌ಎಸ್‌ಡಬ್ಲ್ಯು ಸಿಡ್ನಿಯ ಉಪ ಕುಲಪತಿ ಲಿಸಾ ಝೂಂಬರ್ಲಾನ್ ಅವರು ಸಹಿ ಹಾಕಿದರು. ಇದೇ ಸಂದರ್ಭದಲ್ಲಿ ಐಐಎಸ್‌ಸಿಯ ಎಫ್‌ಎಸ್‌ಐಡಿ, ಐಐಎಂಬಿ ಇನ್ನೋವೇಶನ್ ಎನ್‌ಎಸ್‌ಆರ್‌ಸಿಇಎಲ್ ಮುಖ್ಯಸ್ಥರು ಕ್ರೆಡಲ್ ಜತೆಗಿನ ಒಪ್ಪಂದ ಪತ್ರಕ್ಕೆ ಸಹಿ ಹಾಕಿದರು. ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಉಪಸ್ಥಿತರಿದ್ದರು.

ಸೌರ, ಪವನ, ಜೈವಿಕ ಶಕ್ತಿ ಮತ್ತು ಇಂಧನ ಸಂಗ್ರಹಣೆಯಲ್ಲಿ ನವೋದ್ಯಮಗಳನ್ನು ಬೆಂಬಲಿಸುವ ನಿಟ್ಟಿನಲ್ಲಿ ಈ ಒಪ್ಪಂದದ ಅನ್ವಯ ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಕ್ರೆಡಲ್ ಬೆಂಗಳೂರಿನಲ್ಲಿ ಇನ್ಕ್ಯುಬೇಷನ್ ಮತ್ತು ತಂತ್ರಜ್ಞಾನ ನಾವೀನ್ಯತೆ ಕೇಂದ್ರವನ್ನು ಸ್ಥಾಪಿಸಲಿದೆ. ಮೂಲಸೌಕರ್ಯ ಮತ್ತು ಸ್ಥಳೀಯ ನಿಧಿಯನ್ನು ಕ್ರೆಡಲ್ ಒದಗಿಸಿದರೆ, ಸಾಮರ್ಥ್ಯ ವೃದ್ಧಿ, ತಾಂತ್ರಿಕ ಮಾರ್ಗದರ್ಶನವನ್ನು ಪಾಲುದಾರಿಕೆ ಸಂಸ್ಥೆಗಳು ನೀಡಲಿವೆ. ಜತೆಗೆ, ಜಾಗತಿಕ ಸಂಶೋಧನಾ ಸಂಸ್ಥೆಗಳು ಮತ್ತು ನಾವೀನ್ಯತೆ ಜಾಲಗಳೊಂದಿಗೆ ಯುಎನ್‌ಎಸ್‌ಡಬ್ಲ್ಯು ಸಂಪರ್ಕ ಬೆಸೆಯಲಿದೆ.

ಈ ಉಪಕ್ರಮದಡಿ ಪ್ರತಿ ವರ್ಷ 20 ನವೋದ್ಯಮಗಳಿಗೆ ಬೆಂಬಲ ನೀಡಲಾಗುವುದು. ಕಾರ್ಯಕ್ರಮದ ಅವಧಿಯಲ್ಲಿ ಮೂಲ ಮಾದರಿ ಅಭಿವೃದ್ಧಿ ಹಾಗೂ ನವೋದ್ಯಮಗಳಿಗೆ ಕ್ರೆಡಲ್ ನೆರವು ನೀಡಲಿದೆ. ಕಾರ್ಯಕ್ರಮದ ವ್ಯಾಪ್ತಿ ವಿಸ್ತರಣೆಗೆ ಯುಎನ್‌ಎಸ್‌ಡಬ್ಲ್ಯು ಹೆಚ್ಚುವರಿ ಅಂತಾರಾಷ್ಟ್ರೀಯ ನಿಧಿ ಸಂಗ್ರಹಣೆಗೆ ಆದ್ಯತೆ ನೀಡಲಿದೆ. ಇದರಿಂದ ಈ ನವೋದ್ಯಮಗಳಿಗೆ ಜಾಗತಿಕ ಮಟ್ಟದ ಸಂಪರ್ಕ, ಸುಧಾರಿತ ಇನ್ಕ್ಯುಬೇಷನ್, ಅಂತಾರಾಷ್ಟ್ರೀಯ ಮಾನ್ಯತೆ ದೊರೆಯಲಿದೆ.

ಗ್ರಾ.ಪಂ. ತೆರಿಗೆ ಸಂಗ್ರಹ ಏರಿಕೆ

• **ಬೆಂಗಳೂರು:** ರಾಜ್ಯದ 5,943 ಗ್ರಾಮ ಪಂಚಾಯತಿಗಳ ತೆರಿಗೆ ಸಂಗ್ರಹವು ಕಳೆದ ಸಾಲಿಗಿಂತ ದಲ್ಲಿ ಈ ವರ್ಷ ಹೆಚ್ಚಾಗಿದ್ದು, ಹೆಚ್ಚಿನ ತೆರಿಗೆ ಸಂಗ್ರಹ ಮತ್ತು ಕಂದಾಯ ಕ್ರೋಢೀಕರಣವಾಗಿದೆ. ತೆರಿಗೆ ಸಂಗ್ರಹ ಸತತವಾಗಿ ಏರಿಕೆಯಾಗಿದೆ.



2024-25ನೇ ಆರ್ಥಿಕ ವರ್ಷದಲ್ಲಿ ಇಲಾಖೆಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಗ್ರಾಮ ಪಂಚಾಯ್ತಿಗಳು 1,272.54 ಕೋಟಿ ರೂ. ತೆರಿಗೆ ಸಂಗ್ರಹ ಮಾಡುವ ಮೂಲಕ ಚಾಲ್ತಿ ಬೇಡಿಕೆಯ ಶೇ.80ರಷ್ಟು ತೆರಿಗೆ ವಸೂಲಿ ಮಾಡಿ ದಾಖಲೆ ಮಾಡಿತ್ತು. ರಾಯಚೂರು ಜಿಲ್ಲೆ ಶೇ.129ರಷ್ಟು ತೆರಿಗೆ ಸಂಗ್ರಹಿಸುವ ಮೂಲಕ ಮುನ್ನಡೆ ಸಾಧಿಸಿದೆ, ರಾಜ್ಯದ 11 ಜಿಲ್ಲೆಗಳು ಶೇ.100 ಕ್ಕಿಂತಲೂ ಹೆಚ್ಚು ಕರ ಸಂಗ್ರಹಿಸುವ ಮೂಲಕ ತೆರಿಗೆ ಸಂಗ್ರಹಣೆಯಲ್ಲಿ ಮುನ್ನಡೆ ಸಾಧಿಸಿವೆ. ತೆರಿಗೆ ಸಂಗ್ರಹ ಮತ್ತು ಕಂದಾಯ ಕ್ರೋಢೀಕರಣದಲ್ಲಿ ಕರ್ನಾಟಕ ರಾಜ್ಯವು ಕಳೆದ ವರ್ಷ ಅತ್ಯುತ್ತಮ ಸಾಧನೆ ಮಾಡುವ ಮೂಲಕ ರಾಷ್ಟ್ರ ಮಟ್ಟದಲ್ಲಿ ಮೊದಲ ಸ್ಥಾನವನ್ನು ಪಡೆದ ಹೆಗ್ಗಳಿಕೆಗೆ ಪಾತ್ರವಾಗಿತ್ತು.

110.04 ಕೋಟಿ ರೂ. ವಸೂಲಿ: 2025-26ನೇ ಸಾಲಿನಲ್ಲಿ 1382.57 ಕೋಟಿ ರೂ. ತೆರಿಗೆ ಸಂಗ್ರಹ ಮಾಡಲಾಗಿದ್ದು, 2024-25ನೇ ಸಾಲಿಗಿಂತ 110.04 ಕೋಟಿ ರೂ. ಅಧಿಕ ತೆರಿಗೆ ವಸೂಲಿ ಮಾಡಿದಂತಾಗಿದೆ, ಆ ಮೂಲಕ ಚಾಲ್ತಿ ಸಾಲಿನ ಬೇಡಿಕೆಯ ಶೇ.89ರಷ್ಟು ದಾಖಲೆಯ ತೆರಿಗೆ ಸಂಗ್ರಹಿಸಲಾಗಿದೆ ಎಂಬ ವಿವರಗಳನ್ನು ಸಚಿವ ಪ್ರಿಯಾಂಕ್ ಖರ್ಗೆ ನೀಡಿದ್ದಾರೆ.

> ತೆರಿಗೆ ಸಂಗ್ರಹಣೆಯಲ್ಲಿ ಉಂಟಾಗಿರುವ ಪ್ರಗತಿಯು ದಕ್ಷ ಆಡಳಿತ, ನಿಯಮಾವಳಿಗಳ ಕಟ್ಟುನಿಟ್ಟಿನ ಜಾರಿ ಮತ್ತು ಸುಧಾರಿತ ತೆರಿಗೆ ಸಂಗ್ರಹಣಾ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ.
> ■ **ಪ್ರಿಯಾಂಕ್ ಖರ್ಗೆ,** ಗ್ರಾಮೀಣಾಭಿವೃದ್ಧಿ ಸಚಿವ



ವಿಜಯನಗರ ವಿಶ್ವವಿಖ್ಯಾತ ಹಂಪಿಯಲ್ಲಿ ಲಕ್ಷಾಂತರ ಭಕ್ತ ಸಮೂಹದ ಮಧ್ಯೆ ಶ್ರೀ ಪಂಪಾ ವಿರೂಪಾಕ್ಷೇಶ್ವರ ಸ್ವಾಮಿ, ಚಂದ್ರಮೌಳೀಶ್ವರ ಸ್ವಾಮಿಯ ಬ್ರಹ್ಮರಥೋತ್ಸವ ಗುರುವಾರ ಸಂಜೆ ಅದ್ದೂರಿಯಾಗಿ ನೆರವೇರಿದರು.

ವೈದ್ಯ ವಿದ್ಯಾರ್ಥಿನಿ ಆತ್ಮಹತ್ಯೆ

• **ಚಿತ್ರದುರ್ಗ:** ಸಹಪಾಠಿಗಳ ಅಪಪ್ರಚಾರದಿಂದ ನೊಂದ ಬಿಎಎಂಎಸ್ ವಿದ್ಯಾರ್ಥಿನಿ ನಿಖಿತಾ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹೊಳಲ್ಕೆರೆ ತಾಲೂಕಿನ ಮಲ್ಲಾಡಿಹಳ್ಳಿಯಲ್ಲಿ ನಡೆದಿದೆ. ಮೃತ ನಿಖಿತಾ (23) ಇಲ್ಲಿನ ಮಲ್ಲಾಡಿಹಳ್ಳಿಯ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ ಬಿಎಎಂಎಸ್ ಓದುತ್ತಿದ್ದರು. ಸಾವಿಗೂ ಮುನ್ನ ಡೆತ್‌ನೋಟ್ ಬರೆದಿಟ್ಟಿರುವ ನಿಖಿತಾ, ತನ್ನ ಸಾವಿಗೆ ಕಾರಣವಾಗಿರುವ ಕಾನೂನುಕ್ರಮ ಜರುಗಿಸುವಂತೆ ಮನವಿ ಮಾಡಿಕೊಂಡಿದ್ದಾರೆ. ಡೆತ್‌ನೋಟ್‌ನಲ್ಲಿ ಅಧ್ಯಾಪಕ ಮತ್ತು ಕೆಲ ವಿದ್ಯಾರ್ಥಿನಿಯರ ಹೆಸರನ್ನು ಉಲ್ಲೇಖಿಸಿದ್ದಾರೆ.



ನಿಖಿತಾ ತಂದೆ ಉಮಾಶಂಕರ್ ನೀಡಿರುವ ದೂರಿನಲ್ಲಿ ಪ್ರೊಫೆಸರ್ ಡಾ. ರಾಜು ಜತೆ ತಮ್ಮ ಮಗಳು ಒಳ್ಳೆಯ ಸಂಬಂಧ ಹೊಂದಿದ್ದಳು. ಆದರೆ, ಆಕೆಯ ಸಹಪಾಠಿಗಳು ಒಳ್ಳೆ ಬಾಂಧವ್ಯಕ್ಕೆ ಅಪಪ್ರಚಾರ ಮಾಡಿದ ರೆಂದು ತಿಳಿಸಿದ್ದಾರೆ. ನನ್ನ, ರಾಜು ಸರ್ ನಡುವೆ ಯಾವುದೇ ಸಂಬಂಧವಿಲ್ಲ, ವಿದ್ಯಾರ್ಥಿನಿಯಾಗಿ ಅವರ ಜತೆ ಒಳ್ಳೆಯ ಬಾಂಧವ್ಯ ಹೊಂದಿದ್ದೆ.

ಇದನ್ನು ತಪ್ಪಾಗಿ ಭಾವಿಸಿದ ನನ್ನ ಸಹಪಾಠಿಗಳು ಇಲ್ಲಸಲ್ಲದ ಆರೋಪ ಮಾಡಿದರು. ಇದನ್ನು ನಂಬಿದ ರಾಜು ಅವರ ಪತ್ನಿ ನಿಶಾ ಕೂಡ ಅನುಮಾನಪಟ್ಟರು. ನನ್ನ ಸಾವಿಗೆ ರಕ್ಷಾ, ಚಿನ್ಮಯಿ, ಅನುಷಾ, ಸಾಗರ್, ಗ್ರೀಷ್ಮಾ ಹಾಗೂ ನಿಶಾ ಕಾರಣ ಎಂದು ನಿಖಿತಾ ಡೆತ್ ನೋಟಲ್ಲಿ ಬರೆದಿದ್ದಾರೆ. ತಂದೆ ಉಮಾಶಂಕರ್ ದೂರಿನ ಮೇರೆಗೆ ಹೊಳಲ್ಕೆರೆ ಠಾಣೆಯಲ್ಲಿ ದೂರು ದಾಖಲಾಗಿದೆ.

ತಂದೆ-ತಾಯಿಗೆ ಕ್ಷಮೆ ಕೇಳಿದ ನಿಖಿತಾ

ತಂದೆ-ತಾಯಿಗೆ ನಿಖಿತಾ ಕ್ಷಮೆಯಾಚಿಸಿದ್ದಾರೆ. ನೀವು ಅಂದುಕೊಂಡಿದ್ದನ್ನು ನನ್ನಿಂದ ಸಾಧಿಸಲು ಆಗಲಿಲ್ಲ, ರಾಜು ಸರ್ ತುಂಬಾ ಒಳ್ಳೆಯವರು. ಅವರ ವಿರುದ್ಧ ಅನಗತ್ಯ ಆರೋಪ ಮಾಡಬೇಡಿ. ನನ್ನ ಸಹಪಾಠಿಗಳನ್ನು ನಾನೆಂದಿಗೂ ಕ್ಷಮಿಸುವುದಿಲ್ಲ ಎಂದು ಡೆತ್ ನೋಟ್ ಬರೆದಿಟ್ಟು ನಿಖಿತಾ ಸಾವಿಗೆ ಶರಣಾಗಿದ್ದಾರೆ.

ಕಿರುಸುದ್ದಿ

ಎಸ್ಸಿ-ಎಸ್ಟಿ ನಿಧಿಗಳ ದುರುಪಯೋಗ

• **ದಾವಣಗೆರೆ:** ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಹಿಂದ ಸಮುದಾಯವನ್ನು ನಿರ್ಲಕ್ಷಿಸಿದೆ. ಈ ಸರ್ಕಾರದಲ್ಲಿ ಎಸ್ಸಿ-ಎಸ್ಟಿ ನಿಧಿಗಳ ದುರುಪಯೋಗ ನಡೆದಿದೆ.



ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವೇ ಇದಕ್ಕೆ ಸಾಕ್ಷಿ. ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿ ಮೀರಿದ್ದು, ತಾಲೂಕು ಕಚೇರಿಯಿಂದ ಹಿಡಿದು ವಿಧಾನಸೌಧದವರೆಗೆ ಲಂಚಾವತಾರ ತಾಂಡವವಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪೊಲೀಸ್ ಠಾಣೆಗಳಲ್ಲೂ ಜನರಿಗೆ ತೊಂದರೆ ಹೆಚ್ಚಾಗಿದೆ. ಮಹಿಳೆಯರಿಗೆ ಸಮರ್ಪಕ ಭದ್ರತೆ ಇಲ್ಲ, ಗ್ಯಾರಂಟಿಗಳ ಹೆಸರಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಮೀಸಲಿಟ್ಟ ಹಣವನ್ನು ಬೇರೆಡೆಗೆ ವರ್ಗಾಯಿಸಲಾಗುತ್ತಿದೆ. ನಾವು ಅಧಿಕಾರಕ್ಕೆ ಬಂದರೆ ಈ ಯೋಜನೆಗಳನ್ನು ಇನ್ನಷ್ಟು ವ್ಯವಸ್ಥಿತವಾಗಿ ಜನರಿಗೆ ತಲುಪಿಸುತ್ತೇವೆ ಎಂದು ಭರವಸೆ ನೀಡಿದರು.

ಬಿಜೆಪಿ ವಿರುದ್ಧ ಅಪಪ್ರಚಾರ ಸಲ್ಲದು: ಶ್ರೀರಾಮುಲು

• **ದಾವಣಗೆರೆ:** ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ನಿಗಮದ ಅಧ್ಯಕ್ಷರು ರಾಜೀನಾಮೆ ನೀಡಿರುವುದೇ ಸರ್ಕಾರದ ಭ್ರಷ್ಟಾಚಾರಕ್ಕೆ ಸಾಕ್ಷಿ. ಲೂಟಿ ಮಾಡಿದ ಹಣವನ್ನು ತೆಲಂಗಾಣ ಚುನಾವಣೆ ಹಾಗೂ ಲೋಕಸಭಾ ಚುನಾವಣೆಗಳಿಗೆ ಬಳಸಿಕೊಳ್ಳಲಾಗಿದೆ. ಸಿದ್ದರಾಮಯ್ಯನವರ ಇಡೀ ಸಚಿವ ಸಂಪುಟ ಭ್ರಷ್ಟಾಚಾರದ ಸುಳಿಯಲ್ಲಿ ಸಿಲುಕಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ವಾಗ್ದಾಳಿ ನಡೆಸಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯ ಎಲ್ಲರ ತಲೆಮೇಲೆ, ಹುಟ್ಟುವ ಮಕ್ಕಳ ತಲೆ ಮೇಲೂ ಒಂದೂವರೆ ಲಕ್ಷ ರೂ. ಸಾಲ ಹೊರಿಸಿದ್ದಾರೆ. ಇವರಷ್ಟು ಯಾವೊಬ್ಬ ಮುಖ್ಯಮಂತ್ರಿಯೂ ಸಾಲ ಮಾಡಿಲ್ಲ ಎಂದರು. ಸಿದ್ದರಾಮಯ್ಯನವರ ಸರ್ಕಾರ ಹುಟ್ಟಿದ್ದೇ ಸುಳ್ಳಿನಿಂದ. ಅದಕ್ಕೆ ಈಗಲೂ ಅವರು ಸುಳ್ಳು ಹೇಳುತ್ತಿದ್ದಾರೆ. ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ಬಿಜೆಪಿ ಗೆದ್ದರೆ ಗ್ಯಾರಂಟಿಗಳನ್ನು ಬಿಜೆಪಿಯವರು ಬಂದ್ ಮಾಡುತ್ತಾರೆ ಅಂತಾ ಅಪಪ್ರಚಾರ ಮಾಡುತ್ತಿದ್ದಾರೆ ಎಂದರು.

ಪ್ರೇಮಿಗಳ ಆತ್ಮಹತ್ಯೆ

• **ಹನೂರು:** ಯುವ ಪ್ರೇಮಿಗಳು ನೇಣಿಗೆ ಕೊರಳೊಡ್ಡಿ ಆತ್ಮಹತ್ಯೆ ಮಾಡಿಕೊಂಡ ಧಾರುಣ ಘಟನೆ ಹನೂರು ತಾಲೂಕಿನ ಪೊನ್ನಾಚಿ ಗ್ರಾಮದ ಹಾಡಿಯಲ್ಲಿ ನಡೆದಿದೆ. ಮೀಣ್ಯಂ ಗ್ರಾ.ಪಂ ವ್ಯಾಪ್ತಿಯ ನಕ್ಕುಂದಿ ಗ್ರಾಮದ ಸೋಲಿಗರ ಹಾಡಿ ನಾಗೇಂದ್ರ(21) ಪಾಲಾರ್ ಗ್ರಾಮದ ನದಿಯಾ(19) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿಗಳು. ಪೊನ್ನಾಚಿ ಗ್ರಾಮದಲ್ಲಿ ಕಳೆದ ಮೂರು ದಿನಗಳಿಂದ ಗ್ರಾಮ ದೇವತೆ ಮಾರಮ್ಮನ ಹಬ್ಬ ನಡೆಯುತ್ತಿತ್ತು. ಈ ಹಬ್ಬಕ್ಕೆ ತಾತಾ ಶಿವಮಾದಯ್ಯ ಎಂಬವರ ಮನೆಗೆ ನಾಗೇಂದ್ರ, ನದಿಯಾ ಕಳೆದ ಮೂರು ದಿನಗಳ ಹಿಂದೆ ಬಂದಿದ್ದರು ಎನ್ನಲಾಗಿದೆ. ಈ ನಡುವೆ ನದಿಯಾ ತಂದೆ ಮಹಾದೇವ್ ಮಲೆ ಮಹದೇಶ್ವರ ಬೆಟ್ಟ ಠಾಣೆಗೆ ಮಗಳು ಕಾಣೆಯಾದಳೆಂದು ದೂರು ಕೂಡ ಕೊಟ್ಟಿದ್ದರು. ಆದರೆ, ನಿನ್ನೆ ತಡರಾತ್ರಿ ನದಿಯಾ ಮತ್ತು ನಾಗೇಂದ್ರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪಾಲಾರ್ ನದಿಯ ಹಾಗೂ ನಕ್ಕುಂದಿ ಗ್ರಾಮದ ನಾಗೇಂದ್ರ ಪೊನ್ನಾಚಿ ಗ್ರಾಮದ ಹಬ್ಬಕ್ಕೆಂದು ತೆರಳಿ ತಾತನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರೇಮಿಗಳಿಬ್ಬರ ಸಾವಿಗೆ ನಿಖರವಾದ ಮಾಹಿತಿ ತಿಳಿದು ಬಂದಿಲ್ಲ, ಸ್ಥಳಕ್ಕೆ ಮಲೆ ಮಹದೇಶ್ವರ ಬೆಟ್ಟ ಪೊಲೀಸ್ ಇನ್ಸ್‌ಪೆಕ್ಟರ್ ಜಗದೀಶ್ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪದಕ ಪ್ರದಾನ ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ ಸೂಚನೆ

ಅಪರಾಧ ತಡೆಗೆ ಮುಂದಾಗಿ



> ರಾಜ್ಯದ ಆರ್ಥಿಕ ಬೆಳವಣಿಗೆಗೂ, ಜಿಡಿಪಿ ಪ್ರಗತಿಗೂ ರಾಜ್ಯದ ಕಾನೂನು ಸುವ್ಯವಸ್ಥೆಗೂ ನೇರಾ ನೇರಾ ಸಂಬಂಧ ಇರುತ್ತದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಪೊಲೀಸ್ ಇಲಾಖೆ ಕಾರ್ಯನಿರ್ವಹಿಸಿದರೆ ಆರ್ಥಿಕತೆಗೂ ದೊಡ್ಡ ಕೊಡುಗೆ ಕೊಟ್ಟಂತಾಗುತ್ತದೆ.
> ■ **ಸಿದ್ದರಾಮಯ್ಯ,** ಮುಖ್ಯಮಂತ್ರಿ

• **ಬೆಂಗಳೂರು:** ಸೈಬರ್ ಅಪರಾಧಗಳು ಸೇರಿದಂತೆ ನಾನಾ ಅಪರಾಧಗಳಲ್ಲಿ ನಮ್ಮ ರಾಜ್ಯ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದ್ದು ಇದನ್ನು ಕಟ್ಟುನಿಟ್ಟಾಗಿ ತಡೆಗಟ್ಟಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದರು.

ಕೋರಮಂಗಲ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ಪದಕ ಪ್ರದಾನ ಮಾಡಿ ಮಾತನಾಡಿದರು. ಯಾವುದೇ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಆಯಾ ಠಾಣಾಧಿಕಾರಿಯ ಗಮನಕ್ಕೆ ಬರದಂತೆ ಯಾವುದೇ ಅಪರಾಧಗಳು, ಕೆಟ್ಟ ವ್ಯವಹಾರಗಳು ನಡೆಯಲು ಸಾಧ್ಯವಿಲ್ಲ. ಹಲವು ರೀತಿಯ ಅಪರಾಧ ಪ್ರಕರಣಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಿ ಶಿಕ್ಷೆ ಪ್ರಮಾಣದಲ್ಲಿ ರಾಜ್ಯ ಮುಂದಿದೆ. ಇದಕ್ಕಾಗಿ ಪೊಲೀಸ್ ಇಲಾಖೆಯನ್ನು ಅಭಿನಂದಿಸುವ ಜತೆಗೆ ಪ್ರಮಾಣ ಹೆಚ್ಚಾಗಿರುವ ಅಪರಾಧಗಳ ನಿಯಂತ್ರಣದಲ್ಲೂ ನಾವು ಶ್ರಮ ಹಾಕಬೇಕಿದೆ ಎಂದು ಸೂಚಿಸಿದರು.

24 ಗಂಟೆಯೂ ಕರ್ತವ್ಯ ಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡಬೇಕು: ಸೈಬರ್ ಅಪರಾಧಗಳು ಸೇರಿದಂತೆ ನಾನಾ ರೀತಿಯ ಅಪರಾಧಗಳನ್ನು ತಡೆಯಲು ತಂತ್ರಜ್ಞಾನದ ಅವಕಾಶ ಬಳಸಿಕೊಳ್ಳಬೇಕು. ಸಮಯದ ಮಿತಿ ಇಲ್ಲದಂತೆ ದಿನದ 24 ಗಂಟೆಯೂ ಕರ್ತವ್ಯಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡುವುದರಿಂದ ಸಮಾಜದಲ್ಲಿ ನೆಮ್ಮದಿ ಮತ್ತು ಸೌಹಾರ್ದತೆ ನೆಲೆಸಿದೆ. ಮಹಿಳೆಯರು, ಮಕ್ಕಳು ಮತ್ತು ದುರ್ಬಲರು ಹಾಗೂ ಅಸಹಾಯಕರ ರಕ್ಷಣೆಗೆ ನಮ್ಮ ಸರ್ಕಾರ ಮೊದಲ ಆದ್ಯತೆ ನೀಡುತ್ತಿದೆ. ಪೊಲೀಸರೂ ಇದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಎಂದರು.

ಶಾಂತಿ ಕಾಪಾಡುವುದರಲ್ಲಿ ಪೊಲೀಸರು ಯಶಸ್ವಿ: ಪೊಲೀಸ್ ಇಲಾಖೆಯು ಪ್ರತಿನಿತ್ಯ ಸವಾಲುಗಳನ್ನು ಎದುರಿಸುತ್ತದೆ. ಸವಾಲುಗಳ ಮಧ್ಯೆ ಕಳೆದ ಮೂರು ವರ್ಷಗಳಿಂದ ನಮ್ಮ ಸರ್ಕಾರವು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯದಲ್ಲಿ ಶಾಂತಿ ಕಾಪಾಡುವುದರಲ್ಲಿ ಯಶಸ್ವಿಯಾಗಿದೆ. ರಾಜ್ಯಕ್ಕೆ ಬಂಡವಾಳ ಹೂಡಿಕೆಗೆ ಬರುವ ಜನ ಶಾಂತಿ ನೆಮ್ಮದಿಯನ್ನು ಬಯಸುತ್ತಾರೆ ಎಂದು ಹೇಳಿದರು.

ಸೈಬರ್ ಕಮಾಂಡ್ ಯೂನಿಟ್‌ಗೆ ಹೆಚ್ಚು ಪ್ರೋತ್ಸಾಹ

ದೇಶದಲ್ಲಿ ಸೈಬರ್ ಕ್ರೈಂ ಹಾವಳಿ ಹೆಚ್ಚಾಗುತ್ತಿದೆ. ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಕರ್ನಾಟಕವೂ ಸೈಬರ್ ಕಮಾಂಡ್ ಯೂನಿಟ್ ಸ್ಥಾಪಿಸಿ, ಡಿಜಿ ಶ್ರೇಣಿಯ ಅಧಿಕಾರಿಯನ್ನು ನೇಮಿಸಿದೆ. ಸೈಬರ್ ಕಮಾಂಡ್ ಯೂನಿಟ್‌ಗೆ ಹೆಚ್ಚು ಪ್ರೋತ್ಸಾಹಿಸಿ ಮೂಲಕ ಸೈಬರ್ ಅಪರಾಧಗಳನ್ನು ಕಡಿಮೆ ಮಾಡುವುದರಲ್ಲಿ ಯಶಸ್ವಿಯಾಗಿದ್ದೇವೆ ಎಂದು ಡಾ.ಜಿ. ಪರಮೇಶ್ವರ ತಿಳಿಸಿದರು.

162 ಸಾಧಕರಿಗೆ ಮುಖ್ಯಮಂತ್ರಿಯವರ ಚಿನ್ನದ ಪದಕ ಪ್ರದಾನ

ಪೊಲೀಸ್ ಇಲಾಖೆಯಲ್ಲಿ ಅಪ್ರತಿಮ ಸೇವೆ, ಗಣನೀಯ ಕಾರ್ಯ ಹಾಗೂ ಅತ್ಯುತ್ತಮ ಕರ್ತವ್ಯ ನಿಷ್ಠೆ ಸಲ್ಲಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ 2025ನೇ ಸಾಲಿನ ಮುಖ್ಯಮಂತ್ರಿಯವರ ಚಿನ್ನದ ಪದಕಗಳನ್ನು ಎಸ್‌ಪಿಗಳಾದ ಡಾ. ಸುಮನ್ ಡಿ.ಪೆನ್ನೇಕರ್, ಡಾ. ಅರುಣ್ ಕೆ., ಶ್ರೀಹರಿಬಾಬು ಬಿ.ಎಲ್., ಹೃತ್ವಿಕ್ ಶಂಕರ್, ಡಾ. ಗೋಪಾಲ ಎಂ. ಬ್ಯಾಕೋಡ ಸೇರಿದಂತೆ ಎಸಿಪಿ, ಪಿಐ ಹಾಗೂ 162 ಸಾಧಕರಿಗೆ ಸಿಎಂ ಸಿದ್ದರಾಮಯ್ಯ ಪ್ರದಾನ ಮಾಡಿದರು.

> ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆ, ನೇಮಕಾತಿಯಲ್ಲಿ ಆಧುನಿಕತೆಯನ್ನು ಬಳಸಿಕೊಳ್ಳಲಾಗುವುದು. 8 ಸಾವಿರ ಕಾನ್ಸ್‌ಟೇಬಲ್, 600 ಪಿಎಸ್‌ಐ ಹುದ್ದೆ ನೇಮಕಾತಿಗೆ ಬಜೆಟ್‌ನಲ್ಲಿ ಸಿಎಂ ಅನುವು ಮಾಡಿಕೊಟ್ಟಿದ್ದಾರೆ.
> ■ **ಡಾ.ಜಿ. ಪರಮೇಶ್ವರ,** ಗೃಹ ಸಚಿವ

ಸಮರ್ಪಕ ರಸಗೊಬ್ಬರ ಪೂರೈಕೆಗೆ ಕ್ರಮ: ಸಚಿವ

- 30.05 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಹಂಚಿಕೆ
- ಪ್ರಸ್ತುತ 11.42 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಸಂಗ್ರಹ
- 28,224 ಮೆಟ್ರಿಕ್ ಟನ್ ಕಾಪು ದಾಸ್ತಾನು ಲಭ್ಯ
- ಶೇ.25 ರಷ್ಟು ಯೂರಿಯಾ, ಡಿಎಪಿ ಕಡ್ಡಾಯ ಸಂಗ್ರಹ

• **ಬೆಂಗಳೂರು:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದ ಹಿನ್ನಲೆಯಲ್ಲಿ ರಸಗೊಬ್ಬರ ಉತ್ಪಾದನೆಗೆ ಅಗತ್ಯವಿರುವ ಕಚ್ಚಾ ವಸ್ತುಗಳ ಆಮದು ವ್ಯತ್ಯಯವಾಗುವ ಸಾಧ್ಯತೆ ಕಂಡುಬಂದಿದ್ದು, ರಾಜ್ಯದಲ್ಲಿ ರಸಗೊಬ್ಬರ ಪೂರೈಕೆಗೆ ಅಡ್ಡಿಯಾಗುವ ಆತಂಕ ವ್ಯಕ್ತವಾಗಿದೆ. ಮುಂಗಾರು ಹಂಗಾಮಿನ ರಸಗೊಬ್ಬರಗಳ ಸಮರ್ಪಕ ಪೂರೈಕೆ ಮತ್ತು ಪರಿಣಾಮಕಾರಿ ನಿರ್ವಹಣೆಗೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಉಸ್ತುವಾರಿಯಲ್ಲಿ ಕೃಷಿ ಇಲಾಖೆ ಬಹುಮುಖ ಕ್ರಮಗಳನ್ನು ಅನುಷ್ಠಾನಗೊಳಿಸಿದೆ.



ರಾಜ್ಯವು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ (ಕೆಎಸ್‌ಸಿಎಂಎಫ್), ಕರ್ನಾಟಕ ರಾಜ್ಯ ಬೀಜ ನಿಗಮ(ಕೆಎಸ್‌ಎಸ್‌ಸಿ) ಮುಖಾಂತರ ಕಾಪು ದಾಸ್ತಾನು ವ್ಯವಸ್ಥೆಯನ್ನು ಬಲಪಡಿಸಿದೆ. ಪ್ರಸ್ತುತ 28,224 ಮೆಟ್ರಿಕ್ ಟನ್ ಗೊಬ್ಬರ ಕಾಪು ದಾಸ್ತಾನಿನಲ್ಲಿ ಲಭ್ಯವಿದ್ದು, ಶೇ.25 ರಷ್ಟು ಕಡ್ಡಾಯವಾಗಿ ಯೂರಿಯಾ ಮತ್ತು ಡಿಎಪಿ ಗೊಬ್ಬರಗಳ ಸಂಗ್ರಹಿಸಲು ನಿರ್ದೇಶಿಸಲಾಗಿದೆ.

ಕೇಂದ್ರ ಸರ್ಕಾರವು ರಾಜ್ಯಕ್ಕೆ ಒಟ್ಟು 30.05 ಲಕ್ಷ ಮೆಟ್ರಿಕ್ ಟನ್ ವಿವಿಧ ಗೊಬ್ಬರಗಳನ್ನು ಹಂಚಿಕೆ ಮಾಡಿದ್ದು, ಏಪ್ರಿಲ್ 1ರವೇಳೆಗೆ 11.42 ಲಕ್ಷ ಮೆಟ್ರಿಕ್ ಟನ್ ಸಂಗ್ರಹ ಲಭ್ಯವಿದೆ. 2026ರ ಜಿಲ್ಲಾವಾರು ಗೊಬ್ಬರ ಹಂಚಿಕೆ ಕಳೆದ 3 ವರ್ಷಗಳ ಸರಾಸರಿ ಬಳಕೆಯನ್ನು ಆಧಾರಿಸಿ ಮರು ನಿರ್ಧಾರ ಮಾಡಲಾಗಿದೆ. ಜೊತೆಗೆ ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸೂಕ್ಷ್ಮ ಯೋಜನೆ ರೂಪಿಸಿ ಪೂರೈಕೆ ಸಮತೋಲನ ಕಾಯ್ದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಯೂರಿಯಾ ಗೊಬ್ಬರ ಹಂಚಿಕೆಗೆ ಆ್ಯಪ್ ಅಭಿವೃದ್ಧಿ

ರಾಜ್ಯದಲ್ಲಿ ಯೂರಿಯಾ ಬಳಕೆಯನ್ನು ನಿಯಂತ್ರಿಸಲು ಫ್ರೂಟ್ಸ್ ನೋಂದಣಿಯ ಆಧಾರದ ಮೇಲೆ ಡೇಟಾ ಬೇಸ್ ಆಧಾರಿತ ಯೂರಿಯಾ ಡಿಸ್ಟ್ರಿಬ್ಯೂಷನ್ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ರೈತರ ಭೂ ಹಿಡುವಳಿ ಮತ್ತು ಬೆಳೆ ಮಾದರಿಯನ್ನು ಆಧಾರಿಸಿ ಯೂರಿಯಾ ಮಾರಾಟವನ್ನು ನಿಯಂತ್ರಿಸಲಾಗುತ್ತಿದೆ. ಈ ಆಪ್ಲಿಕೇಷನ್ ಈಗಾಗಲೇ ಎಂಟು ಜಿಲ್ಲೆಗಳಲ್ಲಿ ಪ್ರಯೋಗಿಕವಾಗಿ ಜಾರಿಯಲ್ಲಿದ್ದು, ಮುಂದಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದ್ಯಾಂತ ವಿಸ್ತಾರಗೊಳ್ಳಲಿದೆ. ಕೃಷಿ ಹೊರತಾದ ಕೃಷಿ ಚಟುವಟಿಕೆಗಳಿಗೆ ಸಹಾಯಧನದ ಯೂರಿಯಾ ದುರುಪಯೋಗವನ್ನು ತಡೆಯಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ವಿಶೇಷ ಸಮಿತಿಗಳನ್ನು ರಚಿಸಲಾಗಿದೆ. ಈ ನಿಯಮಗಳನ್ನು ಉಲ್ಲಂಘಣೆ ಮಾಡಿದ್ದಲ್ಲಿ ಎಫ್‌ಸಿಒ 1985 ಮತ್ತು ಇಸಿಎ 1985 ನಿಯಮಗಳಡಿ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ.

ಅಲ್ಪಸಂಖ್ಯಾತರ ಮತ ಸೆಳೆಯಲು ಬಿಜೆಪಿ ಯತ್ನ

• **ದಾವಣಗೆರೆ:** ಮಾಜಿ ಸಿಎಂ ಸದಾನಂದಗೌಡರು ಹೇಳಿರುವ ಸೂಟ್‌ಕೇಸ್ ಎಷ್ಟು ದಪ್ಪ ಇದೆ, ಎಷ್ಟು ಅಗಲವಿದೆ ಎಂದು ಲೆಕ್ಕಾಚಾರ ಹಾಕಿದ್ದಾರಾ? ಅವರೇ ಈ ಬಗ್ಗೆ ದೂರು ನೀಡಲಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.



ನಗರದಲ್ಲಿ ಗುರುವಾರ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರಕ್ಕೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದಾನಂದಗೌಡರು ಪ್ರಚಾರಕ್ಕೆ ಬಂದಿದ್ದಾರಾ? ಸೂಟ್ ಕೇಸ್ ಬಗ್ಗೆ ಇನ್ನೂ ಯಾಕೆ ದೂರು ನೀಡಿಲ್ಲ? ಎಂದು ತಿರುಗೇಟು ನೀಡಿದರು. ಅಲ್ಪಸಂಖ್ಯಾತರ ಮತಗಳನ್ನು ಬಿಜೆಪಿಗೆ ಸೆಳೆಯುವಂತೆ ಸದಾನಂದಗೌಡರು ಹೇಳಿಕೆ ನೀಡಿರುವುದು ಬಹಳ ಸಂತೋಷ. ಅವರು ಎಲ್ಲರನ್ನೂ ಕರೆದುಕೊಳ್ಳಲಿ. ಇರುವ ಎಲ್ಲ 2.30 ಲಕ್ಷ ಮತಗಳನ್ನು ಅವರೇ ಹಾಕಿಸಿಕೊಳ್ಳಲಿ, ಬಹಳ ಸಂತೋಷ ಎಂದು ಡಿಕೆಶಿ ವ್ಯಂಗ್ಯವಾಡಿದರು. ಸಮರ್ಥ್ ಶಾಮನೂರು ಕಚೇರಿಯಿಂದ ಕರೆ ಬಂದಿದ್ದು, ಬಿಜೆಪಿ ಗೆದ್ದರೆ ಗ್ಯಾರಂಟಿ ಯೋಜನೆ ನಿಲ್ಲಿಸುತ್ತಾರೆ ಎಂಬ ಆಡಿಯೋ ಬಗ್ಗೆ ಪ್ರತಿಕ್ರಿಯಿಸಿದ ಅವರು, ಚುನಾವಣೆ ಸಮಯದಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಾರೆ. ಇವೆಲ್ಲ ಮಾಮೂಲಿ ಎಂದರು.

ಆಜಾದ್ ಭಾರತ್ ಸಿನಿಮಾ ಪ್ರದರ್ಶನ

• **ಹೊಸದಿಲ್ಲಿ:** ದೇಶಭಕ್ತಿ, ರಾಷ್ಟ್ರೀಯ ಸೇವಾ ಮೌಲ್ಯಗಳಿಗೆ ಸದಾ ಪ್ರೇರಣೆಯಾಗಿರುವ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಗೌರವಾರ್ಥ ಕರ್ನಾಟಕದ ಡಾ.ರೂಪಾ ಅಯ್ಯರ್ ನಿರ್ಮಿಸಿ, ನಿರ್ದೇಶಿಸಿದ ಆಜಾದ್ ಭಾರತ್ ಹಿಂದಿ ಚಲನಚಿತ್ರ ಪ್ರದರ್ಶನಕ್ಕೆ ಸಂಸತ್ ಭವನ ಸಾಕ್ಷಿಯಾಯಿತು.

ಸಂಸತ್ತಿನ ಗ್ರಂಥಾಲಯ ಕಟ್ಟಡದ ಜಿಎಂಸಿ ಬಾಲಯೋಗಿ ಸಭಾಂಗಣದಲ್ಲಿ ಸುಭಾಷ್‌ಚಂದ್ರ ಬೋಸ್ ಅವರಿಗೆ ಗೌರವ ಸಲ್ಲಿಸುವ ಪ್ರತೀಕವಾಗಿ ಹಿಂದಿ ಭಾಷೆಯಲ್ಲಿ ನಿರ್ಮಿಸಿದ ಆಜಾದ್ ಭಾರತ್ ಚಿತ್ರದ ವಿಶೇಷ ಪ್ರದರ್ಶನ ಆಯೋಜಿಸಲಾಗಿತ್ತು. ಸಂಸತ್ ಸದಸ್ಯರು ಮತ್ತು ಸಚಿವಾಲಯಗಳ ಅನೇಕ ಅಧಿಕಾರಿಗಳು ಸಿನಿಮಾ ವೀಕ್ಷಿಸಿ ನೇತಾಜಿಗೆ ನಮನ ಸಲ್ಲಿಸಿದರು. ಈ ಚಲನಚಿತ್ರ ಸುಭಾಷ್ ಚಂದ್ರ ಬೋಸ್ ಅವರ ಅಪ್ಪಟ ದೇಶಭಕ್ತಿ ಮತ್ತು ರಾಷ್ಟ್ರೀಯ ಮೌಲ್ಯಗಳನ್ನು ಎತ್ತಿಹಿಡಿಯಲು ಯುವ ಪೀಳಿಗೆಯನ್ನು ಪ್ರೇರೇಪಿಸುವ ಗುರಿ ಹೊಂದಿದೆ. ರಾಷ್ಟ್ರೀಯ ಏಕತೆ, ಆದರ್ಶಗಳನ್ನು ಇಂದಿನ ಯುವ ಪೀಳಿಗೆಗೆ ತಲುಪಿಸುವಲ್ಲಿ ಇಂತಹ ಕಾರ್ಯಕ್ರಮಗಳು ಪ್ರಮುಖವಾಗಿವೆ. ನಮ್ಮ ವೀರ ಹೋರಾಟಗಾರರ ತ್ಯಾಗ ಎಲ್ಲರಿಗೂ ಸ್ಫೂರ್ತಿಯಾಗಲೆಂದು ಆಶಿಸಿದರು.



ಚಲನಚಿತ್ರ ಪ್ರದರ್ಶನಕ್ಕೂ ಮೊದಲು ಜೋಶಿ ಚಿತ್ರನಿರ್ದೇಶಕ ಡಾ.ರೂಪಾ ಅಯ್ಯರ್, ಚಲನಚಿತ್ರದ ಇತರ ಕಲಾವಿದರನ್ನೂ ಸನ್ಮಾನಿಸಿದರು. ನಮ್ಮ ಕರ್ನಾಟಕದವರೇ ಆಗಿರುವ ರೂಪಾ ಅಯ್ಯರ್ ನಟಿಸಿ, ನಿರ್ದೇಶಿಸಿರುವುದು ಹೆಮ್ಮೆಯ ಸಂಗತಿ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ನೇತಾಜಿ ಮರಿಮೊಮ್ಮಗಳು ಚಿತ್ರ ವೀಕ್ಷಣೆ: ಡಾ.ರೂಪಾ ಅಯ್ಯರ್ ನಿರ್ಮಿಸಿ, ನಿರ್ದೇಶಿಸಿದ ಈ ಚಲನಚಿತ್ರವನ್ನು ವಿಶೇಷವಾಗಿ ಲೋಕಸಭೆ, ರಾಜ್ಯಸಭೆ ಮತ್ತು ಸಚಿವಾಲಯ ಅಧಿಕಾರಿಗಳು ಮತ್ತವರ ಕುಟುಂಬ ಸದಸ್ಯರಿಗಾಗಿ ಆಯೋಜಿಸಲಾಗಿತ್ತು. ನೇತಾಜಿ ಮರಿಮೊಮ್ಮಗಳು ರಾಜ್ಯಶ್ರೀ ಚೌಧರಿ, ಕೇಂದ್ರದ ಮಾಜಿ ಸಚಿವೆ ಮೀನಾಕ್ಷಿ ಲೇಖಿ ಅವರು ಚಲನಚಿತ್ರ ಪ್ರದರ್ಶನವನ್ನು ಕಣ್ತುಂಬಿಕೊಂಡರು.

ಮಗಳ ಸಾವಿಗೆ ನ್ಯಾಯ ಕೊಡಿಸಿ: ಶೈಲಜಾ ರೆಡ್ಡಿ

• **ಶಿವಮೊಗ್ಗ:** ತಮ್ಮ ಮಗಳ ಸಾವಿಗೆ ನ್ಯಾಯ ಕೊಡಿಸಿ ಎಂದು ತ್ಯಾವರೆಕೊಪ್ಪದ ಹುಲಿ ಮತ್ತು ಸಿಂಹ ಧಾಮದಲ್ಲಿ ನೀರಾನೆ ದಾಳಿಗೆ ಬಲಿಯಾದ ಯುವ ಪಶುವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಅವರ ತಾಯಿ ಶೈಲಜಾ ರೆಡ್ಡಿ ಆಗ್ರಹಿಸಿದ್ದಾರೆ.

ತುಂಗಾನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಮಾತನಾಡಿ, ವ್ಯವಸ್ಥೆಯ ನಿರ್ಲಕ್ಷ್ಯದ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ಸಮೀಕ್ಷಾಗೆ ಪ್ರಾಣಿಗಳೆಂದರೆ ಪ್ರಾಣವಾಗಿತ್ತು. ಅವಳು ಹಣಕ್ಕಾಗಿ ಈ ವೃತ್ತಿ ಆರಿಸಿಕೊಂಡವಳಲ್ಲ, ಅವಳಿಗಿದ್ದ ಆಸಕ್ತಿಯೇ ಇಂದು ಅವಳ ಸಾವಿಗೆ ಕಾರಣವಾಯ್ತು ಎಂದು ಕಣ್ಣೀರಿಟ್ಟಿದ್ದಾರೆ. ರಾತ್ರಿ 10 ಗಂಟೆ ನಂತರ ಅಂತಹ ಅಪಾಯಕಾರಿ ಜಾಗಕ್ಕೆ ಒಬ್ಬ ಹೆಣ್ಣು ಮಗಳನ್ನು ಕಳುಹಿಸುವ ಅವಶ್ಯಕತೆ ಏನಿತ್ತು? ಈ ಬೇಜವಾಬ್ದಾರಿತನಕ್ಕೆ ಹೊಣೆ ಯಾರು? ಎಂದು ಪ್ರಶ್ನಿಸಿರುವ ಅವರು, ಮುಂದೆ ಬರುವ ವಿದ್ಯಾರ್ಥಿಗಳಿಗಾದರೂ ಸುರಕ್ಷಿತ ನಿಯಮಗಳನ್ನು ಜಾರಿಗೆ ತನ್ನಿ ಎಂದು ಆಗ್ರಹಿಸಿದ್ದಾರೆ. ವ್ಯವಸ್ಥೆಯ ಈ ತಪ್ಪುಗಳಿಂದಾಗಿ ಇಂದು ಪೋಷಕರು ತಮ್ಮ ಮಕ್ಕಳನ್ನು ಪಶುವೈದ್ಯಕೀಯ ಕೋರ್ಸ್‌ಗೆ ಕಳುಹಿಸಲು ಭಯಪಡುವಂತಾಗಿದೆ. ಡಾ. ಸಮೀಕ್ಷಾ ಸಾವಿಗೆ ನ್ಯಾಯ ಸಿಗಲಿ ಎಂದು ಒತ್ತಾಯಿಸಿದರು.

ಪೂರ್ವಾನುಮತಿ ನೀಡಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಒಂದು ತಿಂಗಳ ಗಡುವು

ರೋಹಿಣಿ ವಿರುದ್ಧ ತನಿಖೆಗೆ ಅನುಮತಿ ನೀಡಿ

• **ಬೆಂಗಳೂರು:** ಪರಿಸರ ಸ್ನೇಹಿ, ಬಟ್ಟೆಯ ಕೈಚೀಲಗಳನ್ನು ಮಾರುಕಟ್ಟೆ ದರ 13ರೂ.ಗೆ ಬದಲಾಗಿ 52 ರೂ.ಗೆ ಖರೀದಿಸುವ ಮೂಲಕ ಕೋಟ್ಯಂತರ ರೂಪಾಯಿ ಭ್ರಷ್ಟಾಚಾರ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಮೈಸೂರು ಜಿಲ್ಲೆಯ ಅಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ತನಿಖೆಗೆ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಅಡಿ ಪೂರ್ವಾ ನುಮತಿ ನೀಡಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಒಂದು ತಿಂಗಳ ಗಡುವು ವಿಧಿಸಿದೆ.



ರೋಹಿಣಿ ಸಿಂಧೂರಿ ವಿರುದ್ಧ ತನಿಖೆ ಕೈಗೊಳ್ಳಬೇಕೆಂಬ ಮೈಸೂರಿನ ವಕೀಲ ಎನ್.ಆರ್. ರವಿಚಂದ್ರೇಗೌಡ ಪೂರ್ವಾನುಮತಿ ಕೋರಿಕೆ ನಿರಾಕರಿ ಸಿದ್ದ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಆದೇಶವನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಜಾಗೊಳಿಸಿದೆ. ಕಾನೂನಿನ ಅನ್ವಯ ಪೂರ್ವಾನುಮತಿ ನೀಡುವುದನ್ನು ಪರಿಗಣಿಸುವಂತೆ ಸಮನ್ವಯ ಪೀಠವು ಈ ಹಿಂದೆ ನಿರ್ದೇಶಿಸಿದೆ. ಸರ್ಕಾರವು ಅರ್ಥಪೂರ್ಣವಾಗಿ ಮೌಲ್ಯ ಮಾಪನ ಮಾಡುವ ಬದಲು ತನ್ನ ಹಿಂದಿನ ನಿಲುವನ್ನು ಸಮರ್ಥಿಸಿದೆ. ಹೀಗಾಗಿ, ಪ್ರಕರಣವನ್ನು ಮತ್ತೆ ಸರ್ಕಾರಕ್ಕೆ ಮರಳಿಸುವುದರಿಂದ ಯಾವುದೇ ಲಾಭವಿಲ್ಲ, ಬದಲಿಗೆ ನ್ಯಾಯದಾನ ಮತ್ತಷ್ಟು ವಿಸ್ತರಣೆಯಾಗಲಿದೆ ಎಂದು ನ್ಯಾಯಾಲಯವು ಅರ್ಜಿ ಮಾನ್ಯ ಮಾಡುವುದಕ್ಕೆ ಸಮರ್ಥನೆ ನೀಡಿದೆ.

ಇಲಾಖಾ ವಿಚಾರಣೆಗಳು ಮತ್ತು ಕ್ರಿಮಿನಲ್ ವಿಚಾರಣೆಗಳು ವಿಭಿನ್ನ ಕಕ್ಷೆಯಲ್ಲಿ ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ ಪರಿಗಣಿಸಲಾಗುವ ಪುರಾವೆ ಮತ್ತು ಉದ್ದೇಶದ ಮಾನದಂಡಗಳನ್ನು ಪ್ರತ್ಯೇಕ ಕಾನೂನುಗಳಿಂದ ನಿಯಂತ್ರಿಸಲಾಗುತ್ತದೆ. ಇಲಾಖಾ ವಿಚಾರಣೆಯಲ್ಲಿ ಅಧಿಕಾರಿಯನ್ನು ದೋಷಮುಕ್ತಗೊಳಿಸಿದ ಮಾತ್ರಕ್ಕೆ ಕ್ರಿಮಿನಲ್ ತನಿಖೆ ನಡೆಯುವುದನ್ನು ತಡೆಯಲು ಸಾಧ್ಯವಿಲ್ಲ ಎಂಬುದು ಈಗಾಗಲೇ ನ್ಯಾಯಾಂಗ ಪರಾಮರ್ಶೆಯಲ್ಲಿ ಇತ್ಯರ್ಥವಾಗಿರುವ ಅಂಶ ಎಂದು ನ್ಯಾಯಾಲಯ ಹೇಳಿದೆ.

ಸಾರ್ವಜನಿಕ ಸೇವಕರು ತಮ್ಮ ಅಧಿಕೃತ ಕಾರ್ಯ ಅಥವಾ ಕರ್ತವ್ಯಗಳನ್ನು ನಿರ್ವಹಿಸುವಾಗ ಮಾಡಿದ ಶಿಫಾರಸುಗಳು, ನಿರ್ಧಾರಗಳಿಗೆ ಸಂಬಂಧಿಸಿದ ಅಪರಾಧಗಳ ವಿಚಾರಣೆ ಅಥವಾ ತನಿಖೆಗೆ ಅನುಮತಿ ನೀಡುವುದು ಸಾಂವಿಧಾನಿಕ ಮತ್ತು ಶಾಸನಬದ್ಧ ಕಡ್ಡಾಯ ನಿಲುವಾಗಿರಬೇಕು. ಯಾಕೆಂದರೆ, ಭ್ರಷ್ಟಾಚಾರ ಒಂದು ಪಿಡುಗು. ಇದನ್ನು ಕ್ಯಾನ್ಸರ್, ಪ್ಲೇಗ್ ಮತ್ತು ಸಾಂಕ್ರಾಮಿಕ ಎಂದು ವಿವಿಧ ರೀತಿಯಲ್ಲಿ ವರ್ಣಿಸಲಾಗಿದೆ ಎಂಬ ಸುಪ್ರೀಂ ಕೋರ್ಟ್ ತೀರ್ಪನ್ನು ಪೀಠ ಆದೇಶದಲ್ಲಿ ಉಲ್ಲೇಖಿಸಿದೆ.

ಪ್ರಕರಣದ ಹಿನ್ನೆಲೆ

ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ಮೈಸೂರು ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಿಸಬೇಕು ಮತ್ತು ಪ್ಲಾಸ್ಟಿಕ್ ಬಳಕೆಗೆ ಮುಕ್ತಾಯಹಾಡಿ ಬಟ್ಟೆಯ ಕೈಚೀಲಗಳನ್ನು ಬಳಸಬೇಕು ಎಂದು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ಅವರು ಜಿಲ್ಲೆಯ ನಗರ, ಗ್ರಾಮಾಂತರ ಮತ್ತು ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶಿಸಿದ್ದರು. ಈ ವೇಳೆ ಬಟ್ಟೆ ಚೀಲ ಖರೀದಿಯಲ್ಲಿ ಕ್ರಮ ಕಂಡುಬಂದಿತ್ತು. ಅಕ್ರಮದ ಕುರಿತಂತೆ, ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು 2021ರ ಅಕ್ಟೋಬರ್ 13ರಂದು ಮೈಸೂರು ಜಿಲ್ಲಾ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ರವಿಚಂದ್ರೇಗೌಡ ದೂರು ನೀಡಿದ್ದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಭರವಸೆ

ರೋಗಿ ಸುರಕ್ಷತೆಗೆ ಎಐ ಮತ್ತಷ್ಟು ಬಲ

• **ಬೆಂಗಳೂರು:** ಪಿಪಿಪಿ ಮಾದರಿಯಲ್ಲಿ ಡಯಾಲಿಸಿಸ್ ಸೇವೆಗಳನ್ನು ವಿಸ್ತರಿಸುವಲ್ಲಿ ರಾಜ್ಯ ಸರ್ಕಾರ ಬದ್ಧವಾಗಿದ್ದು, ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಮೇಲ್ವಿಚಾರಣಾ ವ್ಯವಸ್ಥೆಯ ಪರಿಚಯದಿಂದ ಚಿಕಿತ್ಸಾ ಗುಣಮಟ್ಟ ಮತ್ತು ರೋಗಿ ಸುರಕ್ಷತೆ ಮತ್ತಷ್ಟು ಬಲವಾಗಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ನಗರದ ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ನೆಫ್ರೋಪ್ಲಸ್ ಸಂಸ್ಥೆ ಜಾರಿಗೆ ತಂದಿರುವ ಎಐ ಆಧಾರಿತ ಸ್ಮಾರ್ಟ್ ಮೇಲ್ವಿಚಾರಣಾ ವ್ಯವಸ್ಥೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ವ್ಯವಸ್ಥೆಯ ಮೂಲಕ ಪಿಪಿಪಿ ಯೋಜನೆಯ ಅಡಿಯಲ್ಲಿ ನೀಡಲಾಗುವ ಡಯಾಲಿಸಿಸ್ ಸೇವೆಗಳು ಖಾಸಗಿ ಕ್ಷೇತ್ರದ ಮಟ್ಟಕ್ಕೆ ಸಮನಾಗುತ್ತಿವೆ ಎಂದು ಹೇಳಿದರು.

ಈಗಾಗಲೇ ಎರಡು ಖಾಸಗಿ ಸಂಸ್ಥೆಗಳೊಂದಿಗೆ ಸಹಭಾಗಿತ್ವದಲ್ಲಿ ಎಐ ಬಳಕೆ ಹೆಚ್ಚಿಸುತ್ತಿದ್ದು, ಇದರ ಉಪಯೋಗವನ್ನು 2 ತಿಂಗಳು ಪರಿಶೀಲಿಸಿ, ನಂತರ ಇತರೆ ಸರ್ಕಾರಿ ಆಸ್ಪತ್ರೆಗಳಲ್ಲೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ನೆಫ್ರೋಪ್ಲಸ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೋಹಿತ್ ಸಿಂಗ್ ಮಾತನಾಡಿ, ಡಯಾಲಿಸಿಸ್ ಚಿಕಿತ್ಸೆಯಲ್ಲಿ ನಿರಂತರ ಮೇಲ್ವಿಚಾರಣೆ ಅತ್ಯಗತ್ಯ. ಈ ಎಐ ವ್ಯವಸ್ಥೆಯ ಮೂಲಕ ಎಲ್ಲಾ ಕೇಂದ್ರಗಳಲ್ಲಿಯೂ ಸಮಾನ ಗುಣಮಟ್ಟವನ್ನು ಕಾಪಾಡುವುದರ ಜತೆಗೆ, ರೋಗಿಗಳಿಗೆ ಹೆಚ್ಚು ಸುರಕ್ಷಿತ ಮತ್ತು ವಿಶ್ವಾಸಾರ್ಹ ಸೇವೆ ಒದಗಿಸಲು ಸಾಧ್ಯವಾಗುತ್ತಿದೆ ಎಂದು ಹೇಳಿದರು.



ಸಂಪಾದಕೀಯ

ಅರಾಜಕತೆಗಾಗಿಯೇ ಸಂಚು

ಮತ್ತೆ ಮತ್ತೆ ಹೇಳುವ ಸುಳ್ಳುಗಳು, ಕೆಲವೊಮ್ಮೆ ಸತ್ಯವಾಗಿಬಿಡುತ್ತವೆ ಎಂಬ ನಾಚಿಕೆಗೇಡಿನ ನಂಬಿಕೆಯೂ, ತೋಳ ಬಂತು ತೋಳ ಕತೆಯಂತಾದರೆ ನಂಬುವರೆ ಇಲ್ಲದಂತಾಗಬಹುದು ಎಂಬ ಕನಿಷ್ಠ ತಿಳಿವಳಿಕೆಯೂ ಇಲ್ಲದ ಕೆಲವು ವಿದ್ಯಮಾನಗಳಿಗೆ ದೇಶ ಸಾಕ್ಷಿಯಾಗುತ್ತಿದೆ. ಇಂಥ ಘಟನೆಗಳು ಒಂದು ರೀತಿಯಲ್ಲಿ ದೇಶವನ್ನು ಅರಾಜಕತೆಯತ್ತ ತಳ್ಳುವ ಪ್ರಯತ್ನಗಳು ಎಂಬುದು ಗೊತ್ತಿದ್ದೂ, ಸರ್ಕಾರಗಳು ನೋಡಿಕೊಂಡು ಸುಮ್ಮನಿವೆಯೇ ಎಂಬ ಅನುಮಾನವೂ ಜನಸಾಮಾನ್ಯರಲ್ಲಿ ಮೂಡುತ್ತಿರುವುದು ಸುಳ್ಳೇನಲ್ಲ.



ಇದು ವೋಟ್‌ಚೋರಿಯಿಂದ ಆರಂಭವಾದ ಸುಳ್ಳುಗಳ ಸರಮಾಲೆ. ಈಗ ಎಸ್‌ಐಆರ್ ಕಾಲದಲ್ಲಂತೂ ಇದು ಎಗ್ಗಿಲ್ಲದೇ ನಡೆಯುತ್ತಲೇ ಇದೆ. ಬಿಹಾರ ವಿಧಾನಸಭೆ ಚುನಾವಣೆ ಹೊತ್ತಲ್ಲಿ ಇಂಥ ಸುಳ್ಳುಗಳ ಸರಣಿಯೇ ಎದ್ದಿತ್ತು. ಬಿಹಾರದಲ್ಲಿ ಲಕ್ಷಾಂತರ ಮಂದಿಯನ್ನು ಮತದಾರರ ಪಟ್ಟಿಯಿಂದ ಹೊರಗಿಡಲಾಗಿದ್ದು, ಅಲ್ಲಿ ಧಮನಿತರು ಮತದಾನದಿಂದ ಹೊರಗುಳಿದರು ಎಂಬ ಸುಳ್ಳುಗಳನ್ನು ಹಬ್ಬಿಸಲಾಗಿತ್ತು. ಆದರೆ ಚುನಾವಣೆ ಮುಗಿದು, ಫಲಿತಾಂಶ ಬಂದರೂ ಈ ರಾಜ್ಯದಲ್ಲಿ ಮತದಾರರ ಪಟ್ಟಿಯಿಂದ ತಮ್ಮ ಹೆಸರು ಕಣ್ಮರೆಯಾಗಿದೆ ಎಂಬ ಒಂದೇ ಒಂದು ದೂರು ಎಲ್ಲಿಯೂ ಸಲ್ಲಿಕೆಯಾಗಲಿಲ್ಲ. ಈಗ ಪಶ್ಚಿಮ ಬಂಗಾಳದಲ್ಲೂ ಎಸ್‌ಐಆರ್ ಗದ್ದಲ ನಡೆಯುತ್ತಿದ್ದು ಇಲ್ಲೂ ಇದೇ ರೀತಿಯ ಸುಳ್ಳುಗಳನ್ನು ಪೋಣಿಸಲಾಗುತ್ತಿದೆ. ಆದರಲ್ಲೂ ಪ.ಬಂಗಾಳದಲ್ಲಿ ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲೇ ನಡೆಯುತ್ತಿದ್ದು, ಹೀಗಿದ್ದರೂ ಮಮತಾ ಬ್ಯಾನರ್ಜಿ, ಮತ್ತವರ ಪಕ್ಷ ಪ್ರತಿದಿನವೂ ಒಂದೊಂದು ಹೈಡ್ರಾಮಾ ಮಾಡುತ್ತಲೇ ಇದೆ.

ಈ ಎಸ್‌ಐಆರ್ ಗದ್ದಲದ ಮಧ್ಯೆ, ಪ್ರಗತಿಪರರು ಎಂದು ಕರೆದುಕೊಳ್ಳುವ ಮತ್ತು ದೇಶವನ್ನ ಅರಾಜಕತೆಯತ್ತ ತಳ್ಳಲು ಯತ್ನಿಸುತ್ತಿರುವ ಗುಂಪೊಂದು ಕೆಲಸ ಮಾಡುತ್ತಲೇ ಇದೆ. ಯೋಗೇಂದ್ರ ಯಾದವ್, ನವೀನ್ ಚಾವ್ಲಾ, ಪ್ರಶಾಂತ್ ಭೂಷಣ್, ಪರಕಾಲ ಪ್ರಭಾಕರ ಮತ್ತಿತರರು ಆಂಧ್ರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಅಕ್ರಮಗಳಾಗಿವೆ ಎಂಬ ಆರೋಪ ಮಾಡಿದ್ದಾರೆ. ಅಂದರೆ, ಮಧ್ಯರಾತ್ರಿ 11.45ರಿಂದ 2 ಗಂಟೆವರೆಗೆ 3,500 ಬೂತ್‌ಗಳಲ್ಲಿ 17 ಲಕ್ಷ ಮತ ಚಲಾವಣೆಯಾಗಿದೆ. ಈ ಎಲ್ಲ ಮತಗಳು ಎನ್‌ಡಿಎಗೆ ಹೋಗಿವೆ ಎಂಬ ಆರೋಪ ಮಾಡಿದ್ದಾರೆ.

ಆದರೆ, ಇಂಥ ಆರೋಪಗಳನ್ನು ಮಾಡುವಾಗ ವಾಸ್ತವಿಕತೆಯ ಚಿತ್ರಣವನ್ನು ಮುಂದಿರಿಸಿಕೊಳ್ಳಬಹುದಿತ್ತು. ಚುನಾವಣಾ ರಾತ್ರಿ ಸ್ಟ್ರಾಂಗ್ ರೂಂಗಳನ್ನು ತೆಗೆದವರು ಯಾರು? ಹಾಗೆಯೇ ಪ್ರತಿ ಬಾರಿಯೂ ಚಲಾವಣೆಯಾದ ಮತದಾನದ ವಿವರಗಳು ಕ್ರೋಢೀಕರಣವಾಗಲು ಒಂದಷ್ಟು ಸಮಯ ಬೇಕೇಬೇಕು. ಇದು ಹಿಂದಿನಿಂದಲೂ ಚಾಲ್ತಿಯಲ್ಲಿರುವ ಪದ್ಧತಿ. ಇದು ಈಗಷ್ಟೇ ಆಗುತ್ತಿದೆ ಎಂಬುದೂ ಸುಳ್ಳಲ್ಲವೇ.

ಇಂಥ ಆರೋಪಗಳ ಹಿಂದೆ ಇರುವುದು ದೇಶದಲ್ಲಿ ಯಾವುದು ಸರಿಯಾಗಿಲ್ಲ ಎಂಬುದು ತೋರ್ಪಡಿಸುವ ಮಾರ್ಗಗಳಷ್ಟೇ. ನೆರೆಯ ಬಾಂಗ್ಲಾ ಮತ್ತು ನೇಪಾಳದಲ್ಲಿ ಚುನಾವಣೆ ಸರಿಯಾಗಿ ಆಗಿಲ್ಲ, ಅಕ್ರಮಗಳಾಗಿವೆ ಎಂದು ಬಿಂಬಿಸಿ, ಝೆನ್‌ಜಿಯಿಂದ ಕ್ರಾಂತಿ ಮಾಡಿಸಿದ ರೀತಿಯಲ್ಲೇ ಇಲ್ಲೂ ಮಾಡಬೇಕು ಎಂಬ ಸಂಚು ಇಂಥ ಆರೋಪಗಳ ಹಿಂದೆ ಇರುವಂತೆ ತೋರುತ್ತಿದೆ. ಈಗಾಗಲೇ ಕೆಲವು ಪ್ರತಿಪಕ್ಷಗಳ ನಾಯಕರು ಈ ಬಗ್ಗೆ ಮಾತನಾಡಿಯೂ ಆಗಿದೆ. ಆದರೆ, ಭಾರತದಂಥ ದೇಶದಲ್ಲಿ ಇಂಥ ಪ್ರಯತ್ನಗಳು ಸಾಕಾರವಾಗುವುದಿಲ್ಲ ಎಂಬುದನ್ನು ಮಾತ್ರ ಅರಾಜಕತೆಯನ್ನುಂಟುಮಾಡಲು ಯತ್ನಿಸುತ್ತಿರುವ ಮಂದಿಗೆ ಅರ್ಥವಾಗುತ್ತಿಲ್ಲ.

ಕಾರ್ಯಕರ್ತನೇ? ಆತ ಬಂಗಾಳದಲ್ಲಿದ್ದಾನೆ!

ಉಘೇ ವೀರಭೂಮಿಗೆ

• ಸಂತೋಷ್ ತಮ್ಮಯ್ಯ
santoshthammaiah@gmail.com



ಮಾನವ ಸ್ವಭಾವ ಒಂದೆಡೆ ಕೋಪ ಮತ್ತು ದುರಾಸೆ, ಮತ್ತೊಂದೆಡೆ ಪ್ರೀತಿ ಮತ್ತು ತ್ಯಾಗ-ಎರಡೂ ಪ್ರವೃತ್ತಿಗಳನ್ನು ಹೊಂದಿರುತ್ತವೆ. ಒಬ್ಬ ಕಾರ್ಯಕರ್ತ ಪ್ರೀತಿ ಮತ್ತು ತ್ಯಾಗದ ಮಾರ್ಗವನ್ನು ಆರಿಸಿಕೊಳ್ಳಬೇಕು ಎಂದಿದ್ದರು ದೀನದಯಾಳ ಉಪಾಧ್ಯಾಯರು. ಅದಕ್ಕೂ ಹಿಂದೆ ಶ್ಯಾಮಪ್ರಸಾದ್ ಮುಖರ್ಜಿಯವರೂ ಕಾರ್ಯಕರ್ತನೇ ರಾಜಕೀಯ ಪಕ್ಷಗಳ ಶಕ್ತಿ ಎಂದು ನಂಬಿ ಕಾಂಗ್ರೆಸ್ ಬಿಟ್ಟು ಬಂದಿದ್ದರು. ಮುಂದೆ ಜನಸಂಘ ಮತ್ತು ಬಿಜೆಪಿಯ ಆಗಿಹೋದ ಅಧ್ಯಕ್ಷರು, ನಾಯಕರೆಲ್ಲರೂ ಕಾರ್ಯಕರ್ತನೇ ಆಧಾರಸ್ತಂಭ ಎಂದೇ ನಡೆದರು. ಹಾಗಾಗಿ ಇಂದಿಗೂ ಬಿಜೆಪಿಯನ್ನು ಕಾರ್ಯಕರ್ತರ ಪಕ್ಷ ಎಂದೇ ಗುರುತ್ತಿಸಲಾಗುತ್ತದೆ. ಬಿಜೆಪಿ ವಿರೋಧಿಗಳು ಕೂಡ ಆತನ ಶಕ್ತಿಗೆ ಹೆದರುತ್ತಾರೆ. ಅಂದಮಾತ್ರಕ್ಕೆ ಬಿಜೆಪಿಯಲ್ಲಿ ಕಾರ್ಯಕರ್ತನೆಂದರೆ ಇಷ್ಟೇ ಅಲ್ಲ. ಆತನ ಬಗ್ಗೆ ಅಲ್ಲಿ ವೈಚಾರಿಕವಾದ ಮಹಾ ವ್ಯಾಖ್ಯಾನಗಳಿವೆ. ಶಾಸ್ತ್ರಗ್ರಂಥಗಳಂತೆ ಆತನ ಗುಣ ಸ್ವಭಾವಗಳನ್ನು ಬಣ್ಣಿಸಲಾಗಿದೆ. ಆತನ ಗುರಿ-ದಾರಿಯ ಬಗ್ಗೆ ಬಿಜೆಪಿಗೆ ಜನಸಂಘದ ಕಾಲದಿಂದಲೂ ಸ್ಪಷ್ಟತೆಯಿದೆ. ಹಾಗಾಗಿ ಅಲ್ಲಿನ ನಾಯಕರೂ ಕಾರ್ಯಕರ್ತರೇ. ಪ್ರಧಾನಮಂತ್ರಿ, ರಾಷ್ಟ್ರಾಧ್ಯಕ್ಷರೂ ತಮ್ಮನ್ನು ಕಾರ್ಯಕರ್ತ ಎಂದೇ ಗುರುತಿಸಿಕೊಳ್ಳುತ್ತಾರೆ.

ಇಂಥದ್ದರ ನಡುವೆ ಸ್ವತಃ ಕಾರ್ಯಕರ್ತನೇ ಗೊಂದಲಗೊಳ್ಳುವ ಸಂದರ್ಭಗಳಿಲ್ಲವೇ? ಬಣ್ಣಬಣ್ಣದ ವ್ಯಾಖ್ಯಾನಗಳು ಬಣ್ಣಗೆಟ್ಟಿಲ್ಲವೇ? ನಮ್ಮ ಪಕ್ಷದಲ್ಲೂ ಯಾಕೆ ಹೀಗೆ? ಅವರೇಕೆ ಪುಕ್ಸಟೆ ಐಪಿಎಲ್ ಟಿಕೇಟ್ ಕೇಳಿದರು? ಇವರೇಕೆ ಬಣ್ಣಬದಲಿಸುತ್ತಾರೆ? ಮುಜ್ರಾ ಪರಂಪರೆ ಇಲ್ಲೂ ಯಾಕಿದೆ? ಅವರೇಕೆ ಅಗತ್ಯಕ್ಕಿಂತ ಹೆಚ್ಚು ಹೊಗಳಾರಂಭಿಸಿದ್ದಾರೆ? ಹಿಂದುತ್ವ ಆಚರಣೆಗಿಂತ ಪ್ರಚಾರದ ಸರಕೇಕಾಗಿದೆ? ಕಳ್ಳರೇಕೆ ಇಲ್ಲೂ ಇದ್ದಾರೆ?-ಇಂಥ ಪ್ರಶ್ನೆಗಳು ಸಹಜವಾಗಿ ಹುಟ್ಟುತ್ತವೆ. ಅವು ಹುಟ್ಟಲೇಬೇಕು. ಹುಟ್ಟದಿದ್ದರೆ ಆತನನ್ನೇ ಸಂಶಯಿಸಬೇಕು! ಆದರೆ ಇಂಥ ಅಪಸವ್ಯಗಳಿಂದ ಪಕ್ಷವನ್ನು ಅಳೆಯಬಹುದೇ? ಐಪಿಎಲ್ ಟಿಕೇಟು ಕೇಳಿದವರ ಪಕ್ಷದಲ್ಲೇ ಅದನ್ನು ನಿರಾಕರಿಸಿ ಆದರ್ಶ ಮೆರೆದವರೂ ಇದ್ದಾರೆ. ಮಂಡೆಯಲ್ಲಿ ಮೆದುಳಿಲ್ಲದವರಂತೆ ಪುಡಾರಿಗಳ ಹಿಂದೆ ತಿರುಗುವವರ ಮಧ್ಯೆ ವೈಯಕ್ತಿಕ ಜೀವನ ಕಳೆದುಕೊಂಡವರಿದ್ದಾರೆ. ಮನೆಯಿಂದ ತಂದ ಬುತ್ತಿಯನ್ನು ತಿನ್ನುವ ಬೂತ್ ಏಜಂಟನಿದ್ದಾನೆ. ವಿಚಿತ್ರವೆಂದರೆ ಇಂಥವನು ಬಿಜೆಪಿಯಲ್ಲಿ ಮಾತ್ರ ಇದ್ದಾನೆ. ಜನಸಂಘದ ನಾಯಕರು ಕಾರ್ಯಕರ್ತತನವನ್ನು ಎಷ್ಟೊಂದು ವಿಶದವಾಗಿ ವಿವರಿಸಿದ್ದಾರೆಂದರೆ ಅಪಸವ್ಯಗಳು ಹುಟ್ಟುವ ಸಂದರ್ಭಗಳನ್ನೂ ಹೇಳಿದ್ದಾರೆ. ದೇಶದ ಆಶಯಗಳನ್ನು ಪ್ರಜಾಪ್ರಭುತ್ವದ ಮೂಲಕ ಈಡೇರಿಸಲು ರಾಜಕಾರಣವೊಂದೇ ಮಾರ್ಗವಲ್ಲ ಎಂಬ ವಿಸ್ತಾರದ ನೋಟವನ್ನು ಹಿಂದಿನ ನಾಯಕರು ಹೊಂದಿದ್ದರು. ರಾಜಕಾರಣಕ್ಕೆ ಮೌಲ್ಯಗಳನ್ನು ತುಂಬಬೇಕು. ಕಾರ್ಯಕರ್ತ ಆದರ ವಾಹಕನಾಗಬೇಕು. ನಾಯಕ ಅನುಷ್ಠಾನಗೊಳಿಸಬೇಕು ಎಂಬ ಧ್ಯೇಯದಿಂದಲೇ ಜನಸಂಘ ಹುಟ್ಟಿತು. ಜನಸಂಘ ಬಿಜೆಪಿಯೂ ಆಯಿತು. ವಿಶೇಷವೆಂದರೆ ಅವರು ಹೀಗಂದಿದ್ದು ಎಲ್ಲಾ ಪಕ್ಷಗಳಿಗೆ! ಇಂದು ರಾಜಕಾರಣ ಬಹುದೂರ ಸಾಗಿದೆ. ಎಲ್ಲಾ ಪಕ್ಷಗಳೂ ತಮ್ಮ ಆದ್ಯತೆಗಳನ್ನು ಬದಲಿಸಿಕೊಂಡಿವೆ. ಅದನ್ನು ಅವರವರ ಪ್ರಾರಬ್ಧವೆಂದೇನೋ ಹೇಳಬಹುದು. ಆದರೆ ಬಿಜೆಪಿಗೆ ಹಾಗೆನ್ನುವ ಹೊತ್ತು ಬರಬಾರದು. ಅಲ್ಲಿ ಸಿದ್ಧಾಂತಕ್ಕಾಗಿ ಹಿರಿಯ ನಾಯಕರಿಂದ ಸಾಮಾನ್ಯ ಕಾರ್ಯಕರ್ತನವರೆಗೂ ಬಲಿದಾನಗಳಾಗಿವೆ. ಸ್ವಂತವನ್ನು ಮರೆತು ಧ್ಯೇಯಕ್ಕಾಗಿ ಬದುಕಿದವರಿದ್ದಾರೆ. ಉಳಿದ ಪಕ್ಷಗಳಲ್ಲಿ ಅಂಥವರಿಲ್ಲ. ಅವರೆಂದೂ ಅಧಿಕಾರಕ್ಕೇರಿದವರಲ್ಲ, ಅಧಿಕಾರಕ್ಕೇರುವವರೂ ಅಲ್ಲ. ಪುಕ್ಸಟೆ ಐಪಿಎಲ್ ಟಿಕೇಟು ಕೇಳುವ ನಾಯಕರು ಬಿಜೆಪಿಯಲ್ಲಿರಬಹುದು. ಆದರೆ ಅಂಥ ಕಾರ್ಯಕರ್ತ ಇಂದಿಗೂ ಬಿಜೆಪಿಯಲ್ಲಿಲ್ಲ.

ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರಕ್ರಿಯೆಗಳು ನಡೆಯುತ್ತಿರುವ ಹೊತ್ತಲ್ಲಿ ಈ ಕಾರ್ಯಕರ್ತ ಮತ್ತೆ ನೆನಪಾಗುತ್ತಾನೆ. ದೇಶದ ಯಾವ ರಾಜ್ಯಕ್ಕೂ ಹೋಲಿಸಲಾಗದ ರಾಜಕೀಯ ವಾತಾವರಣ ಬಂಗಾಳದ್ದು. ಬಿಜೆಪಿ ಕಾರ್ಯಕರ್ತ ಎಂಬ ಒಂದೇ ಕಾರಣ ಅಲ್ಲಿ ಪ್ರಾಣಕ್ಕೆ ಕಂಟಕವಾಗುತ್ತದೆ. ಇಡೀ ವ್ಯವಸ್ಥೆ ಆತನ ವಿರುದ್ಧವಿದೆ. ಆತನಿಗೆ ನೂರಾರು ಆಮಿಷಗಳಿವೆ. ಅವಕಾಶಗಳು ಆತನನ್ನು ಹುಡುಕಿ ಬರುತ್ತವೆ. ತಾನು ಬಿಜೆಪಿ ಕಾರ್ಯಕರ್ತನಲ್ಲ ಎಂದು ಹೇಳಿದರೂ ಆತ ನೆಮ್ಮದಿಯ ನಿದ್ರೆ ಮಾಡಬಹುದು. ಆದರೆ ಅದಕ್ಕಾತ ಮನಸೋತಿಲ್ಲ. ಸುಖದ ಬದುಕಿಗಿಂತ ಆತ ಕಾರ್ಯಕರ್ತತನವನ್ನೇ ಆರಿಸಿಕೊಳ್ಳುತ್ತಾನೆ. ಬಿಜೆಪಿ ಹಿಂದೆಯೂ ಆತನಿಗೇನೂ ಮಾಡಿಲ್ಲ. ಚುನಾವಣೆಯ ನಂತರ ಕೂಡ ಆತನಿಗೇನೋ ಮಾಡಿಬಿಡುತ್ತದೆಂಬ ನಂಬಿಕೆ ಆತನಿಗೂ ಇಲ್ಲ. ಆದರೂ ಆತ ಬಿಜೆಪಿ. ಆತನ ಊರಿಗೆ ಪೊಲೀಸ್ ನಾಕಾಬಂಧಿ ಹಾಕಲಾಗಿದೆ. ಆದರೂ ಆತ ದೂರದ ಡಾರ್ಜಲಿಂಗ್‌ನಿಂದ ಮೋದಿಯನ್ನು ನೋಡಲು ಕೊಲ್ಕೊತ್ತಾಕ್ಕೆ 20 ಗಂಟೆ ಪ್ರಯಾಣಿಸುತ್ತಾನೆ. ಮೂರು ದಿನಗಳ ಕರ್ಚುವೆಚ್ಚಗಳನ್ನೇನೂ ಆತನಿಗೆ ಪಕ್ಷ ನೀಡುವುದಿಲ್ಲ. ಏಕೆಂದರೆ ಪಶ್ಚಿಮ ಬಂಗಾಳದಲ್ಲಿನ್ನೂ ಕರ್ನಾಟಕದಂತೆ ಸಾಮ್ರಾಜ್ಯ ಕಟ್ಟಿಕೊಂಡ ನಾಯಕರಿಲ್ಲ. ಆತನಿಗೆ ಇರಾನಿನಲ್ಲೇನು ನಡೆಯುತ್ತಿದೆ ಎನ್ನುವುದು ತಿಳಿದಿಲ್ಲ. ಅದನ್ನು ತಿಳಿಯುವ ವ್ಯವಧಾನವೂ ಇಲ್ಲ. ಜೈಶಂಕರರ ರಾಜತಾಂತ್ರಿಕತೆಗೋ, ನಿರ್ಮಲಕ್ಕನ ತೆರಿಗೆ ನೀತಿಗೋ ಅವನು ಮನಸೋತಿಲ್ಲ. ಅದನ್ನು ತಿಳಿಸಲು ಪ.ಬಂಗಾಳ ಬಿಜೆಪಿ ಆತನಿಗೆ ಜಿಲ್ಲಾವಾರು ಅಭ್ಯಾಸವರ್ಗಗಳನ್ನೇನೂ ನಡೆಸಿಲ್ಲ. ಹಾಗಾಗಿ ಅವನು ದೊಡ್ಡ ಸಾಹೇಬರ ಕಣ್ಣೆದುರು ಬೀಳಲು ಸಾಹಸ ಮಾಡಿಲ್ಲ. ಆತ ನೆರೆಮನೆಯ ಪ್ರೇರಣೆಯಿಂದಲೋ ಅಥವಾ ಜಿಲ್ಲಾಧ್ಯಕ್ಷನ ವ್ಯಕ್ತಿತ್ವಕ್ಕೋ ಮಾರುಹೋಗಿ ಕಾರ್ಯಕರ್ತನಾಗಿಲ್ಲ. ಅಸಲಿಗೆ ಆತನ ನೆರೆಮನೆ, ಸಂಬಂಧಿಕರ ಮನೆ ಒಂದೋ ಇನ್ನೂ ಕುಟುಕು ಜೀವವಿಟ್ಟುಕೊಂಡ ಕಮ್ಯುನಿಸ್ಟ್ ಅಥವಾ ನುಂಗಲು ಬಾಯಿತೆರೆದು ಕುಳಿತ ತೃಣಮೂಲ! ಆ ಬಂಗಾಳಿ ಕಾರ್ಯಕರ್ತ ಶ್ಯಾಮಪ್ರಸಾದ ಮುಖರ್ಜಿ ಹೆಸರಿಗಿಂತಲೂ ಚಾರೂ ಮಜುಂದಾರನ ಹೆಸರನ್ನು ಕೇಳಿದವನು. ಆತ ಭಾಷಣಕಾರನಲ್ಲ, ಮತದಾರರ ಮನವೊಲಿಸಬಲ್ಲ ಚಾಣಾಕ್ಷ್ಯನಲ್ಲ. ಆದರೂ ಆತ ಬದಲಾವಣೆಗೆ ಹಂಬಲಿಸುವವನು. ತನ್ನ ಪರಿವರ್ತನೆ ಸುಧಾರಣೆಯೊಂದಕ್ಕೆ ಕಾರಣವಾಗುತ್ತದೆ ಎಂದು ನಂಬಿದವನು. ಆತ ಯಾವುದರಲ್ಲೂ ಪರಿಣತನಲ್ಲ. ಆದರೆ ಎಲ್ಲವನ್ನೂ ಮಾಡುವವನು. ತನ್ನ ಪ್ರಾಣಕ್ಕೆ ಕಂಟಕವಿದೆ ಎಂದು ತಿಳಿದೂ ಆತ ಬಿಜೆಪಿಗನಾದವನು. ತನ್ನಂತೆ ಇತರರೂ ಬಿಜೆಪಿಯವನಾಗಬೇಕೆಂಬುದು ಮಾತ್ರ ಅವನ ಆಶಯ. ಅದೇ ಆತನ ಸಿದ್ಧಾಂತ, ಪ್ರಣಾಳಿಕೆ. ಆತನಿಗೆ ಪಕ್ಷದಲ್ಲಿ ಪ್ರಭಾವಿಗಳಾರು ಎಂಬುದು ಇಂದಿಗೂ ತಿಳಿದಿಲ್ಲ. ಎಷ್ಟೋ ಪ್ರಭಾವಿ ನಾಯಕರು ಆತನ ಮನೆಗೆ, ಗ್ರಾಮಕ್ಕೆ ಬಂದುಹೋದರೂ ಅವರನ್ನು ಆತ ಗುರುತ್ತಿಸಿಲ್ಲ. ಭಾರತ ಬದಲಾಗಿದೆ, ಏನೋ ಹೊಸತನ ಹರಿಯುತ್ತಿದೆ, ಆದರೆ ತನ್ನ ಬಂಗಾಳ ನಿಂತ ನೀರಾಗಿದೆ ಎಂಬುದನ್ನು ಮಾತ್ರ ಆತ ಬಲ್ಲ. ಆತನಿಗೆ ಜವಾಬ್ದಾರಿಯ ಹಂಗಿಲ್ಲ. ತನ್ನಂಥವನಿಗೇ ಬಿಜೆಪಿಯಲ್ಲಿ ದೇವದುರ್ಲಭರೆಂದು ಕರೆಯುತ್ತಾರೆಂಬುದು ಕೂಡ ಆತನಿಗೆ ತಿಳಿದಿಲ್ಲ.

ಇಂಥ ಕಾರ್ಯಕರ್ತರ ಪಡೆ ಪ.ಬಂಗಾಳದಲ್ಲಿ ಹಿಂದೆಂದಿಗಿಂತಲೂ ಇಂದು ಹೆಚ್ಚು ಕಾಣುತ್ತಿದೆ. ಯಾವಾಗಲೂ ಬಂಗಾಳದ ಚುನಾವಣೆಗಳನ್ನು ದೇಶ ವಿಶೇಷವಾಗಿ ಗಮನಿಸುತ್ತದೆ. ಎಷ್ಟು ಮತಕೇಂದ್ರಗಳ ಮೇಲೆ ದಾಳಿಯಾಯಿತು ಎಂಬುದಕ್ಕಾದರೂ ದೇಶ ಅಲ್ಲಿನ ಚುನಾವಣೆಗಳ ಮೇಲೆ ಕುತೂಹಲವಿಟ್ಟುಕೊಳ್ಳುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಬಿಜೆಪಿ ಕಾರ್ಯಕರ್ತನ ಕಾರಣಕ್ಕೆ ಪ.ಬಂಗಾಳದ ಚುನಾವಣೆ ದೇಶದ ಗಮನ ಸೆಳೆಯುತ್ತಿದೆ. 2016ರ ವಿಧಾನಸಭಾ ಚುನಾವಣೆಯಲ್ಲೇ ಬಂಗಾಳದ ಬಿಜೆಪಿ ಕಾರ್ಯಕರ್ತ ಬಿರುಸುಗೊಂಡ. ಸಿಕ್ಕಿದ್ದು ಮೂರೇ ಸೀಟುಗಳಾದರೂ ಪಡೆದ ಮತಗಳ ಪ್ರಮಾಣದಲ್ಲಿ ಏರಿಕೆಯಾಯಿತು. 2018ರಲ್ಲಿ ಪಕ್ಷಗಳ ಚಿಹ್ನೆಗಳಡಿ ನಡೆಯುವ ಪಂಚಾಯತ್ ಚುನಾವಣೆಗಳಲ್ಲಿ ಬಿಜೆಪಿ ಕಾರ್ಯಕರ್ತ ತೃಣಮೂಲ ಕಾಂಗ್ರೆಸಿಗರ ದೌರ್ಜನ್ಯಗಳನ್ನು ಮೆಟ್ಟಿ ನಿಲ್ಲಲಾರಂಭಿಸಿದ. ಆ ಹೊತ್ತಲ್ಲಿ ಆತನ ರಕ್ಷಣೆಗಿದ್ದವರು ರಾಜ್ಯದಲ್ಲಿ ಮೂವರು ಶಾಸಕರು ಎಂಬುದು ಗಮನಾರ್ಹ! 2021ರಲ್ಲಿ 77 ಸೀಟುಗಳನ್ನು ಪಡೆದಿದ್ದರ ಜೊತೆಗೆ ಶೇ. 38ರಷ್ಟು ಮತಗಳು ಬಿಜೆಪಿಗೆ ಸಿಕ್ಕವು. 2024ರ ಲೋಕಸಭಾ ಚುನಾವಣೆಗಳಲ್ಲಿ 94 ಸೀಟುಗಳನ್ನು ಪಡೆಯಿತು. ಪ್ರತೀ ಚುನಾವಣೆಗಳಲ್ಲೂ ಬಿಜೆಪಿ ಕಾರ್ಯಕರ್ತ ಕೊಲೆಯಾದ. ಎಷ್ಟೋ ಗ್ರಾಮಗಳಲ್ಲಿ ಕಾರ್ಯಕರ್ತರನ್ನು ಮತದಾನ ಕೇಂದ್ರಕ್ಕೆ ಹೋಗಲೇ ಬಿಡಲಿಲ್ಲ. ಚುನಾವಣಾ ಪ್ರಚಾರ, ಚುನಾವಣಾ ದಿನ, ಫಲಿತಾಂಶ ದಿನ, ಫಲಿತಾಂಶದ ನಂತರ ಆತನ ಮೇಲೆ ಹಲ್ಲೆಗಳಾದವು. ಕೊಲೆಗಳು ನಡೆದವು. ಆತನ ಗದ್ದೆಗೆ ಬೆಂಕಿ ಇಡಲಾಯಿತು. ಎತ್ತುಗಳನ್ನು ಹತ್ಯೆ ಮಾಡಲಾಯಿತು. ಇವೆಲ್ಲವನ್ನೂ ಮಾಧ್ಯಮಗಳು ಸಣ್ಣ ಸುದ್ದಿಗಳಾಗಿ ಪ್ರಕಟಿಸಿ ಕೈತೊಳೆದುಕೊಳ್ಳುತ್ತವೆ. ಆದರೆ ಎಲ್ಲವೂ ಪೊಲೀಸ್ ಮತ್ತು ತೃಣಮೂಲ ಕಾಂಗ್ರೆಸಿನ ಗುಂಡಾಗಳಿಂದಲೇ ನಡೆಯುತ್ತವೆ ಎಂಬುದು ಹೊರಜಗತ್ತಿಗೆ ತಿಳಿಯುವುದಿಲ್ಲ. ಏಕೆಂದರೆ ಬಹುತೇಕ ಪ್ರಕರಣಗಳು ದಾಖಲಾಗುವುದಿಲ್ಲ. ಮನೆಯಲ್ಲೊಬ್ಬ ಬಿಜೆಪಿ ಕಾರ್ಯಕರ್ತನಿದ್ದರೆ ಆ ಮನೆಯ ಹೆಣ್ಣುಮಕ್ಕಳ ಮೇಲೆ ಕೂಡ ದೌರ್ಜನ್ಯ ಎಸಗಲಾಗುತ್ತದೆ. ಇಂಥ ಪ್ರಕರಣಗಳು ಪ.ಬಂಗಳದ ಪ್ರತೀ ವಿಧಾನಸಭಾ ಕ್ಷೇತ್ರಗಳಲ್ಲಿ ಕನಿಷ್ಟ ಹತ್ತಾದರೂ ಇರುತ್ತವೆ ಎಂದರೆ ಪರಿಸ್ಥಿತಿ ಅದೆಷ್ಟು ಭಯಾನಕವಾಗಿರಬಹುದು? ಪೂರ್ವ ಭಾಗದ ದಿನಾಟಾ ವಿಧಾನಸಭಾ ಕ್ಷೇತ್ರದಲ್ಲಿ ಶೇ. 60ರಷ್ಟು ಜನರು ಇಂದಿಗೂ ರಾತ್ರಿ ಮನೆಯಲ್ಲಿ ಮಲಗುತ್ತಿಲ್ಲ ಎಂದರೆ ಅಲ್ಲಿ ಪ್ರಜಾಪ್ರಭುತ್ವ ಇದೆ ಎನ್ನುವ ಸಂಶಯ ಬರುತ್ತದೆ. ಇಷ್ಟೆಲ್ಲಾ ಇದ್ದರೂ ಪ.ಬಂಗಾಳದಲ್ಲಿ ಕಾರ್ಯಕರ್ತ ಸಭೆ ನಡೆಸುತ್ತಾನೆ. ಮೆರವಣಿಗೆ ಹೊರಡುತ್ತಾನೆ, ಅಭ್ಯರ್ಥಿಗಳನ್ನು ಬೆಂಬಲಿಸುತ್ತಾನೆ. ಕೊಲ್ಕೊತ್ತಾ ರ‍್ಯಾಲಿಗೆ ಹೋಗುತ್ತಾನೆ. ಗೂಂಡಾಗಳಿಂದ ಸತ್ತವನ ಹೆಂಡತಿ ಪ್ರಚಾರದಲ್ಲಿ ತೊಡಗಿಸಿಕೊಳ್ಳುತ್ತಾಳೆ!

ಕಾರ್ಯಕರ್ತತನಕ್ಕೆ ಅನೇಕ ಭಾಷ್ಯಗಳಿರಬಹುದು. ಆದರೆ ಸ್ವರೂಪ ಒಂದೆ. ಮಮತಾ ಬ್ಯಾನರ್ಜಿ ಸರ್ಕಾರದ ಭ್ರಷ್ಟಾಚಾರ ಮತ್ತು ಮೇರೆಮೀರಿದ ಮುಸ್ಲಿಂ ತುಷ್ಟೀಕರಣದ ಬಿಸಿ ಹಿಂದುಗಳ ಬುಡಕ್ಕೆ ತಾಕುತ್ತಿದೆ. ಬಾಂಗ್ಲಾ ಮಿಯಾಗಳ ಅಟ್ಟಹಾಸ ಕೊನೆಯಾಗಲೇಬೇಕೆಂದು ಆತ ಬಯಸಿದ್ದಾನೆ. ಅದಕ್ಕೆ ಪರಿಹಾರ ಬಿಜೆಪಿಯಲ್ಲಿ ಮಾತ್ರ ಇದೆ ಎಂದು ಆತನಿಗನಿಸಿದೆ. ಜೊತೆಗೆ ಕಾಂಗ್ರೆಸ್-ಕಮ್ಯುನಿಸ್ಟ್-ತೃಣಮೂಲಗಳಿಂದ ನಂಬಿ ಕೆಟ್ಟೆವು ಎಂಬುದು ಆತನಿಗೆ ಅರ್ಥವಾಗಿದೆ. ಎಲ್ಲಾ ವ್ಯವಸ್ಥೆಗಳೂ ಬಾಂಗ್ಲಾ ಮಿಯಾಗಳ ಕೈಯಲ್ಲಿದ್ದರೆ ಏನಾಗುತ್ತದೆ ಎಂಬುದನ್ನು ಬಂಗಾಳ ಅರಿತ ಪರಿಣಾಮ ಈ ಚುನಾವಣೆ ಹಿಂದಿಗಿಂತ ಮಹತ್ವದ್ದು. ಇಡೀ ದೇಶ ಧುರಂಧರ್ ಸಿನೆಮಾದ "ಗುಸ್ ಕೆ ಮಾರೇಂಗೇ" ಡೈಲಾಗಿಗೆ ಮನಸೋಲುತ್ತಿದ್ದರೆ ಅತ್ತ ಬಂಗಾಳ ಹಳ್ಳಿಗಳಿಗೆ ನುಗ್ಗಿ, ಗಲಭೆಯೆಬ್ಬಿಸಿ ಬಾಂಗ್ಲಾ ಸೇರಿಕೊಳ್ಳುವ ವಾಸ್ತವವನ್ನು ಅನುಭವಿಸುತ್ತಿದೆ.

ಬಂಗಾಳದಲ್ಲಿ ಹೀಗೆಲ್ಲಾ ಇರುವುದರಿಂದ ಬಂಗಾಳ ಬಿಜೆಪಿಯಲ್ಲಿನ್ನೂ ಕಾರ್ಯಕರ್ತತನವಿದೆ. ಆದ್ದರಿಂದ ಶಕ್ತಿಯಿದೆ. ಬಹುಶಃ ಕಾರ್ಯಕರ್ತತನಕ್ಕೆ ಎಲ್ಲಾ ಮಾನದಂಡಗಳಿಗಿಂತ ಸವಾಲುಗಳಿರುವುದೇ ಮುಖ್ಯವೇನೋ! ವಾಸ್ತವವಾಗಿ ಸವಾಲುಗಳು ಬಂಗಾಳದ ಹೊರಗೂ ಇದೆ. ಆದರೆ ರಾಜಕಾರಣದಲ್ಲಿ ಮೌಲ್ಯಗಳನ್ನು ತಿಳಿಯದಿದ್ದರೆ ಸವಾಲುಗಳೂ ಗೋಚರಿಸುವುದಿಲ್ಲ. ಹಾಗೆ ಸವಾಲುಗಳು ಗೋಚರವಾಗದಿದ್ದರೆ ಬಕೆಟುಗಳೇ ಕಾರ್ಯಕರ್ತತನದಂತೆ ಕಾಣಬಹುದು. ಕಾರ್ಯಕರ್ತನೂ ಬಕೆಟಿಗೆ ದಾಸನಾಗಬಹುದು. ಹಾಗಾಗಿ ಸಿಟುಗಳ ಪಟ್ಟಿಗಿಂತಲೂ ಬಂಗಾಳದ ಚುನಾವಣೆ ಮಹತ್ವದ್ದಾಗುತ್ತದೆ. ಉಳಿದ ರಾಜ್ಯಗಳಿಗೆ ಪಾಠವಾಗುತ್ತದೆ.

ಇರಾನ್: ಅಮೆರಿಕದ ಭೂ ದಾಳಿಗೆ ಎದುರಾಗುವ ಸವಾಲುಗಳು

▸ ಅಶ್ವಿನ್ ಬಿಲ್ವಪತ್ರ

ಅಮೆರಿಕವು 2002ರಲ್ಲಿ 250 ಮಿಲಿಯ ಡಾಲರ್ ವ್ಯಯಿಸಿ ಮಹತ್ವಾಕಾಂಕ್ಷಿ 'ವಾರ್‌ಗೇಮ್' ಒಂದನ್ನು ಪ್ರಾಯೋಜಿಸಿತು. ಅಮೆರಿಕದ ಮಾಜಿ ಮರೀನ್ ಲೆಫ್ಟಿನೆಂಟ್ ಜನರಲ್ ಪಾಲ್ ವಾನ್ ರೈಪರ್ ಎಂಬಾತನಿಗೆ ಒಂದು ಗುರಿ ನೀಡಲಾಯಿತು-ಪರ್ಷಿಯನ್ ಗಲ್ಫ್‌ನಲ್ಲಿ ಕಾಲ್ಪನಿಕ ದೇಶವೊಂದು ಅಮೆರಿಕದ ಸೇನೆಯನ್ನು ಯುದ್ಧದಲ್ಲಿ ಸೋಲಿಸಲು ಪ್ರಯತ್ನಿಸಬೇಕು.

ಫಲಿತಾಂಶವೇನು ಗೊತ್ತೆ ? ಆತ ಗೆದ್ದ!

ಸಂದೇಶ ರವಾನೆ ವೈರಿ ರಾಷ್ಟ್ರಕ್ಕೆ ತಿಳಿಯಬಾರದೆಂದು ಆತ ರೇಡಿಯೋ ಬದಲಾಗಿ ಮೋಟಾರ್ ಸೈಕಲ್‌ಗಳನ್ನು ಬಳಸಿದ್ದ. ಮಸೀದಿಯಿಂದ ಪ್ರಾರ್ಥನೆಗೆ ನೀಡುವ ಕರೆಯ ಮೂಲಕ ಆತ ತನ್ನ ಸೈನ್ಯಕ್ಕೆ ಗುಪ್ತ ಸಂಕೇತಗಳನ್ನು ರವಾನಿಸಿದ್ದ. ಯುದ್ಧದ ಸಮಯ ಬಂದಾಗ ಆತ 100 ಸಣ್ಣ ಸ್ಪೀಡ್‌ಬೋಟ್‌ಗಳನ್ನು ಕಳಿಸಿ ಹತ್ತು ನಿಮಿಷಗಳೊಳಗೆ 16 ಅಮೆರಿಕನ್ ಯುದ್ಧ ನೌಕೆಗಳನ್ನು ಮುಳುಗಿಸಿದ್ದ. ಆತನ ದಾಳಿಯಲ್ಲಿ ಸತ್ತ ಅಮೆರಿಕನ್ ಸೈನಿಕರ ಸಂಖ್ಯೆ ಅಂದಾಜು 20,000.

ಬಳಿಕ ಅಮೆರಿಕದ ಮಿಲಿಟರಿ ಈ ಗೇಮ್‌ನ ಸಿಮುಲೇಶನ್ ಬದಲಿಸಿತು. ಮುಳುಗಿದ ಹಡಗುಗಳನ್ನು ಮತ್ತೆ ತೇಲಿಸಿತು. ಇಂತಹ ತಂತ್ರವನ್ನು ಬಳಸುವಂತಿಲ್ಲ ಎಂದು ಆತನಿಗೆ ಹೇಳಿತು. ಆತ ಅದಕ್ಕೊಪ್ಪದೆ ಗೇಮ್‌ನಿಂದ ಹಿಂದೆ ಸರಿದ.

ಈಗ ಇರಾನ್‌ನಲ್ಲಿ ಸಮರ ಸ್ಫೋಟಿಸಿರುವಾಗ ಈ 'ವಾರ್ ಗೇಮ್' ಹೇಗೆ ಪ್ರಾಸಂಗಿಕವಾಗಬಲ್ಲುದು ಎಂದು ಚಿಂತಿಸುತ್ತಿದ್ದೇನೆ.

ಈಗೇನು ನಡೆಯುತ್ತಿದೆ...

ಮಾರ್ಚ್ ಅಂತ್ಯದ ವೇಳೆಗೆ ಅಮೆರಿಕವು 50,000 ಸೈನಿಕರನ್ನು ಮತ್ತು 200 ಯುದ್ಧ ವಿಮಾನಗಳನ್ನು ಇರಾನ್ ಸಮೀಪ ನಿಯೋಜಿಸಿದೆ. ಮೂರು ವಿಮಾನ ವಾಹಕ ನೌಕೆಗಳು ಇರಾನ್ ನತ್ತ ತೆರಳಿವೆ. ಅಬ್ರಹಾಂ ಲಿಂಕನ್ ಸಮರ ನೌಕೆ ಜನವರಿಯಿಂದ ಅರೇಬಿಯನ್ ಸಮುದ್ರದಲ್ಲಿದೆ. ಮತ್ತೊಂದು ಸಮರ ನೌಕೆ ಗ್ರೀಸ್‌ನ ಸೌದಾ ಕೊಲ್ಲಿಯಲ್ಲಿದೆ. ಇನ್ನೂ ಒಂದು ನೌಕೆ ಕೊಲ್ಲಿಯತ್ತ ಸಾಗುತ್ತಿದೆ. ಅಂದರೆ ಮೂರು ಸಮರ ನೌಕೆಗಳು ಏಕಕಾಲದಲ್ಲಿ ಕೊಲ್ಲಿ ಪ್ರದೇಶದಲ್ಲಿದ್ದು, ಅಮೆರಿಕ ಈ ರೀತಿ 3 ಸಮರ ನೌಕೆ ನಿಯೋಜಿಸಿರುವುದು ಕಳೆದ 20 ವರ್ಷಗಳಲ್ಲಿ ಇದೇ ಮೊದಲು.

ಇದರೊಂದಿಗೆ, ಮರೀನ್ ಫೋರ್ಸ್ ಸೈನಿಕರನ್ನು ಹೊತ್ತ ಎರಡು ನೌಕೆಗಳು ಕೊಲ್ಲಿಯಲ್ಲಿ ಬೀಡುಬಿಟ್ಟಿವೆ. 4,000 ಸೈನಿಕರನ್ನು ಹೊತ್ತ ಯುಎಸ್‌ಎಸ್ ಬಾಕ್ಸರ್ ನೌಕೆಯು ಮೂರು ವಾರಗಳ ಹಿಂದೆಯೆ ಕ್ಯಾಲಿಫೋರ್ನಿಯಾದಿಂದ ತೆರಳಿದೆ. ಮತ್ತೊಂದು ನೌಕೆಯಲ್ಲಿ 3500 ಸೈನಿಕರು ಕೊಲ್ಲಿಯತ್ತ ತೆರಳಿದ್ದಾರೆ. ಕ್ಷಿಪ್ರ ಕಾರ್ಯಾಚರಣೆ ನಡೆಸುವ ಸಾಮರ್ಥ್ಯವುಳ್ಳ ವಿಶೇಷ ಪಡೆ ಕೂಡಾ ಸಮರಕ್ಕೆ ಸಜ್ಜಾಗಿ ನಿಂತಿದೆ.

ಆರು ಬಿ-2 ಬಾಂಬರ್‌ಗಳು ಹಿಂದೂ ಮಹಾಸಾಗರದ ಡಿಯಾಗೋ ಗಾರ್ಸಿಯಾ ದ್ವೀಪದಲ್ಲಿವೆ. ಈ ವಿಮಾನಗಳು ರಾಡಾರ್ ಕಣ್ಣಿಗೆ ಸಿಲುಕದೆ ಸಂಚರಿಸಬಲ್ಲವು. 60 ಮೀಟರ್ ನೆಲದೊಳಕ್ಕೆ ತೂರಿ ಸ್ಫೋಟಿಸಬಲ್ಲ ಬಾಂಬುಗಳನ್ನು ಇವು ಹೊಂದಿವೆ. ಯುದ್ಧ ನೌಕೆಗಳು ಮತ್ತು ಸೈನಿಕರನ್ನು ಯಾವುದೇ ಕಾರಣವಿಲ್ಲದೆ ಈ ರೀತಿ ನಿಯೋಜಿಸುವುದಿಲ್ಲ.

ಅಮೆರಿಕವು ಇರಾನ್ ಸಂಗ್ರಹಿಸಿಟ್ಟಿರುವ ಪರಮಾಣು ಸಾಧನಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಲಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರುಬಿಯೋ ಹೇಳಿದ್ದಾರೆ. ಅವರು ಸಂಧಾನ ಅಥವಾ ನಿರ್ಬಂಧದ ಬಗ್ಗೆ ಮಾತನ್ನಾಡುತ್ತಿಲ್ಲ. ಸೈನ್ಯವನ್ನೇ ಕಳಿಸಿ ಯುರೇನಿಯಂ ವಶಪಡಿಸಿಕೊಳ್ಳುವ ಸಂಕೇತ ನೀಡುತ್ತಿದ್ದಾರೆ. ಇತ್ತ ಇರಾನಿನ ಪ್ರಮುಖ ಪತ್ರಿಕೆ ಕೂಡಾ ''ನರಕಕ್ಕೆ ಸ್ವಾಗತ'' ಎಂಬ ತಲೆಬರಹ ಪ್ರಕಟಿಸಿ ಅಮೆರಿಕದ ಭೂದಾಳಿಯನ್ನು ತಾನು ನಿರೀಕ್ಷಿಸುತ್ತಿರುವ ಸಂಕೇತ ನೀಡಿದೆ.

ಇರಾನ್‌ನ ವಿದೇಶಾಂಗ ಸಚಿವರು ''ಅಮೆರಿಕವು ಕಳೆದ ಎರಡು ದಶಕಗಳಲ್ಲಿ ಅನುಭವಿಸಿದ ಸೋಲಿನ ಬಗ್ಗೆ ನಾವು ಸಾಕಷ್ಟು ಅಧ್ಯಯನ ನಡೆಸಿದ್ದೇವೆ. ನಮ್ಮ ಸೇನೆಯನ್ನು ಅದಕ್ಕೆ ತಕ್ಕಂತೆ ಸಿದ್ಧಗೊಳಿಸಿದ್ದೇವೆ'' ಎಂದು ಹೇಳಿದ್ದಾರೆ.

ನಿರ್ದಿಷ್ಟ ಗುರಿ ಸಾಧನೆಯ ಉದ್ದೇಶ

ಅಮೆರಿಕವು ಈಗ ಇರಾನಿನ ಸುತ್ತ ನಿಯೋಜಿಸಿರುವ ಪಡೆಗಳು ಇರಾನನ್ನು ವಶಪಡಿಸಿಕೊಂಡು ಅಲ್ಲೇ ತಳವೂರಲು ಇರುವಂತಹುದಲ್ಲ. ಈ ಪಡೆಗಳು ಕ್ಷಿಪ್ರ ಕಾರ್ಯಾಚರಣೆ ನಡೆಸಿ ತಮ್ಮ ಗುರಿಗಳನ್ನು ಸಾಧಿಸಿ ತಕ್ಷಣ ಅಲ್ಲಿಂದ ವಾಪಸ್ ಬರುವ ಸಾಮರ್ಥ್ಯ ಹೊಂದಿರುವಂತಹವು.

ಅದರಂತೆ, ಅಮೆರಿಕದ ದಾಳಿಯ ಮೊದಲ ಗುರಿ ಖರ್ಗ್ ದ್ವೀಪ ಆಗಿರುವ ಸಾಧ್ಯತೆಗಳಿವೆ. ಇರಾನ್ ಕರಾವಳಿಯಿಂದ



15 ಮೈಲು ದೂರ ಇರುವ ಈ ದ್ವೀಪವು ಇರಾನಿನ ತೈಲ ರಫ್ತಿನ ಶೇ. 90ರಷ್ಟು ಸಂಗ್ರಹ ಹೊಂದಿದೆ. ಅಮೆರಿಕದ ಮರೀನ್ ಪಡೆ ಒಂದು ಗಂಟೆಯೊಗೆ ಈ ದ್ವೀಪವನ್ನು ತಲುಪಬಲ್ಲುದು.

ಅಮೆರಿಕದ ಎರಡನೇ ಗುರಿ ಖೇಶಂ ದ್ವೀಪವಾಗಿರುವ ಸಾಧ್ಯತೆಯಿದೆ. ಹೊರ್ಮುಜ್ ಜಲಸಂಧಿಯಲ್ಲಿರುವ ಈ ದ್ವೀಪದಲ್ಲಿ ಇರಾನ್ ಹಡಗುನಿರೋಧಕ ಕ್ಷಿಪಣಿಗಳನ್ನು ಭೂಗತ ಸುರಂಗಗಳಲ್ಲಿ ತುಂಬಿಸಿಟ್ಟಿದೆ. ಇವುಗಳನ್ನು ವಶಪಡಿಸಿಕೊಂಡರೆ ಹೊರ್ಮುಜ್ ಜಲಸಂಧಿ ಮುಚ್ಚುವ ಇರಾನ್‌ನ ಸಾಮರ್ಥ್ಯ ಕುಸಿದಂತಾಗುತ್ತದೆ.

''ಇಂತಹ ಕಾರ್ಯಾಚರಣೆಯನ್ನು ಸಮರ್ಥವಾಗಿ ಸಾಧಿಸಬಹುದಾಗಿದೆ. ಎಷ್ಟು ಕಾಲ ಹಿಡಿಯಬಹುದು ಎಂಬುದಷ್ಟೇ ಪ್ರಶ್ನೆ'' ಎಂದು ಅಮೆರಿಕದ ಮಾಜಿ ವೈಸ್ ಅಡ್ಮಿರಲ್ ಕೆವಿನ್ ಡೊನೆಗನ್ ಹೇಳುತ್ತಾರೆ.

ಪೂರ್ಣ ಪ್ರಮಾಣದ ಭೂದಾಳಿಯಾದರೆ...

ಪೂರ್ಣ ಪ್ರಮಾಣದ ಭೂದಾಳಿ ನಡೆಸಲು ಪರಿಸ್ಥಿತಿ ಸಂಕೀರ್ಣವಾಗಿದೆ. ಇರಾನ್‌ಗೆ ದಾಳಿ ನಡೆಸುವುದಾದರೆ ಆರಂಭಿಕ ಹಂತದಲ್ಲೇ ಕನಿಷ್ಠ 5 ಲಕ್ಷ ಸೈನಿಕರು ಬೇಕು. ಪ್ರಸ್ತುತ ಅಮೆರಿಕದಲ್ಲಿ ಇರುವುದು 4,85,000 ಸೈನಿಕರು.

ಈ ಹಿಂದೆ ಇರಾಕ್‌ಗೆ ನುಗ್ಗಲು ಅಮೆರಿಕಕ್ಕೆ ಮೂರು ವಾರ ಬೇಕಾಗಿತ್ತು. ಇರಾನ್ ಇರಾಕ್‌ಗಿಂತ ನಾಲ್ಕು ಪಟ್ಟು ದೊಡ್ಡ ರಾಷ್ಟ್ರ. ಜತೆಗೆ ಇರಾಕಿನಂತೆ ಸಮತಟ್ಟು ಪ್ರದೇಶವಾಗಿರದೆ ಗುಡ್ಡಗಾಡುಗಳಿಂದ ತುಂಬಿರುವ ಪ್ರದೇಶ. ಪಶ್ಚಿಮದಲ್ಲಿ ಜಾಗ್ರೋಸ್ ಪರ್ವತಶ್ರೇಣಿ 1,600 ಕಿ.ಮೀ. ವ್ಯಾಪಿಸಿದೆ. ಇರಾಕಿನ

ಅಮೆರಿಕವು ಇರಾನಿನ ಮೇಲೆ ಭೂದಾಳಿ ನಡೆಸಿದರೆ ಸುಲಭ ಜಯ ನಿರೀಕ್ಷಿಸುವಂತಿಲ್ಲ...

ಕಡೆಯಿಂದ ನುಗ್ಗಬೇಕಾದರೆ ಇದೇ ದಾರಿ ಬಳಸಬೇಕಾಗುತ್ತದೆ. ಕಡಿದಾದ ದಾರಿ, ಮೈಕೊರೆಯು ಚಳಿ ಮುಂತಾದ ಪ್ರತಿಕೂಲ ಸನ್ನಿವೇಶಗಳನ್ನು ಸೈನ್ಯವು ಎದುರಿಸಬೇಕಾಗುತ್ತದೆ. 2003ರಲ್ಲಿ ಅಮೆರಿಕನ್ ಪಡೆಗಳು ಸಮತಟ್ಟಾದ ಇರಾಕ್‌ನಲ್ಲೇ ಬಾಗ್ದಾದ್ ತಲುಪಲು ಮೂರು ವಾರ ತೆಗೆದುಕೊಂಡಿದ್ದವು. ಆದರೆ ಇರಾನ್‌ನಲ್ಲಿ ಈ ರೀತಿ ನುಗ್ಗಲು ಎಂಟು ಪಟ್ಟು ಹೆಚ್ಚು ಕಾಲಾವಧಿ ಬೇಕಾದೀತು ಎಂದು ಹೇಳಲಾಗಿದೆ. ಅಮೆರಿಕವು ಇರಾನ್ ಮೇಲೆ ದಾಳಿ ಮಾಡುವುದಾದರೆ ಮೂರು ದಿಕ್ಕಿನಿಂದ ಮಾಡಬೇಕಾಗುತ್ತದೆ. ದಕ್ಷಿಣದಲ್ಲಿ ಸಮುದ್ರ ಮುಖೇನ ಪ್ರವೇಶಿಸಿದರೆ, ಪಶ್ಚಿಮದಲ್ಲಿ ಇರಾಕ್ ಗಡಿಯ ಮೂಲಕ ಒಳನುಗ್ಗಬೇಕು. ಮೂರನೆಯದಾಗಿ ವಾಯುಪ್ರದೇಶದ ಮೂಲಕ ಇರಾನ್‌ನೊಳಗೆ ಸೈನಿಕರನ್ನಿಳಿಸಬೇಕು. ಆದರೆ ಕಳೆದ 20 ವರ್ಷಗಳಿಂದ ಇರಾನ್ ಸೈನ್ಯವು ಇಂತಹ ಸಂಭವನೀಯ ದಾಳಿಯನ್ನು ಎದುರಿಸಲೆಂದೇ ಸಜ್ಜಾಗಿ ನಿಂತಿರುವುದನ್ನು ಮರೆಯುವಂತಿಲ್ಲ. ಇಂತಹ ದಾಳಿ ನಡೆದಲ್ಲಿ ಅಮೆರಿಕದ ಕಡೆಯಿಂದ ಸಾವಿರಾರು ಸೈನಿಕರು ಸಾಯಬಹುದೆಂದು ಅಂದಾಜಿಸಲಾಗಿದೆ. ಇರಾನ್ ಸೈನಿಕರ ಮತ್ತು ನಾಗರಿಕರ ಸಾವು ಅದಕ್ಕಿಂತಲೂ ದೊಡ್ಡ ಪ್ರಮಾಣದಲ್ಲಿ ಆಗಬಹುದು. ಇರಾನ್-ಇರಾಕ್ ಸಮರದ ವೇಳೆ ಇರಾಕ್ ಗಡಿ ಪ್ರದೇಶದಲ್ಲಷ್ಟೇ ನಡೆಸಿದ ದಾಳಿಯಲ್ಲಿ ಎಂಟು ವರ್ಷಗಳ ಅವಧಿಯಲ್ಲಿ 10 ಲಕ್ಷ ಜನರು ಸಾವಿಗೀಡಾಗಿದ್ದರು. ಹಾಗಿದ್ದೂ ಇರಾಕ್‌ಗೆ ಇರಾನ್‌ನ ಗಡಿ ಭೇದಿಸಿ ಮುನ್ನುಗ್ಗಲು ಆಗಿರಲಿಲ್ಲ.

ಇರಾನಿನ ಸಿದ್ಧತೆ

ಸದ್ದಾಂ ಹುಸೇನ್ ಆಡಳಿತವು ಪತನಗೊಂಡ ಬಳಿಕ ಇರಾನ್ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾ ಬಂದಿದೆ. ಸಾಮಾನ್ಯವಾಗಿ ದೇಶದ ಉನ್ನತ ಮುಖಂಡನನ್ನು ಕೊಂದರೆ ಅಲ್ಲಿಗೆ ಯುದ್ಧ ಮುಗಿದಂತೆ. ಅಂತಹ ಸಂಭವನೀಯ ಪರಿಸ್ಥಿತಿ ಏರ್ಪಡದಂತೆ ಇರಾನ್ ಮಿಲಿಟರಿ ಪರ್ಯಾಯ ವ್ಯವಸ್ಥೆ ಮಾಡಿದೆ. ಇದನ್ನು ಇರಾನ್ ಮೊಸಾಯಿಕ್ ರಕ್ಷಣಾ ವ್ಯವಸ್ಥೆ ಎಂದು ಬಣ್ಣಿಸುತ್ತಿದೆ. ಇರಾನ್‌ನ ಮಿಲಿಟರಿಯು 32 ಸ್ವತಂತ್ರ ಪ್ರಾದೇಶಿಕ ಘಟಕಗಳಾಗಿ ವಿಭಜಿಸಲ್ಪಟ್ಟಿದ್ದು, ಪ್ರತಿಯೊಂದು ಘಟಕವೂ ತನ್ನದೇ ಆದ ಶಸ್ತ್ರಾಸ್ತ್ರಗಳನ್ನು, ಗುಪ್ತಚರ ಕೇಂದ್ರಗಳನ್ನು ಮತ್ತು ಉನ್ನತ ಮಟ್ಟದಿಂದ ಆದೇಶ ಪಡೆಯದೇ ಹೋರಾಟ ಮುಂದುವರಿಸುವ ಅಧಿಕಾರವನ್ನು ಹೊಂದಿದೆ. ಇರಾನ್‌ನಲ್ಲಿ ಪರಮೋಚ್ಚ ನಾಯಕ ಖಮೇನಿ ಹತ್ಯೆಯಾದ ಹತ್ತು ದಿನದೊಳಗೆ ಅವರ ಪುತ್ರನನ್ನು ಅಧಿಕಾರಕ್ಕೇರಿಸಲಾಯಿತು ಹಾಗೂ ಮಿಲಿಟರಿಯು ಯಾವುದೇ ಅಡೆತಡೆಯಿಲ್ಲದೆ ತನ್ನ ಹೋರಾಟವನ್ನು ಮುಂದುವರಿಸಿಕೊಂಡು ಬಂದಿರುವುದು ಈ ವ್ಯವಸ್ಥೆಗೆ ನಿದರ್ಶನ.

ಕೊಲ್ಲಿಯು ಮುಕ್ತ ಜಲ ಪ್ರದೇಶವಲ್ಲ. ಅಲ್ಲಿನ ದಾರಿ ಇಕ್ಕಟ್ಟಾಗಿದೆ. ನೀರಿನ ಆಳವೂ ಕಡಿಮೆ. ಇರಾನ್ ಇದನ್ನೆಲ್ಲ ಸರಿಯಾಗಿ ಅಭ್ಯಸಿಸಿ ಅದರ ಆಧಾರದಲ್ಲೇ ತನ್ನ ರಣತಂತ್ರ ರೂಪಿಸಿದೆ. ಅಮೆರಿಕವನ್ನು ಮುಕ್ತ ಸಮುದ್ರದಲ್ಲಿ ಎದುರಿಸುವುದಕ್ಕಿಂತಲೂ ಎದುರಾಳಿ ನೌಕಾಪಡೆಯು ತನ್ನ ಪ್ರದೇಶದೊಳಗೆ ಬರುವಂತೆ ಮಾಡಿ ಅದನ್ನು ಮಣಿಸುವುದು ತಂತ್ರವಾಗಿದೆ. ಇಂತಹ ಸಣ್ಣ ಜಲ ಪ್ರದೇಶದಲ್ಲಿ ನಡೆಯುವ ಯುದ್ಧವು ಯಾವುದೇ ಅನಿರೀಕ್ಷಿತ ಫಲಿತಾಂಶ ನೀಡಬಹುದು.

ಯುದ್ಧ ಹೇಗೆ ಆರಂಭಗೊಳಿಸುವುದು ಎಂಬುದನ್ನು ಮಿಲಿಟರಿ ಶಕ್ತಿ ನಿರ್ಧರಿಸುತ್ತದೆ. ಯುದ್ಧ ಯಾವಾಗ, ಹೇಗೆ ಮುಗಿಸುವುದನ್ನು ಎಂಬುದನ್ನು ರಾಜಕೀಯ ಶಕ್ತಿ ನಿರ್ಧರಿಸುತ್ತದೆ. ಅಮೆರಿಕವಂತೂ, ಚುನಾವಣೆ, ಜನರ ಅಭಿಪ್ರಾಯ, ಮಿತ್ರ ರಾಷ್ಟ್ರಗಳ ಒತ್ತಡ ಮುಂತಾದವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡೇ ಹೋರಾಡಬೇಕಾಗಿದೆ. ಇರಾನ್‌ಗಾದರೆ ಅಂತಹ ಒತ್ತಡವಿಲ್ಲ.

ಈ ಲೆಕ್ಕಾಚಾರವು ಯುದ್ಧಾರಂಭಕ್ಕಿಂತಲೂ ನಂತರದ ಪರಿಸ್ಥಿತಿಯಲ್ಲಿ ಹೆಚ್ಚು ಗಣನೆಗೆ ಬರುತ್ತದೆ. ಯುದ್ಧ ದೀರ್ಘಾವಧಿ ಮುಂದುವರಿದಷ್ಟೂ ಶಕ್ತಿಗಿಂತಲೂ ಯುದ್ಧದ ವೆಚ್ಚ ನಿಭಾಯಿಸುವುದು ಪ್ರಮುಖವಾಗುತ್ತದೆ. ಇರಾನ್ ಇದರ ಸುತ್ತಲೇ ತನ್ನ ರಣತಂತ್ರ ರೂಪಿಸುತ್ತಿದೆ. ತಕ್ಷಣವೇ ಯುದ್ಧ ಗೆಲ್ಲುವುದು ಅದರ ಉದ್ದೇಶವಲ್ಲ. ಯುದ್ಧವನ್ನು ದೀರ್ಘಾವಧಿ ಎಳೆದು ಎದುರಾಳಿ ಬಸವಳಿಯುವಂತೆ ಮಾಡುವುದು ಅದರ ತಂತ್ರ. ಹಾಗಾಗಿ ಅಮೆರಿಕವು ಇರಾನಿನ ವಿರುದ್ಧ ಭೂದಾಳಿ ಆರಂಭಿಸಿದರೆ ಅದರ ಪರಿಣಾಮವು ಅದು ಹಿಂದೆ ನಡೆಸಿದ ಯುದ್ಧದಂತಿರಲಾರದು.

ಕೇರಳ ಚುನಾವಣೆ: ನಿರ್ಣಾಯಕರು ಯಾರು?

▸ ದಿನೇಶ

ಕೇರಳದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಎಂದಿನಂತೆ ಎಡರಂಗ (ಎಲ್‌ಡಿಎಫ್) ಮತ್ತು ಸಂಯುಕ್ತರಂಗ (ಯುಡಿಎಫ್) ಮಧ್ಯೆ ನಿಕಟ ಸ್ಪರ್ಧೆ ಏರ್ಪಟ್ಟಿದೆ. ಇದರ ಮಧ್ಯೆಯೇ ಬಿಜೆಪಿ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

1982ರಿಂದಾರಂಭಿಸಿ ಕೇರಳದಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳು ಪರ್ಯಾಯವಾಗಿ ಸರಕಾರ ನಡೆಸಿವೆ. ಕೇರಳದ ಜನರು ಪ್ರತಿ ಐದು ವರ್ಷಗಳಿಗೊಮ್ಮೆ ಸರಕಾರ ಬದಲಿಸುತ್ತಾ ಬಂದಿದ್ದಾರೆ. ಆದರೆ ಕಳೆದ ಚುನಾವಣೆಯಲ್ಲಿ (2021) ಮಾತ್ರ ಎಡರಂಗವನ್ನೇ ಮರಳಿ ಅಧಿಕಾರಕ್ಕೇರಿಸಿದರು. ಇದೀಗ ಪಿಣರಾಯಿ ವಿಜಯನ್ ಹತ್ತು ವರ್ಷಗಳ ಆಡಳಿತ ಮುಗಿಸಿದ್ದಾರೆ. ಹಾಗಾಗಿ ಅವರ ಸರಕಾರದ ವಿರುದ್ಧ ಆಡಳಿತ ವಿರೋಧಿ ಅಲೆ ಇರುವುದು ಸುಳ್ಳಲ್ಲ. ಡಿಸೆಂಬರ್‌ನಲ್ಲಿ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಯುಡಿಎಫ್ ಮೇಲುಗೈ ಸಾಧಿಸಿದ್ದೇ ಇದಕ್ಕೆ ನಿದರ್ಶನ.

ಯಾರಿಗೆ ಬೆಂಬಲ?

ಬಹುಕಾಲದಿಂದ ಕೇರಳದಲ್ಲಿ ಎಲ್‌ಡಿಎಫ್‌ನ್ನು ಬಹುಸಂಖ್ಯಾತರ ಪಕ್ಷ ಎಂದು ಹೇಳಲಾಗುತ್ತದೆ. ಹಿಂದುಗಳ ಬೆಂಬಲ ಅದಕ್ಕೆ ಹೆಚ್ಚು. ಯುಡಿಎಫ್‌ಗೆ ಅಲ್ಪಸಂಖ್ಯಾತರ ಬೆಂಬಲ ಅಧಿಕ. ಆದರೆ ಬಿಜೆಪಿ ಈಗ ರಾಜ್ಯದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದು, ಯುಡಿಎಫ್‌ನ ತೆಕ್ಕೆಯಿಂದ ಹಿಂದು ಮತಗಳನ್ನು ಸೆಳೆಯತೊಡಗಿದೆ. ಪ್ರಸ್ತುತ ಯುಡಿಎಫ್‌ನಲ್ಲಿರುವ ಮುಸ್ಲಿಂಲೀಗ್ ಮುಸ್ಲಿಮರ ಬೆಂಬಲವನ್ನು ಪಡೆದಿದ್ದರೆ, ಯುಡಿಎಫ್‌ನ ಮತ್ತೊಂದು ಅಂಗಪಕ್ಷವಾದ ಕೇರಳ ಕಾಂಗ್ರೆಸ್ ಕ್ರೈಸ್ತರ ಬೆಂಬಲ ಪಡೆದಿದೆ. ಕೇರಳದ ಚುನಾವಣೆಯ ಸ್ವರೂಪ ಅರಿಯಬೇಕಾದರೆ ಅದನ್ನು ವಲಯವಾರು ವಿಭಾಗದಲ್ಲಿ ಪರಿಶೀಲಿಸಬೇಕಾಗುತ್ತದೆ. ಕೇರಳ ವನ್ನು ಸ್ಥೂಲವಾಗಿ ಮೂರು ಭಾಗಗಳಲ್ಲಿ ಗುರುತಿಸಲಾಗುತ್ತದೆ.

ಉತ್ತರ ಕೇರಳ (48 ಸ್ಥಾನಗಳು): ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿದ್ದು ಶೇ. 47ರಷ್ಟಿದ್ದಾರೆ.

ಮಧ್ಯ ಕೇರಳ (53 ಸ್ಥಾನಗಳು): ಕ್ರೈಸ್ತರು ಪ್ರಾಬಲ್ಯ (ಶೇ. 28) ಹೊಂದಿರುವ ಪ್ರದೇಶ.

ದಕ್ಷಿಣ ಕೇರಳ (39 ಸ್ಥಾನಗಳು): ಹಿಂದು ಪ್ರಾಬಲ್ಯದ ಪ್ರದೇಶ. ಬಿಜೆಪಿ ಬಲಿಷ್ಠವಾಗಿರುವ ಪ್ರದೇಶವೂ ಹೌದು.

ಕೇರಳದ ಮುಸ್ಲಿಂ ಜನಸಂಖ್ಯೆಯ ಶೇ. 63ರಷ್ಟು ಮಂದಿ ಉತ್ತರ ಕೇರಳದಲ್ಲಿ ವಾಸಿಸುತ್ತಾರೆ. ಶೇ. 56ರಷ್ಟು ಕ್ರೈಸ್ತರು ಮಧ್ಯ ಕೇರಳದಲ್ಲಿದ್ದಾರೆ. ಕೆಲವು ಜಿಲ್ಲೆಗಳೂ ಚುನಾವಣಾ ಫಲಿತಾಂಶ ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. 3 ಜಿಲ್ಲೆಗಳಾದ ಕಾಸರಗೋಡು, ಕೋಯಿಕ್ಕೋಡ್ ಮತ್ತು ಮಲಪ್ಪುರಂ ಶೇ. 30ರಷ್ಟು ಮುಸ್ಲಿಂ ಜನಸಂಖ್ಯೆ ಹೊಂದಿದ್ದು, 34 ಸ್ಥಾನಗಳನ್ನು ಹೊಂದಿದೆ. ಎರ್ನಾಕುಳಂ, ಇಡುಕ್ಕಿ, ಕೊಟ್ಟಾಯಂ, ಪಟ್ಟಣಂತಿಟ್ಟ ಜಿಲ್ಲೆಗಳು 33 ಸ್ಥಾನಗಳನ್ನು ಹೊಂದಿದ್ದು ಶೇ. 30ಕ್ಕಿಂತ ಹೆಚ್ಚು ಕ್ರೈಸ್ತ ಜನಸಂಖ್ಯೆ ಹೊಂದಿವೆ. ವಯನಾಡು, ಮಲಪ್ಪುರಂ, ಎರ್ನಾಕುಳಂ, ಇಡುಕ್ಕಿ ಮತ್ತು ಕೊಟ್ಟಾಯಂ- ಈ 5 ಜಿಲ್ಲೆಗಳು 47 ಸ್ಥಾನ ಹೊಂದಿದ್ದು ಶೇ. 50ಕ್ಕಿಂತ ಹೆಚ್ಚು ಅಲ್ಪಸಂಖ್ಯಾತ (ಮುಸ್ಲಿಂ ಮತ್ತು ಕ್ರೈಸ್ತ) ಜನಸಂಖ್ಯೆ ಹೊಂದಿವೆ.

9 ಜಿಲ್ಲೆಗಳಾದ ಕಾಸರಗೋಡು, ಕೊಯಿಕೋಡ್, ಕಣ್ಣೂರು, ಪಾಲಕ್ಕಾಡ್, ತ್ರಿಶ್ಶೂರು, ಅಲಪ್ಪುಳ, ಪಟ್ಟಣಂತಿಟ್ಟ, ಕೊಲ್ಲಂ ಮತ್ತು ತಿರುವನಂತಪುರ ಹಿಂದು ಜನಸಂಖ್ಯೆ ಹೆಚ್ಚು ಹೊಂದಿದ್ದು 93 ಸ್ಥಾನಗಳನ್ನು ಹೊಂದಿದೆ.

ಉತ್ತರ ಕೇರಳದಲ್ಲಿ ಕಾಂಗ್ರೆಸ್ ಬಲಿಷ್ಠವಾಗಿದೆ. ದಕ್ಷಿಣ ಕೇರಳವು ಬಿಜೆಪಿಯ ಬಲಿಷ್ಠ ಸ್ಥಾನ. ಈಗೀಗ ಬಿಜೆಪಿಯು ಕ್ರೈಸ್ತ ಬಹುಸಂಖ್ಯಾತರಿರುವ ಪ್ರದೇಶಗಳಲ್ಲೂ ಬಲವರ್ಧಿಸಿಕೊಂಡಿದೆ. ಕಳೆದ ಬಾರಿ ತ್ರಿಶ್ಶೂರು ಲೋಕಸಭಾ ಸ್ಥಾನ ಗೆದ್ದಿತ್ತು. ತಿರುವನಂತ ಪುರ ಮಹಾನಗರಪಾಲಿಕೆಯನ್ನೂ ಇತ್ತೀಚೆಗೆ ಗೆದ್ದುಕೊಂಡಿದೆ.

ಸ್ಥಾನ ಗಳಿಕೆ

2011ರಲ್ಲಿ ಯುಡಿಎಫ್ ನಿಕಟ ಸ್ಪರ್ಧೆಯಲ್ಲಿ ಚುನಾವಣೆ ಜಯಿಸಿತ್ತು. ಒಟ್ಟು 140 ಸ್ಥಾನಗಳಲ್ಲಿ ಯುಡಿಎಫ್‌ಗೆ 72 ಸ್ಥಾನ ಲಭಿಸಿತ್ತು. ಎಲ್‌ಡಿಎಫ್‌ಗೆ 68 ಸ್ಥಾನ ಸಿಕ್ಕಿತ್ತು. ಮುಸ್ಲಿಂ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಯುಡಿಎಫ್ 20 ಸ್ಥಾನ ಹಾಗೂ ಎಲ್‌ಡಿಎಫ್ 14 ಸ್ಥಾನ ಗೆದ್ದಿದ್ದವು. ಕ್ರೈಸ್ತ ಪ್ರಾಬಲ್ಯದ 33 ಸ್ಥಾನಗಳಲ್ಲಿ ಯುಡಿಎಫ್ 22, ಎಲ್‌ಡಿಎಫ್ 11 ಸ್ಥಾನ ಗೆದ್ದಿದ್ದವು. ಅಲ್ಪಸಂಖ್ಯಾತರು ಪ್ರಾಬಲ್ಯವಿರುವ 47 ಸ್ಥಾನಗಳಲ್ಲಿ ಯುಡಿಎಫ್ 37 ಹಾಗೂ ಎಲ್‌ಡಿಎಫ್ ಕೇವಲ 10 ಸ್ಥಾನ ಗೆದ್ದಿದ್ದವು. 2016ರ ಚುನಾವಣೆಯಲ್ಲಿ ಎಲ್‌ಡಿಎಫ್ 91 ಸ್ಥಾನ ಗಳಿಸಿ ಸರಕಾರ ರಚಿಸಿದರೆ. ಯುಡಿಎಫ್ 49 ಸ್ಥಾನ ಪಡೆದಿತ್ತು.

2021ರಲ್ಲಿ ಎಲ್‌ಡಿಎಫ್ ಅಧಿಕಾರ ಉಳಿಸಿಕೊಂಡಿತು. ಅದು 99 ಸ್ಥಾನ ಗೆದ್ದರೆ ಎಲ್‌ಡಿಎಫ್‌ಗೆ ಸಿಕ್ಕಿದ್ದು ಕೇವಲ 41. ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಎಲ್‌ಡಿಎಫ್ 18, ಯುಡಿಎಫ್ 16 ಸ್ಥಾನ ಗಳಿಸಿತು. ಕ್ರೈಸ್ತ ಪ್ರಾಬಲ್ಯದ 33 ಸ್ಥಾನಗಳಲ್ಲಿ ಯುಡಿಎಫ್ 14 ಗೆದ್ದರೆ, ಎಲ್‌ಡಿಎಫ್ 19 ಸ್ಥಾನ ಗೆದ್ದಿತು. ಅಲ್ಪಸಂಖ್ಯಾತರು ಪ್ರಾಬಲ್ಯವಿರುವ 47 ಸ್ಥಾನಗಳಲ್ಲಿ ಯುಡಿಎಫ್ 28 ಹಾಗೂ ಎಲ್‌ಡಿಎಫ್ ಕೇವಲ 19 ಸ್ಥಾನ ಗೆದ್ದಿದ್ದವು. ಒಟ್ಟಾಗಿ ಎಲ್‌ಡಿಎಫ್ ಶೇ. 50ರಷ್ಟು ಮುಸ್ಲಿಂ ಮತ ಮತ್ತು ಶೇ. 44ರಷ್ಟು ಕ್ರೈಸ್ತ ಮತ ಪಡೆದರೆ, ಯುಡಿಎಫ್ ಶೇ. 45 ಮುಸ್ಲಿಂ ಬೆಂಬಲ ಹಾಗೂ ಶೇ. 43 ಕ್ರೈಸ್ತ ಬೆಂಬಲ ಪಡೆಯಿತು.

ಈ ಬಾರಿಯ ಚುನಾವಣೆಯಲ್ಲಿ ಯುಡಿಎಫ್ ಮೇಲುಗೈ ಸಾಧಿಸುವುದೆಂದು ಚುನಾವಣಾ ಸಮೀಕ್ಷೆಗಳು ಹೇಳುತ್ತಿವೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಶೇ. 19 ಮತ ಗಳಿಸಿದ್ದು, ಅದೇ ನಿರ್ವಹಣೆ ಈ ಬಾರಿ ಪುನರಾವರ್ತಿಸಿದರೆ ವಿಧಾನಸಭೆಯಲ್ಲಿ ತನ್ನ ಸ್ಥಾನ ಹೆಚ್ಚಿಸಿಕೊಳ್ಳಲಿದೆ. ಆದರೆ ಅದು ಎಲ್‌ಡಿಎಫ್‌ನಿಂದ ಹಿಂದು ಮತಗಳನ್ನು ಸೆಳೆದುಕೊಳ್ಳುವುದೇ ಅಥವಾ ಯುಡಿಎಫ್‌ಗೆ ಹೊಡೆತ ನೀಡುವುದೇ ಎಂಬುದನ್ನು ಕಾದು ನೋಡಬೇಕಾಗಿದೆ. ಇದೇವೇಳೆ, ಮುಸ್ಲಿಮರು, ಕ್ರೈಸ್ತರು ಯಾರನ್ನು ಬೆಂಬಲಿಸುವರು ಎಂಬ ಕುತೂಹಲವೂ ಅಡಗಿದೆ. ಮುಸ್ಲಿಮರು ಮತ್ತು ಕ್ರೈಸ್ತರಿಬ್ಬರೂ ಅಧಿಕ ಸಂಖ್ಯೆಯಲ್ಲಿರುವ 47 ಕ್ಷೇತ್ರಗಳ ಫಲಿತಾಂಶವು ಸರಕಾರ ಯಾರು ರಚಿಸುವರೆಂಬುದನ್ನು ನಿರ್ಧರಿಸಬಹುದು ಎನ್ನುತ್ತಾರೆ ವಿಶ್ಲೇಷಕರು.

ಅಮೆರಿಕದ ಸೇನಾಪಡೆಗಳು ಶೀಘ್ರದಲ್ಲೇ ಕಾರ್ಯಾಚರಣೆ ಮುಗಿಸಲಿವೆ: ದೇಶವನ್ನು ಉದ್ದೇಶಿಸಿ ಟ್ರಂಪ್ ಭಾಷಣ

ಇರಾನ್ ಯುದ್ಧ ಶೀಘ್ರ ಪೂರ್ಣ

• **ವಾಷಿಂಗ್ಟನ್:** ಇರಾನ್ ವಿರುದ್ಧದ ಯುದ್ಧ ಆರಂಭವಾಗಿ 32 ದಿನಗಳಾಗಿದ್ದು, ಅಮೆರಿಕದ ಪ್ರಮುಖ ಕಾರ್ಯತಂತ್ರದ ಗುರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಅಮೆರಿಕದ ಸೇನಾಪಡೆಗಳು ಶೀಘ್ರದಲ್ಲೇ ತಮ್ಮ ಗುರಿಯನ್ನು ತಲುಪಲಿವೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಘೋಷಿಸಿದ್ದಾರೆ. ಆದರೆ ಅವರು ಇರಾನ್‌ನಲ್ಲಿ ಸೇನಾ ನಿಯೋಜನೆ, ನ್ಯಾಟೋದಿಂದ ಹೊರಬರುವ ಬಗ್ಗೆ ಚಕಾರವೆತ್ತಿಲ್ಲ.



ಅಮೆರಿಕದ ಕಾರ್ಯತಂತ್ರದ ಗುರಿಗಳು

ಯುದ್ಧ ಪ್ರಾರಂಭವಾದ ನಂತರ ಮೊದಲ ಬಾರಿಗೆ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಿದ ಅಧ್ಯಕ್ಷ ಟ್ರಂಪ್, ಅಮೆರಿಕದ ಮಿಲಿಟರಿ ಗುರಿಗಳು ನಿರೀಕ್ಷೆಗೂ ಮೀರಿ ಈಡೇರಿವೆ, ಎಂದು ತಿಳಿಸಿದರು. ಮುಂದಿನ ಎರಡು ಮೂರು ವಾರಗಳವರೆಗೆ ಇರಾನ್ ಮೇಲೆ ತೀವ್ರ ದಾಳಿಗಳು ಮುಂದುವರಿಯಲಿವೆ. ಅಮೆರಿಕದ ಬಿ-2 ಬಾಂಬರ್‌ಗಳು ಇರಾನ್‌ನ ಪರಮಾಣು ಕೇಂದ್ರಗಳನ್ನು ಧ್ವಂಸಗೊಳಿಸಿದ್ದು, ಅವುಗಳು ಸದ್ಯ ಉಪಗ್ರಹದ ಕಣ್ಗಾವಲಿನಲ್ಲಿವೆ ಎಂದು ಅವರು ಹೇಳಿದರು. ಆದರೆ, ಇರಾನ್ ನೆಲದಲ್ಲಿ ಸೇನೆಯ ನಿಯೋಜನೆ ಅಥವಾ ಮಾತುಕತೆಯ ಬಗ್ಗೆ ಅವರು ಯಾವುದೇ ಉಲ್ಲೇಖ ಮಾಡಲಿಲ್ಲ.

ಜಾಗತಿಕ ಆರ್ಥಿಕತೆಯ ಮೇಲೆ ಪರಿಣಾಮ

ಟ್ರಂಪ್ ಭಾಷಣದ ಬೆನ್ನಲ್ಲೇ ಹಣಕಾಸು ಮಾರುಕಟ್ಟೆಗಳಲ್ಲಿ ತಲ್ಲಣ ಉಂಟಾಗಿದ್ದು, ತೈಲ ಬೆಲೆ ಶೇ. 4 ಕ್ಕಿಂತ ಹೆಚ್ಚು ಏರಿಕೆಯಾಗಿದೆ. ಏಷ್ಯಾದ ಷೇರು ಮಾರುಕಟ್ಟೆಗಳು ಕುಸಿತ ಕಂಡಿವೆ. ಫೆ.28ರಂದು ಯುದ್ಧ ಪ್ರಾರಂಭವಾದಾಗಿನಿಂದ ಬ್ರೆಂಟ್ ಕಚ್ಚಾ ತೈಲ ಬೆಲೆ ಶೇ. 40 ಕ್ಕಿಂತ ಹೆಚ್ಚು ಏರಿಕೆಯಾಗಿದೆ. ಇಂಧನ ಮತ್ತು ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದ ಸಾರ್ವಜನಿಕರು ಕಷ್ಟ ಅನುಭವಿಸುತ್ತಿದ್ದು, ಅಮೆರಿಕದ ಮಿಲಿಟರಿ ಹಸ್ತಕ್ಷೇಪ ಮಿತಿಮೀರಿದೆ ಎಂದು ಅನೇಕ ಅಮೆರಿಕನ್ನರೇ ಅಭಿಪ್ರಾಯಪಟ್ಟಿದ್ದಾರೆ ಎಂದು ಸಮೀಕ್ಷೆಗಳು ತಿಳಿಸಿವೆ.

ಅಂತಾರಾಷ್ಟ್ರೀಯ ಸಂಬಂಧಗಳು

ಹಾರ್ಮುಜ್ ಜಲಸಂಧಿಯ ಮೂಲಕ ತೈಲ ಆಮದು ಮಾಡಿಕೊಳ್ಳುವ ದೇಶಗಳು ಆ ಪ್ರದೇಶದ ನಿಯಂತ್ರಣವನ್ನು ತಾವೇ ತೆಗೆದುಕೊಳ್ಳಬೇಕು ಎಂದು ಟ್ರಂಪ್ ಕರೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ದಕ್ಷಿಣ ಕೊರಿಯಾ, ಜಪಾನ್ ಮತ್ತು ಚೀನಾ ದೇಶಗಳು ಹೆಚ್ಚಿನ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಅವರು ಹೇಳಿದ್ದಾರೆ. 20 ನಿಮಿಷಗಳ ತಮ್ಮ ಭಾಷಣದಲ್ಲಿ ಅವರು ನ್ಯಾಟೋ ಮೈತ್ರಿಕೂಟದ ಬಗ್ಗೆ ಯಾವುದೇ ಪ್ರಸ್ತಾಪ ಮಾಡಲಿಲ್ಲ.

ಮಿಲಿಟರಿ ಕಾಲಮಿತಿ

ಪ್ರಸ್ತುತ ಸಂಘರ್ಷ 32 ದಿನಗಳಿಂದ ನಡೆಯುತ್ತಿದೆ. ಈ ಅವಧಿಯನ್ನು ಮೊದಲ ಮಹಾಯುದ್ಧ ಮತ್ತು ಎರಡನೇ ಮಹಾಯುದ್ಧದ ಅವಧಿಗೆ ಹೋಲಿಸಿದ ಟ್ರಂಪ್, ಮಿಷನ್ ಪೂರ್ಣಗೊಳಿಸಲು ಹೆಚ್ಚಿನ ಸಮಯ ನೀಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಅವರು, ಕೊರಿಯಾ, ವಿಯೆಟ್ನಾಂ ಮತ್ತು ಇರಾಕ್ ಯುದ್ಧಗಳ ಉದಾಹರಣೆ ನೀಡಿದರು.

ಇರಾನ್ ಪ್ರತಿಕ್ರಿಯೆ

ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅಮೆರಿಕದ ನಾಗರಿಕರಿಗೆ ಪತ್ರ ಬರೆದಿದ್ದು, ಈ ಯುದ್ಧದಿಂದ ಅಮೆರಿಕನ್ನರ ಯಾವ ಹಿತಾಸಕ್ತಿಗಳು ಈಡೇರುತ್ತಿವೆ ಎಂದು ಪ್ರಶ್ನಿಸಿದ್ದಾರೆ. ಇರಾನ್ ಕದನ ವಿರಾಮಕ್ಕೆ ಕೋರಿದೆ ಎಂಬ ವರದಿಗಳನ್ನು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯಿ ನಿರಾಕರಿಸಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ತೆರೆಯಲು ಏಪ್ರಿಲ್ 6ರ ಗಡುವು ಸಮೀಪಿಸುತ್ತಿದ್ದಂತೆ, ಸಾವಿರಾರು ಹೆಚ್ಚುವರಿ ಅಮೆರಿಕನ್ ಸೈನಿಕರು ಮಧ್ಯಪ್ರಾಚ್ಯದತ್ತ ಸಾಗುತ್ತಿದ್ದಾರೆ. ಖಾರ್ಗ್ ದ್ವೀಪದ ತೈಲ ರಫ್ತು ಕೇಂದ್ರದ ಮೇಲೆ ಅಮೆರಿಕಾ ದಾಳಿ ನಡೆಸುವ ಬೆದರಿಕೆ ಇದ್ದು, ಇದು ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಮತ್ತಷ್ಟು ಆತಂಕ ಮೂಡಿಸಿದೆ.

ಇಸ್ರೇಲ್ ,ಗಲ್ಫ್ ರಾಷ್ಟ್ರಗಳ ಮೇಲೆ ಇರಾನ್ ದಾಳಿ

• **ದುಬೈ:** ಇರಾನ್‌ನ ಮಿಲಿಟರಿ ಬೆದರಿಕೆ ಬಹುತೇಕ ಅಂತ್ಯಗೊಂಡಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿಪಾದನೆಯ ನಡುವೆಯೇ, ಇರಾನ್ ಗುರುವಾರ ಇಸ್ರೇಲ್ ಮತ್ತು ಗಲ್ಫ್ ಅರಬ್ ರಾಷ್ಟ್ರಗಳ ಮೇಲೆ ಸರಣಿ ಕ್ಷಿಪಣಿ ದಾಳಿಗಳನ್ನು ನಡೆಸಿದೆ.ಬುಧವಾರ ರಾತ್ರಿ ಅಧ್ಯಕ್ಷ ಟ್ರಂಪ್ ಭಾಷಣ ಮಾಡಿದ ಬೆನ್ನಲ್ಲೇ ದುಬೈ ಮತ್ತು ಇಸ್ರೇಲ್‌ನಲ್ಲಿ ಸ್ಫೋಟದ ಶಬ್ದಗಳು ಕೇಳಿಬಂದಿದ್ದು, ವಾಯು ರಕ್ಷಣಾ ವ್ಯವಸ್ಥೆಗಳು ಕ್ಷಿಪಣಿಗಳನ್ನು ತಡೆಹಿಡಿದಿವೆ. ಅಮೆರಿಕದ ನೌಕಾಪಡೆಯ 5ನೇ ಫ್ಲೀಟ್ ಇರುವ ಬಹ್ರೇನ್‌ನಲ್ಲಿಯೂ ಎಚ್ಚರಿಕೆಯ ಸೈರನ್‌ಗಳು ಮೊಳಗಿವೆ. ಅಮೆರಿಕದ ಗುರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ ಎಂದು ಟ್ರಂಪ್ ಹೇಳಿದ್ದರೆ.






ಇರಾನ್ ಮಿಲಿಟರಿ ವಕ್ತಾರ ಲೆಫ್ಟಿನೆಂಟ್ ಕರ್ನಲ್ ಇಬ್ರಾಹಿಂ ಜೊಲ್ಫಾಘರಿ, ತಮ್ಮ ಕಾರ್ಯತಂತ್ರದ ಉತ್ಪಾದನಾ ಘಟಕಗಳು ಸುರಕ್ಷಿತವಾಗಿವೆ. ಕಾರ್ಯಾಚರಣೆ ನಡೆಸುತ್ತಿವೆ ಎಂದಿದ್ದಾರೆ. ಈ ಯುದ್ಧದಲ್ಲಿ ಈವರೆಗೆ ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಮಂದಿ, ಇಸ್ರೇಲ್‌ನಲ್ಲಿ 19 ಮಂದಿ ಮತ್ತು 13 ಅಮೆರಿಕನ್ ಸೈನಿಕರು ಸಾವನ್ನಪ್ಪಿದ್ದಾರೆ. ಲೆಬನಾನ್‌ನಲ್ಲಿ 1,200ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಮಂದಿ ನಿರಾಶ್ರಿತರಾಗಿದ್ದಾರೆ.

ಹಾರ್ಮುಜ್ ಪುನರಾರಂಭಿಸಲು ಅಂತಾರಾಷ್ಟ್ರೀಯ ಒಕ್ಕೂಟದ ಸಭೆ

• **ಲಂಡನ್:** ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧದಿಂದ ಮುಚ್ಚಲ್ಪಟ್ಟಿರುವ ಹಾರ್ಮುಜ್ ಜಲಸಂಧಿಯನ್ನು ಪುನರಾರಂಭಿಸಲು ರಾಜತಾಂತ್ರಿಕ ಮತ್ತು ರಾಜಕೀಯ ಒತ್ತಡ ಹೇರುವ ಉದ್ದೇಶದಿಂದ ಸುಮಾರು 35 ದೇಶಗಳ ವಿದೇಶಾಂಗ ಸಚಿವರು ಗುರುವಾರ ಸಭೆ ನಡೆಸಿದ್ದಾರೆ. ಈ ಮಧ್ಯೆ 35 ರಾಷ್ಟ್ರಗಳ ಮಾತುಕತೆಗೆ ಭಾರತಕ್ಕೆ ಬ್ರಿಟನ್ ಆಹ್ವಾನ ಕೂಡ ನೀಡಿದೆ. ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಯೆವೆಟ್ಟೆ ಕೂಪರ್ ಈ ವರ್ಚುವಲ್ ಸಭೆಯ ಅಧ್ಯಕ್ಷತೆ ವಹಿಸಿದ್ದು, ಮುಕ್ತ ನೌಕಾಯಾನವನ್ನು ಮರುಸ್ಥಾಪಿಸಲು ಮತ್ತು ಸಿಲುಕಿಕೊಂಡಿರುವ ಹಡಗುಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ಪರಿಶೀಲಿಸುತ್ತಿದ್ದಾರೆ. ಈ ಸಭೆಯಲ್ಲಿ ಅಮೆರಿಕ ಭಾಗವಹಿಸುತ್ತಿಲ್ಲ.



ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇಟಲಿ, ಕೆನಡಾ, ಜಪಾನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ಸೇರಿದಂತೆ ಹಲವು ದೇಶಗಳು ಜಲಸಂಧಿಯನ್ನು ತಡೆಯುವುದನ್ನು ನಿಲ್ಲಿಸುವಂತೆ ಇರಾನ್ ಅನ್ನು ಒತ್ತಾಯಿಸಿವೆ ಮತ್ತು ಸುರಕ್ಷಿತ ಸಂಚಾರಕ್ಕೆ ಬೆಂಬಲ ನೀಡಲು ಒಪ್ಪಿವೆ.
ಭದ್ರತೆ ಮತ್ತು ಮೈತ್ರಿಕೂಟಗಳು: ಯುದ್ಧದ ನಂತರದ ಹಡಗು ಸಂಚಾರದ ಭದ್ರತೆಯ ಬಗ್ಗೆ ಮಿಲಿಟರಿ ನಾಯಕರು ಶೀಘ್ರದಲ್ಲೇ ಚರ್ಚಿಸಲಿದ್ದಾರೆ ಎಂದು ಪ್ರಧಾನ ಮಂತ್ರಿ ಕೀರ್ ಸ್ಟಾರ್ಮರ್ ತಿಳಿಸಿದ್ದಾರೆ. ಅಮೆರಿಕ ನ್ಯಾಟೊ ಮೈತ್ರಿಕೂಟದಿಂದ ಹೊರಬರುವ ಸಾಧ್ಯತೆಯ ಬಗ್ಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೂಚನೆ ನೀಡಿದ ಬೆನ್ನಲ್ಲೇ, ಈ ಒಕ್ಕೂಟ ಪ್ರಾದೇಶಿಕ ಭದ್ರತೆಗೆ ಯುರೋಪಿನ ಬದ್ಧತೆ ಪ್ರದರ್ಶಿಸುವ ಗುರಿ ಹೊಂದಿದೆ ಎನ್ನಲಾಗಿದೆ.

ಕೇಂದ್ರದ ರಾಜತಾಂತ್ರಿಕತೆಗೆ ಆನಂದ್ ಶರ್ಮ ಶ್ಲಾಘನೆ

» ಮಧ್ಯಪ್ರಾಚ್ಯ ಸಂಘರ್ಷದಲ್ಲಿ ಭಾರತದ ಪಾತ್ರ
» ಮೋದಿ ಸರ್ಕಾರದಿಂದ ಪ್ರಬುದ್ಧ ನಡೆ
» ಮಾಜಿ ವಿದೇಶಾಂಗ ಸಚಿವರಿಂದಲೇ ಶಹಬ್ಬಾಸ್

• **ಹೊಸದಿಲ್ಲಿ:** ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದ ಸಂದರ್ಭದಲ್ಲಿ ಭಾರತ ಸರ್ಕಾರ ಅನುಸರಿಸುತ್ತಿರುವ ರಾಜತಾಂತ್ರಿಕ ನಡೆ ಬಗ್ಗೆ ಕಾಂಗ್ರೆಸ್ ನಾಯಕ ಮತ್ತು ಮಾಜಿ ವಿದೇಶಾಂಗ ಸಚಿವ ಆನಂದ್ ಶರ್ಮ ಶ್ಲಾಘಿಸಿದ್ದಾರೆ. ಈ ಮೂಲಕ ತಮ್ಮದೇ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಸರೆಂಡರ್ ಆರೋಪಕ್ಕೆ ತಿರುಗೇಟು ನೀಡಿದಂತಾಗಿದೆ.

ಯುದ್ಧದ ಹೊತ್ತಲ್ಲಿ ಕೇಂದ್ರ ಸರ್ಕಾರವು ಅತ್ಯಂತ ಪ್ರಬುದ್ಧ ಮತ್ತು ಕೌಶಲ್ಯದ ಹೆಜ್ಜೆ ಇರಿಸಿದೆ. ಗ್ಲೋಬಲ್ ಸೌತ್ ರಾಷ್ಟ್ರಗಳ ಲೆಕ್ಕಾಚಾರದಲ್ಲಿ ಭಾರತದ ನಡೆಯು ಅತ್ಯಂತ ಮಹತ್ವದ್ದಾಗಿದ್ದು, ಇದಕ್ಕೆ ತಕ್ಕಂತೆಯೇ ವರ್ತಿಸುತ್ತಿದೆ ಎಂದು ಹೇಳಿದ್ದಾರೆ. ವಿಶೇಷವೆಂದರೆ, ಯುದ್ಧದ ವಿಚಾರದಲ್ಲಿ ಕಾಂಗ್ರೆಸ್, ಕೇಂದ್ರ ಸರ್ಕಾರದ ವಿರುದ್ಧ ಟೀಕೆ ವ್ಯಕ್ತಪಡಿಸುತ್ತಿದ್ದರೂ, ಅದೇ ಪಕ್ಷದ ನಾಯಕರು ಶ್ಲಾಘಿಸಿರುವುದು ಗಮನಾರ್ಹ.

ಯುದ್ಧ ಶುರುವಾದ ಮೇಲೆ ಕೇಂದ್ರ ಸರ್ಕಾರವು, ಎಲ್ಲ ಭಾಗೀದಾರರೊಂದಿಗೆ ನಿರಂತರ ಮಾತುಕತೆಯಲ್ಲಿದೆ. ಅಲ್ಲದೆ, ಯಾವುದೇ ಸಂಭಾವ್ಯ, ಅಹಿತಕರ ಸಂಗತಿಗಳಾಗದಂತೆ ರಾಜತಾಂತ್ರಿಕ ಮಟ್ಟದಲ್ಲಿ ಹೆಜ್ಜೆ ಇಡಲಾಗುತ್ತಿದೆ. ಯುದ್ಧದ ವಿಚಾರದಲ್ಲಿ ಏನನ್ನೂ ನಿರೀಕ್ಷಿಸದ ಹೊತ್ತಿನಲ್ಲಿ ಕೇಂದ್ರ ಸರ್ಕಾರವು ಸರ್ವ ಪಕ್ಷಗಳ ನಾಯಕರ ಜತೆಗೆ ಮಾತನಾಡಿ, ಪರಿಸ್ಥಿತಿ ಬಗ್ಗೆ ವಿವರಿಸಿದೆ ಎಂದು ಹೇಳಿದ್ದಾರೆ.

ಮುಂದೆಯೂ ರಾಷ್ಟ್ರೀಯ ಮಟ್ಟದಲ್ಲಿ ಮಾತುಕತೆಗಳು ಮುಂದುವರಿಯಬೇಕು. ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿ ರಾಷ್ಟ್ರೀಯ ಒಗ್ಗಟ್ಟು ಮತ್ತು ಪ್ರಬುದ್ಧ ಪ್ರತಿಕ್ರಿಯೆಗಳು ಬರಬೇಕು. ಯುದ್ಧ ನಿಲ್ಲಿಸುವ, ಜಾಗತಿಕ ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಗ್ಲೋಬಲ್ ಸೌತ್ ದೇಶಗಳನ್ನು ಒಟ್ಟಾಗಿಸಬೇಕು ಎಂದೂ ಅವರು ಸಲಹೆ ನೀಡಿದ್ದಾರೆ.


ಈಗಾಗಲೇ ಕಾಂಗ್ರೆಸ್ ನಾಯಕರಾದ ಶಶಿ ತರೂರ್ ಮತ್ತು ಮನೀಶ್ ತಿವಾರಿ ಅವರು ಕೇಂದ್ರ ಸರ್ಕಾರದ ರಾಜತಾಂತ್ರಿಕ ನಡೆಯನ್ನು ಶ್ಲಾಘಿಸಿದ್ದು, ಆನಂದ್ ಶರ್ಮ ಮೂರನೇಯವರಾಗಿದ್ದಾರೆ.

ಹಾರ್ಮುಜ್ ಜಲಸಂಧಿ ಬಿಕ್ಕಟ್ಟು

ಸುಮಾರು 24 ವಾಣಿಜ್ಯ ಹಡಗುಗಳ ಮೇಲೆ ಇರಾನ್ ದಾಳಿ ಮಾಡಿದ್ದರಿಂದ ಹಾರ್ಮುಜ್ ಜಲಸಂಧಿಯ ಮೂಲಕ ನಡೆಯುವ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ. ಜಿ7 (7) ರಾಷ್ಟ್ರಗಳು ಮತ್ತು ಗಲ್ಫ್ ದೇಶಗಳು ಸೇರಿದಂತೆ 35 ರಾಷ್ಟ್ರಗಳ ಒಕ್ಕೂಟ ನೌಕಾಯಾನವನ್ನು ಪುನರಾರಂಭಿಸುವ ಬಗ್ಗೆ ಗುರುವಾರ ಚರ್ಚೆ ನಡೆಸಿದೆ. ವಿಶ್ವದ ಒಟ್ಟು ತೈಲ ವ್ಯಾಪಾರದ ಶೇ.20ರಷ್ಟು ಈ ಮಾರ್ಗದ ಮೂಲಕ ನಡೆಯುತ್ತದೆಯಾದರೂ, ಯಾವುದೇ ರಾಷ್ಟ್ರ ಬಲವಂತವಾಗಿ ಜಲಸಂಧಿಯನ್ನು ತೆರೆಯಲು ಮುಂದಾಗಿಲ್ಲ.

ಕೈಗಾರಿಕಾ ವಲಯದ ಮೇಲೆ ಪರಿಣಾಮ

ಏ.1ರ ಈ ನಿರ್ದೇಶನ ಪ್ಯಾಕೇಜಿಂಗ್, ಆಹಾರ ಮತ್ತು ಪಾನೀಯ, ವೇಗವಾಗಿ ಮಾರಾಟವಾಗುವ ಗ್ರಾಹಕ ಸರಕುಗಳು (ಎಫ್‌ಎಂಸಿಜಿ) ಮತ್ತು ಕಾಂಡೊಮ್ ಉತ್ಪಾದನಾ ವಲಯಗಳಿಗೆ ಬೆಂಬಲ ನೀಡುವ ಗುರಿ ಹೊಂದಿದೆ. ಮಾರ್ಚ್ 9ರ ಆದೇಶದಂತೆ ಎಲ್ಲಾ ಸಿ3 ಮತ್ತು ಸಿ4 ಹೈಡ್ರೋಕಾರ್ಬನ್ ಸ್ಟ್ರೀಮ್‌ಗಳನ್ನು ಕೇವಲ ಎಲ್‌ಪಿಜಿ ಉತ್ಪಾದನೆಗೆ ಬಳಸಬೇಕೆಂದು ಕಡ್ಡಾಯಗೊಳಿಸಿದ್ದರಿಂದ ಈ ಕೈಗಾರಿಕೆಗಳು ಸಂಕಷ್ಟಕ್ಕೆ ಸಿಲುಕಿದ್ದವು. ಸರ್ಕಾರ ಕೆಲವು ಪೆಟ್ರೋಕೆಮಿಕಲ್ ಆಮದುಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿದೆ.
ಎಲ್‌ಪಿಜಿ ಪೂರೈಕೆ ಹೊಂದಾಣಿಕೆ : ಈ ಕ್ರಮ, ದೇಶೀಯ ಎಲ್‌ಪಿಜಿ ಫೀಡ್‌ಸ್ಟಾಕ್ ಮೇಲೆ ಪರಿಣಾಮ ಬೀರಿದರೂ, ಗೃಹಬಳಕೆಯ ಗ್ರಾಹಕರಿಗೆ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ನೋಡಿಕೊಳ್ಳಲಾಗುವುದು, ಎಂದು ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ತಿಳಿಸಿದ್ದಾರೆ.



ಎಲ್‌ಪಿಜಿ ಫೀಡ್‌ಸ್ಟಾಕ್ ಮಾರ್ಗ ಬದಲಾವಣೆ

ಅಡುಗೆ ಅನಿಲ ಉತ್ಪಾದನೆಗೆ ಬಳಸಲಾಗುವ ಪ್ರೊಪಿಲೀನ್ ಫೀಡ್‌ಸ್ಟಾಕ್ ಅನ್ನು ಪ್ರಸ್ತುತ ತೀವ್ರ ಪೆಟ್ರೋಕೆಮಿಕಲ್ ಕೊರತೆ ಎದುರಿಸುತ್ತಿರುವ ಕೈಗಾರಿಕೆಗಳಿಗೆ ವರ್ಗಾಯಿಸುವಂತೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತೈಲ ಸಂಸ್ಕರಣಾಗಾರಗಳಿಗೆ ನಿರ್ದೇಶನ ನೀಡಿದೆ.

ಕಿರುಸುದ್ದಿ

ಬೂಕರ್ ಪ್ರಶಸ್ತಿ ಅಂತಿಮ ಪಟ್ಟಿಗೆ ಭಾರತೀಯ ಲೇಖಕಿ

• **ಹೊಸದಿಲ್ಲಿ:** ಭಾರತೀಯ ಮೂಲದ ಕೆನಡಾ-ಅಮೆರಿಕನ್ ಲೇಖಕಿ ಪದ್ಮಾ ವಿಶ್ವನಾಥನ್, ಪೋರ್ಚುಗೀಸ್ ಭಾಷೆಯ ಕಿರು ಕಾದಂಬರಿಯೊಂದನ್ನು ಇಂಗ್ಲಿಷ್‌ಗೆ ಅನುವಾದ ಮಾಡಿದಕ್ಕಾಗಿ 2026ರ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಯ ಅಂತಿಮ ಪಟ್ಟಿಗೆ ಆಯ್ಕೆಯಾಗಿದ್ದಾರೆ. ಬ್ರೆಜಿಲ್ ಮೂಲದ ಲೇಖಕ ಅನಾ ಪೌಲಾ ಮಯ್ಯಾ ಅವರ ಕೃತಿ ಆನ್ ಅರ್ಥ್ ಆ್ಯಸ್ ಇಟ್ ಈಸ್ ಬೆನೀತ್ ಅತ್ಯಂತ ಕ್ರೂರ ಮತ್ತು ಕಾಡುವಂತಹ , ಹಿಪ್ನೋಟಿಕ್ ಕಾದಂಬರಿ ಎಂದು ತೀರ್ಪುಗಾರರು ಬಣ್ಣಿಸಿದ್ದಾರೆ.

ಇಂಡೋನೇಷ್ಯಾ ಭೂಕಂಪ: ಓರ್ವ ಸಾವು

• **ಜಕಾರ್ತ:** ಪೂರ್ವ ಇಂಡೋನೇಷ್ಯಾದ ಕರಾವಳಿಯಲ್ಲಿ 7.4 ತೀವ್ರತೆಯ ಭೂಕಂಪ ಸಂಭವಿಸಿ ಓರ್ವ ಮೃತಪಟ್ಟಿದ್ದಾನೆ. ಮುಂಜಾನೆ ಸುಲವೇಸಿ ಮತ್ತು ಮಾಲುಕು ದ್ವೀಪಗಳ ನಡುವಿನ ಮೊಲುಕ್ಕಾ ಸಮುದ್ರದಲ್ಲಿ 35 ಕಿಮೀ ಆಳದಲ್ಲಿ ಕಂಪನ ಸಂಭವಿಸಿದೆ ಎಂದು ಯುಎಸ್ ಭೂವೈಜ್ಞಾನಿಕ ಸಮೀಕ್ಷೆ (ಯುಎಸ್‌ಜಿಎಸ್) ತಿಳಿಸಿದೆ.

ಪೆಟ್ರೋಕೆಮಿಕಲ್ ಕಸ್ಟಮ್ ಸುಂಕ ಕೈ ಬಿಟ್ಟ ಸರ್ಕಾರ

• **ಹೊಸದಿಲ್ಲಿ:** ಪೂರೈಕೆ ವ್ಯವಸ್ಥೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳುವ ಜತೆ ಅಂತಿಮ ಉತ್ಪನ್ನಗಳ ಬಳಕೆದಾರರನ್ನು ನಿರಾಳಗೊಳಿಸುವ ನಿಟ್ಟಿನಲ್ಲಿ, ಅಪೂರ್ವ ಪೆಟ್ರೋಕೆಮಿಕಲ್ ಉತ್ಪನ್ನಗಳ ಆಮದು ಮೇಲಿನ ಕಸ್ಟಮ್ಸ್ ಸುಂಕವನ್ನು ಸರಕಾರ ಕೈಬಿಟ್ಟಿದೆ ಅಥವಾ ಮೂರು ತಿಂಗಳವಧಿಗೆ ಜೂ.30ರ ತನಕ ವಿನಾಯಿತಿ ಘೋಷಿಸಿದೆ. ಪ್ಲಾಸ್ಟಿಕ್‌ಗಳು, ಪ್ಯಾಕೇಜಿಂಗ್, ಜವಳಿ, ಫಾರ್ಮಾಸ್ಯುಟಿಕಲ್‌ಗಳು, ಕೆಮಿಕಲ್, ಆಟೊಮೊಟಿವ್ ಬಿಡಿಭಾಗಗಳು ಇತ್ಯಾದಿ ಪೆಟ್ರೋಕೆಮಿಕಲ್ ಫೀಡ್‌ಸ್ಟಾಕ್‌ನ್ನು ಅವಲಂಬಿಸಿರುವ ರಂಗಗಳಿಗೆ ಪ್ರಸ್ತುತ ಕಸ್ಟಮ್ಸ್ ಸುಂಕ ವಿನಾಯಿತಿಯಿಂದ ಪ್ರಯೋಜನವಾಗಲಿದೆ. ಏಕಕಾಲಕ್ಕೆ ಸರಕಾರದ ಬೊಕ್ಕಸಕ್ಕೆ ಬರೋಬ್ಬರಿ 1800 ಕೋಟಿ ರೂ. ಹೊರೆಯಾಗಲಿದೆ. ಪ.ಏಷ್ಯಾದಲ್ಲಿ ಮುಂದುವರೆದಿರುವ ಸಂಘರ್ಷ ಮತ್ತು ಜಾಗತಿಕ ಪೂರೈಕೆ ವ್ಯವಸ್ಥೆಯಲ್ಲಿ ವ್ಯತ್ಯಯವಾಗಿರುವ ಹಿನ್ನೆಲೆಯಲ್ಲಿ ಸರಕಾರ ಅಪೂರ್ವ ಪೆಟ್ರೋಕೆಮಿಕಲ್ ಉತ್ಪನ್ನಗಳ ಮೇಲೆ ಪೂರ್ಣ ಕಸ್ಟಮ್ಸ್ ಸುಂಕ ವಿನಾಯಿತಿಗೆ ನಿರ್ಧರಿಸಿದೆ. ಜೂ.30ರ ತನಕ ಈ ವಿನಾಯಿತಿ ಮುಂದುವರೆಯುವುದು ಎಂದು ಹಣಕಾಸು ಖಾತೆ ಹೇಳಿಕೆಯಲ್ಲಿ ತಿಳಿಸಿದೆ. ದೇಶೀ ಉದ್ಯಮಗಳಿಗೆ ನಿರಂತರವಾಗಿ ಸಂಕ್ಲಿಷ್ಟ ಪೆಟ್ರೋಕೆಮಿಕಲ್ ಕಚ್ಚಾವಸ್ತುಗಳು ಲಭಿಸಬೇಕು. ಸಣ್ಣ ಪುಟ್ಟ ಉದ್ಯಮಗಳನ್ನು ಬಾಧಿಸುವ ವೆಚ್ಚದ ಒತ್ತಡಗಳನ್ನು ಕುಗ್ಗಿಸುವುದು ಹಾಗೂ ದೇಶದಲ್ಲಿ ಪೂರೈಕೆ ಸ್ಥಿರತೆ ಕಾಯ್ದುಕೊಳ್ಳುವುದು ಸರಕಾರದ ಪ್ರಸ್ತುತ ನಿರ್ಧಾರ ಹಿಂದಿನ ಆಶಯವಾಗಿದೆ. ಅಂತಿಮ ಉತ್ಪನ್ನಗಳ ಬಳಕೆದಾರರೂ ಇದರಿಂದ ನಿರಾಳರಾಗಲಿದ್ದಾರೆ ಎಂದು ಹೇಳಿಕೆ ತಿಳಿಸಿದೆ.

ನುಸುಳುಕೋರರಿಗೆ ಮಾತ್ರ ವಿರೋಧ, ಮುಸ್ಲಿಮರಿಗಲ್ಲ

• **ಗುವಾಹಟಿ:** ಬಿಜೆಪಿ ಅಸ್ಸಾಂನಲ್ಲಿ ಅಕ್ರಮ ನುಸುಳುಕೋರರನ್ನು ಗುರುತಿಸಿ ಹೊರಹಾಕುವುದಕ್ಕೆ ಬದ್ಧವಾಗಿದೆ ಎಂದು ಒತ್ತಿ ಹೇಳಿದ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು, ಪಕ್ಷವು ದೇಶೀಯ ಮುಸ್ಲಿಮರನ್ನು ವಿರೋಧಿಸಿಲ್ಲ ಎಂದು ಸ್ಪಷ್ಟಪಡಿಸಿದರು. ಅವರು ಅಸ್ಸಾಂನಲ್ಲಿ ಚುನಾವಣಾ ರ‍್ಯಾಲಿಗಳನ್ನುದ್ದೇಶಿಸಿ ಮಾತನಾಡಿ, ಬಿಜೆಪಿಗೆ ಸ್ವದೇಶಿ ಮುಸ್ಲಿಮರು ಮತ್ತು ಅಕ್ರಮ ನುಸುಳುಕೋರರ ನಡುವಣ ವ್ಯತ್ಯಾಸದ ಅರಿವಿದೆ.ಅಸ್ಸಾಂನಲ್ಲಿ ಅಕ್ರಮ ನುಸುಳುಕೋರರನ್ನು ಪತ್ತೆಹಚ್ಚಿ , ಅವರ ಮತದಾನ ಹಕ್ಕನ್ನು ತೆಗೆದುಹಾಕಿ ಅವರನ್ನು ಗಡೀಪಾರುಗೊಳಿಸಲಾಗುವುದು. ಆದರೆ ಕಾಂಗ್ರೆಸ್ ಪಕ್ಷವು ಕೇವಲ ವೋಟ್‌ಬ್ಯಾಂಕ್‌ಗಾಗಿ ದೇಶದ ಸುರಕ್ಷತೆಯನ್ನೇ ನಿರ್ಲಕ್ಷಿಸುತ್ತಿರುವುದು ಆಘಾತಕಾರಿ ಎಂದರು. ದೇಶೀಯ ಮುಸ್ಲಿಮರಿಗೂ , ವಿದೇಶಿ ನುಸುಳುಕೋರರಿಗೂ ವ್ಯತ್ಯಾಸವಿದೆ.ಈ ಬಗ್ಗೆ ಬಿಜೆಪಿಗೆ ಸ್ಪಷ್ಟ ಅರಿವಿದೆ.ಬಿಜೆಪಿ ಅಕ್ರಮ ನುಸುಳುಕೋರರನ್ನು ಒಪ್ಪಲು ಸಾಧ್ಯವೇ ಇಲ್ಲ, ಮುಂದಿನ 5ವರ್ಷದೊಳಗೆ ಈ ಅಕ್ರಮ ನುಸುಳುಕೋರರನ್ನು ಹೊರಕಳುಹಿಸಬೇಕು.

ಈ ಅಕ್ರಮ ನುಸುಳುಕೋರರಿಂದಾಗಿ ಕೆಲವು ಜಿಲ್ಲೆಗಳ ಜನಸಂಖ್ಯಾ ಸಮತೋಲನವೇ ವ್ಯತ್ಯಾಸವಾಗಿರುವುದು ಗಂಭೀರ ವಿಷಯ . ಈಗಾಗಲೇ ಇಂತಹ ಅಕ್ರಮ ನುಸುಳುಕೋರರ ಅತಿಕ್ರಮಣದಿಂದ 1.25ಲಕ್ಷ ಎಕರೆ ಭೂಮಿಯನ್ನು ಮುಕ್ತಗೊಳಿಸಲಾಗಿದ್ದು, ಸ್ಥಳೀಯ ಜನರ ಭೂಮಿಯನ್ನು ರಕ್ಷಿಸಲು ಇನ್ನಷ್ಟು ಕ್ರಮ ಕೈಗೊಳ್ಳುವುದಾಗಿ ಜನತೆಗೆ ಭರವಸೆ ನೀಡಿದರು. ಸ್ಥಳೀಯ ಸಂಸ್ಕೃತಿ ಮತ್ತು ಸ್ಥಳೀಯ ಜನತೆಯ ಹಕ್ಕುಗಳನ್ನು, ಬುಡಗಟ್ಟು ಜನರ ಹಿತಾಸಕ್ತಿಯನ್ನು ರಕ್ಷಿಸಲಾಗುವುದು ಎಂದು ಅವರು ಘೋಷಿಸಿದರು.

ರಾಜ್ಯಸಭೆ ಉಪನಾಯಕ ಸ್ಥಾನದಿಂದ ಛಡ್ಡಾ ಹೊರಕ್ಕೆ!

• **ಹೊಸದಿಲ್ಲಿ :** ರಾಜ್ಯಸಭೆ ಉಪ ನಾಯಕ, ಆಮ್ ಆದ್ಮಿ ಪಕ್ಷದ ಸಂಸದ ರಾಘವ ಛಡ್ಡಾರನ್ನು ಹುದ್ದೆಯಿಂದ ಪದಚ್ಯುತಗೊಳಿಸಲಾಗಿದೆ. ತೆರವಾದ ಜಾಗಕ್ಕೆ ಪಂಜಾಬ್ ಸಂಸದ ಅಶೋಕ್ ಮಿತ್ತಲ್ ಅವರನ್ನು ನಿಯುಕ್ತಿಗೊಳಿಸಲಾಗಿದೆ.

ರಾಜ್ಯಸಭಾ ಸಂಸದರೂ ಆಗಿರುವ ಛಡ್ಡಾ ಅವರಿಗೆ ಆಪ್ ಕೋಟಾದಲ್ಲಿ ಸದನದಲ್ಲಿ ಮಾತನಾಡಲು ಅವಕಾಶ ಕೊಡಕೂಡದು ಎಂದು ಪತ್ರದಲ್ಲಿ ಆಗ್ರಹಿಸಲಾಗಿತ್ತು. ಆಪ್‌ಗೆ ಸಂಬಂಧಿತ ವಿಚಾರವಾಗಿ ಸದನದಲ್ಲಿ ಛಡ್ಡಾ ಮಾತನಾಡದಿರುವುದು ಮತ್ತು ಆಪ್ ನಾಯಕ ಅರವಿಂದ ಕೇಜ್ರಿವಾಲ್ ನೇತೃತ್ವದ ಹಲವು ಸಾರ್ವಜನಿಕ ಕಾರ್ಯಕ್ರಮಗಳಿಗೆ ಛಡ್ಡಾ ಗೈರುಹಾಜರಿ ಮಧ್ಯೆ ಆಪ್ ನಾಯಕತ್ವ ಪ್ರಸ್ತುತ ನಿರ್ಧಾರಕ್ಕೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ಒಂದು ಕಾಲದಲ್ಲಿ ಕೇಜ್ರಿವಾಲ್ ಅವರ ಅತ್ಯಂತ ನಂಬಿಗಸ್ಥ ಸಂಸದ ಮತ್ತು ದೇಶದ ಕಿರಿಯ ಸಂಸದರಲ್ಲೋರ್ವರಾಗಿರುವ ಛಡ್ಡಾ, ಮುಖ್ಯವಾಗಿ ಪಂಜಾಬ್‌ನಲ್ಲಿ ಪಕ್ಷದ ಚಟುವಟಿಕೆಗಳ ನಿಭಾಯಿಸುವಲ್ಲಿ ಮತ್ತು ದಿಲ್ಲಿಯಲ್ಲಿ ಆಪ್ ಆಡಳಿತವಿದ್ದಾಗಲೂ ಪಕ್ಷ ಸಂಬಂಧಿತ ವಿಚಾರಗಳಲ್ಲಿ ನಿರ್ಣಾಯಕ ಪಾತ್ರವಹಿಸಿದ್ದರು. ಆದರೆ ಈಚಿನ ತಿಂಗಳಲ್ಲಿ ಛಡ್ಡಾ ಚಟುವಟಿಕೆಗಳಲ್ಲಿ ಬದಲಾವಣೆಗಳಾಗಿದ್ದವು.

ಅಬಕಾರಿ ನೀತಿ ಪ್ರಕರಣದಲ್ಲಿ ಕೇಜ್ರಿವಾಲ್ 2024 ಮಾರ್ಚ್‌ನಲ್ಲಿ ಬಂಧಿಸಲ್ಪಟ್ಟಾಗ ಛಡ್ಡಾ ವೈದ್ಯಕೀಯ ಕಾರಣಗಳಿಗಾಗಿ ಹೊರದೇಶದಲ್ಲಿದ್ದರು. ಕೇಜ್ರಿವಾಲ್ ಆರು ತಿಂಗಳು ಜೈಲಲ್ಲಿದ್ದಾಗಲೂ ಛಡ್ಡಾ ಕೇಜ್ರಿವಾಲ್‌ರಿಂದ ಅಂತರ ಕಾಯ್ದುಕೊಂಡಿದ್ದರು ಮತ್ತು ಕೇಜ್ರಿವಾಲ್ 2024 ಸೆ.13ರಂದು ಜೈಲಿನಿಂದ ಬಿಡುಗಡೆಯಾದ ಕೆಲವು ದಿನಗಳ ನಂತರ ಅವರನ್ನು ಭೇಟಿಯಾಗಿದ್ದರು.

ಹನುಮಾನ್ ಮಂದಿರ ಮೇಲೆ ಧ್ವಜಾರೋಹಣ



• **ಅಯೋಧ್ಯೆ:** ಹನುಮಾನ್ ಜಯಂತಿಯ ನಿಮಿತ್ತವಾಗಿ ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ಮಂದಿರದ ಆವರಣದಲ್ಲಿ ಗುರುವಾರ ಮಹಾಬಲಿ ಹನುಮಾನ್ ಮಂದಿರದ ಮೇಲೆ ಧ್ವಜಾರೋಹಣ ಮಾಡಲಾಯಿತು. ಬಜರಂಗದಳ ಸಂಸ್ಥಾಪಕರಾದ ವಿನಯ್ ಕಟಿಯಾರ್ ಸೇರಿದಂತೆ ಬಜರಂಗದಳದ ಪೂರ್ವ ರಾಷ್ಟ್ರೀಯ ಸಂಯೋಜಕರು ಧ್ವಜಾರೋಹಣ ಕಾರ್ಯಕ್ರಮವನ್ನು ನೇರವೇರಿಸಿದರು. ಈ ಸಂದರ್ಭದಲ್ಲಿ ಜೈಭನ್ ಸಿಂಗ್ ಪವಯ್ಯ, ಪ್ರಕಾಶ್ ಶರ್ಮಾ, ಸುರೇಂದ್ರ ಜೈನ್, ನೀರಜ್ ದೊನೇರಿಯಾ, ಗೋಪಾಲ ಜಿ, ಸಾಧು ಸಂತರು ಹಾಗೂ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಪದಾಧಿಕಾರಿಗಳು ಮತ್ತು ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜನಸೇವೆಯನ್ನು ನಾಗರಿಕರ ಅಗತ್ಯಗಳಿಗನುಸಾರ ಹೆಚ್ಚು ಶಕ್ತಗೊಳಿಸಬೇಕು: ಮೋದಿ

ಆಡಳಿತ ವ್ಯವಸ್ಥೆಗಳನ್ನು ಸುಧಾರಿಸುವುದು ಅಗತ್ಯ

• **ಹೊಸದಿಲ್ಲಿ:** ಜನರ ಬದುಕನ್ನು ಸುಗಮಗೊಳಿಸುವು ದಕ್ಕಾಗಿ ಆಡಳಿತ ವ್ಯವಸ್ಥೆಯನ್ನು ನಿರಂತರ ಸುಧಾರಣೆಗೊಳಪಡಿಸುವುದು ಅತ್ಯಗತ್ಯವೆಂದು ಪ್ರಧಾನಿ ನರೇಂದ್ರ ಮೋದಿ ಸರಕಾರಿ ನೌಕರರನ್ನು ಉದ್ದೇಶಿಸಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇಡೀ ದೇಶದ ಆಡಳಿತ ವ್ಯವಸ್ಥೆಯಿಂದು ಪ್ರಮುಖ ಮಂತ್ರ ನಾಗರಿಕ ದೇವೋ ಭವ ವನ್ನು ಆಧರಿಸಿದೆ. ಸಾರ್ವಜನಿಕ ಸೇವೆ ಅಥವಾ ಜನಸೇವೆಯನ್ನು ನಾಗರಿಕರ ಅಗತ್ಯಗಳಿಗನುಸಾರ ಹೆಚ್ಚು ಶಕ್ತ ಮತ್ತು ಸೂಕ್ಷ್ಮಸಂವೇದಿಯಾಗಿ ಪುನರಪಿ ಸುಧಾರಣೆಗೊಳಪಡಿಸಲಾಗಿದೆ. ಸಂಪೂರ್ಣ ನಾಗರಿಕ ಕೇಂದ್ರಿತವಾಗಿಸುವ ಮುಖೇನ ಆಡಳಿತ ವ್ಯವಸ್ಥೆಗೆ ಹೊಸ ಅಸ್ಮಿತೆ ನೀಡಲಾಗುತ್ತಿದೆ ಎಂದು ಪ್ರಧಾನಿ ಮೋದಿ ಸಾಧನಾ ಸಪ್ತಾಹಕ್ಕೆ ಚಾಲನೆ ನೀಡಿ ವಿಡಿಯೋ ಸಂದೇಶದಲ್ಲಿ ತಿಳಿಸಿದ್ದಾರೆ.



ನಿತ್ಯ ಹೊಸತನ್ನು ಕಲಿಯಿರಿ: ಜನರ ಬದುಕನ್ನು ಸುಗಮಗೊಳಿಸುವಲ್ಲಿ, ಬದುಕಿನ ಗುಣಮಟ್ಟ ಸುಧಾರಿಸುವಲ್ಲಿ ಆಡಳಿತ ವ್ಯವಸ್ಥೆಯು ಪ್ರಮುಖ ಮಾನದಂಡವಾಗಬೇಕು. ಹಾಗಾಗಿ ಪ್ರತೀ ನಿತ್ಯ ಏನಾದರು ಹೊಸತನ್ನು ಕಲಿತುಕೊಳ್ಳಬೇಕು ಎಂದು ಸರಕಾರಿ ನೌಕರರಿಗೆ ಕರೆಯಿತ್ತರು. ಜನರ ಬದುಕಿನ ಗುಣಮಟ್ಟ ದಿನೇ ದಿನೇ ಸುಧಾರಿಸುವ ನಿಟ್ಟಿನಲ್ಲಿ ಆಡಳಿತ ವ್ಯವಸ್ಥೆ ಕಾರ್ಯತತ್ಪರವಾಗಬೇಕು. ಇದೇ ನಮ್ಮ ನೈಜ ಮಾನದಂಡ ಎಂದು ಪ್ರಧಾನಿ ಮೋದಿ ವಿಶ್ಲೇಷಿಸಿದರು. ಆಡಳಿತಾತ್ಮಕ ಸಂಸ್ಕೃತಿಯಲ್ಲಿ ಮೂಲಭೂತ ಪರಿವರ್ತನೆಗೆ ಕರೆಯಿತ್ತ ಪ್ರಧಾನಿ , ಹಳೆ ವ್ಯವಸ್ಥೆಯಲ್ಲಿ ತಾನೋರ್ವ ಅಧಿಕಾರಿ ಎಂಬುದಕ್ಕೇ ಮಿತಿಮೀರಿ ಪ್ರಾಧಾನ್ಯತೆಯಿತ್ತು. ಆದರೆ ಇಂದು ಕರ್ತವ್ಯತತ್ಪರತೆಯತ್ತ ದೇಶದ ಗಮನ ದೃಢವಾಗಿ ನೆಟ್ಟಿದೆ ಎಂದು ವಿವರಿಸಿದರು.

ನಿರಂತರ ಪರಿಣಾಮ: ತನ್ನ ಕರ್ತವ್ಯವು ಏನನ್ನು ಅಪೇಕ್ಷಿಸುತ್ತಿದೆ ಎಂಬ ಚಿಂತನೆ ಆಧಾರದಲ್ಲಿ ನೀವು ಕೈಗೊಳ್ಳುವ ಪ್ರತಿಯೊಂದು ನಿರ್ಧಾರಗಳು ತನ್ನಿಂತಾನೇ ನಿರಂತರವಾಗಿ ಬಹುಪಟ್ಟು ಪರಿಣಾಮಗಳ ಬೀರುತ್ತಿರುತ್ತೆ. ಕ್ಷಿಪ್ರಗತಿಯಿಂದ ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆಗಳ ಮಧ್ಯೆ ಭಾರತ ತ್ವರಿತಗತಿಯಿಂದ ಮುನ್ನಡೆ ಸಾಧಿಸುತ್ತಿದೆ. ಈ ವಾಸ್ತವದ ಹಿನ್ನೆಲೆಯಲ್ಲಿ ಭಾರತದ ಆಡಳಿತ ವ್ಯವಸ್ಥೆಯಲ್ಲೂ ನಿರಂತರ ಸುಧಾರಣೆಗಳು ಅಗತ್ಯವೆಂದು ಪ್ರತಿಪಾದಿಸಿದರು.


ಜನರ ವಿಶ್ವಾಸ ಕಾಪಾಡಿ: ಜನಸಾಮಾನ್ಯರಿಗೆ ಸ್ಥಳೀಯ ಸರ್ಕಾರಿ ಕಚೇರಿಗಳೇ ಸಮಗ್ರ ಸರಕಾರವಾಗಿರುತ್ತೆ. ಪ್ರಜಾಸತ್ತೆ ಮತ್ತು ಸಾಂವಿಧಾನಿಕ ಸಂಸ್ಥೆಗಳ ಬಗ್ಗೆ ಜನರಿಗೆ ನೇರ ವಿಶ್ವಾಸ ಮೂಡುವುದು ಅಧಿಕಾರಿಗಳ ಕರ್ತವ್ಯ ಶೈಲಿ ಮತ್ತು ನಡತೆಗಳಿಂದ. ಯಾವುದೇ ಸ್ತರದಲ್ಲಿ ನಾವೇನೇ ಮಾಡಲಿ, ಜನವಿಶ್ವಾಸ ಕಾಪಾಡೋದು ನಮ್ಮ ಕರ್ತವ್ಯ ಮತ್ತು ಇದೇ ಪ್ರಜಾಸತ್ತೆಯ ಬುನಾದಿ ಎಂದು ಪ್ರಧಾನಿ ಮೋದಿ ಹೇಳಿದರು. ರಾಷ್ಟ್ರದ ಯಶಸ್ಸು ಅದರ ಎಲ್ಲಾ ರಾಜ್ಯಗಳ ಸಮಗ್ರ ಯಶಸ್ಸೆಂದು ಬಣ್ಣಿಸಿದರು.

ನಮ್ಮೆಲ್ಲರ ಹೊಣೆಗಾರಿಕೆ: ಸಂಪನ್ನ ಭಾರತದ ವಿಸ್ತೃತ ವಿಷನ್‌ನ ಸಾಕಾರಕ್ಕೆ ತ್ವರಿತ ಆರ್ಥಿಕ ಬೆಳವಣಿಗೆ, ಆಧುನಿಕ ಮೂಲಸೌಕರ್ಯ, ತಂತ್ರಜ್ಞಾನಗಳ ಅಳವಡಿಕೆ, ಬೃಹತ್ ಪ್ರಮಾಣದ ಕೌಶಲಯುಕ್ತ ಕಾರ್ಮಿಕ ಪಡೆಯ ಅಗತ್ಯವಿದೆ. ಇವೆಲ್ಲ ಗುರಿಗಳ ಸಾಕಾರದಲ್ಲಿ ಸಾರ್ವಜನಿಕ ಸಂಸ್ಥೆಗಳು ಮತ್ತು ಸರಕಾರಿ ನೌಕರರ ಪಾತ್ರ ನಿರ್ಣಾಯಕ. ಇಂದಿನ ಭಾರತ ತುಂಬು ಆಶೋತ್ತರಯುಕ್ತ ರಾಷ್ಟ್ರವಾಗಿದೆ. ಪ್ರತಿಯೋರ್ವ ಪ್ರಜೆಗೂ ಕನಸುಗಳಿವೆ, ಧ್ಯೇಯಗಳಿವೆ ಮತ್ತು ಇವುಗಳ ಸಾಕಾರಕ್ಕೆ ಗರಿಷ್ಠ ಬೆಂಬಲ ಒದಗಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ.

2026ನೇ ಹಣಕಾಸು ವರ್ಷದಲ್ಲಿ ಮಹತ್ತರ ಸಾಧನೆ ನಿರೀಕ್ಷೆ

ರಕ್ಷಣಾ ರಫ್ತು ದಾಖಲೆಯ ಏರಿಕೆ

• **ಹೊಸದಿಲ್ಲಿ:** ಭಾರತದ ವಾರ್ಷಿಕ ರಕ್ಷಣಾ ರಫ್ತು 2025-26ನೇ ಹಣಕಾಸು ವರ್ಷದಲ್ಲಿ 38,424 ಕೋಟಿ ರೂ. ಗಳ ಸಾರ್ವಕಾಲಿಕ ದಾಖಲೆ ತಲುಪಿದ್ದು, ಶೇ. 62.66ರಷ್ಟು ಬೆಳವಣಿಗೆ ಕಂಡಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ಘೋಷಿಸಿದ್ದಾರೆ.



ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಒಟ್ಟು ರಫ್ತು ಮೌಲ್ಯವು 14,802 ಕೋಟಿ ರೂ. ಗಳಷ್ಟು ಹೆಚ್ಚಾಗಿದೆ. 2024-25ರಲ್ಲಿ 23,622 ಕೋಟಿ ರೂ. ಹಾಗೂ 2023-24ರಲ್ಲಿ 21,083 ಕೋಟಿ ರೂ.ಗಳ ರಫ್ತು ದಾಖಲಾಗಿತ್ತು. ಇತ್ತೀಚಿನ ಈ ಅಂಕಿಅಂಶ, ಕಳೆದ ಐದು ವರ್ಷಗಳಲ್ಲಿ ರಕ್ಷಣಾ ರಫ್ತು ಸುಮಾರು ಮೂರು ಪಟ್ಟು ಹೆಚ್ಚಿರುವುದನ್ನು ಸೂಚಿಸುತ್ತದೆ.

ವಿವಿಧ ವಲಯಗಳ ಕೊಡುಗೆ: ರಕ್ಷಣಾ ಸಾರ್ವಜನಿಕ ವಲಯದ ಉದ್ದಿಮೆಗಳು (ಡಿಪಿಎಸ್‌ಯುಗಳು) 21,071 ಕೋಟಿ ರೂ. ಗಳ ಕೊಡುಗೆ ನೀಡಿದ್ದು, ಇದು ಒಟ್ಟು ರಫ್ತಿನ ಶೇ. 54.84 ರಷ್ಟಿದೆ. ಉಳಿದ ಶೇ. 45.16 ರಷ್ಟು ಪಾಲನ್ನು ಖಾಸಗಿ ವಲಯ ಹೊಂದಿದ್ದು, ಇದರ ಮೌಲ್ಯ 17,353 ಕೋಟಿ ರೂ.ಗಳಾಗಿದೆ. ಹಿಂದಿನ ವರ್ಷದಲ್ಲಿ ಡಿಪಿಎಸ್‌ಯುಗಳ ಕೊಡುಗೆ 8,389 ಕೋಟಿ ರೂ. ಮತ್ತು ಖಾಸಗಿ ಉದ್ದಿಮೆಗಳ ಪಾಲು 15,233 ಕೋಟಿ ರೂ. ಗಳಾಗಿತ್ತು.

ಭಾರತ ಪ್ರಸ್ತುತ 80 ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಉಪಕರಣಗಳನ್ನು ರಫ್ತು ಮಾಡುತ್ತಿದೆ. 2025-26ರ ಅವಧಿಯಲ್ಲಿ ರಫ್ತುದಾರರ ಸಂಖ್ಯೆ 128 ರಿಂದ 145 ಕ್ಕೆ ಏರಿದ್ದು, ಶೇ. 13.3 ರಷ್ಟು ಹೆಚ್ಚಳವಾಗಿದೆ. ರಫ್ತು ಪರವಾನಿಗೆಗಾಗಿ ಸರಳೀಕೃತ ನಿಯಂತ್ರಕ ಪ್ರಕ್ರಿಯೆಗಳು ಮತ್ತು ನವೀಕರಿಸಿದ ಆನ್‌ಲೈನ್ ಪೋರ್ಟಲ್ ಈ ಬೆಳವಣಿಗೆಗೆ ಕಾರಣ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಸರ್ಕಾರದ ದೂರದೃಷ್ಟಿ: ಭಾರತವನ್ನು ವಿಶ್ವದ ಪ್ರಮುಖ ರಕ್ಷಣಾ ರಫ್ತುದಾರ ರಾಷ್ಟ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆಯುವಂತೆ ಮಾಡುವ ಪ್ರಧಾನಿ ನರೇಂದ್ರ ಮೋದಿ ಆಶಯಕ್ಕೆ ಅನುಗುಣವಾಗಿ ಈ ಮೈಲಿಗಲ್ಲು ಸಾಧಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ. ಈ ಏರಿಕೆ ಅಂತಾರಾಷ್ಟ್ರೀಯ ಪೂರೈಕೆ ಸರಪಳಿಯಲ್ಲಿ ದೇಶೀಯ ಉದ್ಯಮಗಳ ಸಾಧನೆ ಮತ್ತು ಭಾರತೀಯ ನಿರ್ಮಿತ ರಕ್ಷಣಾ ಉತ್ಪನ್ನಗಳಿಗೆ ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಮನ್ನಣೆಯನ್ನು ಪ್ರತಿಬಿಂಬಿಸುತ್ತದೆ ಎಂದು ಸರ್ಕಾರ ಹೇಳಿದೆ.

52.46 ಮಿಲಿಯನ್ ಟನ್ ಸರಕು ಸಾಗಾಟ
ದಾಖಲೆ ಸೃಷ್ಟಿಸಿದ ನೈರುತ್ಯ ರೈಲ್ವೆ ವಲಯ



ಹುಬ್ಬಳ್ಳಿ: ನೈರುತ್ಯ ರೈಲ್ವೆ ವಲಯವು 52.46 ಮಿಲಿಯನ್ ಟನ್(ಶೇ.14.89) ಸರಕು ಸಾಗಿಸುವ ಮೂಲಕ ರೈಲ್ವೆ ವಲಯದಲ್ಲಿ ದೇಶದಲ್ಲೇ ಮೊದಲ ಸ್ಥಾನ ಗಳಿಸುವ ಮೂಲಕ ದಾಖಲೆ ಸೃಷ್ಟಿಸಿದೆ.

ಈಕುರಿತುಗುರುವಾರವಲಯದಹೆಚ್ಚುವರಿ ಪ್ರಧಾನ ವ್ಯವಸ್ಥಾಪಕ(ಎಜಿಎಂ)ಪಿ.ಅನಂತ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ ಹೋಲಿಸಿದರೆ (50.36ಮಿಲಿಯನ್ ಟನ್) ಹೆಚ್ಚುವರಿ 6.81ಮಿಲಿಯನ್ ಟನ್ ಸಾಗಿಸಿದೆ. ನೈರುತ್ಯ ರೈಲ್ವೆಯು 9487.88 ಕೋಟಿ ರೂ. ಆದಾಯ ಗಳಿಸಿದೆ ಎಂದರು.

ಮುಖ್ಯವಾಗಿ ಕಬ್ಬಿಣ ಅದಿರು, ಕಲ್ಲಿದ್ದಲು ಹಾಗೂ ಸ್ಟೀಲ್ ಸಾಗಣೆಯಿಂದ ಹೆಚ್ಚು ಆದಾಯ ಹರಿದು ಬಂದಿದೆ. ಸರಕು ಸಾಮರ್ಥ್ಯ ಹೆಚ್ಚಿಸಲು 409 ಗೂಡ್ಸ್ ಟ್ರ್ಯಾಕ್ಸ್ ಅನ್ನು ಮೇಲ್ದರ್ಜೆಗೇರಿಸಲಾಗಿದೆ. ತೋರಣಗಲ್ಲು-ರಣಜಿತಪುರ ಮತ್ತು ಬಳ್ಳಾರಿ-ಚಿಕ್ಕಜಾಜೂರ ಮಾರ್ಗದಲ್ಲಿ ಡಬ್ಲಿಂಗ್‌ಗೆ ಅನುಮತಿ ದೊರೆತಿದೆ ಎಂದು ತಿಳಿಸಿದರು.

ಕಳೆದ ವರ್ಷ ಹಬ್ಬ, ರಜೆ ಸೇರಿದಂತೆ ಸಾಂದರ್ಭಿಕ ದಿನಗಳಲ್ಲಿ 471 ವಿಶೇಷ ರೈಲುಗಳಿಂದ 11322 ಟ್ರಿಪ್ ಓಡಿಸುವ ಪ್ರಯಾಣಿಕರಿಗೆ ಉತ್ತಮ ಸೌಕರ್ಯ ಕಲ್ಪಿಸಿದ್ದೇವೆ. ಪ್ರಯಾಣಿಕರ ಸಾಗಣೆಯಿಂದ ಒಟ್ಟಾರೆ 3468 ಕೋಟಿ ರೂ.ಆದಾಯ ಬಂದಿದೆ. ಕಳೆದ ವರ್ಷ 3172 ಕೋಟಿ ರೂ. ಬಂದಿತ್ತು. ಪ್ರಯಾಣಿಕರ ಸಂಖ್ಯೆ 165.53 ಮಿಲಿಯನ್‌ನಿಂದ 176.93 ಮಿಲಿಯನ್‌ಗೆ ಹೆಚ್ಚಳವಾಗಿದೆ ಎಂದರು.

ಸಮಯ ಪಾಲನೆಯಲ್ಲಿ ಶೇ 89.37ರಷ್ಟು ಸಾಧನೆಗೈದಿದ್ದು, 3,335 ನಿಮಿಷಗಳನ್ನು ಉಳಿತಾಯ ಮಾಡಿದೆ ಈ ಮೂಲಕ ದೇಶದಲೇ 4ನೇ ಸ್ಥಾನ ಗಳಿಸಿದ್ದೇವೆ. 11 ಹೊಸ ಟ್ರೇನ್‌ಗಳು ಓಡಸಲಾಗುತ್ತಿದೆ. 9ಜೋಡಿ ಟ್ರೇನ್‌ಗಳು ನಿಯಮಿತಗೊಳಿಸಲಾಗಿದೆ. ಹಾಗೆಯೇ 4 ಟ್ರೇನ್‌ಗಳನ್ನು ಎಕ್ಸಪ್ರೆಸ್‌ನಿಂದ ಸೂಪರ್‌ಫಾಸ್ಟ್ ಮೇಲ್ದರ್ಜೆಗೇರಿಸಲಾಗಿದೆ ಎಂದು ಹೇಳಿದರು. ಮೂಲಸೌಕರ್ಯ ವಿಭಾಗದಲ್ಲಿ 53 ರೂಟ್ ಕಿ.ಮೀ. ವಿದ್ಯುದ್ದೀಕರಣ ಪೂರ್ಣಗೊಂಡಿದ್ದು, ಇದರೊಂದಿಗೆ ವಲಯದಲ್ಲಿ 3,339 ಕಿ.ಮೀ.(ಶೇ98) ವಿದ್ಯುದೀಕರಣಗೊಂಡಂತಾಗಿದೆ. ಇದರ ಜತೆಗೆ, 24 ಕಿ.ಮೀ. ಹೊಸ ರೈಲ್ವೆ ಮಾರ್ಗ ಪ್ರಾರಂಭಿಸಲಾಗಿದ್ದು, 78.1 ಕಿ.ಮೀ. ಜೋಡಿ ಮಾರ್ಗ ಕಾಮಗಾರಿ ಪೂರ್ಣಗೊಂಡಿದೆ ಎಂದು ತಿಳಿಸಿದ್ದಾರೆ.

27 ಡೆಮೋ ರೈಲುಗಳಿಗೆ ಬೋಗಿಗಳನ್ನು ಕಲ್ಪಿಸುವಂತೆ ರೈಲ್ವೆ ಮಂಡಳಿಗೆ ಬೇಡಿಕೆ ಸಲ್ಲಿಸಿದ್ದೇವೆ. ವಾರ್ಷಿಕ ಕೇವಲ 3-4 ಮಾತ್ರ ಕೋಚ್ ಬರುತ್ತಿವೆ. ಹಾಗಾಗಿ ಹುಬ್ಬಳ್ಳಿ ವಿಭಾಗದಲ್ಲಿ ಲೋಕಲ್ ಟ್ರೇನ್ ಬೇಡಿಕೆ ಈಡೇರಿಸಲಾಗುತ್ತಿಲ್ಲ. ಮಂಡಳಿಯು ರೇಕ್‌ಗಳನ್ನು ಪೂರೈಸುತ್ತಿದ್ದಂತೆ ಸೇವೆ ಆರಂಭಿಸಲಾಗುವುದು ಎಂದು ಎಜಿಎಂ ಪಿ.ಅನಂತ ತಿಳಿಸಿದರು. ಪ್ರಧಾನ ವಾಣಿಜ್ಯ ವ್ಯವಸ್ಥಾಪಕ ಎಸ್.ಪಿ.ಶಾಸ್ತ್ರೀ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು ಇದ್ದರು.

3,370 ಎಕರೆ ಬಾಕಿ

ರಾಜ್ಯದ ರೈಲ್ವೆ ಯೋಜನೆಗಳಿಗೆ ಒಟ್ಟು 16945 ಎಕರೆ ಭೂಮಿ ಬೇಕಿದ್ದು, ಇದರಲ್ಲಿ 13675 ಎಕರೆ ಹಸ್ತಾಂತವಾಗಿದೆ. ಇನ್ನೂ 3372 ಎಕರೆ ಭೂಮಿಯನ್ನು ಹಸ್ತಾಂತರ ಬಾಕಿ ಇದೆ. ಧಾರವಾಡ-ಬೆಳಗಾವಿ ಹೊಸ ಮಾರ್ಗ ಯೋಜನೆಯು ಭೂಮಿ ಹಸ್ತಾಂತರ ಬಾಕಿಯಿಂದಾಗಿ ಪ್ರಾರಂಭವಾಗಿಲ್ಲ ಎಂದು ಎಜಿಎಂ ಪಿ.ಅನಂತ ಸ್ಪಷ್ಟಪಡಿಸಿದರು.

ವಿವಿಧೆಡೆ ಸಂಭ್ರಮದ ಹನುಮ ಜಯಂತಿ ಆಚರಣೆ

ಹುಬ್ಬಳ್ಳಿ: ನಗರದ ಹಾಗೂ ತಾಲೂಕಿನಾದ್ಯಾಂತ ಹನುಮಾನ ಜಯಂತಿ ಅಂಗವಾಗಿ ಶೋಭಾಯಾತ್ರೆ, ರಥೋತ್ಸವ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಗುರುವಾರ ವಿಜೃಂಭಣೆಯಿಂದ ನಡೆದವು.

ಬೆಳಗ್ಗೆಯಿಂದ ನಗರದ ವಿವಿಧ ಬಡಾವಣೆಗಳಲ್ಲಿರುವ ಹನುಮನ ದೇವಸ್ಥಾನಗಳಿಗೆ ಬಂದ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಶ್ರೀರಾಮ, ಹನುಮಾನ ದೇವಸ್ಥಾನಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ದೇವಸ್ಥಾನಗಳಲ್ಲಿ ಅಭಿಷೇಕ, ಬಿಲ್ವಾರ್ಚಣೆ, ಹೋಮ ಹಾಗೂ ಹವನ ನಡೆದವು. ಮಾರುತಿ ಮೂರ್ತಿಗೆ ಎಲೆ, ಬೆಣ್ಣೆ, ಹೂವು ಹಾಗೂ ಹಣ್ಣುಗಳಿಂದ ಅಲಂಕಾರ ಮಾಡಲಾಗಿತ್ತು. ದೇವಸ್ಥಾನಗಳಲ್ಲಿ ಹೋಮ, ಹವನ, ಭಜನೆ, ತೊಟ್ಟಿಲೋತ್ಸವ, ಉಡಿ ತುಂಬುವ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ನಗರದಬಹುತೇಕಹನುಮಾನದೇವಾಲಯಗಳ ಮುಂಭಾಗದಲ್ಲಿ ಭಕ್ತರಿಗಾಗಿ ಶಾಮಿಯಾನ ಹಾಕಿ ನೆರಳಿನ ವ್ಯವಸ್ಥೆ ಕಲ್ಪಿಸಲಾಗಿತ್ತು. ವಿವಿಧೆಡೆ ಪಾನಕ, ಮಜ್ಜಿಗೆ ವಿತರಣೆಯೊಂದಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ದೇವಾಲಯಗಳಲ್ಲಿ ರಾಮ ರಕ್ಷಾ ಸ್ತೋತ್ರ, ಹನುಮಾನ ಚಾಲೀಸ ಹಾಗೂ ಭಕ್ತಿ ಗೀತೆಗಳನ್ನು ಧ್ವನಿವರ್ಧಕಗಳಲ್ಲಿ ಪ್ರಸಾರ ಮಾಡಲಾಯಿತು.

ವಿದ್ಯಾನಗರದ ವೀರಾಂಜನೇಯ ದೇವಸ್ಥಾನ, ದಾಜಿಬಾನ ಪೇಟೆ, ಬಿಡನಾಳ, ಕಮರಿಪೇಟೆ, ಮರಾಠಾ ಗಲ್ಲಿ, ಹಳೇ ಹುಬ್ಬಳ್ಳಿ ಬನ್ನಿ ಮಹಾಂಕಾಳಿ, ವಿದ್ಯಾನಗರ ರೇಲ್ ನಗರ ದೇವಸ್ಥಾನಗಳಲ್ಲಿ ಹನುಮಾನ ತೊಟ್ಟಿಲೋತ್ಸವ ಜರುಗಿದವು. ಭಕ್ತರು ಸಾಲಿನಲ್ಲಿ ನಿಂತು ತೊಟ್ಟಿಲು ತೂಗಿದರು.

ದೇವಾಲಯಗಳಲ್ಲಿ ಸಾಮೂಹಿಕ ಪ್ರಾರ್ಥನೆ, ಆರತಿ, ಹನುಮಾನ ಚಾಲೀಸಾ ಪಠಣ, ಸಾಮೂಹಿಕ ನಾಮಜಪ ಕಾರ್ಯಕ್ರಮಗಳು ನಡೆದವು.



ಅದ್ದೂರಿ ಮೆರವಣಿಗೆ

ದಿ ಎಸ್‌ಎಸ್‌ಕೆ ಯುವಕರ ಸಂಘದ ವತಿಯಿಂದ ಹನುಮಂತ ಜಯಂತಿ ಪ್ರಯುಕ್ತ ದಾಜಿಬಾನಪೇಟೆ ತುಳಜಾಭವಾನಿ ದೇವಸ್ಥಾನದಿಂದ ಭವ್ಯ ಮೆರವಣಿಗೆ ಜರುಗಿತು. ಮೆರವಣಿಗೆಯುದ್ದಕ್ಕೂ ಜೈ ಹನುಮಾನ, ಜೈ ಶ್ರೀರಾಮ ಘೋಷಣೆಗಳು ಮೊಳಗಿದವು. ಸಮಾಜದ ಯುವಕರು, ಹಿರಿಯರು, ಮಹಿಳೆಯರು ಕೇಸರಿ ಶಾಲು ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಯುವ ಸಮೂಹ ಡಿಜೆ ಸದ್ದಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ಮೆರವಣಿಗೆಯು ತುಳಜಾಭವಾನಿ ದೇವಸ್ಥಾನದಿಂದ ಪ್ರಾರಂಭವಾಗಿ ಹೊಸ ಮೇದಾರ ಓಣಿ, ದುರ್ಗದ ಬಯಲು, ಬಟರ್ ಮಾರುಕಟ್ಟೆ, ಬಾಬಾಸಾನ ಗಲ್ಲಿ, ಕಾಳಮ್ಮನ ಅಗಸಿ, ಬೋಗಾರಗಲ್ಲಿ ಮೂಲಕ ಸಾಗಿ ಮರಳಿ ತುಳಜಾಭವಾನಿ ದೇವಸ್ಥಾನ ತಲುಪಿ ಮುಕ್ತಾಯವಾಯಿತು.

ಸಂಭ್ರಮದ ರಥೋತ್ಸವ

ಉಣಕಲ್‌ನಲ್ಲಿ ಹನುಮ ಮೂರ್ತಿ ಮೆರವಣಿಗೆ ಜರುಗಿತು. ನಾಗಶೆಟ್ಟಿಕೊಪ್ಪದಲ್ಲಿ ಮಾರುತಿ ಜಾತ್ರೋತ್ಸವ, ಗೋಪನಕೊಪ್ಪದ ಹನುಮಾನ ದೇವಸ್ಥಾನ, ಮಾರುತೇಶ್ವರ ದೇವಸ್ಥಾನಗಳಲ್ಲಿ ಹನುಮ ಜಯಂತಿ ಅಂಗವಾಗಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	1816	6166
ಕಡಲೆಬೇಳೆ	6500	6500
ಕಡಲೆಕಾಳು	1559	5435
ಉದ್ದಿನಕಾಳು	1339	6591
ತೆಂಗಿನಕಾಯಿ	37000	40000
ಒಣ ಮೆಣಸಿನಕಾಯಿ	33000	53800
ಬಟಾಣಿ	4800	4800
ಹೆಸರುಕಾಳು	470	7210
ಹುರುಳಿ ಕಾಳು	3026	3513
ಬೆಲ್ಲ	4195	4195
ಜೋಳ	1810	4235
ಮೆಕ್ಕೆಜೋಳ	1566	1850
ಮಡಿಕೆ (ಮಟಕಿ)	12955	13011
ಸಾಸುವೆ	4200	6876
ಈರುಳ್ಳಿ	400	2000
ಆಲೂಗಡ್ಡೆ	1300	1700
ಕುಸುಬೆ	4800	5350
ಸಾಮೆ/ಸಾವಿ	3970	3970
ಸೋಯಾಬಿನ್	5355	5589
ತೊಗರಿ	3239	4229
ಗೋಧಿ	3281	3281

ಗ್ರಾಮೀಣ ಕ್ರೀಡೆ ಶ್ರೀಮಂತಗೊಳಿಸಿದ 'ಹಾಲೋಕಳಿ'

ರಬಕವಿ-ಬನಹಟ್ಟಿ: ಬರೋಬ್ಬರಿ 50 ಅಡಿ ಎತ್ತರದ ಕಂಬ, ಇದನ್ನು ಹಾಗೇ ಏರೋಕೆ ಬಹುತೇಕರಿಗೆ ಸಾಧ್ಯವಾಗಬಹುದು ಆದರೆ ಇದನ್ನು ಏರುವ ಪೂರ್ವದಲ್ಲಿ 1 ಬಕೆಟ್ ಬೆಣ್ಣೆ ಹಾಗೂ 1 ಬಕೆಟ್ ಗಿರೀಸ್‌ನಿಂದ ಇಡೀ ಕಂಬಕ್ಕೆ ಸವರಿಸಿ ಪೂರ್ತಿ ಕಂಬಕ್ಕೆ ಮೆತ್ತುತ್ತಾರೆ. ಇದರಿಂದ ಸಲೀಸಾಗಿ ಏರಲು ಸಾಧ್ಯವಾಗುವದೇ ಇಲ್ಲ.

ನಂತರ ಇದನ್ನು ಏರಲು 50 ಜನರ ಸಾಧಕರ ತಂಡವಾಗಿ ಸಜ್ಜಾಗಿ, ಕಂಬ ಹತ್ತುತ್ತಿರುವಂತೆ ಮೊಸರು, ಹಾಲು, ತುಪ್ಪ ಹಾಗೂ ಟ್ಯಾಂಕರ್‌ನಷ್ಟು ನೀರನಿಂದ ಸದಾಕಾಲ ಮೇಲಿನಿಂದ ಸುರಿಯುತ್ತಾರೆ. ಇವೆಲ್ಲದರ ಮಧ್ಯೆ ಕಂಬವನ್ನು ಏರುವದು ಒಂದು ಸಾಹಸವೇ ಸರಿ. ತಾಲೂಕಿನ ನಾವಲಗಿ ಗ್ರಾಮದಲ್ಲಿ ಗುರುವಾರ ಸಂಜೆ ಹನುಮ ಜಯಂತಿಯಂದು ಜರುಗುವ ಕಾರ್ಯಕ್ರಮದಲ್ಲಿ ಸುತ್ತಲಿನ ಗ್ರಾಮಗಳ ಸಾವಿರಾರು ಅಭಿಮಾನಿಗಳು ಆಗಮಿಸಿ ಈ ಗ್ರಾಮೀಣ ಕ್ರೀಡೆಯನ್ನು ಸವಿದರು. ವಾಲ್ಮೀಕಿ, ಮುಸ್ಲಿಂ ಸಮುದಾಯದವರಿಂದ ಹಾಲುಗಂಬವೇರುವ ಸಂಪ್ರದಾಯ. ಅದರಂತೆ ರೆಡ್ಡಿ ಮತ್ತು ಕ್ಷತ್ರೀಯ ಸಮಾಜದವರು ನಿರ್ಣಾಯಕರಾಗಿರುತ್ತಾರೆ.

ಗ್ರಾಮೀಣಮೂಲಪರಂಪರೆಉಳಿಸಿ-ಬೆಳೆಸಬೇಕೆಂಬ ಉದ್ದೇಶದಿಂದಇಂತಹಧಾರ್ಮಿಕಕಾರ್ಯಕ್ರಮಗಳನ್ನು ಜಾತ್ಯಾತೀತವಾಗಿ ಎಲ್ಲ ಸಮುದಾಯದವರಿಂದ ವಿಜೃಂಭಣೆಯಿಂದ ಜರುಗುತ್ತದೆ ನಾವಲಗಿ ಗ್ರಾಮದ ಹಿರಿಯ ಮಲ್ಲಪ್ಪ ವಾಲಿ ತಿಳಿಸಿದರು.



ಐಪಿಎಲ್ ಟಿಕೆಟ್ ಕೇಳುವ ಬದಲು ಮೀಸಲಾತಿ ಕೇಳಿ: ಯತ್ನಾಳ



ಬಾಗಲಕೋಟೆ: ಗಜಕೇಸರಿ ಯೋಗದಲ್ಲಿ ಹುಟ್ಟಿದವರು ಹಾಗೂ ಅವರ ತಂದೆಯವರು(ಶಿವಾನಂದ ಪಾಟೀಲ) ಮೀಸಲಾತಿಗಾಗಿ ಪಂಚಮಸಾಲಿ ಸಮಾಜದವರು ಹೋರಾಟ ನಡೆಸಿದಾಗ ಒಂದು ರೂ. ದುಡ್ಡು ನೀಡಲಿಲ್ಲ. ಶಾಸಕ ವಿಜಯಾನಂದ ಕಾಶಪ್ಪನವರ ಸಮಾಜಕ್ಕೆ ಮೀಸಲಾತಿ ಕೊಡಿಸುವ ಬದಲಿಗೆ ಐಪಿಎಲ್ ಮ್ಯಾಚ್ ನೋಡಲು ಟಿಕೆಟ್ ಕೇಳುತ್ತಿದ್ದಾರೆ. ಸಮಾಜವನ್ನು ಬಳಸಿಕೊಂಡು ಶಾಸಕರಾದ ಬಳಿಕ ಸಮಾಜವನ್ನು ಮರೆಯುತ್ತಾರೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಟೀಕಿಸಿದರು.

ಬಾಗಲಕೋಟೆ ನಗರದಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ಪಂಚಮಸಾಲಿ ಸಮಾಜದ ಸಭೆಯಲ್ಲಿ ಪ್ರಚಾರ ನಡೆಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು 1ಲಕ್ಷ 16 ಸಾವಿರ ಕೋಟಿ ರೂ.ಸಾಲ ಮಾಡುವ ಜತೆಗೆ ಇನ್ನೊಂದು ಲಕ್ಷ ಕೋಟಿ ರೂ.ಸಾಲ ಮಾಡಿ ಯುಕೆಪಿ ಯೋಜನೆ ಪೂರ್ಣಗೊಳಿಸಿದ್ದರೆ ಇಲ್ಲಿಯ ಜನ ನೆನೆಪಿನಲ್ಲಿಟ್ಟುಕೊಳ್ಳುತ್ತಿದ್ದರು. ಅದನ್ನು ಮಾಡಲು ಇವರಿಗೆ ಮನಸ್ಸಿಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಒಕ್ಕಲಿಗರು, ಮರಾಠರು,ದಲಿತರು, ಹಿಂದುಳಿದವರು, ಬಡವರು ಎಂದರೆ ಅವರಿಗೆ ಅಲರ್ಜಿ ಕೇವಲ ಒಂದೇ ಸಮುದಾಯವನ್ನು ಓಲೈಕೆ ಮಾಡಿಕೊಳ್ಳುತ್ತಾರೆ ಎಂದು ದೂರಿದರು.

2028ಕ್ಕೆ ನಾನು ಏನಾದರೂ ಮುಖ್ಯಮಂತ್ರಿಯಾದರೆ ವಿದೇಶದಲ್ಲಿ ಆಸ್ತಿಯನ್ನು ಮಾಡುವುದಿಲ್ಲ, ರಾಜ್ಯವನ್ನು ಬಿಟ್ಟು ಹೋಗುವುದಿಲ್ಲ. ಮೊದಲ ಕ್ಯಾಬಿನೆಟ್‌ದಲ್ಲಿಯೇ ಮೀಸಲಾತಿಯನ್ನು ಜಾರಿಗೆ ತರುವ ಕೆಲಸ ಮಾಡುವೆ. ಹಿಂದುಗಳ ಮೇಲಿರುವ ಎಲ್ಲಾ ಕೇಸ್‌ಗಳನ್ನು ವಾಪಸ್ ಪಡೆಯುತ್ತೇನೆ. ಎಲ್ಲಾ ಸಮಾಜಕ್ಕೆ ನ್ಯಾಯ ಕೊಡುವೆ. ಹಿಂದೂಗಳ ಪ್ರತಿನಿಧಿಯಾಗಿ ಕೆಲಸ ಮಾಡುವೆನು. ಹೀಗಾಗಿ ಹಿಂದುಗಳು ಎಲ್ಲರೂ ಒಂದಾಗಿ ಚುನಾವಣೆಯನ್ನು ಎದುರಿಸಿದಾಗ ನಮ್ಮ ಅಭ್ಯರ್ಥಿಗಳು ಗೆಲ್ಲುತ್ತಾರೆ ಎಂದರು.

ನಾವೆಲ್ಲಾ ಒಂದಾಗಿದ್ದೇವೆ: ಹಿಂದೆ ನಾವು ಎಲ್ಲರೂ ಜಗಳಾಡಿದ್ದೇವೆ, ಈಗ ಎಲ್ಲರೂ ಒಂದಾಗಿದ್ದೇವೆ. ನಮ್ಮ ತಪ್ಪುಗಳಿಂದ ಕಳೆದ ಚುನಾವಣೆಗಳಲ್ಲಿ ಸೋಲು ಕಂಡಿದ್ದೇವೆ. ಎಲ್ಲರೂ ಒಬ್ಬರಿಗೊಬ್ಬರು ಅರ್ಥ ಮಾಡಿಕೊಂಡು ಸರಿಮಾಡಿಕೊಂಡಿದ್ದು ಯತ್ನಾಳ ಸೇರಿದಂತೆ ಎಲ್ಲರೂ ಒಗ್ಗೂಡಿ ಕೆಲಸ ಮಾಡುತ್ತಿದ್ದೇವೆ ಎಂದು ರಾಜ್ಯ ಉಪಾಧ್ಯಕ್ಷ ಮುರಗೇಶ ನಿರಾಣಿ ಹೇಳಿದರು.

ಉಪಚುನಾವಣೆಯಲ್ಲಿ ವೀರಣ್ಣ ಚರಂತಿಮಠವರು ಆಯ್ಕೆಯಾಗುತ್ತಿದ್ದಂತೆ ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರು, ವಿಶ್ವಗುರು ಬಸವೇಶ್ವರ ಮೂರ್ತಿ ಪ್ರತಿಷ್ಠಾಪನೆಯಾಗಲಿದೆ. ಆ ಮೂರ್ತಿಯ ಪ್ರತಿಷ್ಠಾಪನೆಯ ದಿನ ಭವ್ಯ ಮೆರವಣಿಗೆ ನಡೆಯಲಿದ್ದು ಅಂದು ಸೇರುವ ಜನರಿಗೆಲ್ಲ ನನ್ನಿಂದು ಪ್ರಸಾದ ವ್ಯವಸ್ಥೆ ಮಾಡುವೆ ಎಂದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ, ಶಾಸಕ ಅರವಿಂದ ಬೆಲ್ಲದ, ಶರಣು ಸಲಗರ, ಸಿದ್ದು ಸವದಿ, ಸಿ.ಸಿ.ಪಾಟೀಲ, ಪ್ರಭಾಕರ ಕೋರೆ, ಹಣಮಂತ ನಿರಾಣಿ, ಮುಖಂಡ ಹಣಮಂತ ಮಾವಿನಮರದ ಇದ್ದರು.

ಬ್ಲ್ಯಾಕ್‌ಮೇಲ್ ರಾಜಕಾರಣ ಮಾಡಿಲ್ಲ

ಬಿಜೆಪಿಯಿಂದ ನಾನು ಉಚ್ಚಾಟನೆಯಾದರೂ ನನ್ನೊಂದಿಗೆ ಪಕ್ಷದ ಎಲ್ಲ ನಾಯಕರು ಒಳ್ಳೆಯ ಸ್ನೇಹ ಹೊಂದಿದ್ದಾರೆ. ನಾನು ಬಿಜೆಪಿ ಪಕ್ಷವನ್ನು ಎಂದೂ ವಿರೋಧ ಮಾಡಿಲ್ಲ. ಬ್ಲ್ಯಾಕ್ ಮೇಲ್ ರಾಜಕಾರಣವನ್ನು ಮಾಡಲು ಯಾವತ್ತೂ ಪ್ರಯತ್ನಿಸಿಲ್ಲ ಎಂದು ವಿಜಯಪುರ ಶಾಸಕ ಬಸವನಗೌಡ ಪಾಟೀಲ ಯತ್ನಾಳ ಹೇಳಿದರು. ಬಿಜೆಪಿ ಪಕ್ಷಕ್ಕೆ ಸೇರಿಸಿಕೊಳ್ಳಿ ಎಂದು ಯಾರಿಗೂ ದುಂಬಾಲು ಬಿದ್ದಿಲ್ಲ. ಪಕ್ಷಕ್ಕೆ ನನ್ನ ಅವಶ್ಯಕತೆ ಎನಿಸಿದರೆ ಹೈಕಮಾಂಡ್ ಸೇರಿಸಿಕೊಳ್ಳಲಿ. ಬಿಜೆಪಿ ಪಕ್ಷ ನನಗೆ ಕೇಂದ್ರ ಮಂತ್ರಿಸ್ಥಾನ ಸೇರಿ ಹಲವಾರು ಹುದ್ದೆಗಳನ್ನು ನೀಡಿ ಗೌರವ ಕೊಟ್ಟಿದೆ. ಏ.9ರವರಗೆ ಬಿಜೆಪಿ ಪಕ್ಷದ ಪರ ಕೆಲಸ ಮಾಡುತ್ತೇನೆ. ಮುಂದೆ ರಾಜಕಾರಣ ಬದಲಾಗಬಹುದು ಎಂದರು. ಬಸನಗೌಡ ಪಾಟೀಲ ಯತ್ನಾಳ ಒಬ್ಬಂಟಿ ಅಲ್ಲ. ನಮ್ಮೊಂದಿಗೆ ಪರಿವಾರ ಇದೆ. ತಾಂತ್ರಿಕ ಸಮಸ್ಯೆಯಿಂದ ಬಿಜೆಪಿ ಬಿಟ್ಟಿದ್ದೇನೆ. ಬಾಗಲಕೋಟೆಯಲ್ಲಿ ಕಾರ್ಯಕರ್ತರು ಚರಂತಿಮಠ ಪರ ಪ್ರಚಾರಕ್ಕೆ ಕರೆದಿದ್ದರೂ ಅದಕ್ಕೆ ಬಂದಿದ್ದೇನೆ. ದಾಣಗೆರೆಯಲ್ಲಿ ಕರೆದರೂ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ನಡೆಸುವೆ ಎಂದರು.

ಸೇಬು ಸಾಗಿಸುತ್ತಿದ್ದ ಗೂಡ್ಸ್ ವಾಹನ ಪಲ್ಟಿ

ಬೆಳಗಾವಿ: ನಗರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ಸೇಬು ಸಾಗಿಸುತ್ತಿದ್ದ ಗೂಡ್ಸ್ ವಾಹನ ಪಲ್ಟಿಯಾಗಿರುವ ಘಟನೆ ನಡೆದಿದೆ.

ಗೂಡ್ಸ್ ವಾಹನ ಮುಂಬೈನಿಂದ ದಾವಣಗೆರೆಗೆ ಸೇಬು ಸಾಗಿಸುತ್ತಿತ್ತು. ವಾಹನ ಪಲ್ಟಿಯಾಗಿದ್ದರಿಂದ ಲಕ್ಷಾಂತರ ಮೌಲ್ಯದ ಸೇಬು ಹಣ್ಣಿನ ಬಾಕ್ಸ್‌ಗಳು ರಸ್ತೆಪಾಲಾಗಿದೆ. ಅಪಘಾತದಲ್ಲಿ ಗೂಡ್ಸ್ ವಾಹನ ಚಾಲಕನಿಗೆ ಸಣ್ಣಪುಟ್ಟ ಗಾಯವಾಗಿದೆ.

ವಾಹನ ಪಲ್ಟಿಯಾದ ಕೆಲಕಾಲ ಟ್ರಾಫಿಕ್ ಸಮಸ್ಯೆಯಾಗಿತ್ತು. ಘಟನಾ ಸ್ಥಳಕ್ಕೆ ಉತ್ತರ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಸುಗಮ ಸಂಚಾರಕ್ಕೆ ದಾರಿ ಮಾಡಿಕೊಡಲಾಯಿತು.



ಪರೀಕ್ಷೆ ಬರೆದು ತಂದೆಯ ಅಂತ್ಯಸಂಸ್ಕಾರದಲ್ಲಿ ಭಾಗಿಯಾದ ವಿದ್ಯಾರ್ಥಿ

ಬಾದಾಮಿ: ತಾಲೂಕಿನ ಹೆಬ್ಬಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಶರಣಪ್ಪ ಹಾಲಪ್ಪ ಹಾಲಪ್ಪನವರ ಇವರ ತಂದೆ ಹಾಲಪ್ಪ ಬುಧವಾರ ನಿಧನರಾದರೂ ಸಹಿತ ಗುರುವಾರ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗುವ ಮುನ್ನ ಸಮಾಜ ವಿಜ್ಞಾನ ವಿಷಯದ ಪರೀಕ್ಷೆ ಬರೆದು ನಂತರ ಅಂತ್ಯಸಂಸ್ಕಾರದಲ್ಲಿ ಭಾಗಿಯಾದರು.

ತಂದೆ ನಿಧನದ ನಂತರ ಪರೀಕ್ಷೆಗೆ ಗೈರು ಹಾಜರಾಗಬಾರದು ಎಂದು ವಿದ್ಯಾರ್ಥಿಗೆ ಮನವರಿಕೆ ಮಾಡಿ ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ ಇವರು ವಿಶೇಷ ಕಾಳಜಿ ವಹಿಸಿ ಮಗುವನ್ನು ಸ್ವತಃ ತಮ್ಮ ವಾಹನದಲ್ಲಿ ಕರೆದುಕೊಂಡು ಹೋಗಿ ಪರೀಕ್ಷೆ ಬರೆಯಲು ಸಹಾಯ ಮಾಡಿದರು. ನಂತರ ತಂದೆಯ ಅಂತ್ಯಸಂಸ್ಕಾರದಲ್ಲಿ ಭಾಗಿಯಾದರು.



ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ

ಮಿನಿ ವಿಧಾನ ಸೌಧ ಪಕ್ಕದಲ್ಲಿ, ಸ್ಟೇಶನ್ ಮುಖ್ಯ ರಸ್ತೆ, ಕಲಬುರಗಿ–585102
Email:commissionergda@gmail.com/ Phone Number: 08472-221214

ಸಂಖ್ಯೆ :ಕನಪ್ರಾ/ನಯೋಸ/ವಿನ್ಯಾಸ/2007–08 ದಿನಾಂಕ: 01–04–2026

–ಃ ಸಾರ್ವಜನಿಕ ಪ್ರಕಟಣೆ ಃ–

ಕಲಬುರಗಿ ತಾಲೂಕಿನ ರಾಜಾಪೂರ ಗ್ರಾಮದ ಸರ್ವೆ ನಂ. 26/2 ರ ಒಟ್ಟು ವಿಸ್ತೀರ್ಣ 02 ಎಕರೆ 00 ಗುಂಟೆ ಜಮೀನಿಗೆ ದಿನಾಂಕ: 04–10–2008 ರಂದು ವಸತಿ ಉಪಯೋಗದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ವಿನ್ಯಾಸದ ಕುರಿತು ಶ್ರೀ ಮಲ್ಲಿಕಾರ್ಜುನ ತಂದೆ ಶರಣಪ್ಪ ಕೋಡ್ಲಿ ಸಾ॥ ಕಲಬುರಗಿ ಇವರು ದೂರನ್ನು ಸಲ್ಲಿಸಿ ವಿನ್ಯಾಸದ ಗಡಿ ಗುರುತಿಸುವ ಸಮಯದಲ್ಲಿ ತಪ್ಪಾಗಿ ಡಿಮಾರ್ಕೇಶನ್/ ಮಾರ್ಪಡಿಸಿ ಸಿ.ಎ ನಿವೇಶನ, ಉದ್ಯಾನವನ ಮತ್ತು ರಸ್ತೆ ಜಾಗೆಯಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿ ಪ್ರಾಧಿಕಾರದಿಂದ ಅನುಮೋದನೆಯಾದ ವಿನ್ಯಾಸದಲ್ಲಿ ತಪ್ಪಾಗಿ ಜಾಗದ ಮೇಲೆ ಅಳವಡಿಸಲಾಗಿರುತ್ತದೆ.

ಸಾರ್ವಜನಿಕರಿಗೆ ಹಾಗೂ ವಿನ್ಯಾಸದಲ್ಲಿಯ ನಿವೇಶನಗಳ/ ಕಟ್ಟಡ ಮಾಲೀಕರಿಗೆ ತಿಳಿಸುವುದು/ಎಚ್ಚರಿಕೆ ನೀಡುವದೇನೆಂದರೆ ಸಿ.ಎ. ನಿವೇಶನವು ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಹಾಗೂ ಉದ್ಯಾನವನ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಕುಸನೂರ ಇವರ ಆಸ್ತಿಯಾಗಿದ್ದು ಸಿ.ಎ. ನಿವೇಶನ ಉದ್ಯಾನವನ ಹಾಗೂ ರಸ್ತೆಗಳ ಜಾಗೆಯಲ್ಲಿ ಅಳವಡಿಸಿದ ನಿವೇಶನ ಹಾಗೂ ಕಟ್ಟಡಗಳು 15 ದಿನಗಳೊಳಗಾಗಿ ತಾವು ಖುದ್ದಾಗಿ ತೆರವುಗೊಳಿಸಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಸದರಿ ಜಾಗೆಗಳನ್ನು ಪ್ರಾಧಿಕಾರದಿಂದ ತೆರವುಗೊಳಿಸಿ ಅದಕ್ಕೆ ತಗಲುವ ವೆಚ್ಚವನ್ನು ನಿವೇಶನಗಳ/ ಕಟ್ಟಡ ಮಾಲೀಕರಿಂದ ವಸೂಲಿ ಮಾಡಿಕೊಳ್ಳಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/03/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರಕಾರ (ಅರಣ್ಯ ಇಲಾಖೆ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಪ್ರಾದೇಶಿಕ ಅರಣ್ಯ ಉಪ–ವಿಭಾಗ, ಕಲಬುರಗಿ

ಸಂ:ಸಅಸಂ/ಉವಿಕ/GUG /Nimans/ಅಡ/ಗಿಡ.ಕಟಾ/ಆಕ್ಷೇಪಣೆ /ಸಿ.ಆರ್.–2025–26 ದಿನಾಂಕ : 02.04.2026

ಸಾರ್ವಜನಿಕ ಪ್ರಕಟಣೆ

ಕಲಬುರಗಿ ನಗರದ ಗುಲಬರ್ಗಾ ವಿಶ್ವವಿದ್ಯಾಲಯ ಆವರಣದಲ್ಲಿರುವ ವಿವಿಧ ಜಾತಿಯ ಮರಗಳ ಕಟಾವಣೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಅ&ಕುಕ ಇಂಜಿನಿಯರಿಂಗ್ ಉಪ ವಿಭಾಗ ಕಲಬುರಗಿ ಇವರು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯ ಮೇರೆ ಸ್ಥಳ ಪರಿಶೀಲನೆ ಮಾಡಲಾಗಿ ಸದರಿ ಸ್ಥಳವಾದ ಕಲಬುರಗಿ ನಗರದ ಗುಲಬರ್ಗಾ ವಿಶ್ವವಿದ್ಯಾಲಯ ಆವರಣದಲ್ಲಿ Construction of Nimans & De-Addiction Center in the premises of Gulbarga University ಕಾಮಗಾರಿ ಕೈಗೊಳ್ಳುತ್ತಿದ್ದು, ಸದರಿ ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ವಿವಿಧ ಜಾತಿಯ 216 ಮರಗಳಿದ್ದು ಕಾರಣ ಸದರಿ 216 ಮರಗಳ ಕಟಾವಣೆಗೆ ಅನುಮತಿ ನೀಡಬೇಕಾಗಿದ್ದು, ಕಾರಣ ಸದರಿ 216 ಮರಗಳ ಕಟಾವಣೆಗೆ ಸಾರ್ವಜನಿಕರಿಗೆ ಆಕ್ಷೇಪಣೆಗಳೇನಾದರು ಇದ್ದರೆ ಈ ಕೆಳ ವಿವರಿಸಿದ ಅಧಿಕಾರಿಯವರಿಗೆ ದಿನಾಂಕ : 15.04.2026 ನಿಗಧಿತ ದಿನಾಂಕದ ಒಳಗಾಗಿ ಕಛೇರಿ ಸಮಯದಲ್ಲಿ ಬೇಟಿ ನೀಡಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸಲ್ಲಿಸಬಹುದಾಗಿರುತ್ತದೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ಅರಣ್ಯ ಉಪ ವಿಭಾಗ ಕಲಬುರಗಿ, ಮೊಬೈಲ್ ಸಂಖ್ಯೆ : +91 9481993202 ಇ–ಮೇಲ್ ಐಡಿ : dcf_tgulbarga@yahoo.co.in

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಪ್ರಾದೇಶಿಕ ಅರಣ್ಯ ಉಪ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ./ಕಲಬುರಗಿ/08/ದೇಶಪಾಂಡೆ ಪಬ್ಲಿಸಿಟಿ/2026–27

ಹುಬ್ಬಳ್ಳಿ – ಧಾರವಾಡ ಮಹಾನಗರ ಪಾಲಿಕೆ

ಘನತ್ಯಾಜ್ಯ ವಸ್ತು ನಿರ್ವಹಣೆ ವಿಭಾಗ, ಹುಬ್ಬಳ್ಳಿ.

ಸಂಖ್ಯೆ : ಎಚ್.ಡಿ.ಎಂ.ಸಿ./74/05/2026–27 ದಿನಾಂಕ : 02–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಪಾಲಿಕೆಯು 15ನೇ ಹಣಕಾಸು ಹಾಗೂ ಸಾಮಾನ್ಯ ನಿಧಿ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಟೆಂಡರ್ ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
01	DMA/2026-27/IND6153	79,53,600.00	1,59,072.00	13–04–2026 ರ ಸಂಜೆ 4.30 ಘಂಟೆ	15–04–2026 ರ ಬೆಳಿಗ್ಗೆ 10.30 ಘಂಟೆ
02	DMA/2025-26/IND5857	99,60,000.00	1,99,200.00		
03	DMA/2026-27/SE7638	49,84,320.00	99,686.00		
04	DMA/2026-27/SE7639	49,38,300.00	98,766.00		

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಹೆಚ್ಚಿನ ಮಾಹಿತಿಯನ್ನು ದಿನಾಂಕ : 03–04–2026 ರಿಂದ www.kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು, ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪರಿಸರ),
ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ಡಿಐಪಿಆರ್/ಧಾರವಾಡ/11/ಮಣಿಪಾಲ್/2026–27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–1/2025–26/7202 ದಿನಾಂಕ: 31–03–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಮತ್ತು ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https://kppp.karnataka.gov.in/ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2025-26/BD/WORK_INDENT35282	5.00
2)	PWD/2025-26/OW/WORK_INDENT35283	5.00
3)	PWD/2025-26/OW/WORK_INDENT35284	5.00
4)	PWD/2025-26/OW/WORK_INDENT35285)	3.50
5)	PWD/2025-26/BD/WORK_INDENT35286	3.50
6)	PWD/2025-26/BD/WORK_INDENT35324 (RESERVED FOR SC CATEGORY)	4.00
7)	PWD/2025-26/BD/WORK_INDENT35325 (RESERVED FOR CATEGORY-II(A))	4.00
8)	PWD/2025-26/BD/WORK_INDENT35287	5.00
9)	PWD/2025-26/BD/WORK_INDENT35288	5.00
10)	PWD/2025-26/BD/WORK_INDENT35260 (RESERVED FOR SC CATEGORY)	5.00
11)	PWD/2025-26/BD/WORK_INDENT35261	5.00
12)	PWD/2025-26/BD/WORK_INDENT35262	5.00
13)	PWD/2025-26/BD/WORK_INDENT35263 (RESERVED FOR CATEGORY-II(A))	3.00
14)	PWD/2025-26/BD/WORK_INDENT35289	3.00
15)	PWD/2025-26/BD/WORK_INDENT35294 (RESERVED FOR ST CATEGORY)	5.00
16)	PWD/2025-26/BD/WORK_INDENT35290	5.00
17)	PWD/2025-26/OW/WORK_INDENT35291 (RESERVED FOR ST CATEGORY)	4.00
18)	PWD/2025-26/BD/WORK_INDENT35292 (RESERVED FOR CATEGORY-I)	3.00
19)	PWD/2025-26/BD/WORK_INDENT35293 (RESERVED FOR CATEGORY-II(A))	3.00
20)	PWD/2025-26/BD/WORK_INDENT35339	5.00
21)	PWD/2025-26/BD/WORK_INDENT35340	5.00
22)	PWD/2025-26/BD/WORK_INDENT35341	5.00
23)	PWD/2025-26/BD/WORK_INDENT35343 (RESERVED FOR SC CATEGORY)	3.00
24)	PWD/2025-26/BD/WORK_INDENT35344 (RESERVED FOR SC CATEGORY)	5.00
25)	PWD/2025-26/BD/WORK_INDENT35346	5.00
26)	PWD/2025-26/BD/WORK_INDENT35347	5.00
27)	PWD/2025-26/BD/WORK_INDENT35264 (RESERVED FOR ST CATEGORY)	5.00
28)	PWD/2025-26/BD/WORK_INDENT35265 (RESERVED FOR CATEGORY-II(A))	5.00
29)	PWD/2025-26/BD/WORK_INDENT35266 (RESERVED FOR CATEGORY-II(A))	5.00
30)	PWD/2025-26/BD/WORK_INDENT35348	5.00
31)	PWD/2025-26/BD/WORK_INDENT35192	5.00
32)	PWD/2025-26/BD/WORK_INDENT34270	8.90
33)	PWD/2025-26/BD/WORK_INDENT34997	17.00
34)	PWD/2025-26/BD/WORK_INDENT35326	20.00
35)	PWD/2025-26/RD/WORK_INDENT34489	150.00
36)	PWD/2025-26/BD/WORK_INDENT34300	100.00
37)	PWD/2025-26/BD/WORK_INDENT35028	300.00
38)	PWD/2025-26/BD/WORK_INDENT35028	260.00
39)	PWD/2025-26/BD/WORK_INDENT35025	100.00
40)	PWD/2025-26/BD/WORK_INDENT35240	300.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ:**07–04–2026** ರಂದು **12.00** ಗಂಟೆಯ ವರೆಗೆ. ಆ)ಕೆಪಿಪಿ–ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **10–04–2026** ರಂದು **16.00** ಗಂಟೆಯ ವರೆಗೆ ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **13–04–2026** ರಂದು **16.30** ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/11

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಕಾಶಿಪುರ ವೃತ್ತ, ಶಿವಮೊಗ್ಗ–577204

ಐ.ಎಫ್.ಟಿ. ಸಂ:51/2025–26 ಮೊದಲ ಕರೆ/ಎರಡನೇ ಕರೆ/ಮೂರನೆ ಕರೆ
ದಿ: 31.03.2026

ಸೆಕ್ಷನ್ 1: ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)– ಕೆಡಬ್ಲ್ಯೂ – 2/3/4

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲ್ಯೂ–2/3/4 ಅನ್ವಯ ಶಿವಮೊಗ್ಗ ಉಪವಿಭಾಗದ ವ್ಯಾಪ್ತಿಯಲ್ಲಿನ 05 ಕಾಮಗಾರಿಗಳ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ.40.10 ಲಕ್ಷದಿಂದ ರೂ.161.26 ಲಕ್ಷಗಳು. ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್ ಸೈಟ್ ವಿಳಾಸ: http:/kppp.karnataka.gov.inನಲ್ಲಿ ದಿನಾಂಕ: 31.03.2026 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ: 15.04.2026 17:00 ಘಂಟೆ.ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/05/04/09

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಎಂ.ಪಿ.ವಿಭಾಗ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ
ದೂರವಾಣಿ: 080–27271259 ಇ–ಮೇಲ್: eempdrmgm@gmail.com

ಸಂಖ್ಯೆ: ಕಾಇ/ಎಂ.ಪಿ.ವಿಭಾಗ/ರಾ.ನ/ಟೆಂ–01/2026–27 ದಿನಾಂಕ: 02.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ 4701 ಲೆಕ್ಕ ಶೀರ್ಷಿಕೆಯಡಿಯಲ್ಲಿ ನೆಲಮಂಗಲ ವಿಧಾನಸಭಾ ಕ್ಷೇತ್ರದಡಿ ಬರುವ ವಿವಿಧ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ, ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ, ಪ್ರಿ ಬಿಡ್ ಸಭೆಯ ದಿನಾಂಕ, ಇ.ಎಂ.ಡಿ ಮುಂತಾದ ಇತರೆ ಮಾಹಿತಿಗಳನ್ನು **https://kppp.karnataka.gov.in** ಯಿಂದ **download** ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಎಂ.ಪಿ.ವಿಭಾಗ
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.

DIPR/BSD/05/SA/2026-27

ಕರ್ನಾಟಕ ಸರ್ಕಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ. ದಾವಣಗೆರೆ ಜಿಲ್ಲೆ

ದೂ. ಸಂ: 08189 228044. Email: ghchannagiri@gmail.com

ಕ್ರ.ಸಂ.ಸಾಆಚ/308/2026–27 ದಿನಾಂಕ: 02.04.2026

ಇ–ಟೆಂಡರ್ ಪ್ರಕಟಣೆ

2026–27ನೇ ಸಾಲಿನಲ್ಲಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ ದಾವಣಗೆರೆ ಜಿಲ್ಲೆ ಇಲ್ಲಿ ನಾನ್ ಕ್ಲಿನಿಕಲ್ ಮತ್ತು 'ಡಿ' ಗ್ರೂಪ್ ಸೇವೆಗಳನ್ನು ಪಡೆಯಲು ಉಲ್ಲೇಖ (3)ರಲ್ಲಿ ಜಿಲ್ಲಾಧಿಕಾರಿಗಳು, ದಾವಣಗೆರೆ, ರವರು ಅನುಮತಿ ನೀಡಿರುವಂತೆ, ಅರ್ಹ ಟೆಂಡರ್‌ದಾರರಿಂದ / ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 2000 ಅನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಪ್ರಕಟಣೆ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು, ಇ–ಪ್ರಕ್ಯೂರ್‌ಮೆಂಟ್ ವಿಳಾಸ: http://kppp.karnataka.gov.in ರಲ್ಲಿ ಪರೀಶಿಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸುವುದು. ಇ–ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು, ಟೆಂಡರ್ ಇ.ಎಂ.ಡಿ ಮೊತ್ತ ಹಾಗೂ ಇತರೆ ವಿವರಗಳನ್ನು ಗಮನಿಸಿ ಕ್ರಮ ವಹಿಸುವುದು ಟೆಂಡರ್ ವಿವರ ಈ ಕೆಳಕಂಡಂತೆ ಇರುತ್ತದೆ.

(1) ಟೆಂಡರ್ ನ್ನು ಇ–ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ 02/03/2026 ರಿಂದ 02/05/2026 ಅಪರಾಹ್ನ 4.30ರ ವರೆಗೆ (2) ದ್ವಿ–ಲಕೋಟೆಯ ಪದ್ಧತಿಯಂತೆ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:02/05/2026ರ ಅಪರಾಹ್ನ 4.30ರ ವರೆಗೆ (3) ದ್ವಿ–ಲಕೋಟೆಯ ಪದ್ಧತಿಯಂತೆ ಇ–ಪೋರ್ಟಲ್ ನಲ್ಲಿ ಟೆಂಡರ್ (ತಾಂತ್ರಿಕ ದಾಖಲಾತಿ) ತೆರೆಯುವ ದಿನಾಂಕ 04/05/2026ರ ಸಂಜೆ 4.30 ಗಂಟೆಗೆ. (4) ಟೆಂಡರ್ ಅಂದಾಜು ಮೊತ್ತ ರೂ.59,00,000.00 (5) ಇಎಂಡಿ ಮೊತ್ತ ರೂ. 1,18,000.00 ಇ–ಪ್ರಕ್ಯೂರ್‌ಮೆಂಟ್ ವಿಳಾಸ:http://kppp.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸುವುದು.

ಸಹಿ/– ಮುಖ್ಯ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ.

ವಾಸಾಇ/ಡಿವಿಜಿ/10/
ಕೆಎಸ್‌ಎಂಸಿಎ/2026–27

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
(ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು–560009)

ಸಂಖ್ಯೆ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಟಿಎನ್‌ಡಿ/ಮೈನಾರಿಟಿ/ಪಿಎಂಸಿ/2026–27 ದಿನಾಂಕ: 02.04.2026

ಸಲಹಾ ಸೇವೆಗಳಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಕೆಳಕಂಡ ಕಾರ್ಯಗಳ ಬಗ್ಗೆ ಸಲಹಾ ಸೇವೆಗಳನ್ನು ಒದಗಿಸಲು ಇ–ಟೆಂಡರ್ ಆಹ್ವಾನಿಸಿದೆ.

ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆ ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ನೀರು ಸರಬರಾಜು ಒದಗಿಸುವಿಕೆ ಹಾಗೂ ಇತರೆ ಸಂಬಂಧಪಟ್ಟ ಕಾಮಗಾರಿಗಳಿಗಾಗಿ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. (ಕಾಮಗಾರಿಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ಲಗತ್ತಿಸಲಾಗಿದೆ).

ಕ್ರ. ಸಂ.	ಕಾಮಗಾರಿ ಹೆಸರು	ಇಎಂಡಿ (ರೂ.ಲಕ್ಷಗಳಲ್ಲಿ)
1	ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆ ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ನೀರು ಸರಬರಾಜು ಒದಗಿಸುವಿಕೆ ಹಾಗೂ ಇತರೆ ಸಂಬಂಧಪಟ್ಟ ಕಾಮಗಾರಿಗಳಿಗಾಗಿ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು (ಪ್ಯಾಕೇಜ್–1)	1.50
2	ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆ ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ನೀರು ಸರಬರಾಜು ಒದಗಿಸುವಿಕೆ ಹಾಗೂ ಇತರೆ ಸಂಬಂಧಪಟ್ಟ ಕಾಮಗಾರಿಗಳಿಗಾಗಿ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. (ಪ್ಯಾಕೇಜ್–2)	2.10
3	ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆ ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ನೀರು ಸರಬರಾಜು ಒದಗಿಸುವಿಕೆ ಹಾಗೂ ಇತರೆ ಸಂಬಂಧಪಟ್ಟ ಕಾಮಗಾರಿಗಳಿಗಾಗಿ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. (ಪ್ಯಾಕೇಜ್–3)	1.80
4	ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆ ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ನೀರು ಸರಬರಾಜು ಒದಗಿಸುವಿಕೆ ಹಾಗೂ ಇತರೆ ಸಂಬಂಧಪಟ್ಟ ಕಾಮಗಾರಿಗಳಿಗಾಗಿ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. (ಪ್ಯಾಕೇಜ್–4)	1.20
5	ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆ ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ನೀರು ಸರಬರಾಜು ಒದಗಿಸುವಿಕೆ ಹಾಗೂ ಇತರೆ ಸಂಬಂಧಪಟ್ಟ ಕಾಮಗಾರಿಗಳಿಗಾಗಿ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. (ಪ್ಯಾಕೇಜ್–5)	1.50
6	ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆ ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ನೀರು ಸರಬರಾಜು ಒದಗಿಸುವಿಕೆ ಹಾಗೂ ಇತರೆ ಸಂಬಂಧಪಟ್ಟ ಕಾಮಗಾರಿಗಳಿಗಾಗಿ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. (ಪ್ಯಾಕೇಜ್–6)	1.80
7	ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ರಸ್ತೆ ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ನೀರು ಸರಬರಾಜು ಒದಗಿಸುವಿಕೆ ಹಾಗೂ ಇತರೆ ಸಂಬಂಧಪಟ್ಟ ಕಾಮಗಾರಿಗಳಿಗಾಗಿ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. (ಪ್ಯಾಕೇಜ್–7)	2.10

"ಪಿಎಂಸಿ ಸಲಹೆಗಾರರು/ಟೆಂಡರುದಾರರಿಗೆ ಗರಿಷ್ಠ 2 ಪ್ಯಾಕೇಜುಗಳಿಗೆ ಮಾತ್ರ ಟೆಂಡರ್ ಸಲ್ಲಿಸಲು ಅವಕಾಶ ನೀಡಲಾಗಿದೆ.
ಟೆಂಡರಿನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಸಂಸ್ಥೆಗಳು ಇ–ಆಡಳಿತ ಕಾರ್ಯಾಲಯದ ಹೊಸ ವೆಬ್‌ಸೈಟ್: **www.kppp.karnataka.gov.in** ಮೂಲಕ ಮಾತ್ರ ಟೆಂಡರ್ ನೋಡಬಹುದು, ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಸಲ್ಲಿಸಬಹುದು. ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ ಮತ್ತು ಸಮಯದ ಒಳಗೆ ವಿದ್ಯುನ್ಮಾನ ವಿಧಾನದಲ್ಲಿ (ಇಂಟರ್‌ನೆಟ್ ಮೂಲಕ ಆನ್‌ಲೈನ್‌ಲ್ಲಿ) ಸಲ್ಲಿಸಬೇಕು. ಇ–ಪ್ರೋಕ್ ಸಹಾಯವಾಣಿ ಸಂಪರ್ಕ ಸಂ: + 91 9240214000, + 91 9240214001.
ವಿಚಾರಣೆಯ ಕೊನೆಯ ದಿನಾಂಕ ಮತ್ತು ಸಮಯ: **18.04.2026** ರಂದು **14:00** ಗಂಟೆವರೆಗೆ.
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **18.04.2026** ರಂದು **15:00** ಗಂಟೆವರೆಗೆ
ತಾಂತ್ರಿಕ ಬಿಡ್ ತೆರೆಯು ದಿನಾಂಕ: **22.04.2026** ರಂದು **15:00** ಗಂಟೆಗೆ.
ಆರ್ಥಿಕ ಬಿಡ್ ತೆರೆಯು ದಿನಾಂಕ: **24.04.2026** ರಂದು **15:00** ಗಂಟೆಗೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ:
ಮುಖ್ಯ ಅಭಿಯಂತರರು (ಬೆಂಗಳೂರು)
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09
ದೂರವಾಣಿ: 080–28015604/ +91 82176 33267
ಇ–ಮೇಲ್:–tenderworks@kridl.net/ ddworkskridl@gmail.com

ಸಹಿ/– ಮುಖ್ಯ ಅಭಿಯಂತರರು, (ಬೆಂಗಳೂರು)

ವಾಸಾಸಂಇ/ಉನಿ–ಸಿ.ಪಿ/12/ಕೆಎಸ್‌ಎಂಸಿಎ/2026–27

IN THE COURT OF THE HON'BLE PRINCIPAL SENIOR CIVIL JUDGE/ CJM, AT BALLARI
O.S. NO.433/2024

Between: Mr. Aslam Baig & others .... **Plaintiffs**

AND

Smt. Jaibunnisa Begum & others ...**Defendants**

NOTICE TO DEFENDANT No. 1 & 2:-
1 Smt. Jaibunnisa Begum, W/o Mr. M A Rahaman Begum, aged about 66 years, House wife, R/o Ward No. 29, TB. Sanatorium, Ramanjayana Nagara, Ballari
2 Sri. Rakesh Kumar Sharma, S/o Sri. Veni, Hindu, aged about 38 years, Private sector, R/o D No.135/2, Shankargudda Colony Thoranagallu, Sandur Taluk, Ballari District.

WHEREAS THE PLAINITFFS HAVE FILED ABOVE SUIT FOR A DECREE OF DECLARATION AND PERMANENT INJUNCTION IN RESPECT OF THE SUIT SCHEDULE MENTIONED PROPERTY. YOU ARE HEREBY REQUIRED TO APPEAR BEFORE THIS COURT IN PERSON OR THROUGH A PLEADER WHO SHALL BE INSTRUCTED AND LIABLE TO ANSWER ALL MATERIAL QUESTIONS ON 25th DAY OF APRIL 2026 AT 11 '0' CLOCK IN THE FORENOON TO SHOW CAUSE.
TAKE NOTICE THAT IN DEFAULT OF YOUR APPEARANCE ON THE DAY ABOVE MENTIONED, THE ABOVE SUIT WILL BE HEARD AND DETERMIND IN YOUR ABSENCE.
GIVEN UNDER MY HAND AND SEAL OF THIS COURT THIS 26th DAY OF March 2026.

BOC
Chief Ministerial Officer
Principal Senior Civil Judge, Ballari
Anil Kumar Kulkarni
Advocate for Plaintiffs

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 77/2026

ಅರ್ಜಿದಾರರು :ದುರುಗಪ್ಪ ಮತ್ತು ಇತರರು
ವಿರುದ್ಧ
ಎದುರುದಾರರು:ಮಾನ್ಯ ತಹಶೀಲ್ದಾರರು ಮತ್ತು ಜನನ ಮರಣ ನೊಂದಣಾಧಿಕಾರಿಗಳು ತಾಲೂಕು ಕಛೇರಿ, ಸಂಡೂರು,

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ 1ರವರ ತಂದೆಯವರಾದ ಧರ್ಮಪ್ಪ ತಂದೆ ಹನುಮಪ್ಪ ಇವರು ದಿನಾಂಕ: 08.12.2014 ರಂದು ಉತ್ತರಮಲ್ಲೆ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 08–05–2026 ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಪಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 01–04–2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು

ಹುಲಿಗೇಶ. ಎ
ಅರ್ಜಿದಾರರ ಪರ ವಕೀಲರು ಸಂಡೂರು

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ,

ನವನಗರ, ಹುಬ್ಬಳ್ಳಿ

ಸಂ. ಹು.ಧಾ.ನ.ಪ್ರಾ/ಅವಿ/.ಟೆ.ನೋ.ನಂ.29/2025–26/03 ದಿನಾಂಕ: 01.04.2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000 ರ ನಿಯಮದಂತೆ ಸ್ಟ್ಯಾಂಡರ್ಡ ಟೆಂಡರ್ ಬಿಡ್ ಡಾಕ್ಯುಮೆಂಟ್ KW-3 ರನ್ವಯ a) (INDENT No 79) ಕಾಮಗಾರಿಗೆ ಟೆಂಡರನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಲೋಕೋಪಯೋಗಿ ಇಲಾಖೆ ಲೈಸನ್ಸ್ ಹೊಂದಿದ ಅರ್ಹ ಸಿವಿಲ್ ಗುತ್ತಿಗೆದಾರರು ಕೆ.ಪಿ.ಪಿ.ಪಿ **(www.kppp.karnataka.gov.in)** ಮುಖಾಂತರ ಟೆಂಡರನಲ್ಲಿ ಈ ಕೆಳಗೆ ನಿಗದಿಪಡಿಸಿರುವ ದಿನಾಂಕ ಹಾಗೂ ಸಮಯದೊಳಗಾಗಿ ಭಾಗವಹಿಸಬಹುದು.

1) ಟೆಂಡರ ದಾಖಲೆಗಳನ್ನು ಕರ್ನಾಟಕ ಸರಕಾರದ ಕೆ.ಪಿ.ಪಿ.ಪಿ ಪೋರ್ಟಲನಲ್ಲಿ ನೋಡಬಹುದಾಗಿದೆ. **2)** ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **21.04.2026** ರಂದು ಸಾಯಂಕಾಲ **16.00 ಘಂಟೆ. 3)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **23.04.2026 ರಂದು ಸಾಯಂಕಾಲ 16.00 ಘಂಟೆ. 4)** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **28.04.2026 ರಂದು ಸಾಯಂಕಾಲ 16.00 ಘಂಟೆಗೆ,** ಆಗದಿದ್ದಲ್ಲಿ ಗೊತ್ತುಪಡಿಸಿದ ದಿನಾಂಕದಂದು ತೆರೆಯಲಾಗುವುದು. ಎಲ್ಲ ವಿವರಗಳನ್ನು ಹಾಗೂ ನಿಯಮಗಳನ್ನು ಮಾದರಿ ಗುತ್ತಿಗೆ ದಾಖಲೆ KW-3 ದಲ್ಲಿ ವಿವರಿಸಲಾಗಿದ್ದು, ಗುತ್ತಿಗೆದಾರರು ಗುತ್ತಿಗೆ ನಿಯಮಾವಳಿಗಳನ್ನು ಸಂಪೂರ್ಣವಾಗಿ ಅಭ್ಯಸಿಸಿ ಅರ್ಥೈಸಿಕೊಳ್ಳಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಇಚ್ಛಿಸಿದಲ್ಲಿ ಪ್ರಾಧಿಕಾರದ ಅಭಿವೃದ್ಧಿ ವಿಭಾಗದಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು ಹಾಗೂ ಏನಾದರೂ ತಿದ್ದುಪಡಿ/ಸೇರ್ಪಡೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲನಲ್ಲಿಯೇ ಪ್ರಕಟಿಸಲಾಗುವುದು.

ಸಹಿ/–
ಆಯುಕ್ತರು,
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ.

ವಾಸಾಸಂಇ/ಧಾ/ದಿಶಾ/08/2026–27

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಛೇರಿ (ಜಿಲ್ಲಾ ಪಂಚಾಯತ್) ಕಲಘಟಗಿ

ಸಂಖ್ಯೆ :ಹಿಸತೋನಿ/ಜಿಪಂ/ಕ/ವಿನಿ–1/2026–27 ದಿನಾಂಕ :01/04/2026

ಟೆಂಡರ್ ಪ್ರಕಟಣೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಕಲಘಟಗಿ ಇವರ ಕಛೇರಿ ಉಪಯೋಗಕ್ಕಾಗಿ ಒಂದು ನಾಲ್ಕು ಚಕ್ರದ ಡಿಸೇಲ್ /ಪೆಟ್ರೋಲ್ ಮಾದರಿ ಹೊಂದಿರುವ ವಾಹನವನ್ನು ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆ ಪಡೆಯಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ವಾಹನ ಪೂರೈಕೆದಾರರು/ ಸಂಸ್ಥೆಯವರು ರೂ.200/– ಡಿಡಿ/ ನಗದನ್ನು ಈ ಕೆಳಗೆ ಸಹಿ ಮಾಡಿದವರ ಹೆಸರಿನಲ್ಲಿ ಪಡೆದು ಸಂದಾಯ ಮಾಡಿ ದಿನಾಂಕ:01/04/2026 ರಿಂದ 27/04/2026ರ ವರೆಗೆ ನಿಗದಿತ ನಮೂನೆಗಳನ್ನು ಪಡೆದು ದಿನಾಂಕ:30/04/2026ರ ಒಳಗೆ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ 12:00 ಘಂಟೆಯ ಒಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಕಲಘಟಗಿ ರವರ ಕಛೇರಿಯನ್ನು ಸಂಪರ್ಕಿಸಲು ಕೋರಿದೆ.
(ದೂರವಾಣಿ ಸಂಖ್ಯೆ : 08370–284468)

ಸಹಿ/–
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
(ಜಿಲ್ಲಾ ಪಂಚಾಯತ್) ಕಲಘಟಗಿ

ಕರ್ನಾಟಕ ಸರ್ಕಾರ

ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ದೇವಗಿರಿ–ಯಲ್ಲಾಪುರ, ಹಾವೇರಿ–581110

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
Website : https://himshaveri.karnataka.gov.in
E-mail : tenders.hims.dme@gmail.com

ಸಂ: ಹಿಮ್ಸ್/ಟೆಂಡರ್/01/2026–27 ದಿನಾಂಕ : 02/04/2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಗಳ ಪಾರದರ್ಶಕ ಅಧಿನಿಯಮ–99/2000 ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಷರತ್ತುಗಳನ್ವಯ ನೊಂದಾಯಿತ ಅರ್ಹ ಸಂಸ್ಥೆಗಳಿಂದ/ಪ್ರತಿಷ್ಠಿತ ಮೂಲ ತಯಾರಕರು/ಅಧೀಕೃತ ಪ್ರತಿನಿಧಿಗಳು/ ಅಧೀಕೃತ ವಿತರಕರಿಂದ 2026–27ನೇ ಸಾಲಿಗಾಗಿ ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ವಿವಿಧ ಸಮಾರಂಭಗಳಿಗೆ ಶಾಮಿಯಾನ ಮತ್ತು ಇತರೆ ಸಮಾರಂಭದ ಅವಶ್ಯಕ ಪರಿಕರಗಳ ಸೇವೆಯನ್ನು ಅರ್ಹ ಸಂಸ್ಥೆಯವರಿಂದ ಪಡೆಯುವ ಕುರಿತು ಇ–ಟೆಂಡರ್ ಆಹ್ವಾನಿಸಲಾಗಿದೆ ಅರ್ಹ ಟೆಂಡರ್‌ದಾರರು ಕೆ.ಪಿ.ಪಿ. ಪೋರ್ಟಲ್ **https://kppp.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯುವುದು.

(1) ಟೆಂಡರ್ ಪ್ರಕಟಣೆ ದಿನಾಂಕ : **02/04/2026** (2) ಟೆಂಡರ್‌ನ ಒಟ್ಟು ಅಂದಾಜು ಮೌಲ್ಯ ರೂ. **20** ಲಕ್ಷ (3) ಆನ್‌ಲೈನ್‌ನಲ್ಲಿ ಟೆಂಡರ್ ಅನ್ನು **KPP Portal** ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : **16/04/2026** ಅಪರಾಹ್ನ 4:30 (4) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : **17/04/2026** ಅಪರಾಹ್ನ 4:30 (5) ತಾಂತ್ರಿಕ ಲಕೋಟೆಯ ದಾಖಲೆಗಳ ಪರಿಶೀಲನೆ ತಿಳಿಸಲಾಗುವುದು (6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : ತಿಳಿಸಲಾಗುವುದು (7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಶೇ 2.5% ರಷ್ಟು : ರೂ. **50,000.00/–** (8) E-Procurement Portal Processing Fees : https://kppp.karnataka.gov.in Portal ನಲ್ಲಿ ನಿಗದಿಪಡಿಸಿರುವಂತೆ (9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ : ಡೀನ್ ಮತ್ತು ನಿರ್ದೇಶಕರು, ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ ದೂರವಾಣಿ ಸಂಖ್ಯೆ: **8660990320 Email : tenders.hims.dme@gmail.com**.

ಸಹಿ/– ಡೀನ್ ಮತ್ತು ನಿರ್ದೇಶಕರು,
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾವೇರಿ

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/16/2026–27

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

(www.kpwd.gov.in)

ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182–222943 **Email ID:** spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

(ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ–ಪೋರ್ಟಲ್ ಮೂಲಕ) 2ನೇ ಕರೆ

ಐಎಫ್‌ಟಿ ಸಂಖ್ಯೆ 54/2025–26 ದಿನಾಂಕ : 27.03.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–3 ನಿಯುಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ವಿಶೇಷ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿನ 3054–04–337–1–10–200–ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆಯಡಿ ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ, ಶಿವಮೊಗ್ಗ ವ್ಯಾಪ್ತಿಯ ಜಿಲ್ಲಾ ಮತ್ತು ಇತರೆ ರಸ್ತೆಗಳ ಲ್ಯಾಂಡ್ ಪ್ಲಾನ್ ಸರ್ವೆ ಕಾಮಗಾರಿ– (ಇಂಡೆಂಟ್ ನಂ.34113) ಕಾಮಗಾರಿಗಳಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ರೂ.59.21 ಲಕ್ಷ ಹಾಗೂ ಇ.ಎಂ.ಡಿ.ಮೊತ್ತ ರೂ.1.185 ಲಕ್ಷಗಳು. ಸದರಿ ಕಾಮಗಾರಿಯ ಟೆಂಡರ್ ಅವಧಿ ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ನಮೂದಿಸಿರುವಂತೆ.

ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್ –2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ:27–03–2026 ರಿಂದ 06–04–2026 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ:06–04–2026ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ದಿನಾಂಕ:07–04–2026 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 08–04–2026 ರ ನಂತರ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/–
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ.10–04/
ಝೋಂಕಾರ್/2026–27

ಬುಡಕಟ್ಟು ಕ್ರೀಡಾ ಪ್ರತಿಭೆ: ನಮ್ಮ ರಾಷ್ಟ್ರೀಯ ಹೆಮ್ಮೆ

▶ ದ್ರೌಪದಿ ಮುರ್ಮು, ರಾಷ್ಟ್ರಪತಿ



ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಅರಣ್ಯ ಪ್ರದೇಶಗಳಲ್ಲಿ ಮಕ್ಕಳು ಹೆಚ್ಚಿನ ಸಮಯವನ್ನು ಪ್ರಕೃತಿಯ ಮಡಿಲಿನಲ್ಲಿ ಕಳೆಯುತ್ತಾರೆ ಎಂಬುದು ಗಮನಿಸಿದ್ದೇನೆ. ಆಟವಾಡಲು ಅವರು ಸರಳ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ. ನೆಲದ ಮೇಲೆ ಗೆರೆಗಳನ್ನು ಎಳೆದು, ಆಕಾರಗಳನ್ನು ರಚಿಸಿ ಆಟದ ಅಖಾಡಗಳನ್ನು ತಯಾರಿಸುತ್ತಾರೆ. ಒಣಗಿದ ಹಣ್ಣಿನ ಬೀಜಗಳನ್ನು ಪಗಡೆ ಮತ್ತು ಚಿಕ್ಕ ತುಂಡುಗಳಾಗಿ ಬಳಸುತ್ತಾರೆ. ಒಣ ಎಲೆಗಳು, ಮರದ ಬೇರುಗಳು ಮತ್ತು ಹಳೆಯ ಬಟ್ಟೆಯ ತುಂಡುಗಳಿಂದ ಚೆಂಡುಗಳನ್ನು ತಯಾರಿಸುತ್ತಾರೆ. ಬಿದಿರನ್ನು ಬಳಸಿ ಅವರು ಹಾಕಿ ಮತ್ತು ಫುಟ್ಬಾಲ್ ಗೋಲ್‌ಪೋಸ್ಟ್‌ಗಳನ್ನು ನಿರ್ಮಿಸುತ್ತಾರೆ. ಹೀಗೆ ವಿವಿಧ ನೈಸರ್ಗಿಕ ವಸ್ತುಗಳನ್ನು ಬಳಸಿ ತಮ್ಮದೇ ಕ್ರೀಡಾ ಜಗತ್ತನ್ನು ಸೃಷ್ಟಿಸಿಕೊಳ್ಳುತ್ತಾರೆ. ಅನೇಕ ಮಕ್ಕಳು ಚಪ್ಪಲಿ ಅಥವಾ ಜೆರ್ಸಿ ಇಲ್ಲದೆಯೇ ಉತ್ಸಾಹದಿಂದ ಆಟವಾಡುತ್ತಾರೆ. ಕೆರೆ ಮತ್ತು ಸರೋವರಗಳಲ್ಲಿ ಈಜಾಡುತ್ತಾರೆ.

ಈಗ ಲಭ್ಯವಿರುವ ತರಬೇತಿ ಮತ್ತು ಸಂಪನ್ಮೂಲಗಳ ಸಹಾಯದಿಂದ ಈಜುವ ತನ್ನ ಸಹಜ ಪ್ರತಿಭೆಯನ್ನು ಗೌರವಿಸುತ್ತಾ, ಲಭ್ಯವಿರುವ ತರಬೇತಿ ಮತ್ತು ಸಂಪನ್ಮೂಲಗಳ ಸಹಾಯದಿಂದ ಮತ್ತಷ್ಟು ಅಭಿವೃದ್ಧಿಗೊಳಿಸಿಕೊಂಡ ಒಡಿಶಾದ ಜಾಜ್ಪುರ ಜಿಲ್ಲೆಯ ನಿವಾಸಿಯಾದ 15 ವರ್ಷದ ಬಾಲಕಿ ಅಂಜಲಿ ಮುಂಡಾ, ಉದ್ಘಾಟನಾ ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್ 2026'ರ ಮೊದಲ ದಿನವೇ ಮೂರು ಚಿನ್ನದ ಪದಕಗಳನ್ನು ಗೆದ್ದು ಇಡೀ ದೇಶದ ಯುವಜನತೆಗೆ ಸ್ಫೂರ್ತಿ ನೀಡಿದ್ದಾಳೆ.

ಬುಡಕಟ್ಟು ಜನರಿಗೆ ಬಿಲ್ಲು–ಬಾಣದ ಕ್ರೀಡೆಯ ಮೇಲೆ ಸಹಜ ಒಲವಿದೆ. 1855ರಲ್ಲಿ ಸಂತಾಲ್ ಸಮುದಾಯ, ಶೋಷಣೆಯ ವಿರುದ್ಧ ತೀವ್ರ ಹೋರಾಟ ನಡೆಸಿತ್ತು, ಇದನ್ನು ಸಂತಾಲ್ ಹೂಲ್' ಎಂದು ಅಮರಗೊಳಿಸಲಾಗಿದೆ. ಆಧುನಿಕ ಶಸ್ತ್ರಾಸ್ತ್ರ ಹೊಂದಿದ್ದ ಬ್ರಿಟಿಷ್ ಪಡೆಗಳು ಆ ದಂಗೆಯನ್ನು ಅಡಗಿಸಿದರೂ, ತಮ್ಮ ವಿವರಣೆಗಳಲ್ಲಿ ಸಂತಾಲ್ ವೀರರ ಯುದ್ಧ ಕೌಶಲ್ಯ, ವಿಶೇಷವಾಗಿ ಬಿಲ್ಲು–ಬಾಣ ವಿದ್ಯೆಯ ಬಗ್ಗೆ ಬ್ರಿಟಿಷರು ವಿಶೇಷ ಉಲ್ಲೇಖ ಮಾಡಿದ್ದಾರೆ. ಜಾರ್ಖಂಡ್‌ನ ಉಪರಿ–ಮಾರಿ ಗ್ರಾಮದಲ್ಲಿ ಇರುವ ಸಂತಾಲ್ ಹೂಲ್‌ನ ವೀರ ನಾಯಕರಾದ ಹಾಗೂ ಅಮರ ಸಹೋದರರು ಸಿಧೋ–ಕಾನ್ಹು ಮತ್ತು ಚಾಂದ್–ಭೈರವ್ ಹಾಗೂ ವೀರ ಸಹೋದರಿಯರಾದ ಫೂಲೋ–ಝೂನೋ ಅವರ ಪ್ರತಿಮೆಗಳನ್ನು ರಾಜ್ಯಪಾಲರಾಗಿದ್ದ ನನ್ನ ಅಧಿಕಾರಾವಧಿಯಲ್ಲಿ ಅನಾವರಣಗೊಳಿಸುವ ಸೌಭಾಗ್ಯ ನನಗೆ ದೊರೆತಿತ್ತು. ಭಾರತದ ಪ್ರತಿಯೊಂದು ಮಗುವಿಗೂ ಶ್ರೇಷ್ಠ ಬಿಲ್ಲುಗಾರ ಎಂದು ಆರಾಧಿಸಲ್ಪಡುವ ಏಕಲವ್ಯನ ಮಹಾನತೆಯ ಬಗ್ಗೆ ಗೊತ್ತಿದೆ. ಏಕಲವ್ಯ ಪ್ರತಿಯೊಬ್ಬ ಭಾರತೀಯನಿಗೆ, ವಿಶೇಷವಾಗಿ ಬುಡಕಟ್ಟು ಸಮುದಾಯಗಳಿಗೆ ಸ್ಫೂರ್ತಿಯ ಸಂಕೇತವಾಗಿದ್ದಾರೆ.

ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಸ್ಥಾಪಿಸಲಾದ 'Sports Excellence Centers' ಮಕ್ಕಳಿಗೆ ಆಧುನಿಕ ಕ್ರೀಡಾ ಸೌಲಭ್ಯ ಮತ್ತು ವಿಧಾನಗಳನ್ನು ಒದಗಿಸುತ್ತಿವೆ. ಅದೇ ರೀತಿ, ಶಾಲಾ ವ್ಯವಸ್ಥೆಯ ಜೊತೆ ಬೇರೆಡೆ ಇರುವ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ತರಬೇತಿ ನೀಡುವ ಯೋಜನೆಗಳನ್ನು ಸಹ ಜಾರಿಗೆ ತರಲಾಗುತ್ತಿದೆ. ನನ್ನ ವೈಯಕ್ತಿಕ ಪ್ರಯತ್ನಗಳ ಮೂಲಕ ನನ್ನ ಹಳ್ಳಿಯಲ್ಲಿ ಹಿಂದುಳಿದ ವರ್ಗಗಳ ಮಕ್ಕಳಿಗಾಗಿ ವಸತಿ ಶಾಲೆಯೊಂದನ್ನು ಸ್ಥಾಪಿಸಲಾಗಿದೆ. ಈ ಕಿರು ಉಪಕ್ರಮದ ಭಾಗವಾಗಿ ಶಾಲಾ ಆವರಣದಲ್ಲಿ ಬಿಲ್ಲು–ಬಾಣ ತರಬೇತಿಯ ವ್ಯವಸ್ಥೆಯನ್ನೂ ಮಾಡಲಾಗಿದೆ. ಸರ್ಕಾರದ ಉಪಕ್ರಮಗಳ ಜತೆಗೆ, ಸಣ್ಣ ವೈಯಕ್ತಿಕ ಮತ್ತು ಸಾಮೂಹಿಕ ಪ್ರಯತ್ನಗಳು, ಬುಡಕಟ್ಟು ಮಕ್ಕಳಲ್ಲಿ ಅಡಗಿರುವ ಕ್ರೀಡಾ ಪ್ರತಿಭೆಯನ್ನು ಬೆಳೆಸಲು ನೆರವಾಗುತ್ತವೆ.

ನನ್ನ ಗ್ರಾಮದಲ್ಲಿನ ಇತರರಂತೆ ನನಗೂ ಈಜು ಸೇರಿದಂತೆ, ವ್ಯಾಯಾಮ ಮತ್ತು ಕ್ರೀಡೆಗಳ ಬಗ್ಗೆ ಆಸಕ್ತಿ ಇತ್ತು. ಶಾಲಾ ಕ್ರೀಡಾ ಸ್ಪರ್ಧೆಗಳಲ್ಲಿ ನಾನು ಸಾಮಾನ್ಯವಾಗಿ ಪ್ರಥಮ ಸ್ಥಾನ ಪಡೆಯುತ್ತಿದ್ದೆ. ಒಮ್ಮೆ ಒಂದು ಸ್ಪರ್ಧೆಯಲ್ಲಿ ನನ್ನ ಗೆಳತಿಗೆ ಮೊದಲ ಬಹುಮಾನ ಗೆಲ್ಲುವ ಸಂತೋಷ ದೊರೆಯಲಿ ಎಂದು ನಾನು ಉದ್ದೇಶಪೂರ್ವಕವಾಗಿ ಹಿಂದೆ ಸರಿದೆ. ಕ್ರೀಡೆಯು ತಂಡದ ಮನೋಭಾವವನ್ನು ಬೆಳೆಸುತ್ತದೆ. ಸಾಮಾಜಿಕ ಬಾಂಧವ್ಯವನ್ನು ಬಲಪಡಿಸುತ್ತದೆ. ಸಾಮಾನ್ಯವಾಗಿ ಆಟದ ಮೈದಾನದಲ್ಲಿ ತೀವ್ರ ಪ್ರತಿಸ್ಪರ್ಧೆ ತೋರಿಸುವ ಆಟಗಾರರು ಮೈದಾನದ ಹೊರಗೆ ಉತ್ತಮ ಸ್ನೇಹಿತರಾಗಿರುತ್ತಾರೆ ಎಂಬುದನ್ನು ಗಮನಿಸಬಹುದು.

ನನ್ನ ಅಣ್ಣ ಉತ್ತಮ ಫುಟ್ಬಾಲ್ ಆಟಗಾರನಾಗಿದ್ದ, ಆದರೆ ತೀವ್ರ ಗಾಯದಿಂದಾಗಿ ಕ್ರೀಡೆಯನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ನನ್ನ ಕುಟುಂಬದ ಇತರ ಹಲವು ಸದಸ್ಯರು ವಿವಿಧ ಕ್ರೀಡೆಗಳಲ್ಲಿ ಶ್ರೇಷ್ಠತೆ ಮೆರೆದಿದ್ದಾರೆ. ಬುಡಕಟ್ಟು ಕುಟುಂಬಗಳಲ್ಲಿ ಕ್ರೀಡೆಯ ಒಂದು ಸಜೀವ ಸಂಪ್ರದಾಯ ಇದೆ. ಅವರಲ್ಲಿ ಅಪಾರ ಪ್ರತಿಭೆ, ಶಕ್ತಿ, ಆಸಕ್ತಿ ಮತ್ತು ಶ್ರೇಷ್ಠತೆ ಸಾಧಿಸುವ ಛಲವಿದೆ. ಇಂಥ ಪ್ರತಿಭೆಯನ್ನು ಸೌಲಭ್ಯ ಮತ್ತು ತರಬೇತಿಯ ಮೂಲಕ ಪೋಷಿಸಿದರೆ, ಕ್ರೀಡೆಯು ಅವರಿಗೆ ಕೇವಲ ಮನರಂಜನೆ ಮತ್ತು ಸಾಮಾಜಿಕ ಸಂಪರ್ಕದ ಮಾಧ್ಯಮವಾಗಿ ಉಳಿಯದೆ, ಜೀವನದಲ್ಲಿ ಮುನ್ನಡೆಯಲು, ಆರ್ಥಿಕ ಸ್ವಾವಲಂಬನೆ ಸಾಧಿಸಿ ಸಾಮಾಜಿಕ ಗೌರವ ಗಳಿಸಲು ದಾರಿಯಾಗುತ್ತದೆ. 2018ರಿಂದ ರಾಜ್ಯ ಸರ್ಕಾರಗಳು ಮತ್ತು ಕೆಲ ಕ್ರೀಡಾ ಸಂಘಟನೆಗಳ ಸಹಯೋಗದಲ್ಲಿ ಕೇಂದ್ರ ಸರ್ಕಾರ ಪ್ರಾರಂಭಿಸಿದ ಖೇಲೋ ಇಂಡಿಯಾ' ಅಭಿಯಾನ ಸಕಾರಾತ್ಮಕ ಬದಲಾವಣೆಗಳನ್ನು ತಂದಿದೆ.

ಸೌಲಭ್ಯ ಹೆಚ್ಚಳ: ಕೆಲ ವರ್ಷಗಳ ಹಿಂದಿನವರೆಗೂ ನಮ್ಮ ದೇಶದಲ್ಲಿ ಉತ್ತಮ ಕ್ರೀಡಾ ಸೌಲಭ್ಯಗಳು ಕೇವಲ ದೊಡ್ಡ ನಗರಗಳಲ್ಲಿ ಮಾತ್ರ ಲಭ್ಯವಿದ್ದವು, ಆದರೆ ಗ್ರಾಮೀಣ ಮತ್ತು ಅರಣ್ಯ ಪ್ರದೇಶಗಳು ಪ್ರತಿಭಾವಂತ ಆಟಗಾರರಿಂದ ತುಂಬಿವೆ. ಬುಡಕಟ್ಟು ಪ್ರದೇಶಗಳಲ್ಲಿ ಕ್ರೀಡಾ ಅಕಾಡೆಮಿಗಳು ಮತ್ತು ತರಬೇತಿ ಕೇಂದ್ರಗಳು ಇರಲಿಲ್ಲ. ಈಗ ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಮಕ್ಕಳ ಕ್ರೀಡೆಗೆ ವಿಶೇಷ ಗಮನ ನೀಡುವುದರಿಂದ ಹಿಡಿದು ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್‌ನಂತಹ ಉಪಕ್ರಮಗಳವರೆಗೆ, ಬುಡಕಟ್ಟು ಕ್ರೀಡಾಪಟುಗಳಿಗೆ ತರಬೇತಿ ನೀಡಲು ಮತ್ತು ಅವರ ಕೌಶಲ್ಯಗಳಿಗೆ ಪ್ರೋತ್ಸಾಹ ನೀಡಲು ಹಲವಾರು ಚಟುವಟಿಕೆಗಳು ನಡೆಯುತ್ತಿವೆ.

ನನ್ನ ವಿದ್ಯಾರ್ಥಿ ದಿನಗಳಲ್ಲಿ ಐದು ಅಥವಾ ಆರು ಹಳ್ಳಿಗಳ ಜನರು ಒಟ್ಟಾಗಿ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸುತ್ತಿದ್ದ ವಿಷಯ ನನಗೆ ಈಗಲೂ ನೆನಪಿದೆ. ಕೆಲ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಘಟನೆಗಳು ಕೂಡ ಬುಡಕಟ್ಟು ಪ್ರದೇಶಗಳಲ್ಲಿ ಕ್ರೀಡೆಯನ್ನು ಉತ್ತೇಜಿಸಿವೆ. ಆದರೆ ಇಂತಹ ಗ್ರಾಮೀಣ ಸ್ಪರ್ಧೆಗಳಲ್ಲಿ ಭಾಗವಹಿಸುವ ಉತ್ತಮ ಆಟಗಾರರು ಸಹ, ಗ್ರಾಮೀಣ ಮಟ್ಟಕ್ಕಿಂತ ಮೇಲೇರಲು ಸಾಧ್ಯವಾಗುತ್ತಿರಲಿಲ್ಲ. ಈ ಪರಿಸ್ಥಿತಿಯನ್ನು ಬದಲಾಯಿಸಲು ಕಳೆದ ಕೆಲ ವರ್ಷಗಳಲ್ಲಿ ಅನೇಕ ಶ್ಲಾಘನೀಯ ಪ್ರಯತ್ನಗಳು ನಡೆದಿವೆ. ಈ ಪ್ರಯತ್ನಗಳಿಗೆ ಮತ್ತಷ್ಟು ಚಾಲನೆ ನೀಡಲು ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್ ಅನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದ ಆಯೋಜನೆಯ ಪ್ರಕ್ರಿಯೆಯಲ್ಲಿ ತಳಮಟ್ಟದ ಬುಡಕಟ್ಟು ಆಟಗಾರರನ್ನು ಗುರುತಿಸಿ ಅವರಿಗೆ ಕ್ರೀಡಾ ಸೌಲಭ್ಯ ಮತ್ತು ತರಬೇತಿ ನೀಡಲಾಗಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಟಗಾರರು ಈ ರಾಷ್ಟ್ರೀಯ ಬುಡಕಟ್ಟು ಕ್ರೀಡಾ ಕೂಟದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ.

ಆಟಗಾರರ ಸಹಜ ಪ್ರತಿಭೆಯ ಆಧಾರದ ಮೇಲೆ ಭಾರತ 1928ರಲ್ಲಿ ಹಾಕಿಯಲ್ಲಿ ಮೊದಲ ಒಲಿಂಪಿಕ್ ಚಿನ್ನದ ಪದಕ ಸಾಧಿಸಿತು. ಆ ವಿಜಯದಲ್ಲಿ ಬುಡಕಟ್ಟು ಸಮುದಾಯದ ಆಟಗಾರರ ಪ್ರಮುಖ ಕೊಡುಗೆ ಇತ್ತು. ಅಂದಿನಿಂದ ಇಂದಿನವರೆಗೆ ದಿಲೀಪ್ ಟಿರ್ಕಿ, ಸುಬೋಧ್ ಲಕ್ರಾ ಮತ್ತು ಸಲೀಮ ತೇತೆಯಂತಹ ಹಾಕಿ ತಾರೆಗಳು ಭಾರತದ ಪುರುಷ ಮತ್ತು ಮಹಿಳಾ ತಂಡಗಳಲ್ಲಿ ಈಗಲೂ ಕೊಡುಗೆ ನೀಡುತ್ತಿದ್ದಾರೆ.

ಭಾರತ ಸರ್ಕಾರದ ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ಕಾರ್ಯಕ್ರಮ ಖೇಲೋ ಇಂಡಿಯಾ ಅಡಿಯಲ್ಲಿ ಸ್ಥಳೀಯ ಮಟ್ಟದಿಂದ ರಾಷ್ಟ್ರೀಯ ಮಟ್ಟದವರೆಗೆ ಎಲ್ಲ ಭೌಗೋಳಿಕ ಪ್ರದೇಶಗಳು, ಸಾಮಾಜಿಕ ವರ್ಗಗಳು ಮತ್ತು ಸಂಸ್ಥೆಗಳಿಗೆ ಸೂಕ್ತ ಕ್ರೀಡಾ ಪರಿಸರ ವ್ಯವಸ್ಥೆ ಒದಗಿಸಲು ಸಮಗ್ರ ಪ್ರಯತ್ನಗಳು ನಡೆಯುತ್ತಿವೆ. ಈ ಕಾರ್ಯಕ್ರಮದಡಿ ಕ್ರೀಡೆಯಲ್ಲಿ ಬಾಲಕಿಯರ ಭಾಗವಹಿಸುವಿಕೆ ಉತ್ತೇಜಿಸಲು ಜಾರಿಗೊಳಿಸಲಾಗುತ್ತಿರುವ ಅಸ್ಮಿತಾ ಯೋಜನೆ ನಮ್ಮ ಬುಡಕಟ್ಟು ಹೆಣ್ಣು ಮಕ್ಕಳ ಸಾಮರ್ಥ್ಯವನ್ನೂ ವಿಕಸಿತಗೊಳಿಸುತ್ತಿದೆ. ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್ ನಿರ್ಮಿಸಿದ ಉತ್ಸಾಹ, ವೇಗವನ್ನು ನಿರಂತರ ಬಲಪಡಿಸುತ್ತ, ಕ್ರೀಡಾಪಟುಗಳನ್ನು ತಡೆಯಿಲ್ಲದೆ ಪ್ರೋತ್ಸಾಹಿಸಿದರೆ, ಭಾರತವನ್ನು ಜಾಗತಿಕ ಕ್ರೀಡಾ ಮಹಾಶಕ್ತಿಯನ್ನಾಗಿ ನಿರ್ಮಿಸಲು ಸಾಧ್ಯವಾಗುವ ಆಟಗಾರರ ತಂಡ ಸೃಷ್ಟಿಯಾಗಲಿದೆ.

ಕಳೆದ ಕೆಲ ತಿಂಗಳುಗಳಲ್ಲಿ ನಡೆದ ಬಸ್ತರ್ ಮತ್ತು ಸರ್ಗುಜಾ ಒಲಿಂಪಿಕ್ಸ್‌ನಲ್ಲಿ ಏಳು ಲಕ್ಷಕ್ಕೂ ಹೆಚ್ಚು ಆಟಗಾರರು ಭಾಗವಹಿಸಿದ್ದಾರೆ. ಅವರಲ್ಲಿ ನಕ್ಸಲ್ ಹಾದಿ ತ್ಯಜಿಸಿ ಕ್ರೀಡೆಯ ಸಕಾರಾತ್ಮಕ ದಾರಿ ಆರಿಸಿಕೊಂಡವರೂ ಇದ್ದಾರೆ. ಕ್ರೀಡೆಯ ಮೂಲಕ ಯುವಜನರ ಶಕ್ತಿ ಸಕಾರಾತ್ಮಕ ಅಭಿವ್ಯಕ್ತಿ ಪಡೆಯುತ್ತದೆ. ಯುವಜನರಲ್ಲಿ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಅಭಿವೃದ್ಧಿಪಡಿಸುವ ಸರ್ಕಾರದ ಪ್ರಯತ್ನಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಉತ್ತಮ ಫಲ ನೀಡಲು ಪ್ರಾರಂಭಿಸಿವೆ.

ಬುಡಕಟ್ಟು ಸಮುದಾಯಗಳು ಸೇರಿದಂತೆ ನಮ್ಮ ಯುವಜನರ ಕ್ರೀಡಾ ಪ್ರತಿಭೆ ನಮ್ಮ ರಾಷ್ಟ್ರಕ್ಕೆ ಅಮೂಲ್ಯ ಸಾಮಾಜಿಕ ಬಂಡವಾಳವಾಗಿದೆ. ಈ ಅಮೂಲ್ಯ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ನಮ್ಮ ದೇಶ ಕ್ರೀಡಾ ಕ್ಷೇತ್ರದಲ್ಲಿ ಅನೇಕ ಗೌರವಾನ್ವಿತ ಶ್ರೇಷ್ಠತೆಯ ಮಾನದಂಡಗಳನ್ನು ಸ್ಥಾಪಿಸಲಿದೆ ಎಂಬ ವಿಶ್ವಾಸ ನನಗಿದೆ. ಈ ನಂಬಿಕೆಯೊಂದಿಗೆ ನನ್ನ ಸಂದೇಶ: ಖೇಲೋ ಇಂಡಿಯಾ! ಖೂಬ್ ಖೇಲೋ ಇಂಡಿಯಾ!

ಐಪಿಎಲ್ ಹವಾ 19

ಕಿರುಸುದ್ದಿ



ಐಪಿಎಲ್‌ಗಾಗಿ ಲಂಕಾ ಕ್ರಿಕೆಟ್ ಸಂಸ್ಥೆ ವಿರುದ್ಧ ತುಷಾರಾ ಕೇಸ್




• **ಕೊಲಂಬೋ:** ಇಂಡಿಯನ್ ಪ್ರೀಮಿಯರ್ ಲೀಗ್ ಆಡಲು ನಿರಾಕ್ಷೇಪಣಾ ಪತ್ರ ನೀಡದಿರುವ ನಿಟ್ಟಿನಲ್ಲಿ ಆರ್‌ಸಿಬಿ ತಂಡದ ಆಟಗಾರ ನುವಾನ್ ತುಷಾರಾ ಅವರು ಸ್ವಂತ ದೇಶದ ಸಂಸ್ಥೆ ಶ್ರೀಲಂಕಾ ಕ್ರಿಕೆಟ್ ಮಂಡಳಿ ವಿರುದ್ಧವೇ ನ್ಯಾಯಾಲಯ ಮೆಟ್ಟಿಲೇರಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಶುರುವಾಗಿದೆ. ಶ್ರೀಲಂಕಾ ಕ್ರಿಕೆಟ್ ಸಂಸ್ಥೆಯ ಹಲವು ಆಟಗಾರರು ಈ ಬಾರಿ ಭಾಗವಹಿಸಿಲ್ಲ. ಪಂದ್ಯಾವಳಿಗೂ ಮುನ್ನ ಆಟಗಾರರ ಫಿಟ್ನೆಸ್ ಪರೀಕ್ಷೆ ಕೈಗೊಳ್ಳಲಾಗುವುದು ಎಂದು ಹೇಳಿದ್ದ ಶ್ರೀಲಂಕಾ ಕೆಲವು ಆಟಗಾರರಿಗೆ ನಿರಾಕ್ಷೇಪಣಾ ಪತ್ರ ನೀಡಿಲ್ಲ. ಹೀಗಾಗಿ ಬೆಂಗಳೂರು ತಂಡದ ಆಟಗಾರ ನುವಾನ್ ತುಷಾರಾ ಅವರು ಭಾರೀ ನಷ್ಟ ಎದುರಿಸಿದ್ದಾರೆ. ಹರಾಜಿನಲ್ಲಿ ಅವರನ್ನು 20203ರಲ್ಲಿ ಆರ್‌ಸಿಬಿ ತಂಡ 1.2 ಕೋಟಿ ರೂ.ಗೆ ಖರೀಸಿತ್ತು. ಎಸ್‌ಎಲ್‌ಸಿ ಅಧ್ಯಕ್ಷ ಶಮ್ಮಿ ಸಿಲ್ವಾ, ಕಾರ್ಯದರ್ಶಿ ದಿಸ್ಸಾನಾಯಕೆ ಅವರನ್ನು ಸೇರಿಸಿ ವಿವಿಧ ಅಧಿಕಾರಿಗಳ ವಿರುದ್ಧ ಕೋರ್ಟಿಗೆ ಹೋಗಿದ್ದಾರೆ. ಕಳೆದ ಎರಡು ವರ್ಷ ನನಗೆ ನಿರಾಕ್ಷೇಪಣ ಪತ್ರ ಸಿಕ್ಕಿತ್ತು. ಆದರೆ ಈ ಬಾರಿ ಸಂಸ್ಥೆ ನೀಡುತ್ತಿಲ್ಲ ಎಂದು ಕೊಲಂಬೋ ಜಿಲ್ಲಾ ನ್ಯಾಯಾಲಯದಲ್ಲಿ ಕೇಸು ದಾಖಲಿಸಿದ್ದಾರೆ. ವಾಸ್ತವವಾಗಿ ಶ್ರೀಲಂಕಾದ ವಾರ್ಷಿಕ ಗುತ್ತಿಗೆ ಮಾ.31ರಂದು ಮುಕ್ತಾಯಗೊಂಡಿದೆ. ತುಷಾರಾ ಈ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ದೂರ ಉಳಿಯಲಿದ್ದು, ಹೊಸ ಒಪ್ಪಂದದಲ್ಲಿ ಸೇರಿಕೊಳ್ಳದಿರಲು ನಿರ್ಧರಿಸಿದ್ದಾರೆ. ಆದಾಗ್ಯೂ ನಿರಾಕ್ಷೇಪಣಾ ಪತ್ರ ನೀಡದಿರುವುದು ಕೇಸಿನ ಮೂಲವಾಗಿದೆ. ಏಪ್ರಿಲ್ 9ಕ್ಕೆ ವಿಚಾರಣೆ ನಡೆಯಲಿದೆ.

ನಿರಾಕ್ಷೇಪಣಾ ಪತ್ರ, ವಜಾ ಪ್ರಶ್ನಿಸಿ ನ್ಯಾಯಾಲಯ ಮೆಟ್ಟಿಲೇರಿದ ಆರ್‌ಸಿಬಿ ಪ್ಲೇಯರ್

ಹೆಡ್, ಅಭಿ ಅಬ್ಬರ | ಹೈದರಾಬಾದ್ 226/8

ಕೋಲ್ಕತ್ತಾಗೆ ಕಠಿಣ ಸವಾಲು





• **ಕೋಲ್ಕತ್ತಾ:** ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮ ಅವರು ತಮ್ಮ ಅಸಲು ಆಟ ಆಡಿದ ನಂತರ ಕ್ಲಾಸೆನ್ ಹಾಗೂ ನಿತಿಶ್ ಉತ್ತಮ ಬ್ಯಾಟಿಂಗ್ ಮಾಡಿದ್ದು, ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 6ನೇ ಪಂದ್ಯದಲ್ಲಿ ಹೈದರಾಬಾದ್ ಕೆಕೆಆರ್‌ಗೆ ದೊಡ್ಡ ಗುರಿ ನೀಡಿತು.

ಮೊದಲ ಪಂದ್ಯದಲ್ಲಿ ಸೋತಿದ್ದ ಕೋಲ್ಕತ್ತಾ ಹಾಗೂ ಹೈದರಾಬಾದ್ ಈಡನ್ ಗಾರ್ಡನ್ಸ್‌ನಲ್ಲಿ ಮುಖಾಮುಖಿಯಾಗಿದ್ದವು. ಅಲ್ಲಿನ ಪಂದ್ಯದಲ್ಲಿ ಟಾಸ್ ಸೋಲಿನೊಂದಿಗೆ ಮೊದಲು ಬ್ಯಾಟಿಂಗ್‌ಗಿಳಿದ ಹೈದರಾಬಾದ್ ಅಬ್ಬರದ ಆರಂಭ ಪಡೆಯಿತು. ಮಧ್ಯಮ ಕ್ರಮಾಂಕದಲ್ಲಿ ಕ್ಲಾಸೆನ್ ಮತ್ತು ರೆಡ್ಡಿ ಉತ್ತಮ ಜೊತೆಯಾಟದೊಂದಿಗೆ ಸ್ಕೋರ್ ಹಿಗ್ಗಿಸಿದರು. ಪರಿಣಾಮ ಹೈದರಾಬಾದ್, 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 226 ರನ್ ಗಳಿಸಿದೆ.

ಸ್ಫೋಟಕ ಆರಂಭ: ಟಾಸ್ ಸೋಲಿನೊಂದಿಗೆ ಬ್ಯಾಟಿಂಗ್‌ಗಿಳಿದ ಹೈದರಾಬಾದ್ ಬಹು ದಿನಗಳ ನಂತರ ನಿರೀಕ್ಷಿತ ಆರಂಭ ಪಡೆಯಿತು. ಲಯಕ್ಕಾಗಿ ಪರದಾಡುತ್ತಿದ್ದ ಟ್ರಾವಿಸ್ ಹೆಡ್ ಹಾಗೂ ಅಭಿಷೇಕ್ ಶರ್ಮ ಕೆಕೆಆರ್ ಪಡೆಯನ್ನು ದಂಡಿಸಿ ಲಯಕ್ಕೆ ಮರಳಿದರು. ಆರಂಭಿಕ ಓವರ್‌ಗಳಲ್ಲಿ ಹೆಡ್ ಸ್ಫೋಟಕ ಬ್ಯಾಟಿಂಗ್ ಗಿಳಿದರು. ಯಾವುದೇ ಮುಲಾಜಿಲ್ಲದೆ, ವೈಭವ್ ಆರೋರಾ ಅವರನ್ನು ಮನ ಬಂದಂತೆ ದಂಡಿಸಿದರು. ಅತ್ತ ಅಭಿಷೇಕ್ ಶರ್ಮ ಮೊದಲಿನ ಬಾಲ್‌ಗಳಿಗೆ ಗೌರವ ನೀಡುತ್ತಾ ಬಾನೆತ್ತರದ ಸಿಕ್ಸರ್ ಬಾರಿಸತೊಡಗಿದರು. ಇಬ್ಬರ ಬ್ಯಾಟಿಂಗ್‌ಗೆ ಕೆಕೆಆರ್ ನಲುಗಿತು. ವೈಭವ್ ಬೌಲಿಂಗ್ ವೇಳೆ ಹೆಡ್ 25 ರನ್ ಚಚ್ಚಿದರು. ಸ್ಪಿನ್ನರ್‌ಗಳ ವಿಶ್ವಾಸ ಅಭಿಷೇಕ್ ಮುರಿದು ಹಾಕಿದರು. ಪವರ್‌ಪ್ಲೇ ಮುಕ್ತಾಯಗೊಂಡಿತು, ಹೈದರಾಬಾದ್ 84 ರನ್ ಗಳಿಸಿತು. ಪವರ್‌ಪ್ಲೇನಲ್ಲಿ ಕೊನೆ ಕೊನೆಯಲ್ಲಿ ಬೌಂಡರಿ ಬಾರಿಸುವ ಪ್ರಯತ್ನದಲ್ಲಿ ಟ್ರಾವಿಸ್ ಹೆಡ್(46) ಕ್ಯಾಚ್ ಆದರು. ಇಶಾನ್ ಕಿಶನ್ ಕೂಡ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಹ್ಯಾಟ್ರಿಕ್ ಬೌಂಡರಿ ಬಾರಿಸಿದ ಅವರು ಬಿರುಸಿನ ಆಟವಾಡುವ ಸಂದೇಶ ತಲುಪಿಸಿದಂತೆ ಕ್ಯಾಚ್ ಆದರು. ಅಭಿಷೇಕ್ (48) ಕೂಡ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದ ಬ್ಯಾಟಿಗರಿಗೆ ಹೆಚ್ಚಿನ ಜವಾಬ್ದಾರಿ ಇರಲೇ ಇಲ್ಲ, ಇರುವ ಸ್ಕೋರ್ ಅನ್ನು ಹಿಗ್ಗಿಸಿದರೆ ಸಾಕಿತ್ತು. ಆ ಜವಾಬ್ದಾರಿಯನ್ನು ನಿತಿಶ್ ಕುಮಾರ್ ರೆಡ್ಡಿ ಮತ್ತು ಹೆನ್ರಿಚ್ ಕ್ಲಾಸೆನ್ ತೆಗೆದುಕೊಂಡರು. ಮಧ್ಯಮ ಓವರ್‌ಗಳಲ್ಲಿ ಸ್ಫೋಟಕ, ಸಂಯೋಜಿತ ಮತ್ತು ಸಮತೋಲಿತ ಬ್ಯಾಟಿಂಗ್ ಮಾಡಿದ ಈ ಜೋಡಿ 82 ರನ್‌ಗಳ ದೊಡ್ಡ ಜೊತೆಯಾಟ ನಿರ್ಮಿಸಿತು. ಈಗ ಕೇವಲ ಉತ್ತಮ ಫಿನಿಶ್ ನೀಡುವ ಅವಶ್ಯವಾಗಿತ್ತು. 19ನೇ ಓವರ್‌ನಲ್ಲಿ 39 ರನ್‌ಗೆ ವಿಕೆಟ್ ಒಪ್ಪಿಸಿದರು. ಕೊನೆಯ ಓವರ್‌ನಲ್ಲಿ ಕ್ಲಾಸೆನ್ 52 ರನ್‌ಗೆ ವಿಕೆಟ್ ಒಪ್ಪಿಸಿದರು. ಹರ್ಷ 2 ಬೌಂಡರಿಗಳನ್ನು ಬಾರಿಸಿದರು. ಸ್ಕೋರ್ 226ಕ್ಕೆ ನಿಂತಿತು.

ವಿವಾದಾತ್ಮಕ ಕ್ಯಾಚ್‌ಗೆ ಅಭಿಷೇಕ್ ಔಟ್

48 ರನ್ ಗಳಿಸಿದ್ದ ಅಭಿಷೇಕ್ ಶರ್ಮ 9ನೇ ಓವರ್‌ನಲ್ಲಿ ವಿವಾದಾತ್ಮಕ ಕ್ಯಾಚ್‌ಗೆ ಔಟಾದರು. ಸಿಕ್ಸರ್ ಬಾರಿಸಲು ಯತ್ನಿಸಿದಾಗ ಫ್ಲಾಟ್ ಬಾಲ್ ನೇರವಾಗಿ ವರುಣ್ ಚಕ್ರವರ್ತಿ ಕೈಗೆ ಸಿಲುಕಿತು. ಅನುಮಾನಾಸ್ಪದವಾಗಿದ್ದ ಈ ಕ್ಯಾಚ್ ವಿವಿಧ ಕ್ಯಾಮೆರಾದಲ್ಲಿ ಬೇರೆ ರೀತಿ ಕಾಣಿಸಿಕೊಂಡಿತು. ಒಂದರಲ್ಲಿ ನೆಲಕ್ಕೆ ಪುಟಿದಂತೆ ಕಾಣಿಸಿಕೊಂಡಿತ್ತು. ಮತ್ತೊಂದು ಕ್ಯಾಮೆರಾ ಕ್ಲೀಯರ್ ಕ್ಯಾಚ್ ಆದ ರೀತಿ ತೋರಿಸುತ್ತಿತ್ತು. ಸ್ವಲ್ಪ ಸಮಯದ ನಂತರ ನಿರ್ಧಾರ ಕೈಗೊಂಡು ಔಟ್ ಎಂದು ವಿವಾದಾತ್ಮಕ ನಿರ್ಣಯ ತೆಗೆದುಕೊಳ್ಳಲಾಯಿತು.

ಚೆನ್ನೈ–ಪಂಜಾಬ್ ಕಿಂಗ್ಸ್ ಫೈಟ್ ಇಂದು

• **ಚೆನ್ನೈ:** ಮೊದಲ ಪಂದ್ಯದಲ್ಲಿ ಹೀನಾಯ ಸೋಲು ಅನುಭವಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಗೆಲುವಿನೊಂದಿಗೆ ಶುರು ಮಾಡಿರುವ ಪಂಜಾಬ್ ಕಿಂಗ್ಸ್ ತಂಡಗಳು ಶುಕ್ರವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 7ನೇ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಚೆನ್ನೈ ಸೂಪರ್ ಕಿಂಗ್ಸ್ ತಂಡವು ತನ್ನ ಮೊದಲನೇ ತವರು ಪಂದ್ಯ ಆಡಲಿದೆ. ಸೋಲಿನ ಕಹಿ ಜತೆಗೆ ಗೆಲುವಿನ ಹಂಬಲದೊಂದಿಗೆ ಪಂದ್ಯಕ್ಕೆ ಸಿದ್ಧವಾಗುತ್ತಿದೆ. ಇತ್ತ ಪಂಜಾಬ್ ಕಿಂಗ್ಸ್ ಮೊದಲನೇ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿತ್ತು. ಗೆಲುವಿನ ಭರವಸೆಯೊಂದಿಗೆ ಕಣಕ್ಕಿಳಿಯುತ್ತಿದೆ. ಚೆಪಾಕ್ ಕ್ರೀಡಾಂಗಣದಲ್ಲಿ ಸೇರುವ ಸಾವಿರಾರು ಅಭಿಮಾನಿಗಳಿಗೆ ಧೋನಿ ಇಲ್ಲದ ನಿರಾಸೆ ಇರಲಿದೆ.

ಚೆನ್ನೈಗೆ ಪುಟಿದೇಳುವ ತವಕ: ಕಳೆದ ಆವೃತ್ತಿಯಲ್ಲಿ ಭಾರೀ ಸೋಲುಗಳನ್ನು ಎದುರಿಸಿ ಕೊನೆಯ ಸ್ಥಾನ ಪಡೆದಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಈ ಬಾರಿಯ ಪಂದ್ಯಾವಳಿಯನ್ನು ಸೋಲಿನಿಂದ ಶುರುಮಾಡಿದೆ. ಮುಖ್ಯವಾಗಿ ಬ್ಯಾಟಿಂಗ್ ವಿಭಾಗ ಮತ್ತೊಮ್ಮೆ ಕುಸಿತ ಕಾಣುತ್ತಿದೆ. ಈ ಹಿಂದಿನ ಆವೃತ್ತಿಯಂತೆ ಬ್ಯಾಟರ್‌ಗಳು ಕಳೆದ ಪಂದ್ಯದಲ್ಲಿ ಕೈಕೊಟ್ಟರು. ಆದಾಗ್ಯೂ ಹೊಸ ತಂಡದೊಂದಿಗೆ ಆಡುತ್ತಿರುವ ಚೆನ್ನೈಗೆ ಭರವಸೆ ಕೂಡ ಇದೆ. ಸಂಜು



ಸ್ಯಾಮ್ಸನ್, ರುತುರಾಜ್ ಗಾಯಕ್ವಾಡ್, ಶಿವಂ ದುಬೆ, ಡೆವಾಲ್ಡ್ ಬ್ರೇವಿಸ್ ಅಂಥ ಆಟಗಾರರು ಇದ್ದಾರೆ. ಯುವಕರ ಪಡೆಯೂ ಇದೆ. ಆಲ್ ರೌಂಡರ್‌ಗಳೂ ತಂಡದಲ್ಲಿದ್ದಾರೆ. ಆದರೆ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸುತ್ತಿದೆ.

ಪಿಚ್: ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಈ ಹಿಂದೆ ನಡೆದಿರುವ ಪಂದ್ಯಗಳಲ್ಲಿ ಮಿಶ್ರ ಫಲ ಸಿಕ್ಕಿದೆ. ಬ್ಯಾಟರ್‌ಗಳಿಗೆ ಉತ್ತಮ ಅವಕಾಶವಿದ್ದರೂ ದೊಡ್ಡ ಸ್ಕೋರ್ ಕಲೆ ಹಾಕಲಾಗಲ್ಲ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟವೂ ಇರಲಿದೆ.

ಆತ್ಮವಿಶ್ವಾಸದಲ್ಲಿ ಪಂಜಾಬ್

ಮೊದಲ ಪಂದ್ಯದ ಗೆಲುವಿನ ವಿಶ್ವಾಸದಲ್ಲಿ ಪಂಜಾಬ್ ಕಿಂಗ್ಸ್ ಕಾಣಿಸಿಕೊಂಡಿದೆ. ಬಲಿಷ್ಠ ಬೌಲಿಂಗ್ ಪಡೆಯೊಂದಿಗೆ ಬ್ಯಾಟಿಂಗ್‌ನಲ್ಲೂ ಅದ್ಭುತ ಆಟಗಾರರನ್ನು ಪಂಜಾಬ್ ಹೊಂದಿದೆ. ಕಳೆದ ಪಂದ್ಯದಲ್ಲಿ ಕುಸಿತ ಅನುಭವಿಸಿದ್ದರೂ ಕೂಪರ್ ಕೊನೊಲಿ ಉತ್ತಮ ಬ್ಯಾಟಿಂಗ್‌ನೊಂದಿಗೆ ಪಂದ್ಯ ಗೆಲ್ಲಿಸಿದ್ದಾರೆ. ಪ್ರಭಸಿಮ್ರನ್ ಸಿಂಗ್, ಶ್ರೇಯಸ್ ಅಯ್ಯರ್ ಲಯದಲ್ಲಿದ್ದಾರೆ. ಆದಾಗ್ಯೂ ಪ್ರಿಯಾಂಶ್ ಆರ್ಯ, ವಧೇರಾ ಅಂಥವರು ಲಯಕ್ಕೆ ಬರಬೇಕಿದೆ. ಬೌಲಿಂಗ್‌ನಲ್ಲಿ ವಿವಿಧ ಆಟಗಾರರು ಭರವಸೆ ಹೆಚ್ಚಿಸಿದ್ದಾರೆ.

ಪಂದ್ಯದ ವಿವರ:

ಯಾವಾಗ?: ಶುಕ್ರವಾರ, ಎಲ್ಲಿ: ಚೆಪಾಕ್, ಚೆನ್ನೈ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಅಭ್ಯಾಸಕ್ಕೆ ಧೋನಿ

ಗಾಯಗೊಂಡು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದ ಹೊರಗುಳಿದಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪ್ರಮುಖ ಆಟಗಾರ ಮಹೇಂದ್ರ ಸಿಂಗ್ ಧೋನಿ ಅಭ್ಯಾಸಕ್ಕಿಳಿದಿದ್ದಾರೆ. ಪಂದ್ಯಾವಳಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಬೇಕಾದ ಆರಂಭ ಪಡೆದಿಲ್ಲ, ರಾಜಸ್ಥಾನ ವಿರುದ್ಧದ ಪಂದ್ಯದಲ್ಲಿ ಸೋಲನುಭವಿಸಿರುವ ತಂಡ ಎರಡನೇ ಪಂದ್ಯಕ್ಕೆ ಸಿದ್ಧತೆಗಳನ್ನು ಶುರುಮಾಡಿಕೊಂಡಿದೆ. ಈ ನಡುವೆ ಮೊದಲನೇ ಪಂದ್ಯದಿಂದ ಮಹೇಂದ್ರ ಸಿಂಗ್ ಧೋನಿ ಹೊರಬಿದ್ದಿದ್ದರು. ಗಾಯದ ಸಮಸ್ಯೆ ಎದುರಿಸುತ್ತಿದ್ದ ಅವರು, ಎರಡು ವಾರದ ಮಟ್ಟಿಗೆ ಅಲಭ್ಯರಾಗಿದ್ದಾರೆ ಎಂದು ಹೇಳಲಾಗಿತ್ತು. ನಂತರ ಅರ್ಧ ಐಪಿಎಲ್‌ನಿಂದಲೇ ಹೊರಬಿದ್ದಿದ್ದಾರೆ ಎಂಬ ಸುದ್ದಿಗಳೂ ಹರಡಿದ್ದವು. ಹೀಗಿರುವಾಗ ಧೋನಿ ಬಗ್ಗೆ ಮಹತ್ವದ ಮಾಹಿತಿ ಹೊರಬಂದಿದೆ. ಕಾಲ್ಫ್ ಸ್ಟ್ರೈನ್ ಗಾಯದಿಂದ ಬಳಲುತ್ತಿರುವ ಧೋನಿ ನೆಟ್ಸ್‌ನಲ್ಲಿ ಅಭ್ಯಾಸ ಆರಂಭಿಸಿದ್ದಾರೆ. ಬುಧವಾರದಂದು ಅವರು ಮೈದಾನಕ್ಕೆ ಮರಳಿದ್ದರು. ನೆಟ್ಸ್‌ನಲ್ಲಿ ನಿಯಂತ್ರ ಕಂಡಿದ್ದು, ಅಭಿಮಾನಿಗಳಲ್ಲಿ ಮಂದಹಾಸ ಮೂಡಿದೆ. ಪಂಜಾಬ್ ವಿರುದ್ಧದ ಪಂದ್ಯಕ್ಕೆ ಅಲಭ್ಯರಿರುತ್ತಾರೆ ಎಂದು ಹೇಳಲಾಗುತ್ತಿದೆ. ಈ ಮೊದಲು ಚೆನ್ನೈ ಸೂಪರ್ ಕಿಂಗ್ಸ್ ಎರಡು ವಾರದ ಮಟ್ಟಿಗೆ ಧೋನಿ ಅಲಭ್ಯರೆಂಬ ಮಾಹಿತಿ ಇತ್ತು ಆದರೆ ಅದಕ್ಕೂ ಮೊದಲೇ ತಂಡಕ್ಕೆ ಸೇರಿಕೊಳ್ಳಲಿದ್ದು, ಫಿಟ್ನೆಸ್ ಪರೀಕ್ಷೆ ಕೊಡಲಿದ್ದಾರೆ ಎಂದು ಹೇಳಲಾಗುತ್ತಿದೆ.

ಬೆಂಗಳೂರು ಎಫ್‌ಸಿಗೆ ಸಾವಿಯೊ ಮೆಡೈರಾ

• **ಬೆಂಗಳೂರು:** ಬೆಂಗಳೂರು ಎಫ್‌ಸಿ ತಂಡವು ಸಾವಿಯೊ ಮೆಡೈರಾ ಅವರನ್ನು ಕ್ಲಬ್‌ನ ಯುವ ಅಭಿವೃದ್ಧಿ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಿರುವುದಾಗಿ ಘೋಷಿಸಿದೆ.

ಬ್ಲೂಸ್ ತಂಡವು ತಳಮಟ್ಟದಿಂದ ಪ್ರಥಮ ತಂಡದವರೆಗೆ ಆಟಗಾರರ ಬೆಳವಣಿಗೆಯ ಹಾದಿಯನ್ನು ಬಲಪಡಿಸುತ್ತಿದ್ದು, ಈ ನಿಟ್ಟಿನಲ್ಲಿ ಮೆಡೈರಾ ಅವರು ಕ್ಲಬ್‌ನ ಯುವ ಅಭಿವೃದ್ಧಿ ಕಾರ್ಯಕ್ರಮದ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ. ಮೆಡೈರಾ ಅವರು ಭಾರತೀಯ ಮತ್ತು ಅಂತಾರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ತರಬೇತಿ, ತಾಂತ್ರಿಕ ಅಭಿವೃದ್ಧಿ ಮತ್ತು ತರಬೇತುದಾರರ ಶಿಕ್ಷಣದಲ್ಲಿ ಎರಡು ದಶಕಗಳಿಗೂ



ಹೆಚ್ಚು ಅನುಭವ ಹೊಂದಿದ್ದಾರೆ.

ಈ ಹಿಂದೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಶನ್ ಅಡಿಯಲ್ಲಿ ಭಾರತೀಯ ಹಿರಿಯ ಪುರುಷರ ರಾಷ್ಟ್ರೀಯ ತಂಡದೊಂದಿಗೆ ಮುಖ್ಯ ತರಬೇತುದಾರ ಮತ್ತು ಸಹಾಯಕ ತರಬೇತುದಾರ ಸೇರಿದಂತೆ ಹಲವಾರು ಪಾತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ, 2011ರ ಸ್ಯಾಫ್ ಚಾಂಪಿಯನ್‌ಶಿಪ್, ನೆಹರು ಕಪ್ ಮತ್ತು ಎಎಫ್‌ಸಿ ಚಾಲೆಂಜ್ ಕಪ್ ಗೆದ್ದ ತಂಡದ ಭಾಗವಾಗಿದ್ದರು. ಕ್ಲಬ್ ಮಟ್ಟದಲ್ಲಿ, ಮೆಡೈರಾ ಅವರು ಸಾಲ್ಗಾಂವ್ಕರ್ ಸ್ಪೋರ್ಟ್ಸ್ ಕ್ಲಬ್‌ನೊಂದಿಗೆ ಯಶಸ್ವಿ ಅವಧಿಯನ್ನು ಕಳೆದಿದ್ದಾರೆ. ಅವರ ನೇತೃತ್ವದಲ್ಲಿ ತಂಡವು ಅನೇಕ ಬಾರಿ ಗೋವಾ ಪ್ರೊಫೆಷನಲ್ ಲೀಗ್ ಪ್ರಶಸ್ತಿಗಳನ್ನು (2002–2005) ಮುಡಿಗೇರಿಸಿಕೊಂಡಿದೆ ಮತ್ತು ನ್ಯಾಷನಲ್ ಲೀಗ್‌ನಲ್ಲಿ ರನ್ನರ್–ಅಪ್ ಸ್ಥಾನ ಪಡೆದಿದೆ. ಜೊತೆಗೆ ಅವರು 2003ರ ಡುರಾಂಡ್ ಕಪ್‌ನಲ್ಲಿ ಅತ್ಯುತ್ತಮ ತರಬೇತುದಾರ ಪ್ರಶಸ್ತಿಯನ್ನೂ ಪಡೆದಿದ್ದಾರೆ.

ಆಟಗಾರರನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ

• **ಬೆಂಗಳೂರು:** ಒಬ್ಬ ತರಬೇತುದಾರನಾಗಿ ಪ್ರತಿಯೊಬ್ಬ ಆಟಗಾರರ ಅಗತ್ಯವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟಿಂಗ್ ಕೋಚ್ ದಿನೇಶ್ ಕಾರ್ತಿಕ್ ತಿಳಿಸಿದ್ದಾರೆ.

ಟಿ20 ಕ್ರಿಕೆಟ್‌ನ ಅತ್ಯುತ್ತಮ ಫಿನಿಷರ್‌ಗಳಲ್ಲಿ ಒಬ್ಬರಾಗಿದ್ದ ದಿನೇಶ್ ಕಾರ್ತಿಕ್, ಇದೀಗ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಕೋಚ್ ಆಗಿ ಹೊಸ ಪಾತ್ರದಲ್ಲಿ ಗಮನ ಸೆಳೆಯುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ತಂಡವು ಚಾಂಪಿಯನ್ ಪಟ್ಟ ಉಳಿಸಿಕೊಳ್ಳಲು ದಾಪುಗಾಲು ಹಾಕಿದ್ದು, ಭರ್ಜರಿ ಆರಂಭ ಪಡೆದಿದೆ. ತಮ್ಮ ಕೋಚಿಂಗ್ ತತ್ವವನ್ನು ವಿವರಿಸಿದ ಕಾರ್ತಿಕ್, ಫಿಲ್ ಸಾಲ್ಟ್ ಹೊಸ ಚೆಂಡಿನ ಸ್ವಿಂಗ್ ಎದುರಿಸುತ್ತಾರೆ, ಆದರೆ ರೊಮಾರಿಯೊ ಶೆಫರ್ಡ್ ಅಂತಹ ಪರಿಸ್ಥಿತಿಯನ್ನು ಎದುರಿಸುವುದಿಲ್ಲ. ಹೀಗಾಗಿ, ಆಟಗಾರರಿಗೆ ಸಂದರ್ಭವನ್ನು ಅರ್ಥಮಾಡಿಕೊಟ್ಟು, ಸರಿಯಾದ ತಯಾರಿ ಮಾಡಿಸುವುದು ಮುಖ್ಯ. ಕೋಚಿಂಗ್ ಎಂದರೆ ಕೌಶಲ್ಯ ಮಾತ್ರವಲ್ಲ, ವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವುದೂ ಮುಖ್ಯ ಎಂದು



ಹೇಳಿದರು.

ವೀಕ್ಷಕ ವಿವರಣೆಯಿಂದಲೂ ಸಹಾಯ: ಡಿಕೆ : ವೀಕ್ಷಕ ವಿವರಕನಾಗಿ ಕೆಲಸ ಮಾಡಿರುವ ಅನುಭವವು ಕೂಡ ಕೋಚಿಂಗ್‌ಗೆ ನೆರವಾಗಿದೆ ಎಂದು ಕಾರ್ತಿಕ್ ಅಭಿಪ್ರಾಯಪಟ್ಟರು. ತಿಳಿಸಿದ್ದಾರೆ. ಪ್ರಸಾರಕ್ಷೇತ್ರದಲ್ಲಿ ಕೆಲಸ ಮಾಡುವುದರಿಂದ ವಿವಿಧ ತಂಡಗಳು, ಆಟಗಾರರ ಆಟವನ್ನು ವಿಶ್ಲೇಷಿಸುವ ಅವಕಾಶ ಸಿಗುತ್ತದೆ. ಇದು ಕೋಚಿಂಗ್‌ನಲ್ಲಿ ಸ್ಪಷ್ಟವಾಗಿ ಹಾಗೂ ಸಂಕ್ಷಿಪ್ತವಾಗಿ ಮಾತಾಡಲು ಸಹಾಯ ಮಾಡುತ್ತದೆ ಎಂದರು. ಟಿಮ್ ಡೇವಿಡ್‌ಗೆ ನಾವು ವಿಶೇಷ ಪಂದ್ಯ ಪರಿಸ್ಥಿತಿಗಳನ್ನು ಸೃಷ್ಟಿಸಿ ಅಭ್ಯಾಸ ಮಾಡಿಸುತ್ತಿದ್ದೇವೆ. ಅವರ ಶಕ್ತಿಗಳನ್ನು ಗಮನಿಸಿ, ಅವರಿಗೆ ಸೂಕ್ತವಾದ ಶಾಟ್‌ಗಳನ್ನು ನಿರಂತರವಾಗಿ ಆಡಲು ಸಹಾಯ ಮಾಡುತ್ತಿದ್ದೇವೆ, ಎಂದು ಕಾರ್ತಿಕ್ ಹೇಳಿದರು.

ಡಿಕೆ ಮಾಸ್ಟರ್ ಮೈಂಡ್


ಇನ್ನೊಂದೆಡೆ, ಫಿಲ್ ಸಾಲ್ಟ್ ಕಾರ್ತಿಕ್ ಬಗ್ಗೆ ಮಾತನಾಡಿ, ಡಿಕೆ ಮಾಸ್ಟರ್ ಮೈಂಡ್. ಅವರು ಹಾಗೂ ಕೋಚಿಂಗ್ ತಂಡದವರು ಸಂಗ್ರಹಿಸುವ ಮಾಹಿತಿಯನ್ನು ಸರಳವಾಗಿ ಆಟಗಾರರಿಗೆ ಅರ್ಥವಾಗುವಂತೆ ನೀಡುತ್ತಾರೆ. ಇತ್ತೀಚಿಗೆ ಆಟ ಆಡಿದ ಅನುಭವದಿಂದ ಅವರು ನೀಡುವ ಮಾರ್ಗದರ್ಶನ ತುಂಬಾ ಉಪಯುಕ್ತ, ಎಂದು ಹೇಳಿದರು.

» ತರಬೇತಿ ಕಾರ್ಯವೈಖರಿಗಳ ಬಗ್ಗೆ ದಿನೇಶ್ ಕಾರ್ತಿಕ್ ಅಭಿಮತ

» ಎಲ್ಲಾ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳುವುದೇ ಸವಾಲು

ಪದಬಂಧ 5942

» ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
2.ವ್ಯಕ್ತಿ–ಪ್ರಾಣಿ–ವಸ್ತುಗಳ ಒಕ್ಕೂಟ (3)
5.ಅಜ್ಞಾನದಿಂದ ಕೂಡಿದ ಚರ್ಚೆ (4)
6.ಹಗಲಲ್ಲಿ ರತ್ನದಂತೆ ಪ್ರಕಾಶಿಸುವವನು (4)
7.ಸಲದ ನಡುವೆ ಬಿಗಿಯಿಲ್ಲದಿರುವಿಕೆಯಿದೆ (3)
8.ಯವನಿಕೆಯಿಲ್ಲಿ ತಿರುಗಿದೆ (3)
10.ಪಯ ಒಳಗೊಂಡ ಕಾಯಿಸಬೇಕಾದುದು (4)
12.ಹೆಸರಿನಿಂದ ಗೊತ್ತು ಮಾಡುವುದು (4)
14.ವಿನಾಯಕನಿಲ್ಲಿ ತಿರುಗಿ ಕುಳಿತಿದ್ದಾನೆ (3)
15.ಕೋಟೆಯ ಸೇನಾಧಿಪತಿಯೀತ (4)
16.ಪರಸ್ಪರ ಸಹಾಯವಿದು(4)

ಮೇಲಿನಿಂದ ಕೆಳಕ್ಕೆ
1.ಮನಕ್ಕುಂಟಾಗುವ ಅತೀವ ಸಂತೋಷ (3)
2.ಸಲದ ನಡುವೆ ಕೊಳೆಯಿಲ್ಲದ್ದಿದೆ (4)
3.ಪತಿಯ ಬಗ್ಗೆ ನಿಷ್ಠೆ–ಭಕ್ತಿ ಇರುವವಳು (4)
4.ಕಣ್ಣಿಗೆ ತೋರು–ದೃಷ್ಟಿಗೆ ಬೀಳುವಂತೆ ಮಾಡು (3)
7.ದೂರವಲ್ಲದ ಹತ್ತಿರ (3)
9.ಸಂಭ್ರಮಾಚರಣೆಯಲ್ಲಿ ಬಳಸುವ ಸ್ಫೋಟಕವಸ್ತು (3)
10.ಅಂಗೈಯಿಂದ ಕೆನ್ನೆಗೆ ಬಿದ್ದ ಏಟು (4)
11.ಶರ ಒಳಗೊಂಡ ಕೀರ್ತಿ ತರುವಂಥಾದ್ದು (4)
12.ಸರ್ಪಲೋಕ–ಪಾತಾಳವಿದು (4)
13.ಟಗರನ್ನು ವಾಹನವಾಗುಳ್ಳವನು (4)

5943 ಉತ್ತರ

ಎಡದಿಂದ ಬಲಕ್ಕೆ:
3.ಪುಂಡರೀಕಾಕ್ಷ
5.ಕನ್ನಡನುಡಿ 6.ನಾಟಿ
7.ಗೌಡ 9.ಮಧುಕರ
11.ಯವನಿಕೆ 15.ಕಿರ್ದಿ
16.ದಾನ 17.ಯಮುನಂದನ
19.ಅಸುರಮನ

ಮೇಲಿನಿಂದ ಕೆಳಕ್ಕೆ :
1.ಮಕರಾಕರ 2.ಕುಂಡ
3.ಪುಂಡಿನಾರು
4.ಕಾರ್ಯಗೌರವ 8.ಬಂಧು
10.ಕಪರ್ದಿಕಾಸು 12.ನಿತ್ಯ
13.ಯಮುನಾನದಿ
14.ತ್ರಿನಯನ 18.ನಂಬು

ಕಿರುಸುದ್ದಿ



ಗದಗ: ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಗುರುವಾರ ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಕವಾಯತು ಮಥದಾನ (ಪಿ.ಎಚ್.ಕ್ಯೂ), ಮಲ್ಲಸಮುದ್ರದಲ್ಲಿ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮ ಆಚರಿಸಲಾಯಿತು.

ಶಿವಾನುಭವ ಗೋಷ್ಠಿ ಇಂದು

ನರಗುಂದ: ತಾಲೂಕಿನ ಶಿರೋಳ ಗ್ರಾಮದ ಜಗದ್ಗುರು ಯಚ್ಚರಸ್ವಾಮಿಗಳ ಗವಿಮಠದಲ್ಲಿ 30ನೇ ಮಾಸಿಕ ಶಿವಾನುಭವ ಗೋಷ್ಠಿ ಹಾಗೂ ಶ್ರೀರಾಮ ಜಯಂತಿ ಮತ್ತು ಹನುಮ ಜಯಂತಿ ಕಾರ್ಯಕ್ರಮಗಳು ಏ.3ರ ಸಂಜೆ 7ಕ್ಕೆ ಶ್ರೀ ಮಠದ ಆವರಣದಲ್ಲಿ ಅಭಿನವ ಯಚ್ಚರ ಸ್ವಾಮೀಜಿ ಸಾನಿಧ್ಯದಲ್ಲಿ ಜರುಗಲಿದೆ. ಕಾರ್ಯಕ್ರಮದಲ್ಲಿ ಶ್ರೀರಾಮ ಹಾಗೂ ಹನುಮಂತನ ಗುರು ಶಿಷ್ಯ ಬಾಂಧವ್ಯ ಕುರಿತಾದ ಉಪನ್ಯಾಸವನ್ನು ಬನಹಟ್ಟಿ ಪ್ರೌಢಶಾಲೆ ಮುಖ್ಯಶಿಕ್ಷಕ ಎಸ್.ವೈ. ಪಾಟೀಲ ಅವರು ನೀಡಲಿದ್ದಾರೆ. ಅತಿಥಿಗಳಾಗಿ ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ಎಸ್.ಎಸ್. ಪಾಟೀಲ, ವಿಶ್ವಕರ್ಮ ಸಮಾಜದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಕಾಶ ಅರ್ಕಸಾಲಿ ಇತರರು ಇರಲಿದ್ದಾರೆ.

ಉಚಿತ ಸಾಮೂಹಿಕ ವಿವಾಹ



ಮುಂಡರಗಿ: ತ್ರಿವಿದ ದಾಸೋಹಿ ಹಾಲೇಶ್ವರ ಶರಣರು ಬಡವರಿಗಾಗಿ ಜಾತಿ,ಮತ,ಪಂಥ ಎನ್ನದೇಸರ್ವ ಸಮುದಾಯಗಳ ಜನರನ್ನು ಒಗ್ಗೂಡಿಸಿಕೊಂಡು ನಡೆಸುವ ಉಚಿತ ಸಾಮೂಹಿಕ ವಿವಾಹಗಳಿಂದ ಬಡವರಿಗೆ ಅನುಕೂಲವಾಗುತ್ತದೆ ಎಂದು ಕಲಕೇರಿ-ವಿರುಪಾಪೂರದ ಮುದುಕೇಶ್ವರ ಶಿವಾಚಾರ್ಯರು ಹೇಳಿದರು. ಡಂಬಳ ಹೋಬಳಿಯ ಪೇಠಾ ಆಲೂರ ಗ್ರಾಮದ ಆರಾಧ್ಯದೇವರಾದ ಹಾಲೇಶ್ವರ ಕೃಪಾ ಪೋಷಿತ ಶಿವಯೋಗಾಶ್ರಮದ 48ನೇ ಜಾತ್ರಾ ಮಹೋತ್ಸವದ ಅಂಗವಾಗಿ ಜೋಡಿಗಳ ಸಾಮೂಹಿಕ ವಿವಾಹದಲ್ಲಿ ನೂತನ ವಧು-ವರರಿಗೆ ಆಶೀರ್ವಚನ ನೀಡಿ ಮಾತನಾಡಿದರು. ತ್ರಿವಿದ ದಾಸೋಹಿ ಹಾಲೇಶ್ವರ ಶರಣರು ಮಾತನಾಡಿ, ಸಮಾಜದಲ್ಲಿ ಅನಾವಶ್ಯಕವಾಗಿ ಖರ್ಚು ಮಾಡಿ ಮಾಡುವ ಮದುವೆಗಳಿಗಿಂತ ಸಾಮೂಹಿಕ ವಿವಾಹಗಳು ಉತ್ತಮ ಸಂಪ್ರದಾಯವಾಗಿದ್ದು, ಇದರಿಂದ ಆರ್ಥಿಕವಾಗಿ ದುರ್ಬಲ ಕುಟುಂಬಗಳಿಗೆ ಸಹಾಯವಾಗುತ್ತದೆ ಎಂದರು. ವಿರುಪಾಪೂರದ ಅಭಿನವ ಮುದುಕೇಶ್ವರ ಶಿವಾಚಾರ್ಯ ಶ್ರೀಗಳು ಮಾತನಾಡಿ, ಜಾತ್ರಾಮಹೋತ್ಸವ, ಧಾರ್ಮಿಕ ಸಭೆಗಳು, ಕಡುಬಡವರಿಗೆ ಆಯೋಜಿಸುವ ಸಾಮೂಹಿಕ ಮದುವೆಗಳಂತಹ ಕಾರ್ಯಕ್ರಮಗಳು ಸಮಾನತೆ ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂದರು.

ಅಧ್ಯಕ್ಷರಾಗಿ ನೇಮಕ

ಮುಂಡರಗಿ: ಮುಂಡರಗಿ ಬಿಜೆಪಿ ಮಂಡಳದ ಅಧ್ಯಕ್ಷರಾಗಿ ಡಾ.ಕುಮಾರಸ್ವಾಮಿ ಹಿರೇಮಠ ನೇಮಕಗೊಂಡಿದ್ದಾರೆ. ಬಹಳ ದಿನಗಳಿಂದ ಖಾಲಿ ಇರುವ ಈ ಹುದ್ದೆಗೆ ಡಾ.ಕುಮಾರಸ್ವಾಮಿ ಹಿರೇಮಠ ನೇಮಕಗೊಂಡಿದ್ದು ಅನೇಕ ಕಾರ್ಯಕರ್ತರಲ್ಲಿ ಹರ್ಷಮೂಡಿದೆ. ಈ ನೇಮಕಕ್ಕೆ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜು ಕುರಡಗಿ ಮತ್ತು ಕ್ಷೇತ್ರದ ಶಾಸಕ ಡಾ.ಚಂದ್ರು ಲಮಾಣಿ ಅವರಿಗೆ ಕುಮಾರಸ್ವಾಮಿ ಹಿರೇಮಠ ಹರ್ಷವ್ಯಕ್ತಪಡಿಸಿದ್ದಾರೆ.



ಜನ್ಮದಿನಾಚರಣೆ ಏ.5ಕ್ಕೆ

ಗದಗ: ಏ.5 ರಂದು ಬೆಳಗ್ಗೆ 10.30ಕ್ಕೆ ಹಸಿರುಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಮ್‌ರವರ 119ನೇ ಜಯಂತಿ ಜಿಲ್ಲಾಡಳಿತ ಭವನದ ಅಡಿಟೋರಿಯಮ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಡಾ.ನಂದಾ ಹಣಬರಟ್ಟಿ ತಿಳಿಸಿದ್ದಾರೆ.

ಪೂರ್ವಭಾವಿ ಸಭೆ

ಗದಗ: ಏ.20ರಂದು ಆಚರಿಸಲಾಗುವ ಕರ್ನಾಟಕದ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರರ ಜಯಂತಿ ನಿಮಿತ್ತ ಏ.8ರಂದು ಬೆಳಗ್ಗೆ 10.30ಕ್ಕೆ ಅಪರ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮಚಂದ್ರಪ್ಪ ಡಾಣೆ ನಿಧನ

ನರಗುಂದ: ಪಟ್ಟಣದ ಗುಡ್ಡದಕೇರಿ ಓಣಿ ನಿವಾಸಿ, ಪುರಸಭೆ ಮಾಜಿ ಸದಸ್ಯ ರಾಮಚಂದ್ರಪ್ಪ ಜ್ಯೋತಿಬಾ ಡಾಣೆ(81) ಗುರುವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.





ಗಜೇಂದ್ರಗಡ: ಕಾಲಕಾಲೇಶ್ವರ ಜಾತ್ರಾಮಹೋತ್ಸವವು ಸಾವಿರಾರು ಭಕ್ತರ ಹರ್ಷೋದ್ಗಾರ ಮಧ್ಯೆ ಅದ್ದೂರಿಯಾಗಿ ಗುರುವಾರ ನಡೆಯಿತು. ಧರ್ಮದರ್ಶಿ ಯಶರಾಜ್ ಘೋರ್ಪಡೆ 3 ಬಾರಿ ಗಾಳಿಯಲ್ಲಿ ತೊಪ್ಪು (ಗುಂಡು)ಹಾರಿಸಿದ ನಂತರ ದೇವಾಲಯದಿಂದ ಪಲ್ಲಕ್ಕಿ ಬಂದು ಚಿತ್ತಾ ನಕ್ಷತ್ರ ಕಂಡ ನಂತರ ಮಹಾ ರಥೋತ್ಸವ ಜರುಗಿತು. ಮೈಸೂರು ಮಠದ ವಿಜಯಮಹಾಂತ ಸ್ವಾಮೀಜಿ, ಶಾಸಕ ಜಿ.ಎಸ್.ಪಾಟೀಲ, ಧರ್ಮದರ್ಶಿ ಮಂಗಳಾದೇವಿ ದೇಶಮುಖ, ಕೀರ್ತಿಮಾಲಿನಿ ಘೋರ್ಪಡೆ ಇತರರಿದ್ದರು.

ಪೊಲೀಸರು ಜನರಲ್ಲಿ ಭದ್ರತಾ ಭಾವನೆ ಮೂಡಿಸಲಿ

ಗದಗ: ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಗುರುವಾರ ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಕವಾಯತು ಮಥದಾನ (ಪಿ.ಎಚ್.ಕ್ಯೂ), ಮಲ್ಲಸಮುದ್ರದಲ್ಲಿ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು. ನಿವೃತ್ತ ಎ.ಎಸ್.ಐ ಎಚ್.ಡಿ.ಗಡಾದ ಮಾತನಾಡಿ, ಪೊಲೀಸ್ ಇಲಾಖೆ ಸಮಾಜದ ಶಾಂತಿ, ಸುವ್ಯವಸ್ಥೆ ಮತ್ತು ಭದ್ರತೆಯನ್ನು ಕಾಪಾಡುವ ಪ್ರಮುಖ ಕಂಬವಾಗಿದೆ ಎಂದರು. ಅಪರಾಧ ನಿಯಂತ್ರಣ, ಕಾನೂನು ಸುವ್ಯವಸ್ಥೆ ಕಾಪಾಡುವುದು ಮಾತ್ರವಲ್ಲದೆ, ಜನರಲ್ಲಿ ಭದ್ರತಾ ಭಾವನೆ ಮೂಡಿಸುವುದು ಪೊಲೀಸರ ಪ್ರಮುಖ ಕರ್ತವ್ಯವಾಗಿದೆ. ಇದನ್ನು ಇಲಾಖೆ ಶಿಸ್ತು ಬದ್ದವಾಗಿ ನಿರ್ವಹಿಸುತ್ತಿದೆ ಎಂದರು. ಜಿಲ್ಲಾ ಪೊಲೀಸ್ ಅಧೀಕ್ಷಕ ರೋಹನ್ ಜಗದೀಶ್ ಮಾತನಾಡಿ, ಪೊಲೀಸ್ ಇಲಾಖೆ ಕಾಯ್ದೆ ಜಾರಿಗೆ ಬಂದ ಹಿನ್ನೆಲೆಯಲ್ಲಿ ಧ್ವಜ ದಿನಾಚರಣೆ ನಡೆದುಬಂದಿದೆ. ಪೊಲೀಸ್ ಧ್ವಜ ಮಾರಾಟಮಾಡಿ ಬಂದ ಹಣದಲ್ಲಿ ಶೇ. 50 ರಷ್ಟು ಕೇಂದ್ರ ಮೀಸಲು ಪಡೆಗೆ ಹಾಗೂ ಶೇ.50 ರಷ್ಟು ಹಣವನ್ನು ರಾಜ್ಯದ ನಿವೃತ್ತ ಪೋಲಿಸ್ ನಿಧಿಗೆ ಬಳಕೆ ಮಾಡಲಾಗುತ್ತಿದೆ ಇದರಿಂದ ಅನೇಕರಿಗೆ ಸಹಾಯಾಡಲಾಗುತ್ತಿದೆ. ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಪೊಲೀಸರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದರು. ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಹಾಂತೇಶ ಸಜ್ಜನರ, ನರಗುಂದ ಡಿವೈಎಸ್‌ಪಿ ಪ್ರಭುಗೌಡ ಕೆರೆದಳ್ಳಿ, ಮಹನಿಯರಾದ ಸಂಜನಾ ರೋಹನ್ ಜಗದೀಶ್, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ಎಸ್.ಎನ್. ಬಳ್ಳಾರಿ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ಇತರರಿದ್ದರು.



ಮುಂಡರಗಿ: ಬಿಜೆಪಿ ಮಂಡಲದ ಅಧ್ಯಕ್ಷರಾಗಿ ನೇಮಕಗೊಂಡಿರುವ ಡಾ.ಕುಮಾರಸ್ವಾಮಿ ಹಿರೇಮಠ ಮತ್ತು ಹಡಪದ ಸಮಾಜದ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ದೇವು ಹಡಪದ ಅವರು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಪೂಜ್ಯರು ಈರ್ವರಿಗೆ ಸನ್ಮಾನಿಸಿ ಆಶೀರ್ವದಿಸಿದರು. ಕರಬಸಪ್ಪ ಹಂಚಿನಾಳ, ಡಾ.ಬಿ.ಜಿ.ಜವಳಿ, ಡಾ.ಡಿ.ಸಿ.ಮಠ, ವಿ.ಜಿ.ಹಿರೇಮಠ, ಹಾಲಯ್ಯ ಹಿರೇಮಠ ಮುಂತಾದವರಿದ್ದರು.

ಹನುಮನಿಗೆ ಭಕ್ತಗಣ ನಮನ



ಗದಗ: ಅವಳಿ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆಯ ಮಾರುತಿ ಮಂದಿರಗಳಲ್ಲಿ ಗುರುವಾರ ಶ್ರದ್ಧಾ-ಭಕ್ತಿಯಿಂದ ಹನುಮ ಜಯಂತಿ ಆಚರಿಸಲಾಯಿತು. ಸಾವಿರಾರು ಭಕ್ತಾದಿಗಳು ವಿಶೇಷ ಪೂಜೆ-ಪುನಸ್ಕಾರ ಸಲ್ಲಿಸುವ ಚಿರಂಜೀವಿ ಹನುಮಂತನಿಗೆ ಭಕ್ತಿ ಸಮರ್ಪಿಸಿದರು.

ಅವಳಿ ನಗರಗಳಾದ ಗದಗ-ಬೆಟಗೇರಿ ವಿವಿಧ ದೇವಸ್ಥಾನಗಳಲ್ಲಿ ಹನುಮ ಜಯಂತಿ ಹಿನ್ನೆಲೆ ಬೆಳಗ್ಗೆಯಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆದವು. ಮಾರುತಿ ದೇವಸ್ಥಾನಗಳನ್ನು ರಂಗೋಲಿ, ತಳಿರು-ತೋರಣ, ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ಧಾರ್ಮಿಕ ವಿಧಿವಿಧಾನಗಳೊಂದಿಗೆ ಅಭಿಷೇಕ ಹಾಗೂ ಪೂಜಾ ಕೈಂಕರ್ಯ ನಡೆದವು. ಮಾರುತಿ ದೇವಸ್ಥಾನಕ್ಕೆ ಅಪಾರ ಪ್ರಮಾಣದಲ್ಲಿ ಭಕ್ತರು ಆಗಮಿಸಿದ ಪ್ರಯುಕ್ತ ಭಕ್ತರಿಗಾಗಿ ಮಾರುತಿ ದೇವಸ್ಥಾನದಲ್ಲಿ ಅನ್ನ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ದೇವಸ್ಥಾನದಲ್ಲಿ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

- ನಗರದ ಪುರಾತನ ಕಿಲ್ಲಾದ ಜೋಡ ಮಾರುತಿ ದೇವಸ್ಥಾನ, ವಿವೇಕಾನಂದ ನಗರದ ವೀರಾಂಜನೇಯ ದೇವಸ್ಥಾನ, ನರಸಾಪುರದ ಗುಂಡದ ಮಾರುತಿ ಗುಡಿ, ಬಸವೇಶ್ವರ ನಗರದ ಜೋಡ ಹನುಮಂತ ದೇವರ ಗುಡಿ, ಹೆಲ್ತ್‌ಕ್ಯಾಂಪ್‌ನ ಮಾರುತಿ ದೇವಸ್ಥಾನದಲ್ಲಿ ವಿಶೇಷ ಪೂಜೆ
- ರೈಲ್ವೆ ನಿಲ್ದಾಣ ಸಮೀಪದ ಮಾರುತಿ ಮಂದಿರ, ಹುಡ್ಕೋ ಬಡಾವಣೆಯ ಬಯಲು ಆಂಜನೇಯ ದೇವಸ್ಥಾನ, ಶರಣ ಬಸವೇಶ್ವರ ನಗರದ ಆಂಜನೇಯ ಗುಡಿ, ಸೆಟ್ಲಮೆಂಟ್‌ನ ಮಾರುತಿ ದೇವಸ್ಥಾನಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆದವು

ವಾಯುಪುತ್ರನಿಗೆ ತುಳಸಿ ಅರ್ಚನೆ



ಜಿಲ್ಲೆಯಲ್ಲಿ ಬೆಳಗ್ಗೆಯಿಂದಲೇ ವಾಯುಪುತ್ರನಿಗೆ ಮಹಾಭಿಷೇಕ, ರುದ್ರಾಭಿಷೇಕ ನೆರವೇರಿಸಲಾಯಿತು. ಹೋಮ-ಹವನದ ಮೂಲಕ ಪ್ರಾರ್ಥನೆ ಸಲ್ಲಿಸಲಾಯಿತು. ತುಳಸಿ ಅರ್ಚನೆ ಹಾಗೂ ಮಹಾಮಂಗಳಾರತಿ ಬೆಳಗಿ ಇಷ್ಟಾರ್ಥದೊಂದಿಗೆ ನಾಡಿನ ಸಮೃದ್ಧಿಗೆ ಪ್ರಾರ್ಥಿಸಲಾಯಿತು.



ಬಾಲ ಹನುಮನ ತೊಟ್ಟಿಲೋತ್ಸವ



ಸುಮಂಗಲೆಯರು, ಭಕ್ತರು ಬಾಲ ಹನುಮನನ್ನು ತೊಟ್ಟಿಲಿಗೆ ಹಾಕಿ ತೂಗಿದರು. ನಾಮಕರಣ ಮಾಡಿ ಸಂಭ್ರಮಿಸಿದರು. ಸುಮಂಗಲೆಯರು ಬಾಲ ಹನುಮನನ್ನು ತೊಟ್ಟಿಲಿಗೆ ಹಾಕಿ ತೂಗಿದರು. ಹನುಮಾನ್ ಚಾಲೀಸಾ ಪಠಿಸಿದರು. ಭಕ್ತಾದಿಗಳಿಗೆ ಅನ್ನಸಂತರ್ಪಣೆ ನಡೆಯಿತು.

ಜಾತಿರಹಿತ ಸಮಾಜ ಕಟ್ಟಿದ್ದ ಬಸವಾದಿ ಶರಣರು



ಗದಗ: ಇಂದು ನಾವೆಲ್ಲ ಜಾತ್ಯಾತೀತ ಸಮಾಜ ನಿರ್ಮಾಣ ಮಾಡುವ ಕುರಿತು ಚಿಂತನೆ ಮಾಡುತ್ತೇವೆ. ಆದರೆ ಬಸವಾದಿ ಶರಣರು 12ನೇ ಶತಮಾನದಲ್ಲೇ ಕಲ್ಯಾಣದಲ್ಲಿ ಜಾತಿ ರಹಿತ ಸಮಾಜ ನಿರ್ಮಾಣ ಮಾಡಿದ್ದರು. ಜಾತಿರಹಿತ ಸಮಾಜಕ್ಕೂ ಜಾತ್ಯಾತೀತ ಸಮಾಜಕ್ಕೂ ವ್ಯತ್ಯಾಸವಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ನಗರದ ತೋಂಟದಾರ್ಯ ಮಠದಲ್ಲಿ 2026ನೇ ಸಾಲಿನ ತೋಂಟದಾರ್ಯ ಜಾತ್ರಾ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿ, ಕಲ್ಯಾಣ ಕ್ರಾಂತಿಯ ನಂತರ ತೆರೆಮರೆಗೆ ಸರಿದಿದ್ದ ಶರಣ ಪರಂಪರೆ ಪುನರ್ ಸ್ಥಾಪಿಸಲು 15ನೇ ಶತಮಾನದ ಸಿದ್ದಲಿಂಗ ಶಿವಯೋಗಿಗಳು ಸ್ಥಾಪಿಸಿದ ಪೀಠ ಪರಂಪರೆ ಇದಾಗಿದೆ ಎಂದರು. ಡಾ.ಎಂ.ಎಂ. ಕಲಬುರ್ಗಿ ಅಧ್ಯಯನ ಸಂಸ್ಥೆಯಿಂದ ಪ್ರಕಟವಾದ ಪಗು ಸಿದ್ದಾಪೂರ ವಿರಚಿತ ಹಣತೆ ಹಚ್ಚಿದವರು-2 ಹಾಗೂ ಡಾ.ಎಸ್. ಗಂಗಾಬಿಕೆ ಗೋವರ್ಧನ ವಿರಚಿತ ತಾರಕಗುರೂಪದೇಶ, ವಿಜಯಕುಮಾರ ಕಮ್ಮಾರ ವಿರಚಿತ ಒಕ್ಕಲಿಗ ಮುದ್ದಣ್ಣನವರ ವಚನಗಳ ವಿಶ್ಲೇಷಣೆ ಗ್ರಂಥಗಳು ಲೋಕಾರ್ಪಣೆಗೊಂಡವು. ಗ್ರಂಥ ಲೋಕಾರ್ಪಣೆ ನೆರವೇರಿಸಿದ ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಮಾತನಾಡಿ, ಲಿಂಗೈಕ್ಯ ಸಿದ್ದಲಿಂಗ ಶ್ರೀಗಳು ಧಾರ್ಮಿಕ ಕಟ್ಟುಪಾಡುಗಳನ್ನು ಮೀರಿ ಜಾತ್ರೆಗೆ ಸಾಮಾಜಿಕ-ಸಾಂಸ್ಕೃತಿಕ ಆಯಾಮ ನೀಡಿದರು ಎಂದರು.

> ತೋಂಟದಾರ್ಯ ಮಠದ ಪರಂಪರೆಗೆ ಮೆರುಗು ತಂದುಕೊಟ್ಟವರು ಲಿಂ.ಸಿದ್ಧಲಿಂಗ ಸ್ವಾಮೀಜಿ. ಕನ್ನಡಾಭಿಮಾನ ಹಾಗೂ ಬಸವತತ್ವನಿಷ್ಠೆಗೆ ವ್ಯಾಖ್ಯಾನರಾಗಿದ್ದ ಅವರ ಜೊತೆ ನನಗೂ ಅವಿನಾಭಾವ ಸಂಬಂಧವಿತ್ತು
> ■ ಎಂ.ಬಿ. ಪಾಟೀಲ, ಸಚಿವ

ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ವಿನಾಯಕ ಮಾನ್ವಿ ಸ್ವಾಗತಿಸಿದರು. ತೋಂಟದಾರ್ಯ ಮಠದ ಆಡಳಿತಾಧಿಕಾರಿ ಪ್ರೊ.ಎಸ್.ಎಸ್. ಪಟ್ಟಣಶೆಟ್ಟರ ಮಾತನಾಡಿದರು. ಸಾನ್ನಿಧ್ಯ ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ, ಮುರುಘಾಮಠದ ಡಾ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ವಹಿಸಿದ್ದರು. ಹಾವೇರಿ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ, ಮಣಕವಾಡ ದೇವಮಂದಿರದ ಅಭಿನವ ಮೃತ್ಯುಂಜಯ ಸ್ವಾಮೀಜಿ, ಮುಂಡರಗಿಯ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ಮಣಕವಾಡ ದೇವಮಂದಿರದ ಅಭಿನವ ಮೃತ್ಯುಂಜಯ ಸ್ವಾಮೀಜಿ, ಮಾಜಿ ಸಚಿವ ಎಸ್.ಎಸ್. ಪಾಟೀಲ, ಮಾಜಿ ಸಂಸದ ಐ.ಜಿ. ಸನದಿ, ಡಾ.ಐಹೊಳೆ ಇದ್ದರು. ಬಾಹುಬಲಿ ಜೈನರ್ ನಿರೂಪಿಸಿದರು.

ಮಠಮಾನ್ಯಗಳು ಶಿಕ್ಷಣ, ಸಂಸ್ಕೃತಿ ಕಲಿಸುವ ಕೇಂದ್ರಗಳಾಗಲಿ

ಮುಂಡರಗಿ: ಮಠಮಾನ್ಯಗಳು ಕೇವಲ ಧರ್ಮಪ್ರಚಾರಕ್ಕೆ ಸೀಮಿತವಾಗಿರದೆ ಶಿಕ್ಷಣ, ಸಂಸ್ಕೃತಿಯನ್ನು ಕಲಿಸುವ ಕೇಂದ್ರಗಳಾಗಬೇಕು. ಮಹಾತ್ಮರ ಜಯಂತಿಗಳನ್ನು ಮತ್ತು ಪುಣ್ಯಸ್ಮರಣೆಗಳನ್ನು ಆಚರಿಸುವ ಮೂಲಕ ಅವರ ಜೀವನ ದರ್ಶನಪಡೆದು ನೈತಿಕತೆಯನ್ನು ಅಳವಡಿಸಿಕೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ ಎಂದು ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ಹೇಳಿದರು.

ಅವರು ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ ಹಮ್ಮಿಕೊಂಡಿದ್ದ ಶ್ರೀ ಜಂಗಮ ಪುಂಗವ ಅಲ್ಲಮ ಪ್ರಭುಗಳ, ಮಹಾದೇವಿ ಅಕ್ಕನವರಜಯಂತಿ ಮತ್ತು ಶ್ರೀಮಠದ 9ನೇ ಪೀಠಾಧಿಪತಿಗಳ 59ನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು. 12ನೇ ಶತಮಾನದಲ್ಲಿ ಅಲ್ಲಮಪ್ರಭುಗಳು ಮತ್ತು ಅಕ್ಕಮಹಾದೇವಿ ಅವರು ಅನುಭವ ಮಂಟಪದಲ್ಲಿ ವಿಶೇಷ ಸ್ಥಾನಮಾನ ಪಡೆದುಕೊಂಡಿದ್ದರು. ಅವರ ವಚನಗಳು ಇಂದಿಗೂ ಪ್ರಸ್ತುತ ಎಂದರು. ಕುಕನೂರಿನ ಡಾ.ಮಹಾದೇವ ಸ್ವಾಮೀಜಿ ಮಾತನಾಡಿ, ಅಲ್ಲಮಪ್ರಭುಗಳ ಪ್ರತಿರೂಪವೇ ಶ್ರೀಮಠದ ಜಗದ್ಗುರುಗಳು. ಮಾತೃ ಹೃದಯದ ಪೂಜ್ಯರು ಎಲ್ಲರಿಗೂ ಪೂಜ್ಯನೀಯರು. ನಾನು ಮಠದಲ್ಲಿ ಸ್ಟೀಲ್ ತಟ್ಟೆಯಲ್ಲಿ ಪೂಜೆ ಮತ್ತು ಪ್ರಸಾದವನ್ನು ಸ್ವೀಕರಿಸುತ್ತಿರುವುದನ್ನು ಗಮನಿಸಿದ ಪೂಜ್ಯರು ನನಗೆ ಬೆಳ್ಳಿ ತಟ್ಟೆ ಮತ್ತು ಪೂಜೆ ಮಾಡಿಕೊಳ್ಳುವ ಬೆಳ್ಳಿ ಸಾಮಾಗ್ರಿಗಳನ್ನು ನೀಡಿದ್ದಾರೆ ಎಂದರು. ಪ್ರಾಚಾರ್ಯ ಡಾ.ಸಂತೋಷ ಹಿರೇಮಠ ಶ್ರೀಮಠದ 9ನೇ ಪೀಠಾಧಿಪತಿಗಳ ಜೀವನದ ಬಗ್ಗೆ ಉಪನ್ಯಾಸ ನೀಡಿ, ಶ್ರೀಮಠವನ್ನು ಸಾಕಷ್ಟು ರೀತಿಯಲ್ಲಿ ಬೆಳೆಸಿದ್ದರಲ್ಲದೆ ,ಅವರೊಬ್ಬ ಪವಾಡ ಪುರುಷರಾಗಿದ್ದರು ಎಂದರು. ನಿವೃತ್ತ ಪ್ರಾಚಾರ್ಯ ಫಕೀರಪ್ಪ ಚಕ್ರಬಂಡಿ ಅವರು ಜಂಗಮ ಪುಂಗಮ ಅಲ್ಲಮಪ್ರಭುಗಳ ಜೀವನ ಕುರಿತು ಮಾತನಾಡಿದರೆ, ಸುನಿತಾ ಅಂಗಡಿ ಅವರು ಅಕ್ಕಮಹಾದೇವಿ ಅವರಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮಕ್ಕೂ ಮೊದಲು ಲಿಂಗನಾಯಕನಹಳ್ಳಿಯ ಚನ್ನವೀರಸ್ವಾಮಿಗಳು ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿದರು. ಪಂಡಿತ ಬಾಲಚಂದ್ರ ನಾಕೋಡ್ ಮತ್ತು ಸ್ವಾಯಿ ನಾಕೋಡ ಅವರಿಂದ ಸಂಗೀತ ಕಾರ್ಯಕ್ರಮ ಜರುಗಿತು. ಶ್ರೀ ಜ.ಅ.ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಿಂದ ಗೀತಗಾಯನ ಕಾರ್ಯಕ್ರಮ ನಡೆಯಿತು. ಶ್ರೀ ಜ.ಅ.ಅಕ್ಕನಬಳಗದವರಿಂದ ಮುತ್ತೈದರಿಗೆ ಉಡಿತುಂಬುವ ಕಾರ್ಯಕ್ರಮ ಜರುಗಿತು. ಹಾಲೇಶ್ವರ ಸ್ವಾಮೀಜಿ, ಡಾ.ರಾಜಶೇಖರ ಬಳ್ಳಾರಿ, ಭಕ್ತಿಸೇವೆಯನ್ನು ವಹಿಸಿಕೊಂಡಿದ್ದ ಆರ್.ಬಿ.ಡಂಬಳಮಠ ಉಪಸ್ಥಿತರಿದ್ದರು. ಕೆ.ವಿ.ಹಂಚಿನಾಳ, ಡಾ.ಬಿ.ಜಿ.ಜವಳಿ, ಎಂ.ಜಿ.ಗಚ್ಚಣ್ಣವರ, ಎಂ.ಎಸ್.ಶಿವಶೆಟ್ಟಿ, ವೀರನಗೌಡ ಗುಡದಪ್ಪನವರ, ಡಾ.ಡಿ.ಸಿ.ಮಠ, ವಿ.ಜಿ.ಹಿರೇಮಠ,ಹಾಲಯ್ಯ ಹಿರೇಮಠ, ಪ್ರಾ.ಎಂ.ವಿ.ಕುಲಕರ್ಣಿ , ಲಕ್ಷ್ಮೀದೇವಿ ಬೆಳವಟಗಿಮಠ, ಲೀಲಾ ಅಕ್ಕೂರ, ಚೇತನಾ ಹೊಸಮಠ ಮುಂತಾದವರಿದ್ದರು. ಶಕುಂತಲಾ ಹಂಪಿಮಠ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು. ಕಾರ್ಯಕ್ರಮದ ಮೊದಲು ಪಲ್ಲಕ್ಕಿ ಉತ್ಸವ ಜರುಗಿತು.



ತೋಂಟದಾರ್ಯ ಮಠದ ಮಹಾ ರಥೋತ್ಸವ ಸಂಭ್ರಮ

ಗದಗ: ಜಗದ್ಗುರು ತೋಂಟದಾರ್ಯ ಮಠದ ಮಹಾ ರಥೋತ್ಸವವು ಭಕ್ತ ಸಾಗರದ ಮಧ್ಯೆ ಗುರುವಾರ ಸಂಜೆ ಸಂಭ್ರಮದಿಂದ ನಡೆಯಿತು. ಮಠದ ಪ್ರಾಂಗಣದಿಂದ ಆರಂಭವಾದ ರಥೋತ್ಸವವು ತೇರಿನ ಬೀದಿಯಲ್ಲಿ ಭಕ್ತಸಾಗರದ ನಡುವೆ ಸಾಂಗವಾಗಿ ಸಾಗಿತು. ರಥೋತ್ಸವಕ್ಕೂ ಮುನ್ನವೇ ಆರಂಭಗೊಳ್ಳುವ ಜಾತ್ರೆ ಒಂದುವರೆ ತಿಂಗಳು ನಡೆಯುತ್ತದೆ. ನಾಡಿನ ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು, ರಥಕ್ಕೆ ಉತ್ತತ್ತಿ, ಬಾಳೆಹಣ್ಣು, ಲಿಂಬೆಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ಇದಕ್ಕೂ ಮೊದಲು ಸಾವಿರಾರು ಭಕ್ತರು ಮಠದಲ್ಲಿ ಹಿರಿಯ ಸ್ವಾಮೀಜಿಗಳ ಗದ್ದುಗೆ ದರ್ಶನ ಪಡೆದರು.

ಕಲಾ ತಂಡಗಳ ಮೆರುಗು: ರಥೋತ್ಸವಕ್ಕೆ ಮುನ್ನ ಪರಂಪರೆಯಂತೆ ವೀರನಾರಾಯಣ ರಸ್ತೆಯಲ್ಲಿರುವ ಎಸ್.ಎಸ್.ಕಳಸಾಪೂರಶೆಟ್ರ ನಿವಾಸದಿಂದ ಅಲಂಕೃತ ತೆರೆದ ವಾಹನದಲ್ಲಿ ಡಾ.ತೋಂಟದ ಸಿದ್ದರಾಮ ಶ್ರೀಗಳ ಮೆರವಣಿಗೆ ನಗರದ ಪ್ರಮುಖ ರಸ್ತೆಗಳ ಮೂಲಕ ಸಾಗಿ ಬಂದಿತು. ರಸ್ತೆಯುದ್ದಕ್ಕೂ ಮೆರವಣಿಗೆಯಲ್ಲಿ ಪಾಲ್ಗೊಂಡ ಭಕ್ತರಿಗೆ ಮತ್ತು ಮೆರವಣಿಗೆ ತಂಡಗಳಿಗೆ ವರ್ತಕರು ಕುಡಿಯಲು ತಂಪು ಪಾನಿಯಗಳನ್ನು ವಿತರಿಸಿದ್ದು ಐಕ್ಯತೆಯ ಸಂದೇಶವನ್ನು ಸಾರಿತು. ರಸ್ತೆಯುದ್ದಕ್ಕೂ ರಂಗೋಲಿಯನ್ನು ಹಾಕಿ ಭಕ್ತಿಭಾವದಿಂದ ಪೂಜ್ಯರನ್ನು ಸ್ವಾಗತಿಸಿದರು.

ಭಕ್ತರಿಂದ ಪೂಜೆ: ಭಜನಾ ಮಂಡಳಿ, ನಂದಿಕೋಲು, ಸಾಂಪ್ರದಾಯಿಕ ಉಡುಪಿನೊಂದಿಗೆ ಸಾಗಿದ ಛತ್ರಚಾಮರಗಳು ಭಕ್ತರ ಮನಸೂರೆಗೊಂಡವು. ತೆರೆದ ವಾಹನದಲ್ಲಿ ಆಗಮಿಸಿದ ಶ್ರೀಗಳಿಗೆ ಭಕ್ತರು ಪೂಜೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ಮೆರವಣಿಗೆಯಲ್ಲಿ ನೂರಾರು ಭಕ್ತರು ಪಾಲ್ಗೊಂಡಿದ್ದರು.



ಪಲ್ಲಕ್ಕಿ ಉತ್ಸವ

ಅಡ್ಡಪಲ್ಲಕ್ಕಿಯಲ್ಲಿ ಬಸವಣ್ಣನವರ ಹಾಗೂ ಸಿದ್ಧಲಿಂಗೇಶ್ವರರ ಭಾವಚಿತ್ರಗಳನ್ನು ವಚನದ ಕಟ್ಟುಗಳನ್ನು ಇಟ್ಟು ಮೆರವಣಿಗೆ ಮಾಡಲಾಯಿತು. ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಸಾವಿರಾರು ಭಕ್ತರೊಂದಿಗೆ ಎರಡು ಕಿಮಿ ಉದ್ದದ ಮೆರವಣಿಗೆಯೊಂದಿಗೆ ನಡೆದುಕೊಂಡು ಬಂದರು. ಮಹಾರಥೋತ್ಸವದಲ್ಲಿ 10ಕ್ಕೂ ಹೆಚ್ಚು ಸಾಂಸ್ಕೃತಿಕ ಕಲಾತಂಡ ಪಾಲ್ಗೊಂಡವು.

ಬೃಹತ್ ಮೆರವಣಿಗೆ

ನಗರದ ಎಸ್.ಎಸ್.ಕಳಸಾಪೂರಶೆಟ್ಟರ ಮನೆಯಿಂದ ಆರಂಭವಾದ ಮೆರವಣಿಗೆ ಸರಾಫ್ ಬಜಾರ, ಬಸವೇಶ್ವರ ವೃತ್ತ, ಹುಯಿಲಗೋಳ ನಾರಾಯಣರಾವ್ ವೃತ್ತ, ಮಹೇಂದ್ರಕರ್ ವೃತ್ತದ ಮೂಲಕ ಮಠಕ್ಕೆ ತಗಲುಪಿತು. ಜಾಂಜ್ ಮೇಳ, ಕರಡಿ ಮಜಲು ಸೇರಿದಂತೆ ವಿವಿಧ ವಾದ್ಯ ಮೇಳಗಳು, ಜನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ತಂದವು. ವಿವಿಧ ಕಲಾ ತಂಡಗಳ ಮೆರವಣಿಗೆಗೆ ಕಣ್ಮನ ಸೆಳೆಯಿತು.

ಸಂಘಟಿತ ಸಮಾಜದಿಂದ ಅಭಿವೃದ್ಧಿ ಸಾಧ್ಯ: ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ

ನರಗುಂದ: ಪಟ್ಟಣದ ಪಂಚಗೃಹ ಗುಡ್ಡದ ಹಿರೇಮಠದಲ್ಲಿ ತಾಲೂಕು ಜಂಗಮ ಕ್ಷೇಮಾಭಿವೃದ್ಧಿ ಸಂಘದಿಂದ ಶ್ರೀ ಸಿದ್ಧಾಂತ ಶಿಖಾಮಣಿ 5ನೇ ಮಾಸಿಕ ಶಿವಾನುಭವಗೋಷ್ಠಿ ಜರುಗಿತು. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸಂಘಟಿತ ಸಮಾಜದಿಂದ ಅಭಿವೃದ್ಧಿ ಸಾಧ್ಯ. ಸುಸಂಸ್ಕೃತ ಸಮಾಜಕ್ಕೆ ಗೌರವ ಹೆಚ್ಚು ಇರುತ್ತದೆ. ಆ ಗೌರವವನ್ನು ಹೆಚ್ಚಿಸುವ ಕಾರ್ಯ ಮಾಡಬೇಕಾಗಿದೆ ಎಂದರು.

ದೀಪಾ ಜಗದೀಶ ಗವಿಮಠ ಅವರು ಶಿವಾನುಭವ ನುಡಿ ಹೇಳಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ನಂದೀಶ ಮಠದ, ವಕೀಲ ಎಂ.ಬಿ. ಕುಲಕರ್ಣಿ, ಕುಮಾರಸ್ವಾಮಿ ಗುರಪ್ಪಗೌಡರ, ಮಾಲಾ ಹಿರೇಮಠ, ಶೋಭಾ ಹೋಳಿಮಠ, ಸರೋಜ ವಸ್ತ್ರದ, ನಂದಾ ಗುಡ್ಡಾಪೂರಮಠ, ಶಾಲಿನಿ ಗವಿಮಠ, ಈಶ್ವರಿ ಕಲ್ಲೂರಮಠ, ಕಸ್ತೂರಿ ಸಂಶಿಮಠ, ಮುತ್ತು ಹಿರೇಮಠ, ಶಂಕ್ರಯ್ಯ ಹಿರೇಮಠ, ಶಿವಯ್ಯ ಕಾಲವಾಡಮಠ, ಸಿದ್ದು ಹಿರೇಮಠ, ಜಗದೀಶ ಗವಿಮಠ, ಚನ್ನಯ್ಯ ಪರ್ವತದೇವರಮಠ, ಶಿವಕುಮಾರ ಮುಚಖಂಡಿಮಠ, ಶಿವಶಂಕರಯ್ಯ ಹಿರೇಮಠ ವಂದಿಸಿದರು.



ಕೋಡಿಯಲ್ಲಮ್ಮ ದೇವಿ ಜಾತ್ರಾ ಮಹೋತ್ಸವ



ಲಕ್ಷ್ಮೇಶ್ವರ: ಪಟ್ಟಣದ ಕೋಡಿಯಲ್ಲಮ್ಮ ದೇವಿಯ ಜಾತ್ರಾ ಮಹೋತ್ಸವ ಶ್ರದ್ಧಾ, ಭಕ್ತಿಯಿಂದ ನೆರವೇರಿತು.

ಸಂಪ್ರದಾಯದಂತೆ ಈ ವರ್ಷ ಪಟ್ಟಣದ ಕಲಾವಿದ ಪ್ರವೀಣ ಗಾಯಕರ ಅವರ ಮನೆಯಲ್ಲಿ ದೇವಿಯ ಮೂರ್ತಿಗೆ ಬಣ್ಣ ಹಚ್ಚಿಸಿ ಪಟ್ಟಣದ ಪ್ರಮುಖ ಮಾರ್ಗದಲ್ಲಿ ಎತ್ತಿನ ಬಂಡಿಯಲ್ಲಿ ವಾದ್ಯ ಮೇಳ, ಪೂರ್ಣಕುಂಭ ದೊಂದಿಗೆ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಬರಮಾಡಿಕೊಳ್ಳಲಾಯಿತು. ಮಾರ್ಗ ಮಧ್ಯದಲ್ಲಿ ಮುತ್ತೈದೆಯರು ಉಡಿ ತುಂಬುವ ಮೂಲಕ ಭಕ್ತಿ ಸಮರ್ಪಣೆ ಮಾಡಿದರು. ಈ ವೇಳೆ ಪಟ್ಟಣದ ಪ್ರಮುಖರು, ಹಿರಿಯರು, ಭಕ್ತವೃಂದ ಪಾಲ್ಗೊಂಡಿದ್ದರು. ಬೆಳಗ್ಗೆಯಿಂದ ದೇವಸ್ಥಾನದಲ್ಲಿ ವಿಶೇಷ ಅಲಂಕಾರ, ಪೂಜೆ ನೆರವೇರಿತು. ಭಕ್ತರು ದೇವಸ್ಥಾನಕ್ಕೆ ಆಗಮಿಸಿ ದರ್ಶನಾಶೀವಾದ ಪಡೆದುಕೊಂಡರು. ಸಂಜೆ ಅದ್ದೂರಿ ರಥೋತ್ಸವ ಅಪಾರ ಭಕ್ತ ಸಮೂಹದೊಂದಿಗೆ ನೆರವೇರಿತು. ಏ.3ರಂದು ಸಂಜೆ ಕಡುಬಿನ ಕಾಳಗ ಮತ್ತು ಏ.4ರಿಂದ ಮೂರು ದಿನ ಕುಸ್ತಿ ಪಂದ್ಯಾವಳಿ ನಡೆಯಲಿವೆ.

ಕೇಂದ್ರ ಸರ್ಕಾರದ ಯೋಜನೆ ಸರ್ವರಿಗೂ ತಲುಪಿಸಿ

ಲಕ್ಷ್ಮೇಶ್ವರ: ಕೇಂದ್ರ ಸರ್ಕಾರದ ಯೋಜನೆಗಳನ್ನು ಕಟ್ಟ ಕಡೆಯ ವ್ಯಕ್ತಿಗೆ ಮುಟ್ಟಿಸುವ ಕೆಲಸ ಬಿಜೆಪಿ ಕಾರ್ಯಕರ್ತರು ಮಾಡಬೇಕು ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದರು.

ಅವರು ಪಟ್ಟಣದ ಜಗದ್ಗುರು ವೀರಗಂಗಾಧರ ಕಲ್ಯಾಣ ಮಂಟಪದಲ್ಲಿ ಪಂ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ 2026 ಶಿರಹಟ್ಟಿ ಬಿಜೆಪಿ ಮಂಡಳದ 2 ದಿನಗಳು ನಡೆಯುವ ಪ್ರಶಿಕ್ಷಣ ವರ್ಗವನ್ನು ಉದ್ಘಾಟಿಸಿ ಮಾತನಾಡಿ, ಕೇಂದ್ರ ಸರ್ಕಾರದ ಸಾಧನೆಯನ್ನು ಮೂರು ರೀತಿಯಾಗಿ ವರ್ಗೀಕರಣ ಮಾಡಿದ್ದು ಮೂಲಭೂತ ಸೌಲಭ್ಯ, ಸುರಕ್ಷಿತ ಗೌರವ ಆದಾಯ ಆತ್ಮನಿರ್ಭರ,

ಜೀವನ ಮಟ್ಟ ಸುಧಾರಣೆಗೆ ಜಲಜೀವನ ಯೋಜನೆ, ಸುರಕ್ಷಿತ ಗೌರವ 5 ಲಕ್ಷದವರೆಗೂ ಆಯುಸ್ಮಾನ್, ಕಾಡ್‌ನಿಂದ ಉಚಿತ ಚಿಕಿತ್ಸೆ, ಗರ್ಭಿಣಿಯರಿಗೆ ಉಚಿತ ಮತ್ತು ಗುಣಮಟ್ಟದ ಆರೈಕೆ, ಪಿಎಂ ಸುರಕ್ಷಿತ ಮಾತೃತ್ವ ಯೋಜನೆ, ದೇಶದ ಪ್ರತಿಯೊಬ್ಬರಿಗೂ ಅತ್ಯಂತ ಕಡಿಮೆ ಖರ್ಚಿನಲ್ಲಿ ಜೀವ ವಿಮೆಯನ್ನು ಪಿಎಂ ಜೀವನ ಜ್ಯೋತಿ ಭೀಮಾ ಯೋಜನೆ ಹೀಗೆ ಅನೇಕ ಜನಪರ ಯೋಜನೆಗಳನ್ನು ಕೇಂದ್ರ ಬಿಜೆಪಿ ಸರ್ಕಾರ ನೀಡಿದೆ ಎಂದರು.

ಪ್ರಾಸ್ತಾವಿಕ ಮಾತನಾಡಿದ ಶಿರಹಟ್ಟಿ ಮಂಡಳದ ಬಿಜೆಪಿ ಅಧ್ಯಕ್ಷ ಸುನೀಲ. ಮಹಾಂತಶೆಟ್ಟರ, ಬಿಜೆಪಿ ಪಕ್ಷದ ಯುವಕರಿಗೆ ಶಕ್ತಿ ನೀಡುವ ಪ್ರಶಿಕ್ಷಣ ವರ್ಗ ಪಕ್ಷದ ತತ್ವ ಸಿದ್ಧಾಂತವನ್ನು ತಿಳಿಸಿ ಕೊಡುತ್ತದೆ. ಕೆಳಮಟ್ಟದ ಕಾರ್ಯಕರ್ತರನ್ನು ಗುರುತಿಸುವ ಕೆಲಸ ಬಿಜೆಪಿ ಪಕ್ಷ ಮಾಡುತ್ತದೆ ದೇಶ ಮೊದಲ ಎಂದು ಹೊರಟಿರುವ ಪಕ್ಷ ಬಿಜೆಪಿ ಎಂದರು. ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಎಂ.ಎಸ್. ದೊಡ್ಡಗೌಡ್ರ, ವಿಜಯ ಹತ್ತಿಕಾಳ, ಸೋಮೇಶ ಉಪನಾಳ, ನಿಂಗಪ್ಪ ಬನ್ನಿ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಬಸವರಾಜ ಇಟಗಿ, ಸಂಗಮೇಶ ಬೆಳವಲಕೊಪ್ಪ, ಅಶೋಕ ಶಿರಹಟ್ಟಿ, ಭೀಮಣ್ಣ ಯಂಗಾಡಿ, ಬಸವರಾಜ ಚಕ್ರಸಾಲಿ, ನವೀನ ಹಿರೇಮಠ, ವಿಜಯ ಮೆಕ್ಕಿ, ಸಂತೋಷ ಜಾವೂರ, ಗಿರೀಶ ಚೌರಡ್ಡಿ, ಪ್ರವೀಣ ಬೋಮಲೆ, ವಿಜಯ ಕುಂಬಾರ, ಎನ್.ಬಿ. ಮಡಿವಾಳರ, ರವಿ ಕೋರಿ ಚಂದ್ರು ಲಮಾಣಿ, ಬಿಜೆಪಿ ಕಾರ್ಯಕರ್ತರು ಇದ್ದರು. ಗಂಗಾಧರ ಮೆಣಸಿನಕಾಯಿ ಅನೀಲ ಮುಳಗುಂದ ರೋಹನ ಕುಂದನಹಳ್ಳಿ ಕಾರ್ಯಕ್ರಮ ನಿರ್ವಹಿಸಿದರು.



> ದೇಶದಲ್ಲಿ ಪಿಎಂ ಆವಾಸಯೋಜನೆ ಅಡಿಯಲ್ಲಿ 6 ಕೋಟಿಗೂ ಹೆಚ್ಚು ಮನೆಗಳ ನಿರ್ಮಾಣ ಆಗಿದ್ದು ಪಕ್ಷದ ಕಾರ್ಯಕರ್ತರಿಗೆ ಹೆಚ್ಚಿನ ಜವಾಬ್ದಾರಿವಿದ್ದು ಪ್ರತಿ ಮನೆಗೆ ಸರ್ಕಾರದ ಸಾಧನೆಗಳ ತಿಳಿಸುವ ಕೆಲಸ ಆಗಬೇಕು.
> ■ ಡಾ. ಚಂದ್ರು ಲಮಾಣಿ, ಶಾಸಕ

> ಕಾರ್ಯಕರ್ತರು ಬೂತ್ ನಿರ್ವಹಣೆ ಅಚ್ಚುಕಟ್ಟಾಗಿ ಮಾಡಬೇಕು. ಜನರ ಸಮಸ್ಯೆಗೆ ಸ್ಪಂದಿಸಿ ಅವರಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕು, ಖೋಟ್ಟಿ ಮತದಾರರನ್ನು ಪತ್ತೆ ಹಚ್ಚುವ ಕಾರ್ಯ ಮಾಡಬೇಕು.
> ■ ಗಂಗಾಧರ ಕುಂದಗೋಳಮಠ, ಬಿಜೆಪಿ ಪಕ್ಷದ ರಾಜ್ಯ ರೈತ ಮೋರ್ಚಾ ಕಾರ್ಯದರ್ಶಿ

ತುಳಜಾಭವಾನಿಗೆ ಕುಂಕುಮಾರ್ಚನೆ



ನರಗುಂದ: ಪಟ್ಟಣದ ಕಸಬಾ ಓಣಿಯಲ್ಲಿನ ತುಳಜಾಭವಾನಿ ದೇವಸ್ಥಾನದ ಹೊರಾಂಗಣ ಕಟ್ಟಡ ಉದ್ಘಾಟನೆ, ಕುಂಕುಮಾರ್ಚನೆ ಹಾಗೂ ಹೋಮ ಕಾರ್ಯಕ್ರಮದ ಸಮಾರಂಭ ಜರುಗಿತು. ಈ ಸಂದರ್ಭದಲ್ಲಿ ದೇವಸ್ಥಾನದ ಹೊರಾಂಗಣ ಕಟ್ಟಡದ ದಾಣಿಗಳಾದ ಪರಮೇಶಿ ಗೊಂಬಿ, ನಾರಾಯಣ ಘಾಟಗೆ, ಶ್ರೀನಿವಾಸ ಹೊನಕೇರಿ ಅವರುಗಳನ್ನು ಸನ್ಮಾನಿಸಲಾಯಿತು. ವಸಂತ ಭೂಸಾರೆ, ಎಸ್.ಆರ್. ಪಾಟೀಲ, ಬಸಪ್ಪ ಮಳಗಿ, ಮಾರುತಿ ಭೋಸಲೆ, ಬಸವಂತ ಗಾಯಕವಾಡ, ಪರಶುರಾಮ ಗಾಯಕವಾಡ, ಭರಮಪ್ಪ ಕುರಹಟ್ಟಿ, ಮಹಾದೇವಪ್ಪ ಮಾನೆ, ಅಶೋಕ ಶೇಳಕೆ, ಸಿದ್ದಪ್ಪ ಸಾಳುಂಕೆ, ಮುತ್ತು ಶೇಳಕೆ, ಮಂಜುಳಾ ಪವಾರ, ರೇಣವ್ವ ಭೋಸಲೆ, ಗೌರವ್ವ ಭೋಸಲೆ, ಭಾರತಿ ಭೋಸಲೆ, ಮಾಲಾ ಬಡಿಗೇರ, ಲಕ್ಷ್ಮೀ ಗಾಯಕವಾಡ, ರತ್ನಾ ಗುಡದನ್ನವರ, ಶಿಲ್ಪಾ ಸೊಪ್ಪಿನ ಇತರರಿದ್ದರು.

ವಿಜೃಂಭಣೆಯ ಹನುಮ ಜಯಂತಿ | ಮಾಲಾಧಾರಿಗಳಿಂದ ಹೋಮ, ಹವನ

ಅಂಜನಾದ್ರಿ ಬೆಟ್ಟದಲ್ಲಿ ಹನುಮಮಾಲಾ ವಿಸರ್ಜನೆ


• ಕೊಪ್ಪಳ: ಹನುಮ ಹುಟ್ಟಿದ ನಾಡು ಅಂಜನಾದ್ರಿಯಲ್ಲಿ ವಿಜೃಂಭಣೆಯಿಂದ ಹನುಮ ಜಯಂತಿ ಜರುಗಿತು.

ಗುರುವಾರ ಪ್ರಾತಃಕಾಲದಲ್ಲಿ ಆಂಜನೇಯ ಪ್ರಾಣಮೂರ್ತಿ ಎಳೆನೀರು ಅಭಿಷೇಕ, ಕುಂಕುಮಾರ್ಚನೆ, ಮಂಗಳಾರತಿ, ಅಭಿಷೇಕ, ಸಿಂಧೂರ ಸೇವೆ, ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ಪೂಜಾ ಕಾರ್ಯಕ್ರಮಗಳು ಜರುಗಿದವು.

ಸಾಧು-ಸಂತರಿಂದ, ಮಾಲಾಧಾರಿಗಳಿಂದ ಹೋಮ, ಹವನ ನಡೆಯಿತು. ಸಾಧುಗಳು ಹನುಮಾನ್ ಚಾಲಿಸ್ ಪಠಣ ಮಾಡಿದರು. ಹನುಮ ಜಯಂತಿ ನಿಮಿತ್ತ ದೇವಸ್ಥಾನ ಗರ್ಭಗುಡಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು.

ಹನುಮಮಾಲಾ ವಿಸರ್ಜನೆ: ಹನುಮ ಮಾಲಾಧಾರಿಗಳು ಸೂರ್ಯೋದಯಕ್ಕೂ ಮುನ್ನ ಬೆಟ್ಟದ ಸಮೀಪದ ಸಣ್ಣ ಕಾಲುವೆ, ಹತ್ತಿರದ ತುಂಗಭದ್ರಾ ನದಿಗಳಲ್ಲಿ ಪುಣ್ಯಸ್ನಾನ ಮಾಡಿ, ಜೈ ಶ್ರೀ ರಾಮ್, ಜೈ ಹನುಮಾನ್ ಘೋಷಣೆ ಕೂಗಿದರು. ಮಾಲೆಯ ವ್ರತದ ಇರುಮುಡಿ ಬಿಚ್ಚಿ, ಮಾಲೆಯನ್ನು ವಿಸರ್ಜಿಸಿ, ಬೆಟ್ಟದಲ್ಲಿ ನಡೆದ ಹೋಮ ಮತ್ತು ಹನುಮಾನ್ ಚಾಲಿಸ್ ಪಠಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಂಜನಾದ್ರಿ ಬೆಟ್ಟದಲ್ಲಿ ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತು. ಊಟ ಕೌಂಟರ್ ಇಕ್ಕಟ್ಟಿನಲ್ಲಿದ್ದ ಕಾರಣ ಭಕ್ತರು ಪರದಾಡುವಂತಾಯಿತು. ಹನುಮ ಜಯಂತಿ ನಿಮಿತ್ತ ಅಂಜನಾದ್ರಿ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಒಬ್ಬರು ಡಿವೈಎಸ್ಪಿ, ನಾಲ್ಕು ಜನ ಸಿಪಿಐ, 8 ಜನ ಪಿಎಸ್ಐ, ನೂರಾರು ಪೊಲೀಸ್ ಸಿಬ್ಬಂದಿ, 3 ಡಿಆರ್ ವಾಹನ ವ್ಯವಸ್ಥೆ ಕಲ್ಪಿಸಲಾಗಿತ್ತು.



ಮೂಲಸೌಕರ್ಯ ಕೊರತೆ

ಐತಿಹಾಸಿಕ ಪ್ರದೇಶವಾದ ಅಂಜನಾದ್ರಿಯಲ್ಲಿ ಮೂಲಸೌಕರ್ಯ ಕೊರತೆ ಎದ್ದುಕಾಣುತ್ತಿತ್ತು. ಭಕ್ತರು ಬಿಸಿಲಲ್ಲೇ ಊಟ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಕುಡಿವ ನೀರು ಇಲ್ಲದ್ದರಿಂದ ಭಕ್ತರು ಪರದಾಡಿದರು. ಹನುಮ ಜಯಂತಿ ಹಿನ್ನೆಲೆ ಸಾವಿರಾರು ಭಕ್ತರು ಬರಲಿದ್ದಾರೆ ಎಂದು ಜಿಲ್ಲಾಡಳಿತ, ತಾಲೂಕಾಡಳಿತಕ್ಕೆ ಗೊತ್ತಿದ್ದರೂ ಅಗತ್ಯ ವ್ಯವಸ್ಥೆ ಕಲ್ಪಿಸುವಲ್ಲಿ ಎಡವಿರುವುದು ಕಂಡುಬಂದಿತು.

ಹಂಪಿಯಲ್ಲಿ ಬ್ರಹ್ಮರಥೋತ್ಸವದ ವೈಭವ



• ವಿಜಯನಗರ: ಹೊಸಪೇಟೆ ತಾಲೂಕಿನ ವಿಶ್ವ ವಿಖ್ಯಾತ ಹಂಪಿಯಲ್ಲಿ ಗುರುವಾರ ನೆರವೇರಿದ ಶ್ರೀ ಪಂಪಾ ವಿರೂಪಾಕ್ಷೇಶ್ವರ ಸ್ವಾಮಿ, ಶ್ರೀ ಚಂದ್ರಮೌಳೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವವನ್ನು ಲಕ್ಷಾಂತರ ಜನ ಕಣ್ತುಂಬಿಕೊಂಡರು.

ಗುರುವಾರ ಸಂಜೆ 6 ಗಂಟೆ ಸುಮಾರಿಗೆ ರಥ ಬೀದಿಯಿಂದ ಎದುರು ಬಸವಣ್ಣ ಮಂಟಪದ ಮಾರ್ಗದಲ್ಲಿನ ಪಾದಗಟ್ಟೆ ವರೆಗೆ ಸಾಗಿದ ಉಭಯ ತೇರುಗಳು ಬಳಿಕ ಮೂಲ ಸ್ಥಾನಕ್ಕೆ ಮರಳಿದವು.

ರಥೋತ್ಸವ ಆರಂಭವಾಗುತ್ತಿದ್ದಂತೆ ಜೈ ವಿರೂಪಾಕ್ಷೇಶ್ವರ, ಜೈ ಪಂಪಾದೀಶ, ಹರ ಹರ ಮಹಾದೇವ ಎಂಬ ಜಯ ಘೋಷಣೆಗಳೊಂದಿಗೆ ಭಕ್ತರು ರಥ ಎಳೆದು, ಭಕ್ತಿಯ ಪರಾಕಾಷ್ಠೆ ಮೆರೆದರು. ಜಾತ್ರೆ ನಿಮಿತ್ತ ಕರ್ನಾಟಕವಲ್ಲದೇ ಆಂಧ್ರ ಪ್ರದೇಶದ ವಿವಿಧೆಡೆಯಿಂದ ಭಕ್ತ ಸಾಗರವೇ ಹರಿದು ಬಂದಿತ್ತು. ರಥ ಬೀದಿ ಹೇಮಕೂಟ ಪರ್ವತ, ದೇವಸ್ಥಾನ ಎತ್ತ ನೋಡಿದರೂ ಜನರಿಂದ ತುಂಬಿ ತುಳುಕುತ್ತಿತ್ತು. ಬಿಸಿಲಿನ ಧಗೆಯನ್ನೂ ಲೆಕ್ಕಿಸದೇ ಹೇಮಕೂಟ ಪರ್ವತದ ಕಲ್ಲು ಬಂಡೆಗಳ ಮೇಲೆ ನಿಂತು ಜೋಡಿ ರಥೋತ್ಸವದ ವೈಭವವನ್ನು ಕಣ್ತುಂಬಿಕೊಂಡು ಧನ್ಯತೆ ಮೆರೆದರು.

ಹೊಸಪೇಟೆಯ ಏಳು ಕೇರಿಯ ನಾಯಕ ಸಮುದಾಯದ ಯುವಕರು ವಿವಿಧ ಹಲಗೆ ನಾದವನ್ನು ನುಡಿಸಿ ನೆರೆದ ಜನರ ಮನ ಸೆಳೆದರೆ, ಇನ್ನೊಂದೆಡೆ ತೇರಿನ ಸಣ್ಣೆ ಹಾಕುವಲ್ಲಿ ಯುವಕರ ತಂಡಗಳ ಮಧ್ಯೆ ಪೈಪೋಟಿ ಏರ್ಪಟ್ಟಿತ್ತು. ರಥ ಬೀದಿಯಲ್ಲಿ ನೆರೆದಿದ್ದ ಲಕ್ಷಾಂತರ ಜನರು ತೇರಿಗೆ ಜೋಡಿ ಬಾಳೆ ಹಣ್ಣು, ಉತ್ತತ್ತಿ, ಹೂವು ತೂರಿ ಭಕ್ತಿ ಸಮರ್ಪಿಸಿದರು.

ಶ್ರೀ ಪಂಪಾದೀಶನಿಗೆ ವಿಶೇಷ ಪೂಜೆ ಶ್ರೀ ಪಂಪಾ ವಿರೂಪಾಕ್ಷೇಶ್ವರ ಸ್ವಾಮಿ ಹಾಗೂ ಶ್ರೀ ಚಂದ್ರಮೌಳೇಶ್ವರ ಸ್ವಾಮಿಯ ಜೋಡಿ ರಥೋತ್ಸವದ ನಿಮಿತ್ತ ಪಂಪಾ ವಿರೂಪಾಕ್ಷೇಶ್ವರ ಸನ್ನಿಧಾನದಲ್ಲಿ ಗುರುವಾರ ಬೆಳಗ್ಗೆಯಿಂದಲೇ ರುದ್ರಾಭಿಷೇಕ, ಪಂಚಾಮೃತಾಭಿಷೇಕ, ಜಲಾಭಿಷೇಕ, ಮಹಾ ಮಂಗಳಾರತಿ ಸೇರಿದಂತೆ ವಿಶೇಷ ಪೂಜೆ ಪುನಸ್ಕಾರ ನೆರವೇರಿಸಲಾಯಿತು.

ನಾಡಿನ ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು ದೇವರ ದರ್ಶನ ಪಡೆದು, ಹಣ್ಣು, ಕಾಯಿ ಅರ್ಪಿಸಿ, ಧನ್ಯರಾದರು.

ಜಾತ್ರೆ ನಿಮಿತ್ತ ಆಗಮಿಸಿದ್ದ ಭಕ್ತರು ಬೆಂಡು, ಬತಾಸು ಸೇರಿದಂತೆ ವಿವಿಧ ಸಿಹಿ ತಿಂಡಿಗಳು, ಮಕ್ಕಳ ಆಟಿಕೆಗಳ ಖರೀದಿಯಲ್ಲಿ ತೊಡಗಿದ್ದರು.



ಇಳಕಲ್: ನಗರದಲ್ಲಿ ಮುಂಜಾನೆ ಸೂರ್ಯೋದಯದ ಹೊಂಬೆಳಕು ಜಗಜ್ಯೋತಿ ಬಸವಣ್ಣನವರ ಭವ್ಯ ಪ್ರತಿಮೆಯ ಮೇಲೆ ಬಿದ್ದಾಗ ಇದು ಕೇವಲ ಸೂರ್ಯೋದಯವಲ್ಲ ಇದು ಕಾಯಕ ಯೋಗಿಯ ತತ್ವಗಳು ಮರುಜೀವ ಪಡೆದಂತೆ ಭಾಸವಾಯಿತು. ಹಸಿರು ಶಾಖೆಗಳ ನಡುವಿನಿಂದ, ಎತ್ತರದ ಪಾಮ್ ಮರಗಳಲ್ಲಿ ಕುದುರೆಯನ್ನೇರಿದ ಬಸವಣ್ಣನವರ ಅಶ್ವಾರೂಢ ಪ್ರತಿಮೆ ಸೂರ್ಯನ ಕಿರಣಗಳನ್ನು ಸ್ವಾಗತಿಸುತ್ತಿರುವ ದೃಶ್ಯ ಮನಮೋಹಕವಾಗಿತ್ತು.

ಕಿರುಸುದ್ದಿ

ಏ.4ಕ್ಕೆ ಪೂರ್ವಭಾವಿ ಸಮಾರಂಭ

• ಹುಬ್ಬಳ್ಳಿ: ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ವತಿಯಿಂದ ಏ.25ರಿಂದ 29ರ ವರೆಗೆ ನಡೆಯುವ ಇನ್ ಕಾಮೆಕ್ಸ್-2026 ಬೃಹತ್ ಕೈಗಾರಿಕಾ ವಸ್ತು ಪ್ರದರ್ಶನ ಹಿನ್ನೆಲೆ ಪೂರ್ವಭಾವಿಯಾಗಿ ಕರ್ಟನ್ ರೈಜರ್ ಸಮಾರಂಭ ಏ.4ರಂದು ಸಂಜೆ 5 ಗಂಟೆಗೆ ಸಂಸ್ಥೆಯ ಸಭಾಭವನದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಧಾರವಾಡ ಜಿಲ್ಲಾ ಉಸ್ತುವಾರಿ ಹಾಗೂ ಕಾರ್ಮಿಕ ಸಚಿವ ಸಂತೋಷ ಲಾಡ್, ಶಾಸಕ ಎನ್.ಎಚ್.ಕೋನರಡ್ಡಿ, ಮಹೇಶ ಟೆಂಗಿನಕಾಯಿ, ಧಾರವಾಡ ಜಿಲ್ಲಾಧಿಕಾರಿ ಡಾ.ಆರ್ ಸ್ನೇಹಲ್ ಸೇರಿದಂತೆ ಅನೇಕರು ಭಾಗವಹಿಸುವರು.

ಸಂಸ್ಥೆಯ ಅಧ್ಯಕ್ಷ ಜೆ.ಕೆ.ಆದಪ್ಪಗೌಡರ, ಉಪಾಧ್ಯಕ್ಷರಾದ ಪ್ರವೀಣ ಅಗಡಿ, ಸಿದ್ದೇಶ್ವರ ಕಮ್ಮಾರ, ವೀರಣ್ಣ ಕಲ್ಲೂರ, ಗೌರವ ಕಾರ್ಯದರ್ಶಿ ಉದಯ ರೇವಣಕರ ಹಾಗೂ ಜೊತೆ ಗೌರವ ಕಾರ್ಯದರ್ಶಿ ಪ್ರಕಾಶ ಶೃಂಗೇರಿ, ಇನ್‌ಕಾಮೆಕ್ಸ್-2026ರ ಚೇರಮನ್ ಎಂ.ವಿ.ಕರಮರಿ, ಕೋ-ಚೇರಮನ್‌ರಾದ ಜಯಪ್ರಕಾಶ ಟೆಂಗಿನಕಾಯಿ, ಅಶೋಕ ಗಡಾದ, ಕಾರ್ಯದರ್ಶಿ ಶಶಿಧರ ಶೆಟ್ಟರ ಭಾಗವಹಿಸಲಿದ್ದಾರೆ.

ರಾಜ್ಯದ ವಿವಿಧ ಭಾಗಗಳಿಂದ ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು, ಎಂಎಸ್‌ಎಂಇ ಘಟಕಗಳ ಪ್ರತಿನಿಧಿಗಳು, ಮಹಿಳಾ ಉದ್ಯಮಿಗಳು, ಗುಡಿಕೈಗಾರಿಕೆ ಹಾಗೂ ಆಟೋಮೊಬೈಲ್ ಸೇರಿದಂತೆ ವಿವಿಧ ಕ್ಷೇತ್ರಗಳ ಉದ್ಯಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಂಸ್ಥೆ ಮನವಿ ಮಾಡಿದೆ.

ಶಾಸಕ ಯತ್ನಾಳ ನಾಟಕ ಮಾಡುತ್ತಿದ್ದಾರೆ: ಎಂಬಿಪಾ

• ವಿಜಯಪುರ: ಬಾಗಲಕೋಟೆ ಬಿಜೆಪಿ ಅಭ್ಯರ್ಥಿ ಚರಂತಿಮಠ, ಬಿ.ಎಸ್. ಯಡಿಯೂರಪ್ಪ ಹಾಗೂ ಗೋವಿಂದ ಕಾರಜೋಳ ಅವರ ಅಭ್ಯರ್ಥಿಯಾಗಿದ್ದು, ದಾವಣಗೆರೆ ಬಿಜೆಪಿ ಅಭ್ಯರ್ಥಿ ಸಿದ್ದೇಶ್ವರ ಅವರ ಅಭ್ಯರ್ಥಿಯಾಗಿದ್ದು, ಸುಮ್ಮನೆ ಬಸನಗೌಡ ಪಾಟೀಲ ಯತ್ನಾಳ ನಾಟಕ ಮಾಡುತ್ತಾರೆ ಎಂದು ಸಚಿವ ಎಂ.ಬಿ.ಪಾಟೀಲ ಅವರು ಯತ್ನಾಳ ವಿರುದ್ಧ ಕಿಡಿಕಾರಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಯಡಿಯೂರಪ್ಪ, ಯಡಿಯೂರಪ್ಪ ಮಗ ಎನ್ನುವುದು, ಬಿಜೆಪಿ ಪಕ್ಷಕ್ಕೆ ಹೋಗಲು ಯತ್ನಾಳ ನಾಟಕ ಮಾಡುತ್ತಿದ್ದಾರೆ ಎಂದರು.

ನೇರವಾಗಿ ಬಿಜೆಪಿ ಪಕ್ಷಕ್ಕೆ ನನ್ನನ್ನು (ಯತ್ನಾಳ) ಕರೆದುಕೊಳ್ಳಿ ಎಂದು ಹೇಳಬೇಕು. ಅದನ್ನು ಬಿಟ್ಟು ಬಿ.ಎಸ್.ಯಡಿಯೂರಪ್ಪ ಅಭ್ಯರ್ಥಿ ಪರ ಯತ್ನಾಳ ಪ್ರಚಾರ ಮಾಡುವುದು ಸರಿಯಲ್ಲ ಎಂದರು.

ಅಪಮಾನ ಮಾಡಿ ಬಿಜೆಪಿಯಿಂದ ಯತ್ನಾಳರನ್ನು ಹೊರಗಡೆ ಹಾಕಿದ್ದಾರೆ. ಆದರೂ ಪಕ್ಷಕ್ಕೆ ಹೋಗಲು ಪ್ರಚಾರ ಮಾಡುತ್ತಿದ್ದಾರೆ ಎಂದರು.

ಏ.5ರಂದು ಡಾ.ಅಜಿತ ಪ್ರಸಾದ ಅವರ 75ನೇ ಜನ್ಮದಿನದ ಅಮೃತ ಮಹೋತ್ಸವ



• ಧಾರವಾಡ: ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಅವರ 75ನೇ ಜನ್ಮದಿನದ ಅಮೃತ ಮಹೋತ್ಸವ ಏ.5ರ ಬೆಳಗ್ಗೆ 9.30ಕ್ಕೆ ಸಂಸ್ಥೆಯ ಸನ್ನಿಧಿಕಲಾಕ್ಷೇತ್ರದಲ್ಲಿಹಮ್ಮಿಕೊಂಡಿದ್ದಾಗಿ ಆಡಳಿತಾಧಿಕಾರಿ ಅರಿಹಂತ ಪ್ರಸಾದ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮುರುಘಾಮಠದ ಡಾ. ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಅಥಣಿಯ ಪ್ರಭುಚನ್ನಬಸವ ಸ್ವಾಮೀಜಿ ಆಶೀರ್ವಚನ ನೀಡಲಿದ್ದು, ಸಚಿವರಾದ ಎಚ್.ಕೆ.ಪಾಟೀಲ ಉದ್ಘಾಟಿಸಲಿದ್ದಾರೆ ಎಂದರು.

ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅಧ್ಯಕ್ಷತೆ ವಹಿಸಲಿದ್ದು, ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಅವರು ಅಭಿನಂದನಾ ಗ್ರಂಥ ಬಿಡುಗಡೆ ಮಾಡಲಿದ್ದು, ಶಾಸಕರಾದ ಅರವಿಂದ ಬೆಲ್ಲದ, ವಿನಯ ಕುಲಕರ್ಣಿ ಪಾಲ್ಗೊಳ್ಳಲಿದ್ದಾರೆ ಎಂದರು.

ಅಲ್ಲದೇ, ಶಾಸಕರಾದ ಮಹೇಶ ಟೆಂಗಿನಕಾಯಿ, ಎನ್.ಎಚ್.ಕೋನರೆಡ್ಡಿ, ಪ್ರೊ.ಎಸ್.ವಿ.ಸಂಕನೂರ, ಮೇಯರ್ ಜ್ಯೋತಿ ಪಾಟೀಲ, ಜಿಲ್ಲಾಧಿಕಾರಿ ಸ್ನೇಹಲ್ ಆರ್., ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಕವಿವಿಯ ಕುಲಪತಿ ಡಾ.ಎ.ಎಂ. ಖಾನ್, ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ, ಕೃಷಿ ವಿವಿಯ ಕುಲಪತಿ ಡಾ.ಪಿ.ಎಲ್.ಪಾಟೀಲ, ಎಸ್ಡಿಎಂ ಸೊಸೈಟಿ ಕಾರ್ಯದರ್ಶಿ ವಿ.ಜೀವಂಧರಕುಮಾರ್ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಿದ್ದಾರೆ ಎಂದರು. ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾಧ್ಯೆ ಮಾತನಾಡಿ, 53 ವರ್ಷ ಸುದೀರ್ಘ ಸೇವೆ ಸಲ್ಲಿಸಿದ ಡಾ.ಅಜಿತ ಪ್ರಸಾದ ಅವರು ಸ್ನೇಹಜೀವಿ. ಸಂಘಟಿಕರು ಮತ್ತು ಉತ್ತಮ ಆಡಳಿತಾಧಿಕಾರಿಗಳಾಗಿ ಸಂಸ್ಥೆಗೆ ಅಮೋಘ ಕೊಡುಗೆ ನೀಡಿದ್ದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಭಿನಂದನಾ ಸಮಿತಿ ಪದಾಧಿಕಾರಿಗಳಾದ ಡಾ.ಸೂರಜ್ ಜೈನ್, ಡಾ.ಜಿನೇಂದ್ರ ಕುಂದಗೋಳ, ಸಾಧನಾ ಎಸ್.ಡಾ.ಬಿ.ಎನ್.ಭಾವಿ ಇದ್ದರು.

ಮಾರಕಾಸ್ತ್ರ ಹಿಡಿದು ಸಂಚರಿಸುತ್ತಿರುವ ಗ್ಯಾಂಗ್: ಆತಂಕ

• ಗದಗ: ಇಲ್ಲಿನ ಪುಟ್ಟರಾಜ ನಗರ ಹಾಗೂ ಕೇಶವ ಬಡಾವಣೆಯಲ್ಲಿ ನಸುಕಿನ ಜಾವ ಮುಖಕ್ಕೆ ಮಾಸ್ಕ್ ಹಾಗೂ ಕೈಗವಸು ಧರಿಸಿ, ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದು ಓಡಾಡುತ್ತಿರುವ ಕಳ್ಳರ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿರುವುದು ಮತ್ತು ಮನೆಯೊಂದರ ಕಳ್ಳತನ ನಡೆದಿರುವುದು ಸಾರ್ವಜನಿಕರಲ್ಲಿ ತೀವ್ರ ಆತಂಕ ಮೂಡಿಸಿವೆ.

ಇಲ್ಲಿನ ಪುಟ್ಟರಾಜ ನಗರದ ಎರಡನೇ ಹಂತದ ನಿವಾಸಿ ಕರಿಬಸಪ್ಪ ಗೋಕಾವಿ ಅವರ ಮನೆಯನ್ನು ಗುರಿಯಾಗಿಸಿಕೊಂಡ ಕಳ್ಳರು, ಹಿತ್ತಲ ಬಾಗಿಲಿನ ಬೀಗ ಮುರಿದು ಒಳನುಗ್ಗಿದ್ದಾರೆ. ಕಳ್ಳತನದ ಸದ್ದಿನಿಂದಾಗಿ ಎಚ್ಚರಗೊಂಡ ಅಕ್ಕಪಕ್ಕದ ಮನೆಯವರು ಲೈಟ್ ಹಚ್ಚಿ ಜೋರಾಗಿ ಶಬ್ದ ಮಾಡಿದ್ದಾರೆ. ಸಾರ್ವಜನಿಕರು ಜಾಗೃತಗೊಳ್ಳುತ್ತಿದ್ದಂತೆ ಗಾಬರಿಗೊಂಡ ಕಳ್ಳರು ತಾವು ತಂದಿದ್ದ ಕಬ್ಬಿಣದ ಹಾರಿ ಹಾಗೂ ಪಿಕಾಸಿಗಳನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾರೆ.

ವೃತ್ತಿನಿರತ ಕಳ್ಳರ ಗ್ಯಾಂಗ್ ಶಂಕೆ: ಸುಮಾರು 10ಕ್ಕೂ ಹೆಚ್ಚು ಮನೆಗಳನ್ನು ನೋಡಿ ಅಂತಿಮವಾಗಿ ಗೋಕಾವಿ ಮನೆಗೆ ಕನ್ನ ಹಾಕಿದ್ದಾರೆ.ಕಳ್ಳರು ಮುಖಕ್ಕೆ ಮಾಸ್ಕ್ ಹಾಗೂ ಕೈಗಳಿಗೆ ಗವಸು ಧರಿಸಿರುವುದು ಕಂಡುಬಂದಿದೆ. ಕೈಯಲ್ಲಿ ಲಾಂಗ್, ಮಚ್ಚುಗಳಂತಹ ಮಾರಕಾಸ್ತ್ರಗಳನ್ನು ಹಿಡಿದು ಓಡಾಡುತ್ತಿರುವುದು ನೋಡಿದರೆ, ಇವರು ಮಹಾರಾಷ್ಟ್ರ ಮೂಲದ ವೃತ್ತಿನಿರತ ಕಳ್ಳರಿರಬಹುದು ಎಂದು ಅಂದಾಜಿಸಲಾಗಿದೆ. ಒಂದೇ ರಾತ್ರಿ ಎರಡು ಬಡಾವಣೆಗಳಲ್ಲಿ ಕಳ್ಳರು ಸಂಚರಿಸಿರುವುದು ಮತ್ತು ಸಿಸಿಟಿವಿಯಲ್ಲಿ ಅವರ ಭಯಾನಕ ದೃಶ್ಯಗಳು ವೈರಲ್ ಆಗಿರುವುದು ನಿವಾಸಿಗಳ ನಿದ್ದೆಗೆಡಿಸಿದೆ. ಸದ್ಯ ಕಳ್ಳರು ಬಿಟ್ಟು ಹೋಗಿರುವ ಕಬ್ಬಿಣದ ಉಪಕರಣಗಳನ್ನು ವಶಕ್ಕೆ ಪಡೆಯಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

ಚಿತ್ರಾಪುರ ಭವಾನಿಶಂಕರ ದೇವರ ರಥೋತ್ಸವ ಸಂಪನ್ನ

• ಭಟ್ಕಳ: ಶಿರಾಲಿಯ ಶ್ರೀ ಚಿತ್ರಾಪುರ ಮಠ ಸಂಸ್ಥಾನದ ಶ್ರೀ ಭವಾನಿಶಂಕರ ದೇವರ 165ನೇ ವರ್ಷದ ರಥೋತ್ಸವ ಹನುಮ ಜಯಂತಿಯಂದು ಗುರುವಾರ ಶ್ರೀ ಮಠದ ಶ್ರೀ ಸದ್ಯೋಜಾತ ಶಂಕರಾಶ್ರಮ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಶ್ರೀ ಮಠದ ಸಂಪ್ರದಾಯದಂತೆ ಮಧ್ಯಾಹ್ನ 12 ಗಂಟೆಗೆ ರಥಾರೋಹಣ ನಡೆದು ಶ್ರೀ ಭವಾನಿಶಂಕರ ದೇವರ ಉತ್ಸವ ಮೂರ್ತಿಯನ್ನ ರಥದಲ್ಲಿ ಪ್ರತಿಷ್ಠಾಪಿಸಿದ ನಂತರ ಭಕ್ತಾದಿಗಳು ನೂರಾರು ಸಂಖ್ಯೆಯಲ್ಲಿ ಆಗಮಿಸಿ ರಥ ಕಾಣಿಕೆ, ಹಣ್ಣು ಕಾಯಿ, ಹೂವು ಅರ್ಪಿಸಿದರು.

ನಂತರ ಸಂಜೆ 5 ಗಂಟೆಗೆ ಸರಿಯಾಗಿ ಶ್ರೀ ಸದ್ಯೋಜಾತ ಶಂಕರಾಶ್ರಮ ಸ್ವಾಮೀಜಿಗಳು ರಥವನ್ನು ಏರುತ್ತಿದ್ದಂತೆಯೇ ನೂರಾರು ಭಕ್ತರು ಹರ್ಷೋದ್ಗಾರಗಳ ನಡುವೆ ರಥವನ್ನು ರಥಬೀದಿಯಲ್ಲಿ ಎಳೆದು ನಂತರ ಅದೇ ಪಥದಲ್ಲಿ ಆಗಮಿಸಿದ ರಥವು ನೆಲೆ ನಿಂತಿತು. ಶ್ರೀಗಳು ರಥದ ಮೇಲಿಂದಲೇ ಭಕ್ತರಿಗೆ ಶ್ರೀ ದೇವರ ಪ್ರಸಾದವನ್ನು ಹಂಚುವ ಮೂಲಕ ಭಕ್ತಿ ಭಾವ ಮೆರೆದರು.

ನಂತರ ಆರು ಗಂಟೆಗೆ ಶ್ರೀ ಸದ್ಯೋಜಾತ ಶಂಕರಾಶ್ರಮ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಭಕ್ತರ ಸಮ್ಮುಖದಲ್ಲಿ ಧರ್ಮ ಸಭೆ ನಡೆಯಿತು. ರಥೋತ್ಸವದಲ್ಲಿ ಮಠದ ವಿವಿಧ ಸಮಿತಿಗಳ ಪ್ರಮುಖರು, ಜನರಲ್ ಮ್ಯಾನೇಜರ್ ಸೇರಿದಂತೆ, ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಉಪಸ್ಥಿತರಿದ್ದರು.



ಬೈಕ್ ಸವಾರ ಸಾವು

• ಹೊನ್ನಾವರ: ಅಪ್ಸರಕೊಂಡ ತಿರುವಿನ ಸಮೀಪದ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಅಪರಿಚಿತ ವಾಹನವೊಂದು ಬೈಕ್ ಸವಾರನಿಗೆ ಡಿಕ್ಕಿ ಹೊಡೆದು, ದ್ವಿಚಕ್ರ ವಾಹನ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ನಡೆದಿದೆ.



ಅಪಘಾತದಲ್ಲಿ ಕಿರಣ ಬಾಲಚಂದ್ರ ನಾಯ್ಕ (25) ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಹೊನ್ನಾವರ ತಾಲೂಕಿನ ಕೆಳಗಿನ ಇಡಗುಂಜಿ ನಿವಾಸಿಯಾಗಿದ್ದು, ಹೊನ್ನಾವರದಲ್ಲಿರುವ ತನ್ನ ಸ್ನೇಹಿತನ ತಾಯಿಗೆ ಅನಾರೋಗ್ಯ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆತನ ಮನೆಗೆ ಬರುತ್ತಿದ್ದ ವೇಳೆ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ.

ಮೃತಪಟ್ಟ ಯುವಕ ಕಾಂಗ್ರೆಸ್ ಪಕ್ಷದ ಜಿಲ್ಲಾ ಹಿಂದುಳಿದ ವರ್ಗ ವಿಭಾಗದ ಅಧ್ಯಕ್ಷ ಬಾಲಚಂದ್ರ ನಾಯ್ಕ ಇವರ ಪುತ್ರ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ದೂರು ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಪ್ರಯಾಣಿಕರ ಮೇಲೆ ಏಕಾಏಕಿ ಬಸ್ ಹರಿದ ಘಟನೆ

ಉಪಸಭಾಧ್ಯಕ್ಷ ಲಮಾಣಿ ಬೇಸರ

• ಹಾವೇರಿ: ಇಲ್ಲಿನ ಕೇಂದ್ರ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದ ಪ್ರಯಾಣಿಕರ ಮೇಲೆ ಏಕಾಏಕಿ ಬಸ್ ಹರಿದು ಘಟನೆ ನೋಡಿ ಮನಸ್ಸಿಗೆ ನೋವಾಗಿದೆ ಎಂದು ಸ್ಥಳೀಯ ಶಾಸಕರು, ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಬೇಸರ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಈ ದುರ್ಘಟನೆಯಲ್ಲಿ ಸವಣೂರು ಪಟ್ಟಣದ ಹಜರತ್ ಅಲಿ ತಂದೆ ಇಸ್ಮಾಯಿಲ್ ರಾಯಚೂರ ಎಂಬ ಬಾಲಕ ಮೃತಪಟ್ಟಿದ್ದು, ಇದಕ್ಕೆ ತೀವ್ರ ವಿಷಾದ ವ್ಯಕ್ತಪಡಿಸುತ್ತೇನೆ. ಮಗುವಿನ ಕುಟುಂಬದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಮಗುವಿನ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುತ್ತೇನೆ. ಘಟನೆಯಲ್ಲಿ ಗಾಯಗೊಂಡವರಿಗೆ ಉತ್ತಮ ಚಿಕಿತ್ಸೆ ನೀಡಲು ವೈದ್ಯರಿಗೆ ಸೂಚಿಸಿದ್ದೇನೆ. ಈ ದುರ್ಘಟನೆಗೆ ಕಾರಣವಾದ ಚಾಲಕನ ಮೇಲೆ ಶಿಸ್ತು ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ತಿಳಿಸಿದ್ದಾರೆ.

ಗದಗ: ಜಗದ್ಗುರು ತೋಂಟದಾರ್ಯ ಮಠದ ಮಹಾ ರಥೋತ್ಸವ ಭಕ್ತ ಸಾಗರದ ಮಧ್ಯೆ ಸಂಭ್ರಮದಿಂದ ನಡೆಯಿತು.



ಮೆಡಿಕಲ್ ಆಯ್ಕೆ ಮೈಲಿಗಲ್ಲು | ಸ್ಪರ್ಧಾತ್ಮಕ ಬೋಧನೆ | ಗುಣಮಟ್ಟದ ಶಿಕ್ಷಣ

ಹಿಂದುಳಿದ ಭಾಗಕ್ಕೆ ಬೆಳಕಾದ ಆಕ್ಸಫರ್ಡ್ ಶಿಕ್ಷಣ ಸಂಸ್ಥೆ

ವಿಜಯಪುರ ಜಿಲ್ಲೆಯ ನಾಲತವಾಡ ಹೋಬಳಿಯ ಒಂದು ಚಿಕ್ಕ ಗ್ರಾಮ ನಾಗರಬೆಟ್ಟ ಇಂದು ಕರ್ನಾಟಕದ ಶೈಕ್ಷಣಿಕ ವಲಯದಲ್ಲಿ ಬಹು ಆಕರ್ಷಣೀಯ ಮತ್ತು ಅಧ್ಯಯನಕ್ಕಾಗಿ ವಿದ್ಯಾರ್ಥಿಗಳನ್ನು ತನ್ನತ್ತ ಸೆಳೆಯುವ ವಿದ್ಯಾ ಸಂಸ್ಥೆಯಾಗಿ ಹೊರಹೊಮ್ಮಿದೆ.

ಪ್ರತಿ ವರ್ಷ ನೂರಾರು ವೈದ್ಯಕೀಯ, ಎಂಜಿನಿಯರಿಂಗ್ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಸಂಸ್ಥೆ ಎಂದು ಹೆಗ್ಗಳಿಕೆ ಪಡೆದಿರುವುದು ಸಂಸ್ಥೆಯ ಯಶೋಗಾಥೆ ಆಗಿದೆ.

ಪ್ರಾಥಮಿಕ ಶಾಲೆಯಿಂದ ಹಿಡಿದು ಎಸ್‌ಎಸ್‌ಎಲ್‌ಸಿ ನಂತರ ಪದವಿಪೂರ್ವ ಶಿಕ್ಷಣ ವಲಯದಲ್ಲಿ ಸಾಧನೆ ಮಾಡಲು, ವೈದ್ಯಕೀಯ, ಜೆಇಇ, ಜೆಇಟಿ, ಐಐಟಿ, ಎಂಜಿನಿಯರಿಂಗ್ ಹಾಗೂ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾಸ್ ಮಾಡಲು ಮಂಗಳೂರು ಹುಬ್ಬಳ್ಳಿ, ಬೆಳಗಾವಿಯ ದೂರದ ಊರಗಳಿಗೆ ಮುಖ ಮಾಡುತ್ತಿದ್ದ ಉತ್ತರ ಕರ್ನಾಟಕದ ವಿದ್ಯಾರ್ಥಿಗಳಿಗೆ, ಇಡೀ ರಾಜ್ಯದ ವಿದ್ಯಾರ್ಥಿಗಳು ಉತ್ತರ ಕರ್ನಾಟಕದ ಭಾಗಕ್ಕೆ ಮುಖ ಮಾಡುವಂತೆ ಮಾಡಿದ ಆಕ್ಸಫರ್ಡ್ ಪಾಟೀಲ್ ವಿದ್ಯಾಸಂಸ್ಥೆ, ಕಳೆದ ಒಂದುವರೆ (2012) ದಶಕದಲ್ಲಿ ಮಾಡಿದ ಅಪ್ರತಿಮ ಸಾಧನೆಗೆ ಇಡಿ ಹಿಂದುಳಿದ ಕರ್ನಾಟಕದ ಭಾಗದ ಜನ ಪ್ರಸಂಶೆಯನ್ನು ಪಡೆದಿದೆ. ಶಿಕ್ಷಣಕ್ಕೆ ಸಂಬಂಧಿಸಿದ ಆಡಳಿತ ಮಂಡಳಿ ಹಾಗೂ ಶಿಕ್ಷಕರ ಸಮರ್ಪಣೆ ಭಾವವನ್ನು ತೋರಿಸುತ್ತದೆ.

ಕಳೆದ 5 ವರ್ಷ ವೈದ್ಯಕೀಯ ಪಾಸಾದ ವಿದ್ಯಾರ್ಥಿಗಳ ವಿವರ

2021 - 143, 2022 -145, 2023 - 160
2024 - 183, 2025 -187

ವಿಶಿಷ್ಟ ಅಧ್ಯಯನ (ತರಬೇತಿ)

ನಾಗರಬೆಟ್ಟ ಗ್ರಾಮದ ಪ್ರತ್ಯೇಕವಾದ ಕಾಲೇಜು ಪರಿಸರ (ಕ್ಯಾಂಪಸ್) ಇದ್ದು ಇಲ್ಲಿ ವಿದ್ಯಾರ್ಥಿಗಳು ಮಹಾ ನಗರಗಳಲ್ಲಿ ಸಿಗುವ ಸ್ಪರ್ಧಾತ್ಮಕ ತರಬೇತಿಯ ಅಧ್ಯಯನ ಪರಿಕರಗಳನ್ನು (ಪಠ್ಯ ಪುಸ್ತಕ, ಪ್ರಶ್ನೆ ಪತ್ರಿಕೆ, ವಸ್ತುನಿಷ್ಠ ಪರೀಕ್ಷಾ ಮಾದರಿ ಪತ್ರಿಕೆಗಳು) ಕೊಡುತ್ತಾರೆ.

ಕ್ರಮಬದ್ಧ ಪರೀಕ್ಷೆ ಎದುರಿಸುತ್ತಾರೆ. ಶಿಕ್ಷಣ ಸಂಸ್ಥೆಯಲ್ಲಿ ಪ್ರತಿನಿತ್ಯ ನಡೆಸುವ ಅಧ್ಯಯನ ಅವಧಿ (ಸ್ಟಡಿ ಅವರ್) ಬೆಳಗ್ಗೆ ಎಂಟರಿಂದ ಊಟ ಮತ್ತು ವಿಶ್ರಾಂತಿಯ ಅವಧಿ ಹೊರತಾಗಿ ರಾತ್ರಿ 10.30ರವರೆಗೆ ಇರುತ್ತದೆ. ಇದರಿಂದ ವಿದ್ಯಾರ್ಥಿಗಳು ಉತ್ತಮ ಪರಿಸರದ ನಡುವೆ, ಏಕಾಗ್ರತೆಯಿಂದ ಶಿಕ್ಷಣವನ್ನು ಪಡೆಯುವ ವ್ಯವಸ್ಥೆ ಮಾಡಲಾಗಿದೆ.





ಐಐಟಿ ಫೌಂಡೇಶನ್ ಮೂಲಕ ಪ್ರೌಢಶಾಲೆ ಹಂತದಲ್ಲಿ ವಿದ್ಯಾರ್ಥಿಗಳಿಗೆ ಪರಿಪೂರ್ಣ ಶಿಕ್ಷಣ ಕೊಡಲಾಗುವುದು. ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಕಲಿತಂತ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವುದು ನಮ್ಮ ಸಂಸ್ಥೆಯ ಗುರಿ.

■ ಎಂ.ಎಸ್.ಪಾಟೀಲ್, ಚೇರ್ಮನ್, ಆಕ್ಸಫರ್ಡ್ ಪಾಟೀಲ್ ಸಂಸ್ಥೆ



ಪ್ರತಿ ವರ್ಷ ಪರಿಶ್ರಮದಿಂದ ವಿದ್ಯಾರ್ಥಿಗಳ ಪ್ರಗತಿಗಾಗಿ ಪ್ರಯತ್ನ ಮಾಡುತ್ತಿದ್ದೇವೆ. ಸಂಸ್ಥೆ ಬೆಳೆದಿದೆ ಅದರಂತೆ ಶೈಕ್ಷಣಿಕ ಪರಿಸರವನ್ನು ಬೆಳೆಸುವುದು, ವಿದ್ಯಾರ್ಥಿಗಳ ಸಾಧನೆಗೆ ಧನ್ಯವಾದ ಕೆಲಸ ಮಾಡುವುದು ನಮ್ಮ ಸಂಸ್ಥೆಯ ಉದ್ದೇಶ. ಈ ವರ್ಷ 200 ವೈದ್ಯಕೀಯ ಸೀಟು ಪಡೆಯಲು ಗುರಿ ಹಾಕಿಕೊಳ್ಳಲಾಗಿದೆ.

■ ಅಮಿತ್ ಗೌಡ ಪಾಟೀಲ್, ಆಡಳಿತ ಅಧಿಕಾರಿಗಳು

ವಿಳಾಸ

ಆಕ್ಸಫರ್ಡ್ ಪಾಟೀಲ್ ಪಿಯು ಕಾಲೇಜ್ ಮತ್ತು ನೀಟ್ (ಸೈನ್ಸ್) ಅಕಾಡೆಮಿ, ನಾಗರಬೆಟ್ಟ ಸಂಪರ್ಕ ಸಂಖ್ಯೆ:7483147040, 8310035858, 9019460665.

ಫೌಂಡೇಶನ್ ಮೂಲಕ ತರಬೇತಿ

ಪಾಟೀಲ್ ಸಮೂಹ ಸಂಸ್ಥೆಯು ದತ್ತಾತ್ರೇಯ ವಿದ್ಯಾವರ್ಧಕ ಸಂಘದ ಫೌಂಡೇಶನ್ ಮೂಲಕ ಪ್ರೌಢಶಾಲೆ ಹಂತದಲ್ಲಿ ಐಐಟಿ ತರಬೇತಿಯನ್ನು ಪ್ರಾರಂಭಿಸುವ ಕಾರ್ಯವನ್ನು ಹಮ್ಮಿಕೊಂಡಿದೆ. ಇದರಿಂದಾಗಿ ವಿದ್ಯಾರ್ಥಿಗಳು ಪ್ರೌಢಶಾಲೆ ಹಂತದಲ್ಲಿ ಪರೀಕ್ಷೆಯನ್ನು ಎದುರಿಸುವ, ಕ್ರಿಯಾತ್ಮಕವಾಗಿ ವಿಚಾರಿಸುವ ಮತ್ತು ಬೆಳೆಯುವ ಮನಸ್ಥಿತಿಯನ್ನು ಬೆಳೆಸಿಕೊಳ್ಳುತ್ತಾರೆ.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಹಾಗೂ ಜೀನಿಯಸ್ ಪ್ರತಿಭಾ ಪುರಸ್ಕಾರವನ್ನು ಕೊಡಲು ಪ್ರತಿ ವರ್ಷ ಕೋಟ್ಯಂತರ ರೂಪಾಯಿ ವಿದ್ಯಾ ಧನವನ್ನಾಗಿ ಕೊಡಲಾಗುತ್ತದೆ. ಹೀಗಾಗಿ ಸಂಸ್ಥೆ ಒಂದು ಶೈಕ್ಷಣಿಕ ಗುಣಮಟ್ಟ ಸೃಷ್ಟಿಸುವ ಉದ್ದೇಶವನ್ನು ಹೊಂದಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದಿನಿಂದ ಅನೀರಿಕ್ಷಿತ ವಿದ್ಯುತ್ ವ್ಯತ್ಯಯ

ಕಾರವಾರ: ಹೆಸ್ಕಾಂ, ಹೊನ್ನಾವರ ವಿಭಾಗದ ವ್ಯಾಪ್ತಿಯಲ್ಲಿ 220 ಕೆವಿ ಸ್ವೀಕರಣಾ ಕೇಂದ್ರ, ಎಸಳೆ, ಶಿರಸಿಯಲ್ಲಿ ಹಾಲಿ ಇರುವ 2★55 ಎಂವಿಎ ಶಕ್ತಿ ಪರಿವರ್ತಕವನ್ನು 2★100 ಎಂವಿಎ ಶಕ್ತಿ ಪರಿವರ್ತಕಕ್ಕೆ ಹೆಚ್ಚಿಸುವ ಕಾಮಗಾರಿಯನ್ನು ಕೈಗೊಳ್ಳುವುದರಿಂದ ಏ.3 ರಿಂದ 25 ರವರೆಗೆ ಕುಮಟಾ, ಹೊನ್ನಾವರ, ಹಾಗೂ ಭಟ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ಅನೀರಿಕ್ಷಿತವಾಗಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಹೊನ್ನಾವರ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಚ್ಛತಾ ಅಭಿಯಾನ ಯಶಸ್ವಿ



ದಾಂಡೇಲಿ: ನಗರ ಸಭೆ ಹಾಗೂ 4 ಗ್ರಾಪಂ ವ್ಯಾಪ್ತಿಯಲ್ಲಿ ಮಾ. 31ರಿಂದ ಆರಂಭಗೊಂಡ ಸ್ವಚ್ಛತಾ ಅಭಿಯಾನವು ಗುರುವಾರ ಮಧ್ಯಾಹ್ನ ಯಶಸ್ವಿಯಾಗಿ ಸಂಪನ್ನಗೊಂಡಿತು.ಪ್ರತಿದಿನ ಬೆಳಗ್ಗೆ 7ಗಂಟೆಯಿಂದ ಆರಂಭಗೊಂಡು ಮಧ್ಯಾಹ್ನ 12 ಗಂಟೆಯವರೆಗೆ ಈ ಸ್ವಚ್ಛತಾ ಅಭಿಯಾನ ನಡೆಯಿತು. ಸ್ವಚ್ಛತಾ ಅಭಿಯಾನಕ್ಕೆ ಶಾಸಕರಾದ ಆರ್.ವಿ.ದೇಶಪಾಂಡೆ ಅವರು ಚಾಲನೆ ನೀಡಿದರು. ತಹಶೀಲ್ದಾರ್ ಶೈಲೇಶ ಪರಮಾನಂದ, ನಗರ ಸಭೆಯ ಪೌರಾಯುಕ್ತ ವಿವೇಕ ಬನ್ನೆ ಮತ್ತು ತಾ.ಪಂ ಕಾರ್ಯನಿರ್ವಹಣಾಧಿಕಾರಿ ಟಿ.ಸಿ.ಹಾದಿಮನಿ ಅವರ ನೇತೃತ್ವದಲ್ಲಿ ನಡೆದ ಸ್ವಚ್ಛತಾ ಅಭಿಯಾನದಲ್ಲಿ ತಾಲೂಕಿನ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ, ಗ್ರಾಪ ಅಧಿಕಾರಿಗಳು ಮತ್ತು ಸಿಬ್ಬಂದಿ, ಗ್ರಾಪಂ ಮತ್ತು ನಗರ ಸಭೆಯ ನಿಕಟ ಪೂರ್ವ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಸದಸ್ಯರು, ರಾಜಕೀಯ ಪಕ್ಷಗಳ ಮುಖಂಡರು, ಮಹಿಳಾ ಸ್ವ ಸಹಾಯ ಸಂಘಗಳ ಸದಸ್ಯೆಯರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಿದರು.

ನಾಳೆ ಬೃಹತ್ ಸಭೆ

ಶಿರಸಿ: 2025-26ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನ ಬಿಡುಗಡೆಗೆ ಆಗ್ರಹಿಸಿ ತಾಲೂಕು ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಲು ಹಾಗೂ ಸಹಾಯಕ ಆಯುಕ್ತರಿಗೆ ಒತ್ತಾಯ ಪತ್ರ ಸಲ್ಲಿಸಲು ಏ.4ರಂದು ಬೆಳಗ್ಗೆ 10 ಗಂಟೆಗೆ ಶಿರಸಿಯ ರಾಘವೇಂದ್ರಮಠದ ಸಭಾಭವನದಲ್ಲಿ ಗ್ರಾಮ ಸದ್ಯಸರ ಬೃಹತ್ ಸಭೆಯನ್ನು ಆಯೋಜಿಸಲಾಗಿದೆ ಕಾರಣ ತಾಲೂಕಿನ ಎಲ್ಲ ಗ್ರಾಪಂ ಸದ್ಯಸರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಶಿರಸಿ ಪಶ್ಚಿಮ ಭಾಗದ ಚುನಾಯಿತ ಗ್ರಾಮ ಪ್ರತಿನಿಧಿಗಳ ಒಕ್ಕೂಟ ಪ್ರಕಟಣೆಯಲ್ಲಿ ತಿಳಿಸಿದೆ.

ಒಕ್ಕಲಿಗರ ಸುಗ್ಗಿ ಹಬ್ಬ ಸಂಪನ್ನ



ಗೋಕರ್ಣ: ಹುಳಸೇಕೇರಿ ಹಾಲಕ್ಕಿ ಒಕ್ಕಲಿಗರ ಸುಗ್ಗಿ ಹಬ್ಬ ಗುರುವಾರ ಸಂಜೆ ಅದ್ದೂರಿಯಾಗಿ ಸಂಪನ್ನವಾಯಿತು. ನಾಲ್ಕು ದಿನಗಳ ಕಾಲ ಊರು ಪರ್ಯಟನೆ ಮಾಡಿದ ಸುಗ್ಗಿ ತಂಡ ಮಧ್ಯಾಹ್ನ ಕೆಪ್ಪನ ಮನೆಯಲ್ಲಿ ಕುಳಿತು ಸಂಜೆ ತಾರಮಕ್ಕಿ ಹುಳಸೇಕೇರಿ ಗೌಡರ ಮನೆಗೆ ತೆರಳಿ ಸುಗ್ಗಿ ಕುಣಿತ ಮಾಡಿ, ಅಲ್ಲಿನ ದೇವರ ಸಾನಿಧ್ಯದಲ್ಲಿ ಪೂಜೆ ನೇರವೇರಿದ ಬಳಿಕ ಕಳಸದೊಂದಿಗೆ ಕೇತಕಿ ವಿನಾಯಕ ಮಂದಿರದ ಬಳಿಯಿರುವ ಕರಿದೇವರ ಸನ್ನಿಧಿಗೆ ಆಗಮಿಸಿ ಕಳಸದಾರಿಗಳಿಂದ ಕಳಸಕ್ಕೆ ಪೂಜೆ ಸಲ್ಲಿಸಲಾಯಿತು. ಇಷ್ಟು ದಿನ ಮನೆಯಿಂದ ಹೊರಗಿದ್ದ ಸುಗ್ಗಿ ತಂಡ ಸದಸ್ಯರು ಕುಟುಂಬದವರೊಂದಿಗೆ ಜೊತೆಯಾಗಿ ಸಿಹಿ ಹಾಗೂ ಕೊಟ್ಟೆ ಕಡಬು ತಿಂದು ಸಂಭ್ರಮಿಸಿದರು. ಮುಂದೆ ಆರಂಭವಾಗುವ ಕೃಷಿ ಚುಟುವಟಿಕೆಗೆ ಉತ್ತಮ ಮಳೆಯಾಗಿ ಒಳ್ಳೆಯ ಫಸಲು ದೊರೆಯಲಿ ಎಂದು ಪ್ರಾರ್ಥಿಸಲಾಯಿತು. ಹಾಲಕ್ಕಿ ಸಮಾಜದವರು ಸೇರಿದಂತೆ ಎಲ್ಲಾ ಸಮಾಜದವರು ಪಾಲ್ಗೊಂಡಿದ್ದರು.



ಸಿದ್ದಾಪುರ: ಹನುಮ ಜಯಂತಿಯ ನಿಮಿತ್ಯ ಬುಧವಾರ ಶಿರಸಿ-ಸಿದ್ದಾಪುರ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ ಅವರು ತಾಲೂಕಿನ ಬೇಡ್ಕಣಿಯ ಕೋಟೆ ಆಂಜನೇಯ ದೇವಸ್ಥಾನಕ್ಕೆ ಬೆಳ್ಳಿ ಗದೆ ಸಮರ್ಪಿಸಿದರು. ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ವಿ.ಎನ್.ನಾಯ್ಕ ಬೆಳ್ಳಿ ಗದೆ ಸ್ವೀಕರಿಸಿದರು. ಶಾಸಕರು ಆಂಜನೇಯನಿಗೆ ವಿಶೇಷ ಪೂಜೆ ಸಲ್ಲಿಸಿ ಕ್ಷೇತ್ರದ ಜನತೆ ಹಾಗೂ ನಾಡಿನ ಒಳಿತಿಗಾಗಿ ಪ್ರಾರ್ಥಿಸಿದರು.

ಮಹಾವೀರರ ತತ್ವಾದರ್ಶಗಳನ್ನು ಪಾಲಿಸಿ

ಕುಮಟಾ: ಸ್ಥಳೀಯ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ಐಕ್ಯುಎಸಿ ಘಟಕ ಮತ್ತು ಸಮಾಜ ವಿಜ್ಞಾನ ಸಂಘದ ಆಡಿಯಲ್ಲಿ ಮಹಾವೀರ ಜಯಂತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕುಮಟಾದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕೃಷ್ಣ ನಾಯಕ ಮಹಾವೀರರವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಮಾತನಾಡಿ, ಮಹಾವೀರರವರು ಬೋಧನೆ ಮಾತ್ರ ಮಾಡಲಿಲ್ಲ, ಜಗತ್ತಿಗೆ ಸ್ವಯಂ ಅನುಭವಗಳನ್ನು ಎಲ್ಲರಿಗೂ ಸರಳವಾಗಿ ಅರ್ಥವಾಗುವ ಹಾಗೆ ತಿಳಿಸಿದ್ದಾರೆ. ಭಾರತೀಯರ ಮೂಲ ಚಿಂತನೆಯಲ್ಲಿಯೇ ಶಾಂತಿ ಮತ್ತು ಅಹಿಂಸೆ ಚಳುವಳಿಯ ರೂಪದಲ್ಲಿ ಬಂದಿದೆ ಎಂದು ಹೇಳಿದರು.ಅಧ್ಯಕ್ಷ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದ ಪ್ರಾ.ಡಾ. ಪ್ರೀತಿ ಪಿ. ಭಂಡಾರಕರ ಅವರು ಮಾತನಾಡಿ, ಜಿನ ಎಂದರೆ ಗೆದ್ದವನು ಎಂದರ್ಥ. ಮಹಾವೀರರವರು ಜೈನ ಧರ್ಮದಲ್ಲಿ ಸರಳ ಆಚರಣೆಯಗಳನ್ನು ಸೇರಿಸಿದರು. ಶಿಕ್ಷಕ ವಿದ್ಯಾರ್ಥಿಗಳು ಮಹಾವೀರರ ತತ್ವಗಳನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದರು.ಕಾರ್ಯಕ್ರಮದಲ್ಲಿ ಸುನೀತಾ ಸಂಗಡಿಗರು ಪ್ರಾರ್ಥಿಸಿದರು. ಸಮಾಜ ವಿಜ್ಞಾನ ಸಂಘದ ಮಾರ್ಗದರ್ಶಕ ಉಮೇಶ ನಾಯ್ಕ ಎಸ್.ಜೆ ಮಹಾವೀರ ಜಯಂತಿಯ ಆಚರಣೆಯ ಉದ್ದೇಶಗಳನ್ನು ವಿವರಿಸಿದರು.ಸಮಾಜ ವಿಜ್ಞಾನ ಸಂಘದ ಕಾರ್ಯದರ್ಶಿ ಅನನ್ಯ ಭಟ್ ಸ್ವಾಗತಿಸಿ ಅತಿಥಿಗಳನ್ನು ಪರಿಚಯಿಸಿದರು. ಶಿಕ್ಷಕ ವಿದ್ಯಾರ್ಥಿಗಳಾದ ಅರ್ಚನಾ ಭಟ್ಟ ಮತ್ತು ಕುಮಾರ ಶಾನಭಾಗ ಮಹಾವೀರರವರ ಜೀವನ ಚರಿತ್ರೆಯನ್ನು ವಿವರಿಸಿದರು. ರಕ್ಷಿತಾ ಬೆಂಡಿ ಗೇರಿ ವಂದಿಸಿದರು. ಗಣೇಶ ನಾಯ್ಕ ಕಾರ್ಯಕ್ರಮ ನಿರೂಪಿಸಿದರು.



ಕುಮಟಾ: ಸ್ಥಳೀಯ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ಐಕ್ಯುಎಸಿ ಘಟಕ ಮತ್ತು ಸಮಾಜ ವಿಜ್ಞಾನ ಸಂಘದ ಅಡಿಯಲ್ಲಿ ಮಹಾವೀರ ಜಯಂತಿಯನ್ನು ಆಚರಿಸಲಾಯಿತು. ಕುಮಟಾದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕೃಷ್ಣ ನಾಯಕ ಮಹಾವೀರರವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಸಲ್ಲಿಸಿದರು.

ಸಂಸ್ಕೃತಿ ಕುಂಭ-ಮಲೆನಾಡ ಉತ್ಸವ। ಶ್ರೀ ಮಾರುತಿ ಗುರೂಜಿ ಸಲಹೆ

ರೋಗಿಗಳಿಗೆ ವೈದ್ಯರು ಅಭಯ ನೀಡಿಲಿ

ಹೊನ್ನಾವರ: ರೋಗಿಯ ಅರ್ಧದಷ್ಟು ರೋಗವನ್ನು ವೈದ್ಯರು ನೀಡುವ ಅಭಯದಿಂದ ಗುಣಪಡಿಸಬಹುದು ಎಂದು ಕ್ಷೇತ್ರ ಬಂಗಾರಮಕ್ಕಿಯ ಧರ್ಮಾಧಿಕಾರಿ ಶ್ರೀ ಮಾರುತಿ ಗುರೂಜಿ ಹೇಳಿದರು.

ತಾಲೂಕಿನ ಗೇರುಸೊಪ್ಪದಲ್ಲಿರುವ ಕ್ಷೇತ್ರ ಬಂಗಾರಮಕ್ಕಿ ವೀರಾಂಜನೇಯ ದೇವಸ್ಥಾನದಿಂದ ನಡೆಯುತ್ತಿರುವ 'ಸಂಸ್ಕೃತಿ ಕುಂಭ - ಮಲೆನಾಡ ಉತ್ಸವ-2026' ಕಾರ್ಯಕ್ರಮದ ಕೊನೆಯ ದಿನವಾದ ಗುರುವಾರ ನಡೆದ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಮತ್ತು ಉಚಿತಾ ಚಿಕಿತ್ಸಾ ಸಮಾವೇಶದ ಸಾನಿಧ್ಯವಹಿಸಿ ಅವರು ಮಾತನಾಡಿದರು.

ಮನುಷ್ಯರಿಗೆ ಬಾಧಿಸಿದ ರೋಗವನ್ನು ಗುಣಪಡಿಸಲು ವೈದ್ಯಲೋಕ ಪ್ರಯತ್ನಿಸಬೇಕೇ ಹೊರತು, ರೋಗಿಗಳನ್ನು ಸೃಷ್ಟಿಸುವ ಪ್ರಯತ್ನಕ್ಕೆ ಎಂದಿಗೂ ಮುಂದಾಗಬಾರದು. ಯಾವುದೇ ರೋಗಿ ಆಗಿರಲಿ ಅವರಿಗೆ ಅಭಯ ನೀಡುವ ಮೂಲಕ ಧೈರ್ಯ ತುಂಬುವ ಕೆಲಸ ವೈದ್ಯರಿಂದ ಆಗಬೇಕು ಎಂದು ಅವರು ಸಲಹೆ ನೀಡಿದರು.

ಮನುಷ್ಯರಿಗೆ ಆರೋಗ್ಯ ಎಲ್ಲವೂ ಆಗಿದೆ. ಆರೋಗ್ಯ ಇಲ್ಲದಿದ್ದರೆ ಮನುಷ್ಯರಿಗೆ ಯಾವುದೂ ಇಲ್ಲ. ಇಂದು ವಿಶ್ವದಲ್ಲಿ ಮಾನಸಿಕ ಅನಾರೋಗ್ಯ ಬಹು ದೊಡ್ಡದಾಗಿ ಕಾಡುತ್ತಿದೆ ಎಂದು ಅವರು ಹೇಳಿದರು.

ವಿಪರೀತ ಚಿಂತೆ ಮನುಷ್ಯನ ಮಾನಸಿಕ ಅನಾರೋಗ್ಯವನ್ನುಕೆಡಿಸುತ್ತದೆ.ಮಾನಸಿಕಅನಾರೋಗ್ಯಕ್ಕೆ ಒಳಗಾದವರು ಸಹಜವಾಗಿಯೇ ದೈಹಿಕ ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಚಿಂತೆ ಮನುಷ್ಯನನ್ನು ಚಿತೆಯವರೆಗೆ ಕೊಂಡೊಯ್ಯುತ್ತದೆ. ಆಧ್ಯಾತ್ಮಿಕತೆ ಮೈಗೂಡಿಸುವ ಮೂಲಕ ಚಿಂತೆಯಿಂದ ದೂರವಿರಬಹುದಾಗಿದೆ ಎಂದು ಅವರು ಸಲಹೆ ನೀಡಿದರು.

ಮಾಜಿ ಸಚಿವ ಶಿವಣ್ಣ, ಪತ್ರಕರ್ತ ಬಿ.ವಿ.ಮಲ್ಲಿಕಾರ್ಜುನಯ್ಯ, ಹಿರಿಯ ವೈದ್ಯ ಡಾ.ಎಲ್. ಎಸ್.ಪಾಟೀಲ್, ವಕೀಲ ನಾಗರಾಜ್ ಗುತ್ತೇದಾರ್, ಎನ್.ಇ.ಎಲ್.ಎಸ್. ಶಾಲೆಯ ಅಧ್ಯಕ್ಷ ನರೇಂದ್ರ ಟಿ. ರಾಥೂರ್, ಪ್ರಾ.ಆ.ಪ.ಸಂ.ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಸಾದಿಕ್, ಮಂಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯ್ಕ, ಎಸ್.ಎಸ್.ಸೌಹಾರ್ದ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಜಿ.ಜಿ.ಶಂಕರ್, ವಿ.ಎಸ್.ಎಸ್. ನಗರಬಸ್ತಿಕೆರೆ ಸದಸ್ಯ ರಾಘವೇಂದ್ರ ನಾಯ್ಕ, ಪತ್ರಕರ್ತ ಡಿ.ಎಂ. ಸತೀಶ್, ಉಪಸ್ಥಿತರಿದ್ದರು.

ಮಂಜುನಾಥ್ ಸ್ವಾಗತಿಸಿದರು. ನೂರ್ ಅಹ್ಮದ್ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕಿ ತೃಪ್ತಿ ಕಾರ್ಯಕ್ರಮ ನಿರೂಪಿಸಿದರು.



> ದೈಹಿಕ ಅನಾರೋಗ್ಯಕ್ಕೆ ವೈದ್ಯರು ಚಿಕಿತ್ಸೆ ನೀಡಿದರೆ, ಮಾನಸಿಕ ಅನಾರೋಗ್ಯಕ್ಕೆ ಆಧ್ಯಾತ್ಮಿಕತೆಯೇ ಮದ್ದಾಗಿದೆ. ಇಂದು ಆಂಜನೇಯನ ಸನ್ನಿಧಿಯಲ್ಲಿ ಎರಡೂ ಚಿಕಿತ್ಸೆಗಳು ಒಟ್ಟೊಟ್ಟಿಗೆ ಲಭಿಸುತ್ತಿದೆ.
> ■ ಶ್ರೀ ಮಾರುತಿ ಗುರೂಜಿ, ಬಂಗಾರಮಕ್ಕಿಯ ಧರ್ಮಾಧಿಕಾರಿ



ಭಟ್ಕಳ: ಶಿರಾಲಿ ಸಾರದಹೊಳೆಯ ಕ್ಷೇತ್ರ ಹಳೇಕೋಟೆ ಹನುಮಂತ ದೇವಸ್ಥಾನದ 4ನೇ ವರ್ಷದ ವರ್ಧಂತ್ಯುತ್ಸವ ವಿಜೃಂಭಣೆಯಿಂದ ನಡೆಯಿತು. ಉಜಿರೆ ರಾಮಕ್ಷೇತ್ರ ಮಹಾಸಂಸ್ಥಾನದ ಜಗದ್ಗುರು ಪೀಠದ ಪೀಠಾಧೀಶರಾದ 1008 ಮಹಾಮಂಡಲೇಶ್ವರ ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿದರು.ಈ ವೇಳೆ ಮಾವಳ್ಳಿ ಹೋಬಳಿ ನಾಮಧಾರಿ ಅಭಿವೃದ್ಧಿ ಸಂಘದ ಅಧ್ಯಕ್ಷ ನಾಗೇಂದ್ರ ನಾಯ್ಕ, ಉಪಾಧ್ಯಕ್ಷ ರಾಜು ನಾಯ್ಕ ಮತ್ತಿತರರಿದ್ದರು.

ಕಾರವಾರ-ಕೈಗಾವರೆಗೆ ಚತುಷ್ಪಥ ರಸ್ತೆ ನಿರ್ಮಾಣ

ಕಾರವಾರ: ಕಾರವಾರದಿಂದ ಕೈಗಾದವರೆಗೆ ಚತುಷ್ಪಥ ರಸ್ತೆ ನಿರ್ಮಾಣ ಮಾಡುವ ಕುರಿತಂತೆ ಯೋಜನೆ ಸಿದ್ದಪಡಿಸಿ, ಕಾರ್ಯಗತಗೊಳಿಸುವಂತೆ ಲೋಕೋಪಯೋಗಿ, ನಗರಸಭೆ, ಕೈಗಾದ ಅಧಿಕಾರಿಗಳಿಗೆ ಕರ್ನಾಟಕ ರಾಜ್ಯ ಮಾರ್ಕೇಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ್ ಸೈಲ್ ನಿರ್ದೇಶನ ನೀಡಿದರು.

ಅವರು ಗುರುವಾರ ಎನ್‌ಪಿಸಿಐಎಲ್ ಕೈಗಾದ ಸಿ.ಎಸ್.ಆರ್ ಪ್ರಾಯೋಜಕತ್ವದ ಅಡಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಅಧೀನ ಸಂಸ್ಥೆಗಳಿಗೆ ಅಂಬುಲೆನ್ಸ್ ಹಾಗೂ ಇತರೆ ವಾಹನಗಳ ಲೋಕಾರ್ಪಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಾರವಾರ ಕ್ಷೇತ್ರದಲ್ಲಿ ರಸ್ತೆಗಳು ಅತ್ಯಂತ ಕಿರಿದಾಗಿದ್ದು, ವಾಹನಗಳ ಸಂಚಾರಕ್ಕೆ ಅನೇಕ ಸಮಸ್ಯೆಗಳಿದ್ದು, ಈಗಾಗಲೇ ಕೈಗಾ ರಸ್ತೆ ಅಗಲೀಕರಣಕ್ಕೆ ರೂ.22.5 ಕೋಟಿ ಹಣ ಅಭಿವೃದ್ಧಿ ಪಡಿಸಲು ನೀಡಲಾಗಿದ್ದು, ಜೊತೆಗೆ ನಗರಸಭೆ ಸಹಕಾರದಿಂದ ನಗರದ ರಸ್ತೆಗಳು ಹಾಗೂ ರೈಲ್ವೆ ನಿಲ್ದಾಣದವರೆಗೂ ಈಗಾಗಲೇ ಉತ್ತಮ ರಸ್ತೆ ನಿರ್ಮಾಣವಾಗಿದೆ. ಕಾರವಾರದಿಂದ ಕೈಗಾವರೆಗೆ ಚತುಷ್ಪಥ ರಸ್ತೆ ನಿರ್ಮಾಣ ಮಾಡುವುದರಿಂದ ಎನ್ ಅನುಕೂಲವಾಗಲಿದ್ದು, ತನ್ನ ಅವಧಿಯಲ್ಲಿ ಕಾರವಾರ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಲಾಗುವುದು ಎಂದರು.

ಎನ್‌ಪಿಸಿಐಎಲ್ ಕೈಗಾದ ಸ್ಥಳ ನಿರ್ದೇಶಕ ವಿನೋದ್ ಕುಮಾರ್ ಮಾತನಾಡಿ, ಪ್ರತೀ ವರ್ಷ 10 ಕೋಟಿ ಗೂ ಅಧಿಕ ಮೊತ್ತವನ್ನು ಸಿಎಸ್‌ಆರ್ ನಿಧಿಯಿಂದ ಆರೋಗ್ಯ ಶಿಕ್ಷಣ, ಮೂಲಸೌಕರ್ಯ ಮತ್ತು ಕೌಶಲ್ಯ ಅಭಿವೃದ್ಧಿಗಾಗಿ ವೆಚ್ಚ ಮಾಡುತ್ತಿದ್ದು, ಕೈಗಾ-ಇಳಕಲ್ ರಸ್ತೆಯ ಕೆರವಾಡಿಯಿಂದ ಕೈಗಾ ಕ್ರಾಸ್‌ವರೆಗಿನ ರಸ್ತೆ ಅಗಲೀಕರಣಕ್ಕೆ ರೂ. 24.5 ಕೋಟಿ ರೂ.ವೆಚ್ಚ ಮಾಡಲಾಗುತ್ತಿದ್ದು, ಶೀಘ್ರದಲ್ಲಿ ಟೆಂಡರ್ ಕರೆಯಲಾಗುವುದು ಮತ್ತು ಶಾಸಕರು ಶಿಫಾರಸ್ಸು ಎಲ್ಲಾ ಕಾಮಗಾರಿಗಳನ್ನು ಆದ್ಯತೆಯಲ್ಲಿ ಕೈಗೊಳ್ಳಲಾಗುವುದು ಎಂದರು. ಅಂಕೋಲಾದಲ್ಲಿ ಮಂಗನಕಾಯಿಲೆ ನಿಯಂತ್ರಣ ಕಾರ್ಯಕ್ರಮಗಳಿಗೆ ಒಂದು ವಾಹನ ನೀಡುವಂತೆ ಕೈಗಾ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.ಡಿಹೆಚ್‌ಓ ಡಾ.ಶಂಕರ್ ರಾವ್, ಆರ್.ಸಿ.ಹೆಚ್. ಅಧಿಕಾರಿ ಡಾ.ನಟರಾಜ್, ಜಿಲ್ಲಾ ಮಲೇರಿಯಾಧಿಕಾರಿಡಾ.ರಮೇಶ್ ರಾವ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಹರ್ಷ, ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಮಲ್ಲಿಕಾರ್ಜುನ್, ನಗರಸಭೆ ಪೌರಾಯುಕ್ತ ಜಗದೀಶ್ ಹುಲಗಜ್ಜಿ, ಎನ್.ಪಿ.ಸಿ.ಐ.ಎಲ್ ಕೈಗಾದ ಹೆಚ್ಚುವರಿ ಚೀಫ್ ಇಂಜಿನಿಯರ್ ಹಾಗೂ ಸಿಎಸ್‌ಆರ್ ನಿಧಿ ಅಧಿಕಾರಿ ತಿಪ್ಪೇಸ್ವಾಮಿ ಮತ್ತು ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.



ಉತ್ತಮ ಮಾರುಕಟ್ಟೆ ಒದಗಿಸಲು ಒತ್ತಾಯ

ಅಂಕೋಲಾ: ತಾಲೂಕಿನಲ್ಲಿ ರೈತರು ಬೆಳೆಯುವ ತರಕಾರಿ ಮತ್ತು ಹಣ್ಣುಗಳನ್ನು ಮಾರಾಟ ಮಾಡಲು ಅನುಕೂಲ ಆಗುವಂತೆ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಸೂಕ್ತ ಸ್ಥಳ ಗುರುತಿಸಿ ಅವಕಾಶ ಮಾಡಿಕೊಡುವಂತೆ ಬೆಳೆಗಾರರ ಸಮಿತಿಯ ಪ್ರಮುಖರು, ಕೃಷಿಕರು ಮತ್ತು ವಿವಿಧ ಸಂಘಟನೆಗಳ ಪ್ರಮುಖರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ತಾಲೂಕಿನ ಕೃಷಿಕರು ಜೀವನೋಪಾಯಕ್ಕಾಗಿ ವಿವಿಧ ಬಗೆಯ ತರಕಾರಿಗಳನ್ನು ಬೆಳೆಯುತ್ತಿದ್ದು, ಮಾವಿನ ಹಣ್ಣಿನ ಹಂಗಾಮಿನಲ್ಲಿ ಈ ಭಾಗದಲ್ಲಿ ಉತ್ತಮ ಮಾವಿನ ಬೆಳೆ ಬೆಳೆಯುತ್ತದೆ. ವ್ಯಾಪಾರ ವಹಿವಾಟು ನಡೆಸಲು ಕೃಷಿಕರಿಗೆ ಸ್ಥಳಾವಕಾಶದ ಕೊರತೆಯಿದ್ದು, ರಾಷ್ಟ್ರೀಯ ಹೆದ್ದಾರಿಯ ಸಮೀಪ ಯೋಗ್ಯ ಸ್ಥಳಾವಕಾಶ ದೊರಕಿದರೆ

ಉತ್ಪನ್ನಗಳಿಗೆ ಯೋಗ್ಯ ಮಾರುಕಟ್ಟೆ ದೊರಕಿಸಿಕೊಡಬಹುದಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದ್ದು, ಪಟ್ಟಣದ ವಿಠ್ಠಲಘಾಟದಿಂದ ಬಳಲೆ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಒಂದು ಯೋಗ್ಯ ಸ್ಥಳಾವಕಾಶ ಮಾಡಿಕೊಡುವಂತೆ ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಬೆಳೆಗಾರರ ಸಮಿತಿ ಅಧ್ಯಕ್ಷ ವಕೀಲ ನಾಗರಾಜ ನಾಯಕ ಮಾತನಾಡಿ ಜಿ.ಐ ಟ್ಯಾಗ್ ಮಾನ್ಯತೆ ಪಡೆದ ಕರಿ ಇಶಾಡ ಮಾವಿನ ಹಣ್ಣಿನ ಜೊತೆಗೆ ಹಲವು ಬಗೆಯ ಮಾವಿನ ಹಣ್ಣು ಹೇರಳವಾಗಿ ಬೆಳೆಯುವ ತಾಲೂಕಿನ ಬೆಳೆಗಾರರಿಗೆ ಅವರ ಉತ್ಪನ್ನಗಳ ಮಾರಾಟಕ್ಕೆ ಉತ್ತಮ ಮಾರುಕಟ್ಟೆಯ ಕೊರತೆಯಿದ್ದು ಮಾವಿನ ಹಣ್ಣುಗಳನ್ನು ಹೆಚ್ಚು ಕಾಲ ಇಡಲು ಸಾಧ್ಯವಾಗದ ಕಾರಣ ರಾಷ್ಟ್ರೀಯ ಹೆದ್ದಾರಿ

ಸಮೀಪದಲ್ಲಿ ಮಾರಾಟಕ್ಕೆ ಸ್ಥಳಾವಕಾಶ ದೊರಕಿದರೆ ಬೆಳೆಗಾರರಿಗೆ ಅನುಕೂಲ ಎಂದರು.

ಬೆಳೆಗಾರರ ಸಮಿತಿ ಗೌರವಾಧ್ಯಕ್ಷ, ಜಿಲ್ಲಾ ಹಾಲಕ್ಕಿ ಒಕ್ಕಲಿಗರ ಸಂಘದ ಅಧ್ಯಕ್ಷ ಹನುಮಂತ ಗೌಡ ಮಾತನಾಡಿ, ಹಾಲಕ್ಕಿ ಸಮಾಜದ ಜನರು ಕೃಷಿ ಉತ್ಪನ್ನಗಳು, ತರಕಾರಿ, ಹಣ್ಣುಗಳ ಮಾರಾಟದ ಮೂಲಕ ಜೀವನ ನಿರ್ವಹಣೆ ಮಾಡುತ್ತಿದ್ದು, ಮಹಿಳೆಯರು ಸ್ವಾವಲಂಬಿ ಜೀವನ ಸಾಗಿಸುತ್ತಿದ್ದಾರೆ ಬಡ ಬೆಳೆಗಾರರಿಗೆ ರಾಷ್ಟ್ರೀಯ ಹೆದ್ದಾರಿಯ ಆಸು ಪಾಸು ವ್ಯಾಪಾರ ಮಾಡಲು ಅವಕಾಶ ದೊರಕಿದರೆ ತುಂಬ ಅನುಕೂಲವಾಗಲಿದೆ ಎಂದರು.

ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಅರುಣ ಹರ್ಕಡೆ,

ಪ್ರಮುಖರುಗಳಾದ ಚೆನ್ನಪ್ಪ ಗೌಡ, ರೋಹನ ರಾಯ್ಕರ್, ಮೊದಲಾದವರು ಉಪಸ್ಥಿತರಿದ್ದರು. ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಮನವಿ ಸ್ವೀಕರಿಸಿದರು.



ರೈತರು ಹಣ ಪಾವತಿಯಾಗಿರುವ ಬಗ್ಗೆ ಖಚಿತ ಪಡಿಸಿಕೊಳ್ಳಲಿ

ಕಾರವಾರ: ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಪ್ರತಿ ಮೆಟ್ರಿಕ್ ಟನ್ ಗೆ ರೂ.50 ರಂತೆ ಪ್ರೋತ್ಸಾಹ ಧನವನ್ನು ನೀಡಲು ಹಾಗೂ ನಿಗಧಿ ಪಡಿಸಿದ ಕಾರ್ಖಾನೆಯವರು ರೈತರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.50 ರಂತೆ ಹೆಚ್ಚುವರಿ ಒಟ್ಟು ರೂ.100 ರಂತೆ ಮೊತ್ತವನ್ನು ಪಾವತಿಸಲು ಆದೇಶಿಸಲಾಗಿದೆ.



ಉಕ ಜಿಲ್ಲೆಗೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ಕರ್ನಾಟಕ ರಾಜ್ಯ ರೈತರಿಗೆ ಫೆಬ್ರವರಿ 15ರಂದು ಅರೆದಿರುವ ಕಬ್ಬಿನ ಪ್ರಮಾಣಕ್ಕೆ ಉಕ ಜಿಲ್ಲೆಯ ಇಐಡಿ ಪ್ಯಾರಿ ಸಕ್ಕರೆ ಕಾರ್ಖಾನೆ ರವರಿಗೆ ನೇರವಾಗಿ ಪಾವತಿಸುವಂತೆ ರೂ.5,57,39,531 ಹಾಗೂ ಫೆ.15 ರ ನಂತರ ಅವಧಿಗೆ ಅರೆದಿರುವ ಕಬ್ಬಿನ ಪ್ರಮಾಣಕ್ಕೆ ರೂ.59055 ಗಳನ್ನು ಬಿಡುಗಡೆ ಮಾಡಿರುತ್ತಾರೆ.

ಇಐಡಿ ಪ್ಯಾರಿ ಸಕ್ಕರೆ ಕಾರ್ಖಾನೆಯವರು ಅರೆದಿರುವ ಒಟ್ಟು 11,15,971.72 ಮೆಟ್ರಿಕ್ ಟನ್‌ಗೆ ಒಟ್ಟು 14,082 ಕರ್ನಾಟಕ ರಾಜ್ಯ ರೈತರಿಗೆ ಪ್ರತಿ ಮೆಟ್ರಿಕ್ ಟನ್ ಗೆ ರೂ.50 ರಂತೆ ಒಟ್ಟು ರೂ.5,57,98,586 ಗಳನ್ನು ಇಐಡಿ ಪ್ಯಾರಿ ಸಕ್ಕರೆ ಕಾರ್ಖಾನೆಗೆ ಬಿಡುಗಡೆ ಮಾಡಲಾಗಿದೆ.

ಸರ್ಕಾರದ ಆದೇಶದಂತೆ ಇಐಡಿ ಪ್ಯಾರಿ ಸಕ್ಕರೆ ಕಾರ್ಖಾನೆಯು ಪ್ರತಿ ಮೆಟ್ರಿಕ್ ಟನ್ ಗೆ ರೂ.50 ರಂತೆ ಸರ್ಕಾರದಿಂದ ಬಿಡುಗಡೆಯಾದ ರೂ 5,57,98,586 ಗಳನ್ನು ಹಾಗೂ ಕಾರ್ಖಾನೆಯಿಂದ ಪಾವತಿಸಬೇಕಾದ ಪ್ರತಿ ಟನ್‌ಗೆ ರೂ.50 ರಂತೆ ರೂ 5,57,98,586 ಹಣವನ್ನು ಎರಡನ್ನು ಸೇರಿಸಿ 14082 ರೈತರಿಗೆ ಪ್ರತಿ ಮೆಟ್ರಿಕ್ ಟನ್ ಗೆ ರೂ 100 ರಂತೆ ರೂ.11,15,97,172 ಹಣವನ್ನು ರೈತರ ಖಾತೆಗೆ ಜಮೆ ಮಾಡಲಾಗಿದೆ ಎಂದು ಇಐಡಿ ಸಕ್ಕರೆ ಕಾರ್ಖಾನೆಯವರು ವರದಿ ಮಾಡಿರುತ್ತಾರೆ.

ಆದ್ದರಿಂದ ಉಕ ಜಿಲ್ಲೆಯ ಇಐಡಿ ಪ್ಯಾರಿ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರು ಹಣ ಪಾವತಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಪಿಜಿ ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ಕಾರವಾರ: ಎಲ್ಪಿಜಿ ಗ್ಯಾಸ್ ವಿತರಣೆಯ ತೊಂದರೆಯನ್ನು ಖಂಡಿಸಿ ನಗರದಲ್ಲಿ ಜಿಲ್ಲಾ ಆಟೋರಿಕ್ಷಾ ಚಾಲಕ ಮಾಲಕರು ಪ್ರತಿಭಟನೆಯ ಮೆರವಣಿಗೆಯನ್ನು ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಮನವಿಯನ್ನು ಸಲ್ಲಿಸಿದರು.

ಜಿಲ್ಲೆಯ ಎಲ್ಲ ತಾಲೂಕಿನಲ್ಲಿ ಬೇರೆ ಬೇರೆ ಕಂಪನಿಗಳ ಪಂಪಗಳಿವೆ. ಪ್ರತಿನಿತ್ಯ ಆಟೋ ಚಾಲಕರು ಎಲ್ಪಿಜಿ ಸಿಲೆಂಡರ್ ತುಂಬಿಸಿ ತಮ್ಮ ಆಟೋವನ್ನು ಚಲಾಯಿಸುತ್ತಿದ್ದರು. ಆದರೆ ಕಳೆದ ಐದಾರು ದಿನಗಳಿಂದ ರಿಕ್ಷಾದವರಿಗೆ ಗ್ಯಾಸ ಸಿಗದೇ ಸಮಸ್ಯೆಯಾಗುತ್ತಿದೆ. ನಡೆಯುತ್ತಿರುವ ಯದ್ದವನ್ನು ಮುಂದಿಟ್ಟುಕೊಂಡು ಗ್ಯಾಸ ದರವನ್ನು 62 ಇರುವದನ್ನು 100 ರೂ ಗೆ ಏರಿಸಲಾಗಿದೆ. ಕೆಲವು ಕಡೆ ಗ್ಯಾಸ ಸಿಗದೇ ಸಮಸ್ಯೆ ಅನುಭವಿಸುವಂತಾಗಿದೆ. ಈ ಬಗ್ಗೆ ಅಧಿಕಾರಿಳಿಗೆ ಮತ್ತು ಜನಪ್ರತಿನಿಧಿಗಳಿಗೆ ಹೇಳಿದರೆ ಅವರು ಕೂಡ ಮೌನವಾಗಿದ್ದಾರೆ. ಈ ಬಗ್ಗೆ ಕಳೆದ ತಿಂಗಳು ಮನವಿಯನ್ನು ಸಲ್ಲಿಸಲಾಗಿತ್ತು. ಆದರೆ ನಮ್ಮ ಸಮಸ್ಯೆಗೆ ಸ್ಪಂದನೆ ಮಾತ್ರ ಸಿಗಲಿಲ್ಲ.ಯದ್ದದ ಹೆಸರಿನಲ್ಲಿ ದರವನ್ನು ಹೆಚ್ಚಿಸಿಕೊಂಡು ಹಗಲು ದರೋಡೆಯನ್ನು ಅವರು ಮಾಡುತ್ತಿದ್ದಾರೆ. ಇದನ್ನು ನಾವು ಬಲವಾಗಿ ಖಂಡಿಸುತ್ತೇವೆ. ಎಲ್ಲ ಗ್ಯಾಸ ಬಂಕ್‌ಗಳಲ್ಲಿ ಆಟೋ ಚಾಲಕರಿಗೆ ಗ್ಯಾಸ್ ದೊರೆಯುವಂತಾಗಬೇಕು ಮತ್ತು ಎಲ್ಲೆಡೆ ಏಕರೂಪದ ದರವನ್ನು ನಿಗದಿಪಡಿಸುವ ಮೂಲಕ ಪೂರೈಸಬೇಕು ಎಂದು ಆಟೋ ರಿಕ್ಷ ಚಾಲಕ ಮತ್ತು ಮಾಲಕರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆಯ ವೇಳೆಸಂಘದ ಜಿಲ್ಲಾಧ್ಯಕ್ಷ ವಿಶ್ವನಾಥ ಗೌಡ, ಪ್ರಧಾನ ಕಾರ್ಯದರ್ಶಿ ಉದಯ ನಾಯ್ಕ, ಹಾಗೂ ಸಂಘದ ಪದಾಧಿಕಾರಿಗಳು ಮತ್ತು ಆಟೋ ರಿಕ್ಷಾ ಚಾಲಕರು ಮತ್ತು ಮಾಲಕರು ಪ್ರತಿಭಟನೆಯಲ್ಲಿ ಹಾಜರಿದ್ದರು.



ಸಂಭ್ರಮದ ವೆಂಕಟರಮಣ ದೊಡ್ಡ ತೇರು ಉತ್ಸವ

ಅಂಕೋಲಾ: ಸಹಸ್ರಾರು ಜನರ ಹರ್ಷೋದ್ಗಾರ ಗೋವಿಂದ ನಾಮ ಸ್ಮರಣೆಯೊಂದಿಗೆ ತಾಲೂಕಿನ ದೊಡ್ಡ ದೇವರು ಎಂದೇ ಪ್ರಸಿದ್ಧಿ ಪಡೆದಿರುವ ಶ್ರೀವೆಂಕಟರಮಣ ದೇವರ ದೊಡ್ಡ ತೇರು ಉತ್ಸವ ಸಂಭ್ರಮದಿಂದ ನಡೆಯಿತು.

ಜಿಲ್ಲೆಯ ಪುರಾತನ ಪ್ರಸಿದ್ಧ ಶ್ರೀವೆಂಕಟರಮಣ ದೇವರ ಬ್ರಹ್ಮ ರಥವನ್ನು ಸ್ವಾಮಿ ರಾಮ ಗೋವಿಂದ ಗೋವಿಂದ, ಸ್ವಾಮಿ ವೆಂಕಟರಮಣ ಗೋವಿಂದ ಗೋವಿಂದ ಎಂದು ಕೂಗುತ್ತ ವಿವಿಧ ಬಗೆಯ ವಾದ್ಯ ಘೋಷಗಳೊಂದಿಗೆ ರಥಬೀದಿಯಿಂದ ಪಟ್ಟಣದದುರ್ಗಾದೇವಿದೇವಾಲಯದ ವರೆಗೆ ಎಳೆದು ತಂದು ಅಲ್ಲಿ ಪೂಜಾ ವಿಧಿಗಳನ್ನು ನಡೆಸಿ ಪುನಃ ರಥಬೀದಿಗೆ ಮರಳಲಾಯಿತು. ಮಧ್ಯಾಹ್ನ ನೂರಾರು ಜನ ಭಕ್ತರು ತೇರಿನ ಮೇಲ್ಭಾಗದ ದೇವರ ಸನ್ನಿಧಿಗೆ ಏರಿ ಪೂಜಾ ಕಾರ್ಯ ನೆರವೇರಿಸಿದರು. ಅಂಕೋಲಾ ಸುತ್ತ



ಮುತ್ತಲಿನ ಸಾವಿರಾರು ಜನ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ತೇರಿಗೆ ಬಾಳೆ ಹಣ್ಣು ಕಡಲೆಕಾಳು ಎಸೆದು ಕೃತಾರ್ಥರಾದರು.ತೇರು ಉತ್ಸವದ ಪ್ರಯುಕ್ತ ಶ್ರೀವೆಂಕಟರಮಣ ದೇವಾಲಯದಲ್ಲಿ ಬೆಳಗ್ಗೆಯಿಂದ ವಿವಿಧ ಸೇವಾ ಕಾರ್ಯಗಳು ಜರುಗಿದವು. ಸಂಜೆ ಶ್ರೀದೇವರ ಉತ್ಸವ ಮೂರ್ತಿ ಪಲ್ಲಕಿಯಲ್ಲಿ ವಿರಾಜಮಾನಗೊಳಿಸಿ ಬಸ್ ನಿಲ್ದಾಣದ ಪಕ್ಕದ ಅರಳಿ ಕಟ್ಟೆಗೆ ತೆರಳಿ ಮೃಗಬೇಟೆ ಸಾಂಪ್ರದಾಯಿಕ ವಿಧಿ ನಡೆಸಲಾಯಿತು.

ಸಂಭ್ರಮದ ಹನುಮ ಜಯಂತಿ ಆಚರಣೆ

ಅಂಕೋಲಾ: ತಾಲೂಕಿನಲ್ಲಿ ಶ್ರೀ ಹನುಮಾನ ಜಯಂತಿಯನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು.

ಪಟ್ಟಣದ ಬಸ್ ನಿಲ್ದಾಣದ ಎದುರಿನ ಮಹಾಗಣಪತಿ ಆಟೋ ರಿಕ್ಷಾ ಚಾಲಕ ಮತ್ತು ಮಾಲಕರ ಸಂಘದ ವತಿಯಿಂದ ಆಂಜನೇಯ ಪೂಜೆಯನ್ನು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನೆರವೇರಿಸಿ ಪಾನಕ ಪ್ರಸಾದವನ್ನು ವಿತರಿಸಲಾಯಿತು. ಮಹಾಗಣಪತಿ ಆಟೋ ರಿಕ್ಷಾ ಚಾಲಕ ಮತ್ತು ಮಾಲಕರ ಸಂಘದ ಅಧ್ಯಕ್ಷರು,ಪದಾಧಿಕಾರಿಗಳು, ಸದಸ್ಯರು, ಚಾಲಕರು ಮಾಲಿಕರು ಪಾಲ್ಗೊಂಡಿದ್ದರು. ನೂರಾರು ಜನ ಭಕ್ತರು ಆಗಮಿಸಿ ಪಾನಕ ಪ್ರಸಾದವನ್ನು ಸ್ವೀಕರಿಸಿದರು. ಪುರಾತನ ಪ್ರಸಿದ್ಧ ಕೋಟೆ ಮಾರುತಿ ದೇವಾಲಯದಲ್ಲಿ ಹನುಮಾನ ಜಯಂತಿ ಉತ್ಸವ ಸಮಿತಿ ವತಿಯಿಂದ ವಿಶೇಷ ಪೂಜೆ ಮತ್ತು ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು. ತಾಲೂಕಿನ ಬೆಳಂಬಾರದಲ್ಲಿ ಹನುಮಾನ ಜಯಂತಿ ಪ್ರಯುಕ್ತ ಕೊಂಕಣ ಖಾರ್ವಿ ಸಮಾಜದ ವತಿಯಿಂದ ಮಾರುತಿ ದೇವಾಲಯದ ಜಾತ್ರೆ ವಿಶೇಷ ಪೂಜೆ, ಅನ್ನ ಸಂತರ್ಪಣೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಕುಂಬಾರಕೇರಿಯ ಕಟ್ಟೆ ಮಾರುತಿ ಸನ್ನಿಧಿಯಲ್ಲಿ ಪೂಜೆ ಪ್ರಸಾದ ವಿತರಣೆ ನಡೆಯಿತು.



ವಿಜೃಂಭಣೆಯ ಬ್ರಹ್ಮಕಲಶ ಪ್ರತಿಷ್ಠಾಪನಾ ಮಹೋತ್ಸವ

ಅಂಕೋಲಾ: ಪಟ್ಟಣದ ಲಕ್ಷೇಶ್ವರ ಶೆಡಗೇರಿಯಲ್ಲಿ ಸುಮಾರು ಐದು ನೂರು ವರ್ಷಗಳಿಗಿಂತ ಹೆಚ್ಚಿನ ಕಾಲದಿಂದ ನೆಲೆನಿಂತಿರುವ ವಿಶ್ವಕರ್ಮ ಸಮಾಜದ ಆರಾಧ್ಯ ದೇವಿ ಶ್ರೀ ಮಹಾಕಾಳಿ ಕಾಳಮ್ಮ ದೇವಿಯ ದೇವಾಲಯದ ನೂತನ ಗರ್ಭಗುಡಿ ಕಟ್ಟಡ ದೈವಾರ್ಪಣೆ ದೇವಿಯ ಶಿಲಾವಿಗ್ರಹದ ಅಷ್ಟಬಂಧ ಬ್ರಹ್ಮಕಲಶ ಪೂರ್ವಕ ಪ್ರತಿಷ್ಠಾಪನಾ ಮಹೋತ್ಸವ ಆನೆಗುಂದಿ ಮಹಾಸಂಸ್ಥಾನದ ಪೀಠಾಧೀಶ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮಿಗಳ ದಿವ್ಯ ಉಪಸ್ಥಿತಿಯಲ್ಲಿ ವಿಜೃಂಭಣೆಯಿಂದ ನಡೆಯಿತು.

ಆನೆಗುಂದಿ ಮಹಾಸಂಸ್ಥಾನದ ಪುರೋಹಿತ ವೇದಮೂರ್ತಿ ಅಕ್ಷಯ ಶರ್ಮ ಅವರ ಪ್ರಧಾನ ಆಚಾರ್ಯತ್ವದಲ್ಲಿ ದೇವಾಲಯದ ಪ್ರಧಾನ ಅರ್ಚಕ ಶ್ರೀಹರ್ಷ ಮತ್ತು ಆನೆಗುಂದಿ ಮಹಾಸಂಸ್ಥಾನದ ವೈದಿಕರ ಉಪಸ್ಥಿತಿಯಲ್ಲಿ ದೇವಾಲಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿ ನೂತನ ಗರ್ಭಗುಡಿಯಲ್ಲಿ ಮಹಾಕಾಳಿ ದೇವಿಯ ಶಿಲಾವಿಗ್ರಹದ ಪ್ರತಿಷ್ಠಾಪಿಸಿ ಶಿಖರ ಕಲಶ ಪ್ರತಿಷ್ಠೆ, ಅಷ್ಟಬಂಧ ಕಾರ್ಯಕ್ರಮಗಳು



ನೆರವೇರಿಸಲಾಯಿತು. ದೇವಾಲಯದ ಒಳಭಾಗದಲ್ಲಿ ಮೇಲ್ಛಾವಣಿಗೆ ಕಟ್ಟಿಗೆಯಿಂದ ಕೆತ್ತಿದ ಆಕರ್ಷಕ ಕೆತ್ತನೆ ದೇವಾಲಯದ ಶೋಭೆಯನ್ನು ಇನ್ನಷ್ಟು ಹೆಚ್ಚಿಸಿದ್ದು ಗರ್ಭಗುಡಿಯಲ್ಲಿ ಕಾಳಮ್ಮ ದೇವಿಯ ಶಿಲಾವಿಗ್ರಹಕ್ಕೆ ವಿಶೇಷ ಅಲಂಕಾರ ಮಾಡಲಾಗಿತ್ತು.ಜಿಲ್ಲೆಯ ವಿವಿಧ ಭಾಗಗಳಿಂದ ವಿಶ್ವಕರ್ಮ ಸಮಾಜದ ಜನರು ಆಗಮಿಸಿ ದೇವಿ ಮಹಾಕಾಳಿಗೆ ಪೂಜೆ ಸಲ್ಲಿಸಿದರು.ಮಧ್ಯಾಹ್ನ ಪ್ರತಿಷ್ಠಾ ಹೋಮ, ಮಹಾಪೂಜೆಯ ನಂತರ ನಡೆದ ಅನ್ನ ಸಂತರ್ಪಣೆಯಲ್ಲಿ ಸಾವಿರಾರು ಜನರು ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

ಕಾರವಾರ ಅಂಕೋಲಾ ಶಾಸಕ ಸತೀಶ ಸೈಲ್, ಮಾಜಿ ಶಾಸಕಿ ರೂಪಾಲಿ ನಾಯ್ಕ ಆಗಮಿಸಿ ದೇವಿಯ ದರ್ಶನ ಪಡೆದರು.

ಹನುಮ ಜಯಂತಿ: ವಿಶೇಷ ಪೂಜೆ



ಮುಂಡಗೋಡ: ಹನುಮ ಜಯಂತಿ ಪ್ರಯುಕ್ತ ವಿಶ್ವ ಹಿಂದು ಪರಿಷತ್ ಬಜರಂಗದಳ ತಾಲೂಕು ಘಟಕದ ವತಿಯಿಂದ ಗುರುವಾರ ಪಟ್ಟಣದ ಯಲ್ಲಾಪುರ ರಸ್ತೆಯ ಜಂಬಗಿ ದವಾಖಾನೆ ಬಳಿ ಇರುವ ಆಂಜನೇಯ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಹನುಮಂತ ದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಗೈಯ್ದು, ಭಕ್ತಾದಿಗಳಿಗೆ ಸಿಹಿ ಮತ್ತು ಮಜ್ಜಿಗೆ ವಿತರಣೆ ಮಾಡಲಾಯಿತು.

ವಿಶ್ವ ಹಿಂದು ಪರಿಷತ್ ಬಜರಂಗದಳದ ತಾಲೂಕು ಘಟಕದ ಸಂಚಾಲಕ ಶಂಕರ ಲಮಾಣಿ, ಸಿಪಿಐ ರಂಗನಾಥ ನೀಲಮ್ಮನವರ, ಬಿಜೆಪಿ ತಾಲೂಕು ಘಟಕದ ಅಧ್ಯಕ್ಷ ಮಂಜುನಾಥ ಪಾಟೀಲ, ಹಿಂದು ಮುಖಂಡರಾದ ಬಸವರಾಜ ಓಸಿಮಠ, ಮಂಜು ಎಚ್.ಪಿ., ಪ್ರಕಾಶ ಬಡಿಗೇರ, ಸುರೇಶ ಕಲ್ಲೊಳ್ಳಿ, ವಿಶ್ವನಾಥ ನಾಯರ, ಮಂಜುನಾಥ ಹರಮಲಕರ, ಶೇಖರ ಲಮಾಣಿ, ವಿಶ್ವನಾಥ ಪವಾಡಶೆಟ್ಟರ, ರವಿ ಹಿರೇಮಠ, ನಾಗರಾಜ ಸಂಕನಾಳ, ಭರತರಾಜ ಹದಳಗಿ, ಅಯ್ಯಪ್ಪ ಭಜಂತ್ರಿ, ಮಂಜು ಲಮಾಣಿ, ಕಿರಣ ಕೊಲ್ಲಾಪುರ ಪಾಲ್ಗೊಂಡಿದ್ದರು.

ಕಿರುಸುದ್ದಿ

ಏ.6ಕ್ಕೆ ಹಾವೇರಿ ವಿವಿ ಪ್ರಥಮ ಘಟಿಕೋತ್ಸವ

ಹಾವೇರಿ: ಹಾವೇರಿ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಏಪ್ರಿಲ್ 6ರಂದು ಬೆಳಿಗ್ಗೆ 11 ಗಂಟೆಗೆ ಹಾವೇರಿ ನಗರದ ಜಿ.ಎಚ್. ಕಾಲೇಜು ಸಭಾಂಗಣದಲ್ಲಿ ಜರುಗಲಿದೆ. ಗೌರವಾನ್ವಿತ ರಾಜ್ಯಪಾಲರು ಹಾಗೂ ಹಾವೇರಿ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಥಾವರ್ ಚಂದ್ ಗೆಹ್ಲೋಟ್ ಅವರು ಅಧ್ಯಕ್ಷತೆ ವಹಿಸಲಿದ್ದು, ಉನ್ನತ ಶಿಕ್ಷಣ ಸಚಿವರು ಹಾಗೂ ಹಾವೇರಿ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳಾದ ಡಾ.ಎಂ.ಸಿ. ಸುಧಾಕರ್ ಅವರು ಉಪಸ್ಥಿತರಿರುವರು. ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷರಾದ ಜಸ್ಟಿಸ್ ಡಾ.ಅಶೋಕ ಹಿಂಚಿಗೇರಿ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

ರಾಣೇಬೆನ್ನೂರ: ತಾಲೂಕಿನ ಮಾಕನೂರು ಜಾಕವೆಲ್ ಮಾರ್ಗದ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಚಳಗೇರಿ, ಹುಣಸಿಕಟ್ಟಿ, ದೇವನಗೊಂಡನಕಟ್ಟಿ, ಮಾಗೋಡ, ಕಮದೋಡ ಗ್ರಾಮಗಳಿಗೆ ಹಾಗೂ ಜೈನ್ ಸ್ಕೂಲ್, ರೆನ್ ಬೊ ಸ್ಕೂಲ್, ಬಳ್ಳಾರಿ ಸ್ಕೂಲ್, ರಿಲಾಯನ್ಸ ಪೆಟ್ರೋಲ್ ಬಂಕ್, ಹಲಗೇರಿ ಪೆಟ್ರೊ ಪಾರ್ಕ, ನಯಾರ ಪೆಟ್ರೋಲ್ ಬಂಕ್, ಕರ್ನಾಟಕ ಕೋ-ಆಪರೇಟಿವ್ ಮಿಲ್ ಮತ್ತು ಹುಣಸಿಕಟ್ಟಿ ಹಾಗೂ ಕಮದೋಡ ವ್ಯಾಪ್ತಿಯ ಕ್ರಷರ ಸ್ಥಾವರಗಳಿಗೆ ಏ. 4 ರಂದು ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ. ಗ್ರಾಹಕರು ಸಹಕರಿಸಬೇಕು ಎಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಕಮಲಮ್ಮ ದತ್ತಿ ಪ್ರಶಸ್ತಿಗೆ ಕಾಂತೇಶರೆಡ್ಡಿ ಆಯ್ಕೆ



ರಾಣೇಬೆನ್ನೂರ: ತಾಲೂಕಿನ ಕುಸಗೂರು ಗ್ರಾಮದ ಸಾಹಿತಿ ಡಾ. ಕಾಂತೇಶರೆಡ್ಡಿ ಗೋಡಿಹಾಳ ಅವರಿಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ನೀಡುವ ಕಮಲಮ್ಮ ಮತ್ತು ಪ್ರೊ. ಜಿ.ಎ. ಶಿವಲಿಂಗಯ್ಯ ಶರಣ ದತ್ತಿ 2025ನೇ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯನ್ನು ಏ.7 ರಂದು ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಸ್ವೀಕರಿಸಲಿದ್ದಾರೆ.

ಆಟೋ ಗ್ಯಾಸ್ ಬಂಕ್ ಬಂದ್: ಚಾಲಕರ ಪರದಾಟ

ಹಾವೇರಿ: ನಗರದಲ್ಲಿರುವ ಏಕೈಕ ಆಟೋ ಗ್ಯಾಸ್ ಬಂಕ್‌ನಲ್ಲಿ ನೋ ಸ್ಟಾಕ್ ಬೋರ್ಡ್ ಹಾಕಲಾಗಿದ್ದು, ಆಟೋ ರಿಕ್ಷಾ ಚಾಲಕರು ಪರದಾಡುವಂತಾಗಿದೆ. ವಾಣಿಜ್ಯ ಬಳಕೆ ಗ್ಯಾಸ್ ಸಿಲಿಂಡರ್ ಅಭಾವದ ಬಳಿಕ ಈಗ ಆಟೋ ಗ್ಯಾಸ್ ಕೊರತೆ ಎದುರಾಗಿದೆ. ಇರಾನ್-ಇಸ್ರೇಲ್ ಯುದ್ಧದ ಬಿಸಿ ನಗರದ ಆಟೋ ಚಾಲಕರಿಗೂ ತಟ್ಟಿದೆ. ಸುತ್ತಮುತ್ತಲಿನ ಪಟ್ಟಣ, ಗ್ರಾಮೀಣ ಭಾಗದಲ್ಲಿ ಎಲ್ಲಿಯೂ ಆಟೋ ಗ್ಯಾಸ್ ಬಂಕ್ ಇಲ್ಲದ್ದರಿಂದ ನಗರದ ಹಾನಗಲ್ಲ ರಸ್ತೆಯಲ್ಲಿರುವ ಬಂಕ್‌ಗೆ ಚಾಲಕರು ಬಂದು ಆಟೋ ರಿಕ್ಷಾಗಳಿಗೆ ಗ್ಯಾಸ್ ಫಿಲ್ ಮಾಡಿಕೊಳ್ಳುತ್ತಿದ್ದರು. ಈಗ ಇರುವ ಏಕೈಕ ಬಂಕ್ ಕೂಡ ಗ್ಯಾಸ್ ಇಲ್ಲದೇ ನೋ ಸ್ಟಾಕ್ ಬೋರ್ಡ್ ಹಾಕಿದ್ದಾರೆ. ಇದರಿಂದ ಹತ್ತಾರು ಆಟೋ ರಿಕ್ಷಾಗಳು ಬಂಕ್‌ಗೆ ಬಂದು ವಾಪಸ್ ಹೋಗುವಂತಾಗಿದೆ. ಬ್ಯಾಡಗಿ, ಮೋಟೆಬೆನ್ನೂರು, ಕಬ್ಬೂರು, ಸಂಗೂರ, ಆಡೂರು ಕಡೆಯಿಂದಲೂ ರಿಕ್ಷಾದಲ್ಲಿ ಬಂದ ಚಾಲಕರು ಹಿಡಿಶಾಪ ಹಾಕುತ್ತ ಹಿಂದಿರುಗುತ್ತಿದ್ದಾರೆ. ಇನ್ನೂ ಮೂರು ದಿನಗಳ ಕಾಲ ಗ್ಯಾಸ್ ಸಿಗುವ ಸಾಧ್ಯತೆಯಿಲ್ಲ ಎಂದು ಬಂಕ್ ಸಿಬ್ಬಂದಿ ಹೇಳುತ್ತಿದ್ದಾರೆ.

ಟ್ರ್ಯಾಕ್ಟರ್- ಬೈಕ್ ಡಿಕ್ಕಿ: ಇಬ್ಬರಿಗೆ ಗಾಯ

ಹಾವೇರಿ: ರಸ್ತೆಯಲ್ಲಿ ಹೋಗುತ್ತಿದ್ದ ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ಇಬ್ಬರು ಸವಾರರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಕೂರಗುಂದ ಗ್ರಾಮದ ಹೊರವಲಯದಲ್ಲಿ ನಡೆದಿದೆ. ಕೂರಗುಂದ ಗ್ರಾಮದ ಮಂಜಪ್ಪ ನೀಲಪ್ಪ ಮುದೇಣ್ಣೆ ಎಂಬ ಟ್ರ್ಯಾಕ್ಟರ್ ಚಾಲಕನ ವಿರುದ್ಧ ದೂರು ದಾಖಲಾಗಿದೆ. ಬೈಕ್ ಸವಾರ ದಿಳ್ಳೆಪ್ಪ ಹೊಟ್ಟಿಕರಿಯಪ್ಪನವರ, ಹಿಂಬದಿ ಸವಾರಳಾದ ಲಕ್ಷ್ಮವ್ವ ಬರದೂರ ಎಂಬುವವರಿಗೆ ಗಂಭೀರ ಗಾಯಗಳಾಗಿವೆ. ಬೈಕ್ ಸವಾರ ದಿಳ್ಳೆಪ್ಪ ತನ್ನ ಬೈಕ್ ನಲ್ಲಿ ಲಕ್ಷ್ಮವ್ವ ಬರದೂರಳನ್ನು ಕೂರಿಸಿಕೊಂಡು ಕೂರಗುಂದ ಗ್ರಾಮದಿಂದ ಗುತ್ತಲ ಕಡೆಗೆ ಹೋಗುವಾಗ ಹೊಲದಿಂದ ರಸ್ತೆಯ ಕಡೆಗೆ ವೇಗವಾಗಿ ಬಂದ ಟ್ರ್ಯಾಕ್ಟರ್ ಬೈಕ್ ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದೆ ಎಂದು ಗದಗ ಜಿಲ್ಲೆ ಮುಂಡರಗಿ ತಾಲೂಕು ಮುರಡಿ ಗ್ರಾಮದ (ಮಹಿಳೆಯ ಮಗ) ಬೀರಪ್ಪ ಬರದೂರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.



ಹಾನಗಲ್ಲ : ರಂಗ ಗ್ರಾಮ ಶೇಷಗಿರಿಯ ಸಿ.ಎಂ.ಉದಾಸಿ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಗಜಾನನ ಯುವಕ ಮಂಡಳ ಶೇಷಗಿರಿ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ ವಿಶ್ವರಂಗಭೂಮಿ ದಿನಾಚರಣೆ ಹಾಗೂ ಇದರಂಗವಾಗಿ ನಾಲ್ವರು ಕಲಾವಿದರಿಗೆ ರಂಗ ಸನ್ಮಾನ ಕಾರ್ಯಕ್ರಮದಲ್ಲಿ ನಾಲ್ವರು ರಂಗ ಕಲಾವಿದರನ್ನು ಸನ್ಮಾನಿಸಲಾಯಿತು.

ಇಂದಿನಿಂದ ಶೇಷಾಚಲ ಸದ್ಗುರುಗಳ ಜಯಂತ್ಯುತ್ಸವ

ಹಾವೇರಿ: ತಾಲೂಕಿನ ಅಗಡಿಯ ಆನಂದವನದ ಶೇಷಾಚಲ ಸದ್ಗುರುಗಳ ಜಯಂತ್ಯುತ್ಸವ ಕಾರ್ಯಕ್ರಮ ಏ.3ರಿಂದ ಏ.8ರ ವರೆಗೆ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ. ಚೈತ್ರ ಕೃಷ್ಣಪ್ರತಿಪದ ಏ.3ರಂದು ಬೆಳಗ್ಗೆ 5.30ಕ್ಕೆ ಕಾಕಡಾರತಿ, 6 ಗಂಟೆಗೆ ಅಖಂಡ ಭಜನೆ ಪ್ರಾರಂಭ, 7 ಗಂಟೆಗೆ ಪೂಜೆ, ರುದ್ರಾಭಿಷೇಕ, 8.30ಕ್ಕೆ ಸಂಗೀತ ಸೇವೆ, 9.30ಕ್ಕೆ ಪುರಾಣ ಸೇವೆ, ಮಧ್ಯಾಹ್ನ 12ಕ್ಕೆ ಪೂಜೆ, ಅಲಂಕಾರ, ಮಹಾನೈವೇದ್ಯ, ಪ್ರಸಾದ. ಮಧ್ಯಾಹ್ನ 3 ಗಂಟೆಗೆ ಪ್ರವಚನ, ಹರಿಕಥೆ, ಸಂಜೆ 5.30ಕ್ಕೆ ಭಜನೆ, 7 ಗಂಟೆಗೆ ಪಲ್ಲಕ್ಕಿ ಸೇವೆ, ಪೂಜೆ ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ರಾತ್ರಿ ಪ್ರಸಾದ, ರಾತ್ರಿ 9 ಗಂಟೆಗೆ ಹರಿಕಥೆ ಜರುಗಲಿದೆ. ಇದರಂತೆ ಆರೂ ದಿವಸ ಕಾರ್ಯಕ್ರಮಗಳು ಜರುಗಲಿವೆ.

ಏ.7ರಂದು ಬೆಳಗ್ಗೆ 11 ಗಂಟೆಯಿಂದ 11.30 ಸದ್ಗುರುಗಳ ಜನನೋತ್ಸವದ ಹರಿಕೀರ್ತನೆ, 11.30ರಿಂದ ತೊಟ್ಟಿಲೋತ್ಸವ, ನಂತರ ರಥೋತ್ಸವ ಜರುಗುತ್ತದೆ. ಏ.8 ರಂದು ಸದ್ಗುರುವಿಗೆ ಹಾಗೂ ಶೇಷಾಚಲ ಸದ್ಗುರು ವೇದ ಸಂಸ್ಕೃತ ಪಾಠಶಾಲೆಯ ಬುತ್ತಿಪೂಜೆ ವಾರ್ಷಿಕೋತ್ಸವವೂ ಜರುಗಲಿದೆ. ಸಂಜೆ 8ಕ್ಕೆ ಶೇಜಾರತಿಯೊಂದಿಗೆ ಪ್ರತಿಪದೆಯಿಂದ ಪ್ರಾರಂಭಿಸಿದ ಎಲ್ಲ ಕಾರ್ಯಕ್ರಮಗಳು ಮಂಗಲಗೊಳ್ಳುತ್ತದೆ ಎಂದು ಶ್ರೀಮಠ ಪ್ರಕಟಣೆಯಲ್ಲಿ ತಿಳಿಸಿದೆ.



ಹಾನಗಲ್ಲ: ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಅಧ್ಯಕ್ಷರು ಮಾತೃಶ್ರೀ ಹೇಮಾವತಿ ಅಮ್ಮನವರ ಹುಟ್ಟು ಹಬ್ಬದ ದಿನದಂದು ಹಾನಗಲ್ ತಾಲೂಕಿನ 95 ವಾತ್ಸಲ್ಯ ಫಲಾನುಭವಿಗಳಿಗೆ ಹಣ್ಣು ವಿತರಣೆ ಮಾಡಿ ಶುಭ ಕೋರಲಾಯಿತು.

ಪೊಲೀಸ್ ಧ್ವಜ ದಿನಾಚರಣೆ | ಎಎಸ್‌ಐ ಸುರೇಖಾ ಸಲಹೆ

ನಿಷ್ಠೆಯಿಂದ ನೊಂದವರ ಸಮಸ್ಯೆ ಪರಿಹರಿಸಿ

ಹಾವೇರಿ: ಪೊಲೀಸ್ ಕಚೇರಿಗೆ ನೊಂದು ಬಂದವರಿಗೆ ನಿಷ್ಪಕ್ಷಪಾತವಾಗಿ, ಪ್ರಾಮಾಣಿಕತೆಯಿಂದ ನಿಷ್ಠೆಯಿಂದ ಅವರ ತೊಂದರೆಯನ್ನ ಬಗೆಹರಿಸಿಕೊಡಿ. ಇದು ಪೊಲೀಸರ ಕರ್ತವ್ಯ ಪ್ರಜ್ಞೆಯಾಗಿದೆ ಎಂದು ನಿವೃತ್ತ ಮಹಿಳಾ ಎಎಸ್‌ಐ ಸುರೇಖಾ ರಾಯ್ಕರ್ ಹೇಳಿದರು.

ನಗರದ ಕೆರಿಮತ್ತಿಹಳ್ಳಿಯ ಪೊಲೀಸ್ ಕವಾಯತು ಮೈದಾನದಲ್ಲಿ ಗುರುವಾರ ನಡೆದ ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಮಾತನಾಡಿದ ಅವರು, ಏಪ್ರಿಲ್ 2 ಪ್ರತಿ ವರ್ಷ ಪೊಲೀಸ್ ಧ್ವಜ ದಿನಾಚರಣೆ ಮಾಡುತ್ತೇವೆ ಇದರ ಮುಖ್ಯ ಉದ್ದೇಶ ನಿವೃತ್ತ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಗೌರವ ಸನ್ಮಾನ ನೀಡುವುದಾಗಿದೆ. ಪೊಲೀಸರಿಗೆ ಅವರ ಕರ್ತವ್ಯ ಪ್ರಜ್ಞೆ ಅರಿವಿದ್ದು, ಸಮಾಜವನ್ನು ಹೇಗೆ ಶಾಂತತೆಯಲ್ಲಿ ಇಟ್ಟುಕೊಳ್ಳಬೇಕು ಎಂಬ ಪರಿಕಲ್ಪನೆ ಅವರಲ್ಲಿದೆ, ಇಂದು ಇಲಾಖೆಗೆ ಸಾಕಷ್ಟು ಸೌಲಭ್ಯಗಳಿವೆ ಮಾಹಿತಿ ತಂತ್ರಜ್ಞಾನವಿದೆ ಅದನ್ನು ಸದುಪಯೋಗ ಪಡಿಸಿಕೊಂಡು ಕೆಲಸ ಮಾಡಿ. ಮೊಬೈಲ್ ಎಂಬ ಸಾಧನ ಎಲ್ಲವನ್ನು ಸುಲಭಗೊಳಿಸಿದೆ ಅದರ ಸರಿಯಾದ ವಿನಿಯೋಗ ಮಾಡಿಕೊಂಡರೆ ಇಡೀ ಪ್ರಪಂಚವನ್ನೇ ನಾವು ಕಾಣಬಹುದು ಇದು ಇಲಾಖೆಯ ಕೆಲಸ ಕಾರ್ಯಗಳಿಗೆ ಅನುಕೂಲವಾಗಲಿದೆ ಎಂದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಎಲ್.ವೈ. ಶಿರಕೋಳ ವರದಿ ವಾಚನ ನೀಡಿ, ಕರ್ನಾಟಕ ಪೊಲೀಸ್ ಆಕ್ಟ್ ಜಾರಿಯಾದ ನಂತರ ಏಪ್ರಿಲ್ 2 ಪೊಲೀಸ್ ಧ್ವಜ ದಿನಾಚರಣೆ ಮತ್ತು ಆಕ್ಟೋಬರ್ 21 ಹುತಾತ್ಮ ದಿನಾಚರಣೆಗಳನ್ನು ಮಾಡಿಕೊಂಡು ಬರುತ್ತಿದ್ದೇವೆ, ಏಪ್ರಿಲ್ 2 ರ ಪೊಲೀಸ್ ಧ್ವಜ ದಿನಾಚರಣೆಯ ಮುಖ್ಯ ಉದ್ದೇಶ ಧ್ವಜಗಳನ್ನ ಮಾರಾಟ ಮಾಡುವ ಮೂಲಕ ನಿವೃತ್ತ ಅಧಿಕಾರಿಗಳಿಗೆ ಒಂದು ಗೌರವ ಸಲ್ಲಿಸುವ ಕಾರ್ಯವಾಗಿದೆ. ಇಂದು ಸಮಾಜದಲ್ಲಿ ವಿವಿಧ ವರ್ಗದವರು ವಿವಿಧ ದಿನಾಚರಣೆಗಳನ್ನು ಆಚರಿಸಿಕೊಳ್ಳುತ್ತಾರೆ. ಆದರೆ ಪೊಲೀಸರಿಗಾಗಿ ಯಾವುದೇ ದಿನಾಚರಣೆಗಳಿಲ್ಲ ನಾವು ಇನ್ನೊಬ್ಬರಿಗಾಗಿ ನಮ್ಮ ಎರಡು ಕಾರ್ಯಕ್ರಮಗಳನ್ನು ಮಾಡುತ್ತೇವೆ, ಅದು ಒಂದು ನಿವೃತ್ತರಾದವರಿಗೆ ಮತ್ತೊಂದು ಮಡಿದವರಿಗಾಗಿ ಎಂದರು.



> 2026 ಮಾರ್ಚ್ 31ರ ಅಂತ್ಯಕ್ಕೆ ಪೊಲೀಸ್ ಧ್ವಜ ಮಾರಾಟ ಮಾಡಿ ಬಂದಂತಹ ಹಣ ರೂ.15.78 ಲಕ್ಷ, ಇದರಲ್ಲಿ ರೂ.50 ಸಾವಿರಗಳನ್ನು ಮರಣೋತ್ತರ ಪರಿಹಾರವಾಗಿ ನೀಡಲಾಗುತ್ತದೆ ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ರೂ.8.96ಲಕ್ಷ ಒದಗಿಸಲಾಗಿದೆ.
>
> ■ ಲಕ್ಷ್ಮಣ ಶಿರಕೋಳ, ಎಎಸ್ಪಿ, ಹಾವೇರಿ

ಪೊಲೀಸ ಸೇವೆಗಳು ನಕಾರಾತ್ಮಕವಾಗಿ ಪ್ರಾರಂಭವಾಗುತ್ತವೆ ಹೊರತು ಯಾವುದು ಒಳ್ಳೆ ಕೆಲಸದಿಂದ ಪ್ರಾರಂಭವಾಗುವುದಿಲ್ಲ. ಸಮಾಜದಲ್ಲಿ ದಿನನಿತ್ಯ ಜಗಳ, ಅಪಘಾತ, ಕೊಲೆ, ಸುಲಿಗೆ, ಕಳ್ಳತನ ಹೀಗೆ ವಿವಿಧ ಹಂತದ ನಕಾರಾತ್ಮಕ ಕೆಲಸಗಳನ್ನು ಶಮನಗೊಳಿಸಲು ಕೆಲಸ ಮಾಡುತ್ತೇವೆ. ನಿತ್ಯ ಸಮಾಜದಲ್ಲಿ ಶಾಂತಿ, ಸೌಹಾರ್ದತೆಯನ್ನು ನಿರಂತರ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಪೊಲೀಸ್ ಧ್ವಜ ದಿನಾಚರಣೆ ಮಾಡುತ್ತೇವೆ. ಪೊಲೀಸ್ ಧ್ವಜಗಳನ್ನು ಮಾರಾಟ ಮಾಡಿ ಸಂಗ್ರಹವಾದ ಹಣವನ್ನು ನಿವೃತ್ತ ಪೊಲೀಸ್ ಅಧಿಕಾರಿಗಳ ಕಲ್ಯಾಣ ನಿಧಿಗೆ ಅರ್ಪಿಸಲಾಗುವುದು. ನಿವೃತ್ತಿ ಹೊಂದಿದ ಪೊಲೀಸ್ ಸಿಬ್ಬಂದಿ, ಅಧಿಕಾರಿಗಳ ಕುಟುಂಬದವರ ವೈದ್ಯಕೀಯ ವೆಚ್ಚ, ಶವ ಸಂಸ್ಕಾರಕ್ಕಾಗಿ ಧನಸಹಾಯವನ್ನು ನೀಡಲಾಗುತ್ತದೆ. ಸಂಗ್ರಹವಾದ ಹಣದಲ್ಲಿ ಅರ್ಧದಷ್ಟು ಪೊಲೀಸ್ ಕಲ್ಯಾಣ ನಿಧಿಗೆ ಹಾಗೂ ಉಳಿದ ಅರ್ಧ ಹಣವನ್ನು ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮ ನಿಧಿಗೆ ಉಪಯೋಗಿಸಲಾಗುತ್ತದೆ.

ಕಾರ್ಯಕ್ರಮದಲ್ಲಿ ಪರೇಡ್ ಕಮಾಂಡರ ಆರ್‌ಪಿಐ ಶಂಕರಗೌಡ ಪಾಟೀಲ್ ಪೊಲೀಸ್ ಪಡೆಗಳ ಪಥ ಸಂಚಲನದ ನೇತೃತ್ವ ವಹಿಸಿದ್ದರು. ಇಲಾಖೆಯಲ್ಲಿ ಸೇವೆ ಸಲ್ಲಿಸಿ ಸೇವಾ ನಿವೃತ್ತಿ ಹೊಂದಿದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಸನ್ಮಾನಿಸಲಾಯಿತು. ಶಿಗ್ಗಾಂವ ಡಿವೈಎಸ್ಪಿ ಕೆ.ವಿ. ಗುರುಶಾಂತಪ್ಪ ಸ್ವಾಗತಿಸಿದರು. ಪೊಲೀಸ್ ಸಿಬ್ಬಂದಿ, ಜಿಲ್ಲಾಮಟ್ಟದ ಅಧಿಕಾರಿಗಳು ಇದ್ದರು.

ಅಂಧ ಮಕ್ಕಳಿಗೆ ಆಸರೆಯಾದ ಗವಾಯಿಗಳು

ಹಾನಗಲ್ಲ: ಬಾಹ್ಯ ಚಕ್ಷುವಿಲ್ಲದೆ ಅಂತರಂಗದ ಕಣ್ಣಿನಿಂದ ಪಂಡಿತ್ ಪುಟ್ಟರಾಜರು ಹಾಗೂ ಪಂಡಿತ್ ಪಂಚಾಕ್ಷರ ಗವಾಯಿಗಳವರು ಅಂಧ ಅನಾಥರ ಮಕ್ಕಳಿಗೆ ಸಂಗೀತ ಕಲೆಯ ಮೂಲಕ ಬದುಕು ಕಟ್ಟಿ ಕೊಟ್ಟ ಮಹಾತ್ಮರಾಗಿದ್ದು, ಇದು ಇಡೀ ಜಗತ್ತಿನ ಇತಿಹಾಸ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕಲಾವಿದ ಎಸ್.ಎಸ್. ಮೂರಮಟ್ಟಿ ತಿಳಿಸಿದರು.

ರಂಗ ಗ್ರಾಮ ಶೇಷಗಿರಿಯ ಸಿ.ಎಂ. ಉದಾಸಿ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಗಜಾನನ ಯುವಕ ಮಂಡಳ ಶೇಷಗಿರಿ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ ವಿಶ್ವರಂಗಭೂಮಿ ದಿನಾಚರಣೆ, ಕಲಾವಿದರಿಗೆ ರಂಗ ಸನ್ಮಾನ, ಗದಗ ಜಿಲ್ಲೆ ಹೊಳೆಆಲೂರಿನ ಜ್ಞಾನ ಸಿಂಧೂ ಅಂಧ ವಸತಿ ಶಾಲೆ ಮಕ್ಕಳ ಯೋಗ, ಮಲ್ಲಕಂಬ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತಿ ಡಾ.ಎಂ.ಪ್ರಸನ್ನಕುಮಾರ ಮಾತನಾಡಿ, ಕಲೆಯ ಉಸಿರಾಟ ಆನಂದದಾಯಕವಾದುದು. ರಂಗಭೂಮಿಯ ಭವಿಷ್ಯದ ಬಗೆಗೆ ಯೋಜನೆ ಯೋಚನೆ ಬೇಕಾಗಿದೆ. ರಂಗ ಕಲೆಯನ್ನು ಮಕ್ಕಳು ಯುವಕರಲ್ಲಿ ಬಿತ್ತಿ ಬೆಳೆಯುವ ಅಗತ್ಯ ಇದೆ ಎಂದರು.

ಯುವ ರಂಗ ನಿರ್ದೇಶಕ ಸಂತೋಷ ಸಂಕೊಳ್ಳಿ, ಗಜಾನನ ಯುವಕ ಮಂಡಳದ ಅಧ್ಯಕ್ಷ ಪ್ರಭು ಗುರಪ್ಪನವರ ಮಾತನಾಡಿದರು.

ಸಾಹಿತಿ ಪ್ರೊ.ಮಾರುತಿ ಶಿಡ್ಲಾಪೂರ, ಕಾಂತಪ್ಪ ಹಿತ್ತಲಮನಿ, ಶಂಭು ಬಣಕಾರ, ಸಿದ್ಧಪ್ಪ ಅಂಬಿಗೇರ, ಗದಗ ಜಿಲ್ಲೆ ಹೊಳೆಆಲೂರಿನ ಜ್ಞಾನ ಸಿಂಧೂ ಅಂಧ ವಸತಿ ಶಾಲೆಯ ಸಂಸ್ಥಾಪಕಿ ತುಳಸಮ್ಮ ನೀರುಪಾದೆಪ್ಪ ಕೆಲೂರ ವೇದಿಕೆಯಲ್ಲಿದ್ದರು.

ಗದಗ ಜಿಲ್ಲೆಯ ಕೊಂಚಿಗೇರಿ ರಂಗಕರ್ಮಿ ಅಶೋಕ ಬಡಿಗೇರ, ಹಾನಗಲ್ಲ ತಾಲೂಕು ಕಲಕೇರಿಯ ದೊಡ್ಡಾಟ ಕಲಾವಿದ ನಾಗರಾಜ ಚನ್ನಬಸಪ್ಪ ಪೂಜಾರ, ಉಡುಪಿಯ ರಂಗ ನಟಿ ನಿರ್ದೇಶಕಿ ರೇವತಿರಾಮ ಕುಂದನಾಡು, ನದಿನೀರಲಗಿಯ ಯುವ ಕಲಾವಿದ ಸಂಪೂರ್ಣ ಡಂಬರಮತ್ತೂರ ಅವರಿಗೆ ರಂಗ ಸಮ್ಮಾನ ನೀಡಲಾಯಿತು.

ಗದಗ ಜಿಲ್ಲೆ ಹೊಳೆಆಲೂರಿನ ಜ್ಞಾನ ಸಿಂಧೂ ಅಂಧ ವಸತಿ ಶಾಲೆ ಮಕ್ಕಳು ಪ್ರಾರ್ಥಿಸಿದರು. ಜಮೀರ ಪಠಾಣ ಸ್ವಾಗತಿಸಿ, ಸಿದ್ಧಪ್ಪ ಕೊಂಡೋಜಿ ನಿರೂಪಿಸಿದರು. ಗದಗ ಜಿಲ್ಲೆ ಹೊಳೆಆಲೂರಿನ ಜ್ಞಾನ ಸಿಂಧೂ ಅಂಧ ವಸತಿ ಶಾಲೆ ಮಕ್ಕಳಿಂದ ಯೋಗ ಹಾಗೂ ಮಲ್ಲಕಂಬ ಪ್ರದರ್ಶನ ನಡೆಯಿತು.



ಗಿಡ, ಮರ ಬೆಳೆಸಿ ಪರಿಸರ ಉಳಿಸಿ



ಬ್ಯಾಡಗಿ: ಜಾಗತಿಕ ತಾಪಮಾನ ದಿನದಿಂದ ದಿನಕ್ಕೆ ಬಿಸಿಲಿನ ಬೇಗೆ ಹೆಚ್ಚುತ್ತಲಿದ್ದು, ನೀರಿಲ್ಲದೆ ಪ್ರಾಣಿ ಪಕ್ಷಿಗಳು ಗಿಡಮರಗಳು ಕಡಿಮೆಯಾಗುತಿದೆ. ಹೀಗೆ ಮುಂದುವರೆದರೆ ಮುಂದಿನ ಪೀಳಿಗೆಯ ಸುಡುವರಣ ಬಿಸಿಲಿಗೆ ಭಯಾನಕ ಕಾಯಿಲೆಯಿಂದ ಬಳಲುತ್ತಾರೆ ಎಂದು ಪರಿಸರ ಸ್ನೇಹ ಬಳಗದ ಅಧ್ಯಕ್ಷಯ ಮೋಹನ್ ಕುಮಾರ್ ಹುಲ್ಲತ್ತಿ ಅಭಿಪ್ರಾಯಪಟ್ಟರು.

ಪಟ್ಟಣದ ಬೆಟ್ಟದ ಮಲ್ಲೇಶ್ವರ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಪರಿಸರ ಸ್ನೇಹಿ ಬಳಗದಿಂದ ಪ್ರತಿಯೊಬ್ಬರು ಏಪ್ರಿಲ್ ಫೂಲ್ ಮಾಡಿ ಮೂರ್ಖರನ್ನಾಗಿಸುವುದಕ್ಕಿಂತ ಗಿಡಗಳನ್ನು ಹಚ್ಚಿ ಏಪ್ರಿಲ್ ಕೂಲ್ ಮಾಡುವ ಉದ್ದೇಶದಿಂದ ಶಾಲೆಯಲ್ಲಿ ಇಂದು ಪರಿಸರ ಸ್ನೇಹಿ ಬಳಗ ಹಾಗೂ ಶಾಲೆ ಶಿಕ್ಷಕರೊಂದಿಗೆ ಗಿಡವನ್ನು ನೆಡುವ ಮೂಲಕ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ಎರಡೆರಡು ಗಿಡಗಳನ್ನು ನೆಟ್ಟು ಪರಿಸರವನ್ನು ಬೆಳೆಸಬೇಕು ಇದರಿಂದ ಮುಂದಿನ ಪೀಳಿಗೆ ರಣಬಿಸಿಲಿನಲ್ಲಿ ಸುಡುವ ಪರಿಸ್ಥಿತಿ ಬರುವುದಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಕುದುರಿಹಾಳಮಠ, ನಿಂಗರಾಜ ಹರ್ಲಾಪುರ, ಆರ್.ಎಮ್.ಪಾಟೀಲ, ಕೆ.ಬಿ.ದೊಡ್ಡಮನಿ, ಎಸ್.ಜಿ. ಕೋಟಿ, ರೇಣುಕಾ, ವಿದ್ಯಾರ್ಥಿಗಳಾದ ದೀಕ್ಷಾ ಹರ್ಲಾಪುರ, ತೇಜಸ್ ರಾವಳ, ಭರತ ದೂಡ್ಡಮನಿ, ತೇಜರಾಜ, ಶ್ರೀನಿವಾಸ, ಜ್ಯೋತಿ, ಕೃತಿಕಾ, ಸಾನಿಯಾ, ಆಪಿಯಾ, ಪವಿತ್ರಾ, ಪ್ರಾರ್ಥನಾ ಮುಂತಾದ ವಿದ್ಯಾರ್ಥಿಗಳು ಇದ್ದರು.

ಕೇಂದ್ರದಲ್ಲಿ ಅನುದಾನ ಹಂಚಿಕೆ ನೀತಿ ಬದಲಾಗಲಿ: ಶ್ರೀನಿವಾಸ ಮಾನೆ



ಹಾನಗಲ್: ರಾಜ್ಯ ಅಭಿವೃದ್ಧಿ ಹೊಂದಬೇಕಾದರೆ ಕೇಂದ್ರ ಸರ್ಕಾರದ ಅನುದಾನ ಹಂಚಿಕೆಯ ನೀತಿ ಬದಲಾಗಬೇಕು. ಜಿಎಸ್‌ಟಿ ರೂಪದಲ್ಲಿ ಸಂಗ್ರಹಿಸಿದ ತೆರಿಗೆ ಹಣದಲ್ಲಿ ಅರ್ಧವನ್ನಾದರೂ ಮರಳಿ ರಾಜ್ಯಕ್ಕೆ ನೀಡುವಂತಾಗಬೇಕು. ಇಲ್ಲವೇ ನಮ್ಮ ರಾಜ್ಯದ ಆದಾಯವನ್ನು ನಮಗೆ ಬಿಟ್ಟುಕೊಡಬೇಕು ಎಂದು ಶಾಸಕ ಶ್ರೀನಿವಾಸ ಮಾನೆ ಒತ್ತಾಯಿಸಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಸರ್ಕಾರ ಜನಸಂಖ್ಯೆ ಆಧಾರದಲ್ಲಿ ಅನುದಾನ ಹಂಚಿಕೆ ಮಾಡುತ್ತಿದೆ. ಜನಸಂಖ್ಯೆ ನಿಯಂತ್ರಣಕ್ಕೆ ವಿಶೇಷ ಗಮನ ನೀಡಿರುವ ದಕ್ಷಿಣ ಭಾರತದ ರಾಜ್ಯಗಳಿಗೆ ಕೇಂದ್ರ ಸರ್ಕಾರದ ಅನುದಾನ ಹಂಚಿಕೆ ನೀತಿಯಿಂದ ಭಾರಿ ಅನ್ಯಾಯವಾಗುತ್ತಿದೆ. ಉತ್ತರದ ರಾಜ್ಯಗಳು ಕಟ್ಟುವ ತೆರಿಗೆಗಿಂತಲೂ ಹೆಚ್ಚು ಹಣ ಪಡೆಯುತ್ತಿವೆ ಎಂದರು.

ದೇಶದಲ್ಲಿ ಜಿಎಸ್‌ಟಿ ಜಾರಿಗೆ ಬಂದ ಬಳಿಕ ಕೇಂದ್ರ ಸರ್ಕಾರದ ಆದಾಯ ಗಣನೀಯವಾಗಿ ಹೆಚ್ಚಿದೆ. ಬೇರೆ ಬೇರೆ ವಿಭಾಗದಲ್ಲಿ ಬರದೇ ಇರುವ ಆದಾಯವೂ ಕೇಂದ್ರದ ಬೊಕ್ಕಸಕ್ಕೆ ಸಂಗ್ರಹವಾಗುತ್ತಿದೆ. ಹೀಗಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಅಭಿವೃದ್ಧಿ, ಮೂಲಸೌಲಭ್ಯ ಹೆಚ್ಚಿಸುವ ದೃಷ್ಟಿಯಲ್ಲಿ ರಾಜ್ಯಗಳತ್ತ ಕಣ್ತೆರೆದು ನೋಡಬೇಕಿದೆ ಎಂದರು.

ಕಳೆದ ವರ್ಷ ಗ್ರಾಪಂ, ತಾಪಂ, ಜಿಪಂ, ಪುರಸಭೆ ಸೇರಿದಂತೆ ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರದ 15 ನೇ ಹಣಕಾಸು ಯೋಜನೆಯ ಅನುದಾನ ಬಿಡುಗಡೆಯಾಗದ ಕಾರಣ ಆರ್ಥಿಕ ಸಂಕಷ್ಟ ಎದುರಾಗಿದೆ. ರಾಜ್ಯದಲ್ಲಿನ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಿಗೆ ಕೇಂದ್ರ ಸರ್ಕಾರ ನೀಡಬೇಕಿದ್ದ 23 ಸಾವಿರ ಕೋಟಿ ರೂ. ಹಣವನ್ನು ರಾಜ್ಯ ಸರ್ಕಾರವೇ ಭರಿಸಿದೆ. ಕಳೆದ ಬಾರಿ ರಾಜ್ಯಕ್ಕೆ ಸಿಗಬೇಕಿದ್ದ ಬರ ಪರಿಹಾರ ಹಣವನ್ನು ಕೋರ್ಟ್ ಮೊರೆ ಹೋಗಿ ಪಡೆಯುವಂತಾಯಿತು. ನ್ಯಾಯಯುತ ಅನುದಾನಕ್ಕೂ ಸಹ ಕೋರ್ಟ್ ಮೊರೆ ಹೋಗುವಂಥ ಅನಿವಾರ್ಯತೆ ನೆಲೆಯೂರಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಮಾನೆ ಭೂಮಿಪೂಜೆ

ಹಾನಗಲ್ಲ: ಅಗತ್ಯ ದಿನಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಬಸವಳಿದಿದ್ದ ಜನಸಾಮಾನ್ಯರ ನೆರವಿಗೆ ಧಾವಿಸಲು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಸಾರ್ವತ್ರಿಕ ಮೂಲ ಆದಾಯ ಪರಿಕಲ್ಪನೆಗಳಾದ ಗ್ಯಾರಂಟಿ ಯೋಜನೆಗಳ ಮೂಲಕ ಜನರಿಗೆ ಆರ್ಥಿಕ ಸುಭದ್ರತೆ ಮತ್ತು ಸಾಮಾಜಿಕ ಸುಸ್ಥಿರತೆ ಒದಗಿಸುವುದಕ್ಕೆ ಆದ್ಯತೆ ನೀಡಲಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಕೂಡಲ ಗ್ರಾಮದಲ್ಲಿ 2025-26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ 20 ಲಕ್ಷ ರೂ. ವೆಚ್ಚದಲ್ಲಿ ಸಿಸಿರಸ್ತೆ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದ ಅವರು, ಪ್ರಸಕ್ತ ಸಾಲಿನಲ್ಲಿ ತಾಲೂಕಿಗೆ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ 50 ಕೋಟಿ ರೂ. ಅನುದಾನ ಲಭಿಸಿದ್ದು, ಮತ್ತೀಗ 25 ಕೋಟಿ ರೂ. ಲಭಿಸಲಿದೆ. ಅನುದಾನ ಬಿಡುಗಡೆಯಾಗುತ್ತಿದ್ದಂತೆಯೇ ಆಯಾ ಗ್ರಾಮಗಳ ಮುಖಂಡರು, ಸಾರ್ವಜನಿಕರ ಅಭಿಪ್ರಾಯ ಆಧರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಸಾರ್ವಜನಿಕರ ಹಿತದೃಷ್ಟಿಯಿಂದ ತುರ್ತು ಅಗತ್ಯವಿರುವ ಕಾಮಗಾರಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ ಎಂದರು.



ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ಮರಗಡಿ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಮುಖಂಡರಾದ ಫಕ್ಕಿರೇಶ ಮಾವಿನಮರದ, ಸುರೇಶ ಸೊಪ್ಪಿನ, ಪ್ರಭು ಬಮ್ಮಣ್ಣನವರ, ಮಲ್ಲಿಕಾರ್ಜುನ ಕರ್ಜಗಿ, ಬಾಲರಾಜ್ ವಾಲ್ಮೀಕಿ, ವೀರೇಶ ಬಡಿಗೇರ, ಶಂಕ್ರಪ್ಪ ಹರವಿ, ಅಶೋಕ ಗುಡ್ಡಪ್ಪನವರ, ಕಲವೀರಪ್ಪ ಕಲ್ಮನಿ, ಆದರ್ಶ ಶೆಟ್ಟಿ, ರವಿ ದೇಶಪಾಂಡೆ, ಪುಟ್ಟಪ್ಪ ನರೇಗಲ್, ಅಶೋಕ ಹಲಸೂರ, ಬಸನಗೌಡ ಪಾಟೀಲ ಸೇರಿದಂತೆ ಹಲವರು ಇದ್ದರು.

ಸಂಭ್ರಮದ ಹನುಮ ಜಯಂತಿ ಆಚರಣೆ

ಹಾವೇರಿ: ನಗರ ಸೇರಿದಂತೆ ಜಿಲ್ಲಾದ್ಯಂತ ಹನುಮ ಜಯಂತಿ ಅಂಗವಾಗಿ ಬುಧವಾರ ಮತ್ತು ಗುರುವಾರ ಎರಡು ದಿನಗಳ ಕಾಲ ಶ್ರೀ ಆಂಜನೇಯ ದೇವಸ್ಥಾನಗಳಲ್ಲಿ ವಾಯುಪುತ್ರ ಆಂಜನೇಯಸ್ವಾಮಿಗೆ ವಿವಿಧ ಪೂಜಾ ಕೈಂಕರ್ಯಗಳು ಅತ್ಯಂತ ಸಡಗರ ಸಂಭ್ರಮದಿಂದ ಜರುಗಿದವು.

ನೂರಾರು ವರ್ಷಗಳ ಇತಿಹಾಸ ಹೊಂದಿರುವ ನಗರದ ತೇರುಬೀದಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಈ ಬಾರಿ ಬುಧವಾರವೇ ಬೆಳಗ್ಗೆ ಪಂಚಾಂಗದ ಪ್ರಕಾರ ದವನದ ಹುಣ್ಣಿಮೆ ಹಿನ್ನೆಲೆ ಹನುಮ ಜಯಂತ್ಯುತ್ಸವವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಬೆಳಗ್ಗೆ 7.30ರಿಂದ 9 ಗಂಟೆಯವರೆಗೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಅಭಿಷೇಕ, ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ಕಂಕಣಧಾರಣೆ, ಮಹಾ ಮಂಗಳಾರತಿ ಸೇರಿದಂತೆ ಇನ್ನಿತರ ಪೂಜಾ ಕಾರ್ಯಕ್ರಮಗಳು ನೆರವೇರಿದವು. ಸಂಜೆ ವೇಳೆ ಅಷ್ಟಾವಧಾನ, ಮಹಾ ಮಂಗಳಾರತಿ ಕಾರ್ಯಗಳು ಜರುಗಿದವು.



ಹನುಮಂತ ದೇವರಿಗೆ ದಾಸವಾಳ, ಸುಗಂಧ, ಸೇವಂತಿಗೆ, ಮಲ್ಲಿಗೆ, ಚೆಂಡುಹೂವು ಸೇರಿದಂತೆ ತರಹೇವಾರಿ ಹೂವುಗಳಿಂದ ಹಾಗೂ ಮಾವಿನ ತಳಿರು ತೋರಣಗಳಿಂದ ಪುಷ್ಪಾಲಂಕಾರ ಸೇವೆಯನ್ನು ಮಾಡಲಾಯಿತು. ಬಳಿಕ 8 ಕೆ.ಜಿ ಬೆಣ್ಣೆಯಿಂದ ಆಂಜನೇಯ ಮೂರ್ತಿಗೆ ಬೆಣ್ಣೆ ಅಲಂಕಾರ ಮಾಡಿದ್ದು ವಿಶೇಷವಾಗಿತ್ತು. ಅರ್ಚಕ ವಿಜಯೇಂದ್ರ ಧೀರೇಂದ್ರಾಚಾರ ಮಹಾಜನ್ ಕುಟುಂಬಸ್ಥರು, ಗಲಗಲಿ ಕುಟುಂಬಸ್ಥರು, ಪಾಟೀಲ ಬಂಧುಗಳು ಹನುಮ ಜಯಂತಿ ನಿಮಿತ್ತ ಎಲ್ಲಾ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು.

ದರ್ಶನ ಪಡೆದ ಭಕ್ತರು : ಹನುಮ ಜಯಂತಿಯನ್ನು ಈ ಬಾರಿ ಎರಡು ದಿನ ಆಚರಣೆ ಮಾಡಿರುವುದರಿಂದ ಎರಡು ದಿನಗಳ ಕಾಲ ಬೆಳಗ್ಗೆಯಿಂದ ನೂರಾರು ಸಂಖ್ಯೆಯಲ್ಲಿ ಆಂಜನೇಯಸ್ವಾಮಿ ಭಕ್ತರು ದೇವಸ್ಥಾನಕ್ಕೆ ತಂಡೋಪತಂಡವಾಗಿ ಆಗಮಿಸಿ ದೇವರ ದರ್ಶನವನ್ನು ಪಡೆದುಕೊಂಡರು. ಹಣ್ಣು ಕಾಯಿ ನೈವೇದ್ಯವನ್ನು ಸಮರ್ಪಣೆ ಮಾಡುತ್ತಿರುವುದು ಸಾಮಾನ್ಯವಾಗಿತ್ತು. ಹನುಮನ ಮಂತ್ರಪಠಣೆ, ಜಯ ಜಯ ರಾಮ್ ಜಯ ಜಯ ಹನುಮಾನ್, ಹನುಮಾನ್ ಚಾಲೀಸ, ಆಂಜನೇಯ ಸ್ತುತಿ ಹೀಗೆ ಮಂತ್ರಗಳ ಜಪ ಮಾಡುತ್ತಾ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿ ಬೇಡಿದ ವರವನ್ನು ದಯಪಾಲಿಸಲೆಂದು ಅರಿಕೆ ಮಾಡಿಕೊಳ್ಳುತ್ತಿದ್ದ ದೃಶ್ಯಗಳು ಕಂಡುಬಂದವು. ಇದೇ ಸಂದರ್ಭದಲ್ಲಿ ಭಕ್ತರಿಗೆ ಅಲ್ಪಪ್ರಸಾದವನ್ನು ವಿತರಿಸಲಾಯಿತು.

ಎಲ್ಲೆಡೆ ಹನುಮನ ಜಪ: ನಗರದ ರಾಜೇಂದ್ರನಗರದ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಕುಂಕುಮ ಪೂಜೆ ನೆರವೇರಿಸಲಾಯಿತು. ಜೊತೆಗೆ ಬಾಲ ಆಂಜನೇಯ ಸ್ವಾಮಿ ತೊಟ್ಟಿಲೋತ್ಸವ ಜರುಗಿತು. ಪಿಡಬ್ಲ್ಯುಡಿ ಕ್ವಾಟ್ರಸ್‌ನಲ್ಲಿರುವ ಮಾರುತಿ ದೇವಸ್ಥಾನದಲ್ಲಿಯೂ ಸಹ ವಿಶೇಷ ಪೂಜೆ ಸಲ್ಲಿಸಿ, ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು. ಇನ್ನೂ ಗ್ರಾಮೀಣ ಪ್ರದೇಶದ ಹಲವೆಡೆ ಗುರುವಾರ ದಿವಸ ಆಂಜನೇಯಸ್ವಾಮಿ ದೇವಸ್ಥಾನಗಳಲ್ಲಿ ಕುಂಕುಮ ಪೂಜೆ, ವೀಳ್ಯದೆಲೆ ಪೂಜೆ, ಗೋಪಾಳ ಪೂಜೆ ಸೇರಿದಂತೆ ಇನ್ನಿತರ ವಿಶೇಷ ಪೂಜೆಗಳು ಜರುಗಿದವು. ಕೆಲವಡೆ ಪಲ್ಲಕ್ಕಿ ಉತ್ಸವ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮಗಳು ಜರುಗಿದವು.

> ಪಂಚಾಂಗದ ಪ್ರಕಾರ ಬುಧವಾರವೇ ದವನದ ಹುಣ್ಣಿಮೆ ತಿಥಿ ಕೂಡಿ ಬಂದಿರುವುದರಿಂದ ಎಲ್ಲ ಕಡೆಗೆ ಬುಧವಾರ ಹನುಮ ಜಯಂತಿ ಮಾಡಲಾಗಿದೆ. ನಗರದ ಜನತೆಯೂ ದೇವರ ದರ್ಶನ ಮಾಡಿದ್ದಾರೆ. ಹುಣ್ಣಿಮೆ ದಿನವಾದ ಗುರುವಾರ ಗ್ರಾಮೀಣ ಭಾಗದ ಜನರು ಬಂದು ಆಶೀರ್ವಾದ ಪಡೆಯುತ್ತಿದ್ದಾರೆ.
>
> ■ ಧೀರೇಂದ್ರ, ಕುಲಕರ್ಣಿ, ಅರ್ಚಕರು

ಗುಡ್ಡ ಅತಿಕ್ರಮಣ ತೆರವಿಗೆ ವಾರದ ಗಡುವು

ಹಾನಗಲ್ಲ: ಹಾನಗಲ್ಲ ತಾಲೂಕು ಬೆಳಗಾಲಪೇಟೆ ಪಕ್ಕದ ಹುಲ್ಲುಗಾವಲು ಗುಡ್ಡದಲ್ಲಿ ಅನಧಿಕೃತವಾಗಿ ಧರ್ಮದ ಹೆಸರಿನಲ್ಲಿ ಅತಿಕ್ರಮಣಕ್ಕೆ ಅವಕಾಶ ಮಾಡಿಕೊಟ್ಟಿರುವ ಆಡಳಿತ ವ್ಯವಸ್ಥೆಯ ವಿರುದ್ಧ ಹಾನಗಲ್ಲಿನ ಹಿಂದೂ ಜಾಗರಣ ವೇದಿಕೆ ಪ್ರತಿಭಟನೆ ನಡೆಸಿ, ತೆರವಿಗೆ ಒಂದು ವಾರದ ಗಡುವು ನೀಡಿದೆ.

ಬುಧವಾರ ಪಟ್ಟಣದ ಮಹಾತ್ಮಾಗಾಂಧಿ ವೃತ್ತದಿಂದ ತಹಶೀಲ್ದಾರ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ತಾಲೂಕು ತಹಶೀಲ್ದಾರ ಕಚೇರಿಯಲ್ಲಿ ತಹಶೀಲ್ದಾರ ಎಸ್. ರೇಣುಕಾ ಅವರಿಗೆ ಮನವಿ ಸಲ್ಲಿಸಿದರು.

ಸಾಮಾಜಿಕ ಕಾರ್ಯಕರ್ತ ಪ್ರಶಾಂತ ಮುಚ್ಚಂಡಿ ಮಾತನಾಡಿ, ಬೆಳಗಾಲಪೇಟೆಯ ಬೆಳಗಾಲ ಗುಡ್ಡದಲ್ಲಿ ಒಂದು ಧರ್ಮಕ್ಕೆ ಸೇರಿದವರು ಅನಧಿಕೃವಾಗಿ ಕಟ್ಟಡ ಕಟ್ಟಿ, ಕೊಳವೆಬಾವಿ, ಅನಧಿಕೃತವಾಗಿ ವಿದ್ಯುತ್ ಸಂಪರ್ಕವನ್ನು ಕೂಡ ಹೊಂದಿದ್ದು, ಇದು ತಮ್ಮದೇ ಆಸ್ತಿ ಎಂದು ವಹಿವಾಟು ಮಾಡುತ್ತಿರುವುದು ತಾಲೂಕು ಆಡಳಿತಕ್ಕೆ ತಿಳಿದಿದ್ದರೂ ಉದ್ದೇಶಪೂರ್ವಕ ನಡುವಳಿಕೆಯಾಗಿದೆ. ಪುರಸಭೆ, ಹೆಸ್ಕಾಂ ಸೇರಿದಂತೆ ತಾಲೂಕು ಆಡಳಿತದ ಮೌನದ ಹಿಂದೆ ಉದ್ದೇಶಪೂರ್ವಕ ನಿರ್ಣಯವೇ ಇದ್ದಂತಿದೆ. ಕೂಡಲೇ ಇದನ್ನು ತೆರವುಗೊಳಿಸಿ ಹುಲ್ಲುಗಾವಲಾಗಿಯೇ ಉಳಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಹಿಂದೂ ಜಾಗರಣೆ ವೇದಿಕೆ ತಾಲೂಕು ಅಧ್ಯಕ್ಷ ಹರೀಶ ಹಾನಗಲ್ಲ, ಮುಖಂಡ ರವಿ ಪುರೋಹಿತ ಮಾತನಾಡಿದರು.



ತಹಶೀಲ್ದಾರ ಎಸ್.ರೇಣುಕಾ ಪ್ರತಿಭಟನಾಕಾರರಿಗೆ ಗಡುವಿನೊಳಗೆ ಈ ಅನಧಿಕೃತ ಕಟ್ಟಡದ ಬಗೆಗೆ ಪರಿಶೀಲಿಸಿ, ಸಂಬಂಧಿಸಿದ ಅಧಿಕಾರಿಗಳ ಜೊತೆಗೆ ಚರ್ಚಿಸಿ, ಜಿಲ್ಲಾಧಿಕಾರಿಗಳ ಮಾರ್ಗದರ್ಶನ ಪಡೆದು ಸೂಕ್ತ ಕ್ರಮ ಜರುಗಿಸಲಾಗುತ್ತದೆ. ಪ್ರತಿಭಟನೆ ಕೈಬಿಡುವಂತೆ ಕೋರಿದರು. ಅಧಿಕಾರಿಗಳಾದ ಪುರಸಭೆ ಮುಖ್ಯಾಧಿಕಾರಿ ವೈ.ಕೆ.ಜಗದೀಶ, ಹೆಸ್ಕಾಂ ಎಇಇ ವಿ.ಎಸ್.ಮರಿಗೌಡರ, ಪಿಎಸ್‌ಐ ಸಂಪತ್ ಅನಿಕಿವಿ ಇದ್ದರು. ಪ್ರತಿಭಟನೆಯಲ್ಲಿ ಮುಖಂಡರಾದ ಸಿದ್ದಲಿಂಗಪ್ಪ ಕಮಡೊಳ್ಳಿ, ಹರೀಶ ಹಾನಗಲ್ಲ, ನಿಖಿತ ಹದಳಗಿ, ನಾಗರಾಜ ಹೆಬ್ಬಾರ, ಶಿವನಾಗ ನೀರಲಗಿ, ಹರೀಶ ತಳವಾರ, ಸಚಿನ ರಾಮಣ್ಣನವರ, ರವಿ ನೆಗಳೂರ, ಬಸವರಾಜ ಹಾದಿಮನಿ, ಮನೋಜ ಕಲಾಲ, ಬಸವರಾಜ ಮಟ್ಟಿಮನಿ, ಮನೋಜ ಆಲದಕಟ್ಟಿ, ಗುರುರಾಜ ಆರೇರ, ಶಾಂತವೀರ ನೆಲೋಗಲ್ಲ, ಜಯಲಿಂಗಪ್ಪ ಹಳಕೊಪ್ಪ, ಮೌನೇಶ ಮೆಳ್ಳಾಗಟ್ಟಿ, ನೀಸ್ಲೀಮಗೌಡ ಪಾಟೀಲ, ಪಂಚಾಕ್ಷರಿ ಮೆಣಸಿನಕಾಯಿ, ಜಗದೀಶ ಮೆಣಸಿನಕಾಯಿ, ಹಿಂದು ಜಾಗರಣ ವೇದಿಕೆ ಕಾರ್ಯಕರ್ತರು ಇದ್ದರು.

ಕಿರು ಸುದ್ದಿ



ಗೋಕಾಕ: ತಾಲೂಕಿನ ಬೆಟಗೇರಿ ಗ್ರಾಮದಲ್ಲಿರುವ ಭಕ್ತರ ಇಷ್ಟಾರ್ಥ ಪೂರೈಸುವ ಜಾಗೃತ ಶ್ರೀ ಹನುಮಂತ ದೇವರಿಗೆ ಶ್ರೀ ಹನುಮನ ಜಯಂತಿ ಅಂಗವಾಗಿ ವಿಶೇಷ ಪೂಜೆ ನೆರವೇರಿಸಲಾಯಿತು.



ಯರಗಟ್ಟಿ : ತಾಲೂಕಿನಾದ್ಯಂತ ಹನುಮ ಜಯಂತಿಯನ್ನು ಭಕ್ತಿ, ಶ್ರದ್ಧೆ ಮತ್ತು ಅದ್ದೂರಿಯಾಗಿ ಆಚರಿಸಲಾಯಿತು. ಪಟ್ಟಣದ ಕೆರೆ ಮೇಲಿನ ಆಂಜನೇಯ ಸ್ವಾಮಿ ದೇವಾಲಯಗಳಲ್ಲಿ ವಿಶೇಷ ಪೂಜೆ, ಹನುಮೋತ್ಸವ ಮೂರ್ತಿಗಳ ಮೆರವಣಿಗೆ, ಕೇಸರಿ ಬಾವುಟ, ಜೈ ಶ್ರೀರಾಮ್ ಘೋಷಣೆ, ಹಾಗೂ ಡೊಳ್ಳು ಕುಣಿತದಂತಹ ಸಾಂಸ್ಕೃತಿಕ ತಂಡಗಳೊಂದಿಗೆ ಹಬ್ಬದ ಸಂಭ್ರಮ ಮುಗಿಲು ಮುಟ್ಟಿತು. ನಂತರ ಮಹಾ ಅನ್ನಸಂತರ್ಪಣೆಯಲ್ಲಿ ಸಾವಿರಾರು ಜನ ಪಾಲ್ಗೊಂಡಿದ್ದರು.

ಏ.14ರಂದು ಅಂಬೇಡ್ಕರ್ ಜನ್ಮ ದಿನಾಚರಣೆ

◆ **ಬೆಳಗಾವಿ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಬೆಳಗಾವಿ ಸಹಯೋಗದಲ್ಲಿ ಡಾ.ಬಾಬಾಸಾಹೇಬ ಅಂಬೇಡ್ಕರ ರವರ 135ನೇ ಜನ್ಮ ದಿನಾಚರಣೆ ಅಂಗವಾಗಿ ಏ.14ರಂದು ಬೆಳಗ್ಗೆ 10ಕ್ಕೆ ಡಾ.ಬಾಬಾಸಾಹೇಬ ಅಂಬೇಡ್ಕರ ಉದ್ಯಾನವನದಲ್ಲಿ ಅಂಬೇಡ್ಕರವರ ಭಾವಚಿತ್ರಕ್ಕೆ ಪೂಜೆ, 12 ಗಂಟೆಗೆ ಡಾ.ಬಾಬಾಸಾಹೇಬ ಅಂಬೇಡ್ಕರ ವೃತ್ತದಿಂದ ಅಂಬೇಡ್ಕರ ಉದ್ಯಾನವನ ವರೆಗೆ ಮೆರವಣಿಗೆ ಜರುಗಲಿದೆ. 3 ಗಂಟೆಗೆ ಡಾ.ಬಾಬಾಸಾಹೇಬ ಅಂಬೇಡ್ಕರ ಉದ್ಯಾನವನದಲ್ಲಿ ವೇದಿಕೆ ಕಾರ್ಯಕ್ರಮ ಜರಗಲಿದೆ.ಸಚಿವ ಸತೀಶ ಜಾರಕಿಹೊಳಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶಾಸಕ ಆಸಿಫ್ ಸೇಠ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ವಿಜಯಪೂರ ಜಿಲ್ಲೆಯ ಕೂಡಗಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಮಾಜಶಾಸ್ತ್ರದ ಉಪನ್ಯಾಸಕ ಪ್ರೊ. ಬಸವರಾಜ ಜಾಲವಾದಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸರ್ಕಾರಿ ಮುಖ್ಯ ಸಚೇತಕ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ 2 ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷ ಭರಮಗೌಡ ಕಾಗೆ, ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷ ಮಹಾಂತೇಶ ಕೌಜಲಗಿ ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ. ರಾಜ್ಯ ಸಭೆ ಸಂಸದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕ ಸಭಾ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಲೋಕ ಸಭಾ ಸಂಸದರಾದ ಜಗದೀಶ್ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ. ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು

ನಿಧನ ಸುದ್ದಿ

ಜಯಶ್ರೀ ಜುಟ್ಟಿ



◆ **ಸಂಕೇಶ್ವರ :** ಸ್ಥಳೀಯ ಕೊಳೇಕರ ಗಲ್ಲಿಯ ನಿವಾಸಿಯಾದ ಜಯಶ್ರೀ ಜುಟ್ಟಿ (40) ನಿಧನರಾಗಿದ್ದಾರೆ. ಮೃತರು ಪತಿ ಹಾಗೂ ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ: ರಾಮತೀರ್ಥ ನಗರ ರಹವಾಸಿಗಳಿಂದ ಕಣಬರ್ಗಿಯ ಕೆರೆ ರಸ್ತೆಯ ಶ್ರೀ ಹನುಮಾನ ಮಂದಿರದಲ್ಲಿ ಶ್ರೀ ಹನುಮಾನ ಜಯಂತಿಯನ್ನು ಸಂಭ್ರಮ ದಿಂದ ಆಚರಿಸಲಾಯಿತು. ಬಳಿಕ, ಹನುಮಾನ ಜಯಂತಿ ಪ್ರಯುಕ್ತ ಮುತ್ತೈದೆಯರಿಂದ ತೋಟಿಲೋತ್ಸವವನ್ನು, ಕುಂಭ ಮೇಳ ಮೂಲಕ ಶ್ರೀ ಗಣೇಶ ಮಂದಿರ ಸರ್ಕಲದಿಂದ ಮೆರವಣಿಗೆ ನಡೆಸಲಾಯಿತು. ಮಂದಿರದಲ್ಲಿ ಗಣ ಹೋಮ , ನವಗ್ರಹ ಹೋಮ ಮಾಡಿ ಭಕ್ತಿಯಿಂದ ಬೇಡಿಕೊಂಡ ಭಕ್ತಾಧಿಗಳು.

ಎಲ್ಲರೂ ಬಾಯಿ ಸ್ವಾಸ್ಥ್ಯ ಕಾಪಾಡಿಕೊಳ್ಳಿ

◆ **ಬೆಳಗಾವಿ:** ದೇಹದ ಸಂಪೂರ್ಣ ಆರೋಗ್ಯಕ್ಕೆ ನಮ್ಮ ಬಾಯಿಯ ಸ್ವಾಸ್ಥ್ಯ ಅತೀ ಮುಖ್ಯ ಎಂದು ನಗರದ ದಂತ ವೈದ್ಯೆ ಡಾ. ಹೇಮಲತಾ ಹೇಳಿದರು.

ಗುರುವಾರ ನಗರದ ಅನಗೋಳ ಬ್ರಹ್ಮಕುಮಾರಿ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ದಂತ ಹಾಗೂ ಬಾಯಿಯ ಆರೋಗ್ಯ ಕುರಿತ ತಪಾಸಣಾ ಶಿಬಿರದಲ್ಲಿ ಮಾತನಾಡಿ, ಜೀರ್ಣಾಂಗ ವ್ಯವಸ್ಥೆಯಲ್ಲಿ ಬಾಯಿ ಹಾಗೂ ದಂತಪಂಕ್ತಿ ಮುಖ್ಯವಾಗಿದೆ. ಬಾಯಿಯ ಆರೋಗ್ಯದ ಮೇಲೆ ಇಡೀ ದೇಹದ ಆರೋಗ್ಯ ನೆಲೆ ನಿಂತಿದೆ. ಬಾಯಿ ಸ್ವಚ್ಛವಾಗಿಟ್ಟುಕೊಳ್ಳಲು ಸಾಕಷ್ಟು ಶ್ರಮವಪಡಬೇಕು ಎಂದು ಕರೆ ನೀಡಿದರು.

ಸಾಮಾನ್ಯ ದಂತ ಸಮಸ್ಯೆಗಳು ಹಾಗೂ ತಡೆಗಟ್ಟುವ ಉಪಾಯ ಮತ್ತು ಚಿಕಿತ್ಸೆಗಳ ಬಗೆಗೆ ಮಾಹಿತಿ ನೀಡಿದರು.

ಬ್ರಹ್ಮಕುಮಾರೀಸ್ ಅನಗೋಳ ಶಾಖಾ ಮುಖ್ಯ ಸಂಚಾಲಕಿ ಬಿ.ಕೆ. ವಿದ್ಯಾ ದೀದಿ ಮಾತನಾಡಿ, ಆರೋಗ್ಯವಾಗಿರಲು ಒತ್ತಡರಹಿತ ಬದುಕು, ಸದಾಚಾರ, ಸುವಿಚಾರ ಬಹುಮುಖ್ಯ. ಒಳ್ಳೆಯ ಆಹಾರ ವಿಹಾರ ಹಾಗೂ ಪ್ರಕೃತಿದತ್ತ ಜೀವನಕ್ರಮ, ಆಧ್ಯಾತ್ಮವನ್ನು ಅಳವಡಿಸಿಕೊಂಡರೆ ದೀರ್ಘಾಯುಷ್ಯದ ಸುಖ ಜೀವನ ಹೊಂದಲು ಸಾಧ್ಯ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಬ್ರಹ್ಮಕುಮಾರೀಸ್ ಪರಿವಾರದ 50ಕ್ಕೂ ಹೆಚ್ಚು ಜನರಿಗೆ ಬಾಯಿ ತಪಾಸಣೆ ನಡೆಸಲಾಯಿತು. ಬಿಕೆ ಶ್ರೀಕಾಂತ ಹಾಗೂ ಕೇಂದ್ರದ ಶ್ರದ್ಧಾಳುಗಳು ಸೇರಿದಂತೆ ಹಲವರು ಇದ್ದರು.



ಬೆಳಗಾವಿ: ನಗರದ ಅನಗೋಳ ಬ್ರಹ್ಮಕುಮಾರಿ ಕೇಂದ್ರದಲ್ಲಿ ದಂತ ಹಾಗೂ ಬಾಯಿಯ ಆರೋಗ್ಯ ಕುರಿತ ತಪಾಸಣಾ ಶಿಬಿರ ನಡೆಯಿತು.

ಸಂಭ್ರಮದ ಹನುಮ ಜಯಂತ್ಯುತ್ಸವ

◆ **ಬೆಳಗಾವಿ :** ತಾಲೂಕಿನ ಪಂತ ಬಾಳೇಕುಂದ್ರಿ ಗ್ರಾಮದಲ್ಲಿರುವ ದಕ್ಷಿಣಾಭಿಮುಖ ಹನುಮಾನ ಜಯಂತಿ ಉತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಚೈತ್ರ ಮಾಸದ ಹುಣ್ಣಿಮೆ ದಿನದಂದು ಹನುಮಂತನ ಜನ್ಮ ದಿನವನ್ನು ಆಚರಿಸಲಾಗುವುದು.



ಪ್ರತಿ ವರ್ಷದಂತೆ ಈ ವರ್ಷವೂ ಪೂಜೆ, ಬುಧವಾರ ಸಂಜೆಯಿಂದ ಹನುಮಾನ ಜಯಂತಿ ಭಕ್ತಿಯಲ್ಲಿ ಮೂಳಗಿದ ಭಕ್ತ ಸಾಗರ, ಅರ್ಚನೆ, ಸಂಜೆ ವೇಳೆ ಭಜನಾಕಾರ್ಯಕ್ರಮವನ್ನು ಆಯೋಜಿಸಲಾಯಿತು. ಗುರುವಾರ ಬೆಳಿಗ್ಗೆ ಸೂರ್ಯೋದಯಕ್ಕೆ ಪೂರ್ವವಾಗಿಯೇ ಜನ್ಮ ತೊಟ್ಟಿಲು ನಾಮಕರಣ, ಅಭಿಷೇಕ, ಹಾಗೂ ವಿಶೇಷ ಪೂಜೆಯನ್ನು ಅರ್ಚಕರುಗಳಾದ ಸುಖದೇವ ಫ. ಬಾಳೇಕುಂದ್ರಿ, ಸುರೇಶ ಯ. ಹತ್ತರವಾಡ ಅವರು ವಿಶೇಷ ಪೂಜೆಗಳನ್ನು ನೆರವೇರಿಸಿದರು.

ಬಳಿಕ ಮಧ್ಯಾಹ್ನದ ವೇಳೆ ಸಾರ್ವಜನಿಕರಿಗೆ ಮಹಾ ಪ್ರಸಾದದ ವ್ಯವಸ್ಥೆಗೆ ಪಂತ ಬಾಳೇಕಂದ್ರಿ, ಗ್ರಾಮದ ಹಿರಿಯರು ಹಾಗೂ ಜೆಡಿಎಸ್ ಯುವ ಘಟಕದ ಅಧ್ಯಕ್ಷ ಬಿ.ಎನ್ ಪಾಟೀಲ ಸೇರಿದಂತೆ ಸುತ್ತಮುತ್ತಲಿನ ಭಕ್ತಾಧಿಗಳು ಸೇರಿ ಮಹಾ ಪ್ರಸಾದಕ್ಕೆ ಚಾಲನೆ ನೀಡಿದರು.ಈ ಹನುಮಾನ ದೇವಸ್ಥಾನವು ಮೂರು ಗ್ರಾಮಗಳ ಸೀಮೆಯ ಹದ್ದಿನಲ್ಲಿದ್ದು ಬೆಳಗಾವಿ ಗ್ರಾಮೀಣ ಭಾಗದಲ್ಲಿಯೇ ಫೇಮಸ್ ಹನುಮಾನ ದೇವಸ್ಥಾನವೆಂದು ಕರೆಯಲಾಗುತ್ತದೆ. ಪ್ರತಿ ಶನಿವಾರ ಸಾವಿರಾರು ಭಕ್ತರು ದೇವಸ್ಥಾನಕ್ಕೆ ಬಂದು ಭಕ್ತಿಯಿಂದ ಬೇಡಿಕೊಳ್ಳುತ್ತಾರೆ.

ಭಕ್ತಿಯಿಂದ ಬೇಡಿಕೊಂಡವರಿಗೆ ಇಷ್ಟಾರ್ಥಗಳು ಈಡೇರುತ್ತವೆ ಎಂಬ ನಂಬಿಕೆ ಪಂತ ಬಾಳೇಕುಂದ್ರಿ ದಕ್ಷಿಣಾಭಿಮುಖ ಹನುಮಾನನ್ನು ನಂಬಿದ ಸಾವಿರಾರು ಭಕ್ತಾಧಿಗಳು ಹೇಳಿಕೊಂಡಿದ್ದಾರೆ.

ಹನುಮ ಜಯಂತಿ: ವಿಶೇಷ ಪೂಜೆ, ಅನ್ನಪ್ರಸಾದ

◆ **ಸವದತ್ತಿ:** ನಗರದಲ್ಲಿ ಗುರುವಾರ ಹನುಮ ಜಯಂತಿಯನ್ನು ಅತ್ಯಂತ ಸಡಗರ-ಸಂಭ್ರಮದಿಂದ ಆಚರಿಸಲಾಯಿತು. ಹನುಮ ಜಯಂತಿ ಅಂಗವಾಗಿ ನಗರದ ವಿವಿಧ ಹನುಮಂತ ದೇವರ ದೇವಸ್ಥಾನಗಳಲ್ಲಿ ಬೆಳಗ್ಗೆಯಿಂದಲೇ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಶ್ರೀ ಬಾಲ ಮಾರುತಿ ದೇವರ ತೊಟ್ಟಿಲೋತ್ಸವವು ಭಕ್ತರ ಸಮ್ಮುಖದಲ್ಲಿ ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿತು.

ರೇಣುಕಾ ಚಿತ್ರಮಂದಿರ ಹತ್ತಿರವಿರುವ ಹನುಮಂತ ದೇವಸ್ಥಾನ, ರಾಮಾಪುರ ಸೈಟ್ನ, ಮಾರುತಿ ದೇವಸ್ಥಾನ ಸೇರಿದಂತೆ ನಗರದ ಪ್ರಮುಖ ಮಾರುತಿ ಗುಡಿಗಳಲ್ಲಿ ದೇವರಿಗೆ ವಿಶೇಷ ಅಲಂಕಾರ ಹಾಗೂ ಮಹಾಪೂಜೆ ಮಾಡಲಾಯಿತು.

ಮಧ್ಯಾಹ್ನದ ವೇಳೆ ದೇವಸ್ಥಾನಗಳಿಗೆ ಭೇಟಿ ನೀಡಿದ ನೂರಾರು ಭಕ್ತಾದಿಗಳಿಗೆ ಅನ್ನಪ್ರಸಾದ



ವ್ಯವಸ್ಥೆ ಮಾಡಲಾಗಿತ್ತು.

ದೇವಸ್ಥಾನಗಳಲ್ಲಿ ಬೆಳಿಗ್ಗೆಯಿಂದಲೇ ಭಕ್ತರು ಸಾಲುಗಟ್ಟಿ ನಿಂತು ಆಂಜನೇಯನ ದರ್ಶನ ಪಡೆದರು. ಭಜನೆ, ಕೀರ್ತನೆಗಳ ಮೂಲಕ ಹನುಮ ನಾಮ ಸ್ಮರಣೆ ಮೊಳಗಿತು.

ಈ ಸಂದರ್ಭದಲ್ಲಿ ಶ್ರೀಶೈಲ ಸಾಲಿಮಠ, ಮಲ್ಲಿಕಾರ್ಜುನ ಬೀಳಗಿ, ಶಂಕರ ಇಜಂತರ್ಕ, ಪ್ರಕಾಶ ಆಗಾಸಿ,ಗುರು ಅಲಬನ್ನವರ, ಶ್ರೀಶೈಲ ತಿಗಡಿ,ಸಾಗರ ಬೆಳವಡಿ, ನಾಗೇಶ ಕೋರವರ, ವಿಠ್ಠಲ ಜಮಾದಾರ, ಸುನಿಲ್ ಜೋರಾಪೂರ. ಉಪಸ್ಥಿತರಿದ್ದರು

ಸುರೇಬಾನ: ಹನುಮಾನ ದೇವರಿಗೆ ನಾಮಕರಣ

◆ **ಸುರೇಬಾನ:** ಸಮೀಪದ ಮನಿಹಾಳ ಗ್ರಾಮದ ಚೌಡೇಶ್ವರಿ ದೇವಸ್ಥಾನದಲ್ಲಿ ಹನುಮ ಜಯಂತಿ ಪ್ರಯುಕ್ತ ಹನುಮಾನ ದೇವರಿಗೆ ನಾಮಕರಣ ಮಾಡಲಾಯಿತು. ಚೌಡೇಶ್ವರಿ ದೇವಸ್ಥಾನದಲ್ಲಿ ತೊಟ್ಟಿಲನ್ನು ಕಟ್ಟಿ ಗ್ರಾಮದ ಮುತ್ತೈದೆಯರು ಕೂಡಿಕೊಂಡು ವಿಜೃಂಭಣೆಯಿಂದ ಜೋಗುಳ ಹಾಡುತ್ತಾ ನಾಮಕರಣ ಮಾಡಲಾಯಿತು.ದೇವಾಂಗ ಸಮಾಜದ ಬಂಧುಗಳು ಮತ್ತು ಹಿರಿಯರು ಸಹೋದರ, ಸಹೋದರಿಯರು ಹಾಗೂ ತಾಯಂದಿರರಾದ ರತ್ನಾ ಹನುಮಂತ ದೇವಶೆಟ್ಟಿ, ಲಕ್ಷ್ಮಿ ಹನುಮಂತ ರಂಗನ್ನವರ, ಶೋಭಾ ಮಲ್ಲಪ್ಪ ಹೇಳಿಕೇರಿ, ರತ್ನವ ಕೃಷ್ಣ ಹಳ್ಳಿಕೇರಿ, ಸವಿತಾ ಗೋವಿಂದ ದೇವಶೆಟ್ಟಿ, ಗೋಪವ್ವ ತುಕಾರಾಮಪ್ಪ ಹಳ್ಳಿಕೇರಿ, ಅಶ್ವಿನಿ ರಮೇಶ್ ದೇವ ಶೆಟ್ಟಿ ಸೇರಿದಂತೆ ಮತ್ತಿತರರು ಭಾಗವಹಿಸಿದರು. ನಂತರ ಪ್ರಸಾದ ವಿತರಣೆ ಮಾಡಲಾಯಿತು.



ಹನುಮಾನ ಜಯಂತಿ: ದೀರ್ಘ ದಂಡ ನಮಸ್ಕಾರ

◆ **ಹಲ್ಯಾಳ:** ಗ್ರಾಮದಲ್ಲಿ ಅಂಜನಾದ್ರಿ ಪುತ್ರ, ಬಲಶಾಲಿ ಹನುಮಂತನ ಜನ್ಮದಿನದಂದು ಭಕ್ತರು ಉಪವಾಸವಿದ್ದು, ಮಡಿವಂತಿಕೆಯಿಂದ ದೀರ್ಘ ದಂಡ ನಮಸ್ಕಾರ ಹಾಕಿ ವಿಶೇಷ ಪೂಜೆ, ಹನುಮಾನ್ ಚಾಲೀಸಾ ಪಠನೆ ಮಾಡುತ್ತಾ ಆಂಜನೇಯನಿಗೆ ನಾಮಕರಣ ಮಾಡಿದರು.

ಹನುಮಂತನು ರಾಮನ ಪರಮ ಭಕ್ತ. ಶಕ್ತಿ, ಬುದ್ಧಿವಂತಿಕೆ ಮತ್ತು ಸಮರ್ಪಣಾ ಮನೋಭಾವದ ಸಂಕೇತವಾಗಿ ಈ ದಿನವನ್ನು ಗ್ರಾಮದ ಎಲ್ಲ ಜನರು ಜಾತಿ ಧರ್ಮ ಎನ್ನದೆ ಆಚರಿಸಲಾಗುತ್ತದೆ ಎಂದು ಪೂಜಾರಿ ರಾಮು ಗುರವ ಹೇಳಿದರು. ನಂತರ ಮುತ್ತೈದೆಯರೆಲ್ಲರೂ ಕೃಷ್ಣಾ ನದಿಗೆ ಹೋಗಿ ಪಾವನ ತೀರ್ಥ ತುಂಬಿಕೊಂಡು ಪಾದಯಾತ್ರೆ ಮುಖಾಂತರ ಕುಂಭಮೇಳದಲ್ಲಿ ಪಾಲ್ಗೊಳ್ಳುತ್ತಾರೆ. ಆಂಜನೇಯ ನ ಭಾವ ಚಿತ್ರದ ಮುಂದೆ ಕುಂಭ ಮೇಳ, ವಾದ್ಯ ಮೇಳ, ಗೊಂಬೆ ಕುಣಿತ,ಡೊಳ್ಳುಕುಣಿತ ಮಾಡುತ್ತಾ ಮೆರವಣಿಗೆಯನ್ನು ಗ್ರಾಮದ ಪ್ರಮುಖ



ಓಣಿಯುದ್ದಕ್ಕೂ ಮಾಡಿದರು. ಮೆರವಣಿಗೆ ಮುಗಿದ ನಂತರ ಭಕ್ತರಿಗೆಲ್ಲ ಪ್ರಸಾದ ಸೇವೆ ಮುಗಿಸಿ ಸಾಯಂಕಾಲ ಮನರಂಜನೆಗೆ ಸೋತು ಗೆದ್ದ ಸಾಧ್ವಿ ಎಂಬ ನಾಟಕವನ್ನು ಮಾಡಿದರು ಈ ನಾಟಕ ದಿಂದ ಯುವಕರಲ್ಲಿ ಉತ್ಸಾಹ ಹೆಚ್ಚಿತು.

ಒಟ್ಟಾರೆ ಈ ಎಲ್ಲ ಯೋಜನೆಯನ್ನು ಯುವಕರು ಯಾವ ಹಿರಿಯರಿಗೂ ಕಮ್ಮಿ ಇಲ್ಲ ಎಂಬಂತೆ ಕಾರ್ಯಗಳನ್ನ ಹಂಚಿ ಕೊಂಡು ಹನುಮ ಜಯಂತಿಯನ್ನು ಯಶಸ್ವಿಗೊಳಿಸಿದರು.



ರಾಯಬಾಗ: ಪಟ್ಟಣದ ಹನುಮಾನ ಮಂದಿರದಲ್ಲಿ ಗುರುವಾರ ಹನುಮ ಜಯಂತಿ ನಿಮಿತ್ತ ಸುಮಂಗಲಿಯರಿಂದ ಬಾಲ ಹನುಮನ ತೊಟ್ಟಿಲು ತೂಗುವ ಕಾರ್ಯಕ್ರಮ ಜರುಗಿತು. ದೇವಿಕಾ ದೇಸಾಯಿ, ಸುವರ್ಣ ಮೇತ್ರಿ, ರಾಧಿಕಾ ಪಾಟೀಲ, ಬಸಮ್ಮ ಅಂಗಡಿ, ದಿವ್ಯಾ ಶೆಟ್ಟಿ, ವಿದ್ಯಾ ಸವದತ್ತಿ, ಮಾನಸಿ ಕುಲಕರ್ಣಿ, ಭಾಗ್ಯಶ್ರೀ ಮೋದಿ, ಸರೋಜಾ ಹೊಸಮನಿ, ಸುನೀತಾ ಕುಸ್ತಿಗಾರ, ಮಂಗಲ ದಾನೋಳಿ, ಸುವರ್ಣಾ ಅನ್ವೇಕರ ಹಾಗೂ ಭಕ್ತಾದಿಗಳು ಇದ್ದರು.

ಕೆರೆ ಅಭಿವೃದ್ಧಿಗೆ ಚನ್ನರಾಜ ಹಟ್ಟಿಹೊಳಿ ಚಾಲನೆ

◆ **ಬೆಳಗಾವಿ:** ಬೆಳಗಾವಿ ಗ್ರಾಮೀಣ ಕ್ಷೇತ್ರದ ಕುಕಡೊಳ್ಳಿ ಗ್ರಾಮದ ಕೆರೆಯ ಅಭಿವೃದ್ಧಿ ಕಾಮಗಾರಿಗೆ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಭೂಮಿ ಪೂಜೆ ನೆರವೇರಿಸಿ, ಚಾಲನೆ ನೀಡಿದರು.

ಸುಮಾರು 1.27 ಕೋಟಿ ವೆಚ್ಚದಲ್ಲಿ ಈ ಕೆರೆಯ ಕಾಯಕಲ್ಪ ನಡೆಯಲಿದ್ದು, ಪ್ರಮುಖವಾಗಿ ಸ್ಟೋನ್ ಪಿಚಿಂಗ್ ಹಾಗೂ ಕಾಲುವೆ (ಕ್ಯಾನಲ್) ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಈ ಮೂಲಕ ಗ್ರಾಮದ ಜಲಮೂಲವನ್ನು ಸಂರಕ್ಷಿಸಿ, ರೈತರಿಗೆ ಹಾಗೂ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡುವುದು ನಮ್ಮ



ಗುರಿಯಾಗಿದೆ ಎಂದು ಚನ್ನರಾಜ ಹಟ್ಟಿಹೊಳಿ ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.



ವಿಜೃಂಭಣೆಯ ಕಳಸಾರೋಹಣ

◆ **ಗೋಕಾಕ:** ಇಲ್ಲಿಯ ಶ್ರೀನಗರ ಶ್ರೀ ಹನುಮಾನ ದೇವಸ್ಥಾನದ ಕಳಸಾರೋಹಣವು ಗುರುವಾರದಂದು ಅತಿ ವಿಜೃಂಭಣೆಯಿಂದ ಜರುಗಿತು. ಈ ಸಂದರ್ಭದಲ್ಲಿ ಅರಭಾಂವಿಯ ಶ್ರೀಗುರುಬಸವಲಿಂಗ ಮಹಾಸ್ವಾಮಿಗಳು, ನಗರದ ಮುರುಘರಾಜೇಂದ್ರ ಸ್ವಾಮೀಜಿ, ಘಟಪ್ರಭಾದ ಡಾ.ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಮರಡಿಮಠದ ಡಾ.ಪವಾಡಯ್ಯ ಮಹಾಸ್ವಾಮಿಗಳು, ಶಾಸಕರಾದ ರಮೇಶ ಜಾರಕಿಹೊಳಿ ಹಾಗೂ ಕಮೀಟಿಯವರು ಇದ್ದರು.

ಸಂಭ್ರಮದ ಈಶಬಸವೇಶ್ವರ ದೇವರ ಮಹಾರಥೋತ್ಸವ

◆ **ಸುರೇಬಾನ:** ಸುತ್ತಮುತ್ತಲಿನ ಗ್ರಾಮಗಳ ಆರಾಧ್ಯದೈವಾದ ಸುರೇಬಾನ ಸಮೀಪದ ಹಂಪಿಹೊಳಿ ಈಶಬಸವೇಶ್ವರ ದೇವರ ಮಹಾರಥೋತ್ಸವ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತ ಸಮೂಹದ ನಡುವೆ ವಿಜೃಂಭಣೆಯಿಂದ ಜರುಗಿತು ಪ್ರತಿ ವರ್ಷದಂತೆ ಈ ವರ್ಷದ ಜಾತ್ರಾ ಮಹಾ ರಥೋತ್ಸವ ಗ್ರಾಮದ ಗುರುಹಿರಿಯರು, ಯುವಕ ಮಂಡಳಿಗಳು, ಸ್ತ್ರೀ ಶಕ್ತಿ ಸಂಘಗಳು ಭಾಗವಹಿಸಿ ಗ್ರಾಮದ ಎಲ್ಲಾ ಹೆಣ್ಣು ಮಕ್ಕಳನ್ನು ಕರೆಸಿಕೊಂಡಿದ್ದು ಜಾತ್ರೆಗೆ ಮೆರಗು ನೀಡಿದರು. ಸಾವಿರಾರು ಸದ್ಭಕ್ತರು ಉತ್ತತ್ತಿ ಹಾರಿಸುವ ಮೂಲಕ ಸಂಭ್ರಮದಿಂದ ರಥೋತ್ಸವ ಜರುಗಿತು.

ಗ್ರಾಮದ ಎಲ್ಲಾ ಹೆಣ್ಣುಮಕ್ಕಳು ಮನೆಮನೆಗಳ ಮುಂದೆ ರಂಗೋಲಿ ಬಿಡಿಸಿ ಶೃಂಗಾರಗೊಳಿಸಿ, ಗ್ರಾಮದೆಲ್ಲೆಡೆ ಸಂಭ್ರಮದಿಂದ ರಥೋತ್ಸವದ ಹಗ್ಗವನ್ನು ಪಕ್ಕದ ಗ್ರಾಮವಾದ ಸಣ್ಣ ಹಂಪಿಹೊಳಿ ಎಲ್ಲಾ ಗುರುಹಿರಿಯರು ಯುವಕ ಮಂಡಳಿಯವರು ಹಲಿಗೆ, ಡೊಳ್ಳಿನ ವಾದ್ಯಗಳ ಮೂಲಕ ಎಲ್ಲ ಮುತ್ತೈದೆಯರು ಆರತಿಯನ್ನು ಹಿಡಿದುಕೊಂಡು ಗ್ರಾಮದ ಪ್ರಮುಖ



ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ಈಶಬಸವೇಶ್ವರ ದೇವಸ್ಥಾನಕ್ಕೆ ಬಂದು ಉಡಿ ತುಂಬಿ ಕಾಯಿ ಒಡೆದು ಪೂಜೆ ಸಲ್ಲಿಸಿದ ನಂತರ ತಂದ ಹಗ್ಗದಿಂದ ಮಹಾರಥೋತ್ಸವವು ವಿಜೃಂಭಣೆಯಿಂದ ರಥದ ಸುತ್ತಲೂ ಪ್ರದಕ್ಷಿಣೆ ಪದ್ಧತಿ ಹಿಂದಿನಿಂದಲೂ ನಡೆದು ಬಂದಿದೆ.

ಭಾರತ ಅಧ್ಯಾತ್ಮದ ತವರೂರು

◆ **ಬೆಳಗಾವಿ:** ಭಾರತತ ದೇಶದಲ್ಲಿ ಸಂಸ್ಕೃತಿ, ಆಚಾರ-ವಿಚಾರ, ಸನಾತನ ಪರಂಪರೆ ಬಹಳ ವ್ಯಾಪಕವಾಗಿ ಹರಡಿಕೊಂಡಿದ್ದು, ಹೀಗಾಗಿ ಭಾರತ ಅಧ್ಯಾತ್ಮದ ತವರೂರು ಎಂದು ಹೊನ್ನಿಹಾಳದ ಬಸವರಾಜ ದೇವರು ಹೇಳಿದರು.

ಪಂ. ಪುಟ್ಟರಾಜ ಗವಾಯಿಗಳವರ 112ನೇ ಜಯಂತ್ಯುತ್ಸವ

ಬೆಳಗಾವಿ ತಾಲೂಕಿನ ಸುಳೇಭಾವಿ ಗ್ರಾಮದ ಬಜಾರ ಗಲ್ಲಿಯಲ್ಲಿ ಶ್ರೀ ಕಲ್ಮೇಶ್ವರ ಜಾತ್ರಾ ಮಹೋತ್ಸವ ಹಾಗೂ ಪಂ. ಪುಟ್ಟರಾಜ ಗವಾಯಿಗಳವರ 112ನೇ ಜಯಂತ್ಯುತ್ಸವ ನಿಮಿತ್ತ ಆಧ್ಯಾತ್ಮಿಕ ಪ್ರವಚನ ನೀಡಿದರು.

ಭಾರತ ದೇಶದಲ್ಲಿ ಧರ್ಮ ಜಾಗೃತಿ ನಡೆಯುತ್ತಿದೆ. ಧರ್ಮದ ತವರೂರು ಆಗಿರುವುದರಿಂದ ಈ ದೇಶವನ್ನು ವಿದೇಶಿಗರೂ ಅಪ್ಪಿಕೊಳ್ಳುತ್ತಿದ್ದಾರೆ. ದೇಶದ ಮೇಲೆ ಅಪಾರ ಭಕ್ತಿ ಇಟ್ಟುಕೊಂಡು ಹಲವು ಈ ಸನಾತನ ಸಂಸ್ಕೃತಿಯನ್ನು ಗೌರವಿಸುತ್ತಿದ್ದಾರೆ. ಜಗತ್ತಿನಲ್ಲಿ ಶ್ರೇಷ್ಠ ಹಾಗೂ ಖ್ಯಾತಿ ಗಳಿಸಿರುವ ಹಿಂದೂ ಧರ್ಮ ವ್ಯಾಪಕವಾಗಿ ಹರಡಿಕೊಂಡಿದೆ ಎಂದು ಹೇಳಿದರು.

ಆಂಧ್ರಪ್ರದೇಶದ ಕಲ್ಮಠ ಆದೋನಿಯ ಗುರುಸಿದ್ದ ದೇವರು ಮಾತನಾಡಿದರು.ಶ್ರೀಶೈಲ ಶಾಸ್ತ್ರಿಗಳು ಹಿರೇಮಠ ಅಧ್ಯಕ್ಷತೆ ವಹಿಸಿದ್ದರು.



ಗುರುಸಿದ್ದಯ್ಯ ಹಿರೇಮಠ ಮಾತನಾಡಿದರು.ಶ್ರೀ ಕಲ್ಮೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಬಸನಗೌಡ ಹುಂಕರಿಪಾಟೀಲ, ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಜೀರ್ಣೋದ್ಧಾರ ಟ್ರಸ್ಟ್ ಕಮಿಟಿ ಅಧ್ಯಕ್ಷ ದೇವಣ್ಣ ಬಂಗೇನ್ನವರ, ವಕೀಲ ಶ್ರೀರಂಗ ಕುಲಕರ್ಣಿ, ಕೆಎಲ್ ಇ ಜೆಎನ್ ಎಂಸಿ ನಿವೃತ್ತ ಅಧೀಕ್ಷಕ ಬಸವರಾಜ ಅಣ್ಣಿಗೇರಿ, ಪತ್ರಕರ್ತ ಬೈರೋಬಾ ಕಾಂಬಳೆ ಸೇರಿದಂತೆ ಇತರರು ಇದ್ದರು. ಕಾರ್ಯಕ್ರಮಕ್ಕೆ ಸಹಕರಿಸಿದ ಗಣ್ಯರನ್ನು ಸತ್ಕರಿಸಲಾಯಿತು. ವಿಶ್ವನಾಥ ಹೆಬ್ಬಳ್ಳಿ ನಿರೂಪಿಸಿದರು. ನಂತರ ತಿಗಡಿ ಗ್ರಾಮದ ಭಜನಾ ವಾದ್ಯ ಮಹಾಮಂಡಳಿ ಹಾಗೂ ಸುಳೇಭಾವಿಯ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ನಡೆಯಿತು.

ಸಂಭ್ರಮದ ಶ್ರೀ ಕಲ್ಮೇಶ್ವರ ದೇವರ ರಥೋತ್ಸವ

◆ **ಬೆಳಗಾವಿ :** ಡೊಳ್ಳು, ಗೊಂಬೆ ಕುಣಿತ ಸೇರಿದಂತೆ ವಿವಿಧ ವಾದ್ಯ ಮೇಳಗಳು, ಹರ ಹರ ಮಹಾದೇವ ಎಂಬ ಜಯಘೋಷ ಕೂಗುತ್ತ, ಎಲ್ಲೆಡೆ ಗುಲಾಲು ಎರಚುತ್ತ ತಾಲೂಕಿನ ಸುಳೇಭಾವಿ ಗ್ರಾಮದ ಶ್ರೀ ಕಲ್ಮೇಶ್ವರ ಭವ್ಯ ರಥೋತ್ಸವ ಸಡಗರ-ಸಂಭ್ರಮದಿಂದ ನೆರವೇರಿತು.

ಶ್ರೀಕಲ್ಮೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ನಡೆದ ರಥೋತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿತು. ಸುಡು ಬಿಸಿಲಿನಲ್ಲೂ ಭಕ್ತರು ತೇರನೆಳೆದು ಭಕ್ತ-ಭಾವದಿಂದ ದೇವರ ಕೃಪೆಗೆ ಪಾತ್ರರಾದರು.

ರಥೋತ್ಸವಕ್ಕೆ ಆರತಿ ಬೆಳಗಿ, ಮಂತ್ರ ಪಠಣದೊಂದಿಗೆ ಚಾಲನೆ ನೀಡಲಾಯಿತು. ಪ್ರತಿ ವರ್ಷದಂತೆ ಈ ವರ್ಷವೂ ಅತ್ಯಂತ ಸಂಭ್ರಮದಿಂದ ನಡೆದ ಭವ್ಯ ರಥೋತ್ಸವ ವೇಳೆ ಜನರು ಗುಲಾಲು ಎರಚುತ್ತ ರಥ ಎಳೆದರು. ಭಕ್ತರು ರಥಕ್ಕೆ ಉತ್ತತ್ತಿ, ಬತ್ತಾಸು ಎರಚಿ ಭಕ್ತಿ ಭಾವ ಮೆರೆದರು.



ಗುಬ್ಬಲಗುಡ್ಡ ಮಠದ ಶ್ರೀಗಳ ಕಾರ್ಯ ಶ್ಲಾಘನೀಯ

◆ **ಘಟಪ್ರಭಾ:** ಈ ಭಾಗದಲ್ಲಿ ಗುಬ್ಬಲಗುಡ್ಡ ಮಠದ ಮಹಾಸ್ವಾಮಿಗಳು ಉತ್ತಮವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಒಳ್ಳೆಯ ಕೆಲಸ- ಕಾರ್ಯಗಳನ್ನು ಮಾಡುವವರನ್ನು ಪ್ರೋತ್ಸಾಹ ಮಾಡುವಂತೆ ಅರಭಾವಿ ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ತಿಳಿಸಿದರು.

ಇಲ್ಲಿನ ಗುಬ್ಬಲಗುಡ್ಡ ಕೆಂಪಯ್ಯ ಸ್ವಾಮಿ ಮಠದ ಜಾತ್ರಾ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಒಳ್ಳೆಯವರನ್ನು ಬೆಂಬಲಿಸಿ. ಆದರೆ, ಒಳ್ಳೆಯ ಕೆಲಸಗಳನ್ನು ಮಾಡಲು ಹೊರಟಿರುವ ಶ್ರೀಗಳ ಕಾಲುಗಳನ್ನು ಜಗ್ಗುವ ಕೆಲಸಗಳನ್ನು ಮಾತ್ರ ಮಾಡಬೇಡಿ ಎಂದರು.



ಶ್ರೀಮಠದಿಂದ ಶಾಸಕ ಬಾಲಚಂದ್ರ ಜಾರಕಿಹೊಳಿಯವರನ್ನು ಪೂಜ್ಯರು ಪುಷ್ಪಾರ್ಪಣೆ ಮಾಡಿ ಗೌರವಿಸಿದರು.

ವೇದಿಕೆಯಲ್ಲಿ ಗುಬ್ಬಲಗುಡ್ಡ ಮಠದ ಪೀಠಾಧಿಪತಿಡಾ. ಮಲ್ಲಿಕಾರ್ಜುನ ಮಹಾಸ್ವಾಮಿಗಳು, ತಿಪಟೂರಿನಡಾ.ರುದ್ರಮುನಿ ಮಹಾಸ್ವಾಮಿಗಳು, ಮುರುಘರಾಜೇಂದ್ರ ಮಹಾಸ್ವಾಮಿಗಳು, ಹತ್ತರಗಿಯ ಗುರುಸಿದ್ಧ ಮಹಾಸ್ವಾಮಿಗಳು, ಅಂಕಲಗಿ-ಕುಂದರಗಿ ಮಠದಡಾ.ಅಮರ ಸಿದ್ದೇಶ್ವರ ಮಹಾಸ್ವಾಮಿಗಳು, ಬಸವನ ಬಾಗೇವಾಡಿಯ ಸಿದ್ಧಲಿಂಗ ಮಹಾಸ್ವಾಮಿಗಳು, ನರಗುಂದದ ಶಿವಕುಮಾರ ಸ್ವಾಮಿಗಳು, ಅರಳಿಕಟ್ಟಿಯ ಶಿವಮೂರ್ತಿ ಸ್ವಾಮಿಗಳು, ಕಲ್ಬುರ್ಗಿಯಚರಲಿಂಗ ಮಹಾಸ್ವಾಮಿಗಳು, ಹೊಳಲಿನ ಚನ್ನಬಸವ ದೇವರು, ಶಿರಾಳಕೊಪ್ಪದ ವೀರಬಸವ ದೇವರು, ಚಿಂಚಣಿಯ ಶಿವಪ್ರಸಾದ ದೇವರು, ಮೆಳಕುಂದದ ಶಶಿ ಕುಮಾರದೇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಂತರ ಸರಿಗಮಪ ಖ್ಯಾತಿಯ ಜ್ಞಾನೇಶ್ವರ ಮಡಿವಾಳರ ಸಂಗೀತ ಕಾರ್ಯಕ್ರಮವು ಜನಮನ ಸೂರೆಗೊಂಡಿತು.

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ ಸಾಧನೆ

◆ **ಮೂಡಲಗಿ:** ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರೌಢ ಶಾಲೆಯ ನಾಲ್ಕು ಜನ ಸ್ಕೌಟ್ಸ್ ಮತ್ತು ಮೂರು ಜನ ಗೈಡ್ಸ್ ವಿದ್ಯಾರ್ಥಿಗಳು ಇತ್ತೀಚೆಗೆ ಜರುಗಿದ 2024-25ನೇ ಸಾಲಿನ ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಮೂಡಲಗಿ ಶೈಕ್ಷಣಿಕ ವಲಯಕ್ಕೆ ಈ ಪ್ರೌಢ ಶಾಲೆಯು ಸತತವಾಗಿ ಎರಡನೇ ಭಾರಿ ರಾಜ್ಯ ಪುರಸ್ಕಾರ ಪಡೆದ ಕೀರ್ತಿಗೆ ಪಾತ್ರವಾಗಿದೆ.

ಸ್ಕೌಟ್ಸ್ ವಿಭಾಗದಲ್ಲಿ: ಸುಚಿತ ಕಪ್ಪಲಗುದ್ದಿ, ಶ್ರೀನಿವಾಸ ದಾಸನಾಳ, ಲಕ್ಷ್ಮಣ ಕಮತಿ, ಕಾರ್ತಿಕ ಬೆಳಗಲಿ ಗೈಡ್ಸ್ ವಿಭಾಗದಲ್ಲಿ: ಲಕ್ಷ್ಮೀ ಪಾಲ್ಕಿ, ಶ್ವೇತಾ



ಕುರಬೇಟ, ನಿಖಿತಾ ಹುಕ್ಕೇರಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಮೂಲಕ ಸಾಧನೆ ಮಾಡಿದ್ದಾರೆ. ಇವರಿಗೆ ದಳನಾಯಕ ಬಿ.ಎಂ. ಗೊರವರ, ದಳನಾಯಕಿ ಆರ್ .ಸಿ. ಚವ್ಹಾಣ ಮಾರ್ಗದರ್ಶನ ನೀಡಿದ್ದಾರೆ.

ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಚೇರಮನ್ನ ಬಸಗೌಡ ಪಾಟೀಲ, ಆಡಳಿತ ಮಂಡಳಿಯ ಸರ್ವ ಸದಸ್ಯರು, ಆಡಳಿತಾಧಿಕಾರಿ ಡಾ. ಸುರೇಶ ಹನಗಂಡಿ, ಮುಖ್ಯೋಪಾಧ್ಯಾಯ ಎ.ಆರ್. ಪಾಟೀಲ, ವಿವಿಧ ವಿಭಾಗಗಳು ಮುಖ್ಯಸ್ಥರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

ಕಿರುಸುದ್ದಿ

ಅರ್ಜಿ ಆಹ್ವಾನ

ಬೆಳಗಾವಿ: ಕರ್ನಾಟಕ ಸಾಹಿತ್ಯ ಅಕಾಡೆಮಿಯು 2025ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಲೇಖಕರು, ಪ್ರಕಾಶಕರು, ಸಾಹಿತ್ಯಾಸಕ್ತ ಸಾರ್ವಜನಿಕರು ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-560002. ಈ ವಿಳಾಸಕ್ಕೆ ರಿಜಿಸ್ಟರ್ಡ್ ಅಂಚೆ, ಕೊರಿಯರ್ ಮೂಲಕ ಅಥವಾ ಖುದ್ದಾಗಿ ಜೂ.30 ರ ರೊಳಗೆ ತಲುಪುವಂತೆ ಕಳುಹಿಸಬೇಕು. ಹೆಚ್ಚಿನ ವಿವರಗಳಿಗೆ ಅಕಾಡೆಮಿಯ ವೆಬ್‌ಸೈಟ್ www.sahithyaacademy.karnataka.gov.in ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳೆ ವಿಮೆ ಆಕ್ಷೇಪಣೆಗೆ ಆಹ್ವಾನ

ಬೆಳಗಾವಿ: ಬೆಳಗಾವಿ ಜಿಲ್ಲೆಯಲ್ಲಿ 2024-25ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರೈತರ ಬೆಳೆ ವಿಮೆಗೆ ನೋಂದಣಿಯಾದ ಪ್ರಸ್ತಾವನೆಗಳನ್ನು ಬೆಳೆ ಸಮೀಕ್ಷೆಯ ದತ್ತಾಂಶಗಳೊಂದಿಗೆ ಹೋಲಿಕೆ ಮಾಡಿ ಸರ್ಕಾರದಿಂದ ಅನುಮೋದನೆಯಾದ ವಿನಾಯಿತಿಗಳನ್ನು ಅಳವಡಿಸಿ ತಾಳೆ ಆಗಿರುವ ಪ್ರಸ್ತಾವನೆಗಳಿಗೆ ಸಂರಕ್ಷಣೆ ತಂತ್ರಾಂಶದಲ್ಲಿ ವಿಮಾ ಪರಿಹಾರಕ್ಕಾಗಿ ಲೆಕ್ಕ ಹಾಕಲಾಗಿದೆ.

2024-25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ವಿಮಾ ಸಂಸ್ಥೆಯಿಂದ ತಿರಸ್ಕೃತವಾದ ಒಟ್ಟು 7490 ಹಾಗೂ ಹಿಂಗಾರು ಹಂಗಾಮಿನಲ್ಲಿ ತಿರಸ್ಕೃತವಾದ ಒಟ್ಟು 819 ಪ್ರಸ್ತಾವನೆಗಳನ್ನು ರೈತರ ಮಾಹಿತಿಗಾಗಿ ಸಂಬಂಧಪಟ್ಟ ತಾಲೂಕು ಮಟ್ಟದ ಕಚೇರಿ ಹಾಗೂ ರೈತ ಸಂಪರ್ಕ ಕೇಂದ್ರಗಳ ಸೂಚನಾ ಫಲಕಕ್ಕೆ ಲಗತ್ತಿಸಿ ಪ್ರಚಾರ ಪಡಿಸಲಾಗಿದೆ.

ರೈತರು ವಿಮಾ ಅರ್ಜಿ ತಿರಸ್ಕೃತಗೊಂಡ ಬಗ್ಗೆ ಮನವರಿಕೆ ಮಾಡಿಕೊಂಡು ಆಕ್ಷೇಪಣೆ ಇದ್ದಲ್ಲಿ ಮರು ಪರಿಶೀಲಿಸಲು ಮನವಿಗಳನ್ನು 15 ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ವಿಮೆ ಮಾಡಿದ ಬೆಳೆ ಬಗ್ಗೆ 2024-25ರ ಪಹಣಿ ಪತ್ರಿಕೆಯಲ್ಲಿ ವಿಮೆಗೆ ನೊಂದಾಯಿಸಿದ ಬೆಳೆ ನಮೂದಾಗಿರಬೇಕು. ಬೆಂಬಲ ಬೆಲೆ ಪ್ರಯೋಜನೆ ಪಡೆದಿದ್ದಲ್ಲಿ ರಶೀದಿ, ವಿಮೆಗೆ ನೊಂದಾಯಿತ ಬೆಳೆಯ ಉತ್ಪನ್ನವನ್ನು ಎ.ಪಿ.ಎಂ.ಸಿ ಮಾರುಕಟ್ಟೆಗೆ ಮಾರಾಟ ಮಾಡಿದ್ದಲ್ಲಿ ಸದರಿ ದಾಖಲೆ ಈ ದಾಖಲಾತಿಗಳಲ್ಲಿ ಯಾವುದಾದರೊಂದು ದಾಖಲಾತಿಗಳನ್ನು ಸಂಬಂಧಿಸಿದ ಹೋಬಳಿಯ ರೈತ ಸಂಪರ್ಕ ಕೇಂದ್ರಗಳಿಗೆ ಅಥವಾ ಸಹಾಯಕ ಕೃಷಿ, ತೋಟಗಾರಿಕೆ ನಿರ್ದೇಶಕರ ಕಚೇರಿಗಳಿಗೆ ಸಲ್ಲಿಸಲು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ನೋ ಸ್ಟಾಕ್ ಎಂಬ ನಾಮಫಲಕ: ಹೋರಾಟದ ಎಚ್ಚರಿಕೆ



ಬೆಳಗಾವಿ: ಮಧ್ಯ ಪ್ರಾಂಚ್ಯದ ಯುದ್ಧದ ಎಫೆಕ್ಟ್ ಭಾರತಕ್ಕೂ ಬಿಸಿ ಮುಟ್ಟಿದೆ. ಅದರಲ್ಲೂ ಬೆಳಗಾವಿ ಜನತೆಗೆ ಬಾರಿ ಕಳೆದ ಕೆಲ ದಿನಗಳಿಂದ ಬಾರಿ ಹೊಡೆತ ಕೊಟ್ಟಿದೆ. ನಗರದಲ್ಲಿ ಆಟೋಗಳಿಗೆ ಗ್ಯಾಸ್ ಸಮಸ್ಯೆ ದಿನದಿಂದ ದಿನಕ್ಕೆ ಗಂಭೀರ ಸ್ವರೂಪ ಪಡೆಯುತ್ತಿದ್ದು, ಸಾವಿರಾರು ಆಟೋ ಚಾಲಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ನಗರದಲ್ಲಿ ಸಾಮಾನ್ಯವಾಗಿ ಸಿಗುವ ಗ್ಯಾಸ್ ಲಭ್ಯವಾಗದೇ ಚಾಲಕರು ಗಂಟೆಗಳ ಕಾಲ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ.ನಗರದ ಪ್ರಮುಖ ಆರ್‌ಟಿಒ ವೃತ್ತದ ಸಮೀಪದಲ್ಲಿರುವ ಶಿಲ್ಪಾ ಗೋ ಗ್ಯಾಸ್ ಪಂಪ್ ಬಳಿ ''ನೋ ಸ್ಟಾಕ್'' ಎಂಬ ನಾಮಫಲಕ ಅಳವಡಿಸಿರುವುದರಿಂದ ಆಟೋ ಚಾಲಕರು ಆಕ್ರೋಶ ಹೊರ ಹಾಕುತ್ತಿದ್ದಾರೆ.

ಈ ಒಂದು ಪಂಪ್ ಮಾತ್ರವಲ್ಲದೇ ನಗರದ ಹಲವು ಗ್ಯಾಸ್ ಬಂಕ್‌ಗಳಲ್ಲೂ ಇದೇ ಪರಿಸ್ಥಿತಿ ಎದುರಾಗುತ್ತಿರುವುದಾಗಿ ಚಾಲಕರು ದೂರಿದ್ದಾರೆ.

ಇನ್ನೊಂದೆಡೆ ಜಿಲ್ಲಾಡಳಿತವು ಬೆಳಗಾವಿ ನಗರದಲ್ಲಿ ಗ್ಯಾಸ್ ಕೊರತೆ ಇಲ್ಲ ಎಂದು ಹೇಳಿಕೆ ನೀಡಿದ್ದು, ಗ್ಯಾಸ್ ಬಂಕ್‌ಗಳ ಮುಂದೆ ''ನೋ ಸ್ಟಾಕ್'' ಫಲಕಗಳು ಕಾಣಸುತ್ತಿರುವುದು ಜಿಲ್ಲಾಡಳಿತ ಸುಳ್ಳು ಹೇಳಿದೆ ಎಂದು ಆಟೋ ಚಾಲಕರು ಆರೋಪಿಸಿದ್ದಾರೆ.

ಈ ಸಮಸ್ಯೆಯಿಂದ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಆಟೋ ಚಾಲಕರು ಆಗ್ರಹಿಸಿದ್ದಾರೆ.

ಸಮಸ್ಯೆಗೆ ಶೀಘ್ರ ಪರಿಹಾರ ದೊರೆಯದಿದ್ದಲ್ಲಿ ಆಟೋ ಚಾಲಕರು ಬೀದಿಗೆ ಇಳಿದು ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಆಟೋ ಚಾಲಕರು ಎಚ್ಚರಿಕೆ ನೀಡಿದ್ದಾರೆ.



ನೇಸರಗಿ. ಇಲ್ಲಿನ ಶ್ರೀ ಮಾರುತಿ ದೇವಸ್ಥಾನದಲ್ಲಿ ಶ್ರೀ ಹನುಮಾನ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಬೆಳಿಗ್ಗೆ ಮಹಾ ಅಭಿಷೇಕ, ಮಂಗಳಾರತಿ, ಅದ್ದೂರಿ ತೊಟ್ಟಿಲೋತ್ಸವ, ಶ್ರೀ ಹನುಮಾನ ಮೂರ್ತಿಗೆ, ತಾಮ್ರ ಲೇಪನ, ಕಿರೀಟ ಅಲಂಕಾರ ಮಾಡಿ, ಶ್ರೀ ಮಾರುತಿ ದೇವರನ್ನು ತೊಟ್ಟಿಲಲ್ಲಿ ಹಾಕಿ ಪೂಜೆ ನೆರವೇರಿಸಲಾಯಿತು. ತದನಂತರ ಮಹಾಪ್ರಸಾದ ಜರುಗಿತು. ಈ ಸಂದರ್ಭದಲ್ಲಿ ಶ್ರೀ ಮಾರುತಿ ದೇವಸ್ಥಾನ ಕಮಿತಿ ಅಧ್ಯಕ್ಷರು, ಸದಸ್ಯರು, ಧಾಣಿಗಳು, ನೇಸರಗಿ ಗ್ರಾಮದ ಸದ್ಭಕ್ತರು ಭಾಗವಹಿಸಿ ದರ್ಶನ ಪಡೆದರು.

ಪ್ಲಾಸ್ಟಿಕ್ ಮುಕ್ತಕ್ಕೆ ಶ್ರಮವಹಿಸಿ: ನ್ಯಾ.ಮಂಜುನಾಥ್

ಬೆಳಗಾವಿ: ಪ್ರತಿನಿತ್ಯ ಪ್ಲಾಸ್ಟಿಕ್ ಬಳಕೆಯಿಂದ ಪ್ಲಾಸ್ಟಿಕ್‌ನಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಇದನ್ನು ತಡೆಯಲು ಪ್ಲಾಸ್ಟಿಕ್ ಮುಕ್ತ ಬೆಳಗಾವಿಯನ್ನಾಗಿಸಲು ಮಹಾನಗರ ಪಾಲಿಕೆಯ ಪೌರ ಕಾರ್ಮಿಕರು ಶ್ರಮಿಸಬೇಕೆಂದು ಜಿಲ್ಲಾ ಸತ್ರ ನ್ಯಾಯಾಧೀಶ ಮಂಜುನಾಥ್ ನಾಯಕ ಹೇಳಿದರು.

ನರಗುಂದ ಕೆರೆ ಬಾವಿ ವೃತ್ತದಲ್ಲಿ ಮಹಾನಗರ ಪಾಲಿಕೆಯ ನೇತೃತ್ವದಲ್ಲಿ ಗುರುವಾರ ಆಯೋಜಿಸಿದ್ದ ವಿಶ್ವ ಜಲದಿನ ಹಾಗೂ ಪ್ಲಾಸ್ಟಿಕ್ ಮುಕ್ತ ಅರಿವು ಕ್ಲಾಥ್ ವೆಡ್ಡಿಂಗ್ ಯಂತ್ರ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣ ಮಾಡುವುದಕ್ಕೆ ಪೌರಕಾರ್ಮಿಕರಿಂದ ಮಾತ್ರ ಸಾಧ್ಯ. ನಮಗೆ ಅರಿವಿಲ್ಲದೆ ನಾವು ಪ್ಲಾಸ್ಟಿಕ್ ಎಲ್ಲಿ ಬೇಕಾದಲ್ಲಿ ಬಿಸಾಡುವುದರಿಂದ ನಮ್ಮ ಪರಿಸರವನ್ನು ನಾವೇ ಹಾಳು ಮಾಡುತ್ತಿದ್ದೇವೆ. ನಾವುಗಳು ಎಷ್ಟೇ ತೊಂದರೆ ಕೊಟ್ಟರು ಭೂಮಿತಾಯಿ ಸಹಿಸಿಕೊಳ್ಳುತ್ತಾಳೆ. ದಿನನಿತ್ಯ ಜೀವನದ ವಸ್ತುಗಳ ಖರೀದಿಗೆ ಬಳಸುತ್ತಿರುವ ಪ್ಲಾಸ್ಟಿಕ್ ಅನ್ನು ಕ್ರಮೇಣವಾಗಿ ಕಡಿಮೆ ಮಾಡಿ ನೈಸರ್ಗಿಕ ವಸ್ತುಗಳ ಬಳಕೆ ಮಾಡಬೇಕು ಎಂದು ಸಾರ್ವಜನಿಕರಿಗೆ ಕರೆ ನೀಡಿದರು.

ಬೇರೆ ದೇಶಗಳಲ್ಲಿ ನೀರು ಹಾಗೂ ಆಮ್ಲಜನಕವನ್ನು ಖರೀದಿ ಮಾಡುವುದನ್ನು ನೋಡಿ ನಾವುಗಳು ಅಪಹಾಸ್ಯ ಮಾಡುತ್ತಿದ್ದೇವೆ. ಅದೇ ಪರಿಸ್ಥಿತಿ ನಮಗೂ ಮುಂದೊಂದು ದಿನ ಬರಬಹುದು. ಅದಕ್ಕಾಗಿ ನಾವುಗಳು ಇವತ್ತಿನಿಂದಲ್ಲೆ ಪ್ಲಾಸ್ಟಿಕ್ ಬಳಕೆ ಮಾಡುವುದನ್ನು ನಿಷೇಧಿಸಬೇಕು ಹಾಗೂ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಕಾಪಾಡಬೇಕೆಂದು ತಿಳಿಸಿದರು.



ಬೆಳಗಾವಿ: ನರಗುಂದ ಕೆರೆ ಬಾವಿ ವೃತ್ತದಲ್ಲಿ ಮಹಾನಗರ ಪಾಲಿಕೆಯ ನೇತೃತ್ವದಲ್ಲಿ ಗುರುವಾರ ಆಯೋಜಿಸಿದ್ದ ವಿಶ್ವ ಜಲದಿನ ಹಾಗೂ ಪ್ಲಾಸ್ಟಿಕ್ ಮುಕ್ತ ಅರಿವು ಕ್ಲಾಥ್ ವೆಡ್ಡಿಂಗ್ ಯಂತ್ರವನ್ನು ನ್ಯಾಯಾಧೀಶ ಮಂಜುನಾಥ ಉದ್ಘಾಟಿಸಿದರು.

ಸನಾತನ ಧರ್ಮ ಉಳಿವಿಗೆ ಶ್ರಮಿಸಿ

ಕಕಮರಿ: ಭಾರತೀಯರಾದ ನಾವೆಲ್ಲರೂ ಹಿಂದು, ನಾವೆಲ್ಲ ಒಂದು ಎಂಬ ಭಾವನೆ ಮೂಡಿದಾಗ ಮಾತ್ರ ಸನಾತನ ಹಿಂದು ಧರ್ಮ ಉಳಿಯಲು ಸಾಧ್ಯ ಎಂದು ಬೆಂಗಳೂರಿನ ಖ್ಯಾತ ಲೇಖಕಿ, ವಾಗ್ಮೀ ಹಾರಿಕಾ ಮಂಜುನಾಥ ಹೇಳಿದರು.



ಅವರು ಬುಧವಾರ ಸ್ಥಳೀಯ ಹನುಮ ಜನ್ಮೋತ್ಸವ ಕಾರ್ಯಕ್ರಮ ನಿಮಿತ್ತ ಹಮ್ಮಿಕೊಂಡಿರುವ ಧರ್ಮ ಜಾಗೃತಿ ಸಭೆಯಲ್ಲಿ ಮಾತನಾಡಿದ ಅವರು, ಧರ್ಮೋ ರಕ್ಷತಿ: ರಕ್ಷಿತ: ಯಾರು ಧರ್ಮವನ್ನು ರಕ್ಷಿಸುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ. ಭವ್ಯ ಭಾರತದ ನಿರ್ಮಾಣದಲ್ಲಿಯುವಕರಪಾತ್ರಮಹತ್ವದಾಗಿದೆ.ದೇಶದ ಭವಿಷ್ಯ ಯುವಕರನ್ನೇ ಅವಲಂಭಿಸಿದೆ. ಯುವಕರು ರಾಷ್ಟ್ರದ ಸಂಪತ್ತು, ಯುವಶಕ್ತಿ, ಸದ್ಬಳಕೆಯಿಂದ ಬಲಿಷ್ಠ ಹಾಗೂ ಸದೃಡ, ಸುಸಂಸ್ಕೃತ ಹಾಗೂ ಶಕ್ತಿಶಾಲಿ ಸನಾತನ ಹಿಂದೂ ಧರ್ಮವನ್ನು ಉಳಿಸಲಿಕ್ಕೆ ಸಾಧ್ಯ. ನಮ್ಮ ಮಕ್ಕಳಲ್ಲಿ ನಮ್ಮ ಧರ್ಮ, ಪರಂಪರೆ, ಇತಿಹಾಸದ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ ಎಂದರು.

ಸಾನ್ನಿಧ್ಯ ಮೈಗೂರ ಶಿವಾನಂದಮಠ ಗುರುಪ್ರಸಾದ ಸ್ವಾಮೀಜಿ ಮಾತನಾಡಿ, ನಮ್ಮ ಭಾರತ ದೇಶದಲ್ಲಿ ಸಂಸ್ಕೃತಿ, ಆಚಾರ-ವಿಚಾರ, ಸನಾತನ ಹಿಂದೂ ಧರ್ಮವನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗಬೇಕಾಗಿದೆ. ನಮ್ಮ ದೇಶದ ಹಬ್ಬಗಳ ವೈಶಿಷ್ಟತೆ ಇದೆ. ಇತ್ತೀಚೆಗೆ ನಡೆದ ಪಹಲ್ಗಾಮ ದಾಳಿಯಲ್ಲಿ 26 ಹಿಂದೂಗಳನ್ನು ಬಟ್ಟೆ ಕಳೆದು ಹಿಂದೂ ಅಂತಾ ತಿಳಿದುಕೊಂಡು ಕೊಲೆ ಮಾಡಿದ್ರಲ್ಲಾ ಇದನ್ನು ಹೋಗಿ ಮೋದಿಗೆ ಹೇಳು ಅಂದರಲ್ಲಾ, ಮೋದಿಯವರು ರಾತ್ರಾ ರಾತ್ರಿ ಎಲ್ಲ ಸೈನಿಕರನ್ನು ಕರೆದು ಅಪರೇಷನ್ ಸಿಂಧೂರ ಮಾಡಿದ್ರಲ್ಲಾ ಇದೇ ಭಾರತದ ತಾಕತ್ತು. ಇದೆ ಮಾತನ್ನು ಹೋಗಿ ಯೋಗಿಗೆ ಹೇಳು ಅಂದಿದ್ರೆ ವಿಶ್ವ ಭೂಪಟದಲ್ಲಿ ಪಾಕಿಸ್ಥಾನ ಇರುತ್ತಿರಲಿಲ್ಲ ಎಂದರು. ಆತ್ಮೀಯರೆ ಸನಾತನ ಹಿಂದೂ ಧರ್ಮವನ್ನು ನಾವೆಲ್ಲರೂ ಉಳಿಸಿ ಬೆಳೆಸಿಕೊಂಡು ಹೋಗಬೇಕಾಗಿದೆ ಎಂದರು. ಯಕ್ಕಂಚಿ ಗುರುಪಾದ ಸ್ವಾಮೀಜಿ, ಅತ್ತೀಗೇರಿ ಅದ್ವೈತಾನಂದ ಸ್ವಾಮೀಜಿ, ವೆಂಕನಗೌಡ ಪಾಟೀಲ, ಕಲ್ಲಪ್ಪ ತಂಗಡಿ, ಅಪ್ಪು ನಾಟೀಕಾರ, ಸಿದರಾಯ ಪುಠಾಣಿ, ಮಲ್ಲಿಕಾರ್ಜುನ ಸರಶೆಟ್ಟಿ, ಬಾಹುಬಲಿ ಸವದತ್ತಿ, ಸಂಗಮೇಶ ಬಿಳ್ಳೂರ, ಮಲ್ಲಿಕಾರ್ಜುನ ಪೂಜಾರಿ, ನವೀನ ಗೆಜ್ಜಿ, ರಾಜಕುಮಾರ ಪುಠಾಣಿ ಸಿದರಾಯ ಬಿಳ್ಳೂರ, ಗ್ರಾಮದ ಸುತ್ತಮುತ್ತಲಿನ ಕಾರ್ಯಕರ್ತರು ಉಪಸ್ಥಿತರಿದ್ದರು. ಸಿದರಾಯ ಪುಠಾಣಿ ಸ್ವಾಗತಿಸಿ ನಿರೂಪಿಸಿದರು.

ಡಿಸಿಸಿ ಬ್ಯಾಂಕ್‌ಗೆ 56.25 ಕೋಟಿ ರೂ.ಲಾಭ

ಬೆಳಗಾವಿ: ಬೆಳಗಾವಿ ಜಿಲ್ಲೆಯ ಆರ್ಥಿಕ ಶಕ್ತಿ ಎಂದೇ ಬಿಂಬಿತವಾಗಿರುವ ಡಿಸಿಸಿ ಬ್ಯಾಂಕ್ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಐತಿಹಾಸಿಕ ಸಾಧನೆ ಮಾಡಿದೆ. ಬ್ಯಾಂಕಿನ ನಿರ್ದೇಶಕರಾದ ಅಣ್ಣಾಸಾಹೇಬ್ ಜೊಲ್ಲೆ ಹೇಳಿದರು.

ಗುರುವಾರ ನಗರದ ಡಿಸಿಸಿ ಬ್ಯಾಂಕ್ ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಸಿಸಿ ಬ್ಯಾಂಕ್ ಗಳಿಸಿರುವ ಬರೋಬ್ಬರಿ 56.26 ಕೋಟಿ ರೂಪಾಯಿ ಲಾಭ ಹಾಗೂ ರೈತರಿಗಾಗಿ ಜಾರಿಗೆ ತಂದಿರುವ ವಿನೂತನ ಯೋಜನೆಗಳ ಬಗ್ಗೆ ಶಾಸಕ ಬಾಲಚಂದ್ರ ಹಾಗೂ ಅಣ್ಣಾಸಾಹೇಬ್ ನೀಡಿದರು.

ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ 2025-26ನೇ ಹಣಕಾಸು ವರ್ಷದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ಬ್ಯಾಂಕಿನ ನಿರ್ದೇಶಕ ಅಣ್ಣಾಸಾಹೇಬ್ ಜೊಲ್ಲೆ ತಿಳಿಸಿದ್ದಾರೆ. ಬ್ಯಾಂಕ್ ಈ ಬಾರಿ ಒಟ್ಟು 56.25 ಕೋಟಿ ರೂಪಾಯಿ ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿದರು.

ಬ್ಯಾಂಕನ್ನು ಆಧುನೀಕರಣಗೊಳಿಸುವ ನಿಟ್ಟಿನಲ್ಲಿ ಈಗಾಗಲೇ 112 ಶಾಖೆಗಳಲ್ಲಿ ಸೌಲಭ್ಯ ಕಲ್ಪಿಸಲಾಗಿದ್ದು, ಕೋರ್ ಬ್ಯಾಂಕಿಂಗ್ ಜಾರಿಗೊಳಿಸಲಾಗಿದೆ. ಗ್ರಾಹಕರಿಗೆ ತ್ವರಿತ ವ್ಯವಹಾರಕ್ಕಾಗಿ ಅತೀ ಶೀಘ್ರದಲ್ಲಿ ಖಿಕಐ ಸೇವೆ ಹಾಗೂ ಅಖಖ ಮೂಲಕ ಹಣ ಜಮಾ ಮಾಡುವ ಸೌಲಭ್ಯವೂ ಲಭ್ಯವಾಗಲಿದೆ ಎಂದು ವಿವರಿಸಿದರು.

ಇದೇ ವೇಳೆ ಶಾಶಕ ಹಾಗೂ ಡಿಸಿಸಿ ಬ್ಯಾಂಕ್ ನಿರ್ದೇಶಕ ಬಾಲಚಂದ್ರ ಜಾರಕಿಹೊಳಿ ಮಾತನಾಡಿ, ಬ್ಯಾಂಕ್ ಕೇವಲ ಸಾಲ ನೀಡಿಕೆಗೆ ಸೀಮಿತವಾಗದೆ, ಸಾಮಾಜಿಕ ಭದ್ರತೆಗೂ ಒತ್ತು ನೀಡಿದೆ. ರಾಜ್ಯದಲ್ಲೇ ಮೊದಲ ಬಾರಿಗೆ ಸಹಕಾರಿ ಸಂಘಗಳ ಸಿಬ್ಬಂದಿಗಳಿಗೆ ಆರೋಗ್ಯ ಮತ್ತು ಜೀವ ವಿಮೆ ಸೌಲಭ್ಯ ಕಲ್ಪಿಸಲಾಗಿದೆ ಎಂದು ಹೇಳಿದರು. ನಮ್ಮ ಅವಧಿ ಮುಗಿಯುವ ವರೆಗೆ ನಾವುಗಳು ಡಿಸಿಸಿ ಬ್ಯಂಕ್ ದೊಡ್ಡ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತೇವೆ, ಜಿಲ್ಲೆಯಲ್ಲಿರುವ ಎಲ್ಲ ರೈತರಿಗೆ ಈ ಬ್ಯಾಂಕ್ ಅನಕೂಲವಾಗಬೇಕು ಆ ರೀತಿ ಕೆಲಸ ಮಾಡಬೇಕು ಎಂದು ತಿರ್ಮಾನಿಸಿದ್ದೇವೆ ಎಂದರು.





ರಾಯಬಾಗ: ತಾಲೂಕಿನ ನಂದಿಕುರಳಿ ಗ್ರಾಮದ ಪಂಚಲಿಂಗೇಶ್ವರ ಮಠದ 39ನೇ ಶರಣ ಸಂಸ್ಕೃತಿ ಉತ್ಸವ ಅಂಗವಾಗಿ ಮಂಗಳವಾರ ಭಕ್ತಾದಿಗಳಿಂದ ವೀರಭದ್ರೇಶ್ವರ ಶ್ರೀಗಳ ತುಲಾಭಾರ ನಡೆಯಿತು. ಅಮಿತ ಜಾಧವ, ಮಲ್ಲಿಕಾರ್ಜುನ ಕೌಜಲಗಿ, ಸುಭಾಷ ಕೋಟಿವಾಲೆ, ಕೇದಾರಿ ಮಾಳಿ, ಈಶ್ವರ ಮಾಳಿ, ಗಣಪತಿ ಮಾಳಿ, ಮಹಾದೇವ ಕೋಟಿವಾಲೆ, ಕೆ.ಆರ್ ಕೊಟಿವಾಲೆ ಸೇರಿ ನೂರಾರು ಭಕ್ತರು ಇದ್ದರು.

ಚಿತ್ರಕಲೆಯ ಮೂಲಕ ವಿಷಯ ಬೋಧನೆ

ಖಾನಾಪುರ: ಪಟ್ಟಣದ ಸರ್ಕಾರಿ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕ ದೇಮಣ್ಣ ಮೆಳವಂಕಿ ಶಾಲೆಯ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಪಠ್ಯದಲ್ಲಿರುವ ವಿಷಯಗಳನ್ನು ಚಿತ್ರಕಲೆಯ ಮೂಲಕ ಬೋಧಿಸುವ ಮೂಲಕ ವಿಭಿನ್ನ ಪ್ರಯೋಗದಲ್ಲಿ ಯಶಸ್ಸು ಕಂಡುಕೊಂಡಿದ್ದಾರೆ. ಇವರ ಕುಂಚದಿಂದ ಮೂಡಿಬಂದ ಪ್ರಕೃತಿಯ ಸೊಬಗು, ಪ್ರಚಲಿತ



ವಿದ್ಯಮಾನಗಳು, ವಿವಿಧ ಸಾಧಕರು, ವನ್ಯಮೃಗಗಳು, ನಮ್ಮ ಸುತ್ತಮುತ್ತಲಿನ ನೈಜ ದೃಶ್ಯಗಳು, ಪೌರಾಣಿಕ ಸನ್ನಿವೇಶಗಳು, ವಿವಿಧ ರಂಗಗಳಲ್ಲಿ ಹೆಸರು ಮಾಡಿದ ಸಾಧಕರು, ವಿಜ್ಞಾನದ ವಿಸ್ಮಯಗಳು ಸೇರಿದಂತೆ ಪ್ರೌಢಶಾಲೆಯ ವಿವಿಧ ಪಠ್ಯ ವಿಷಯಗಳ ಬಗ್ಗೆ ಚಿತ್ರಸಹಿತ ಮಾಹಿತಿ ನೀಡುವ ಪ್ರಯತ್ನದಲ್ಲಿ ಸಫಲರಾಗಿದ್ದಾರೆ.

ವೃತ್ತಿಯಲ್ಲಿ ಚಿತ್ರಕಲಾ ಶಿಕ್ಷಕ ಮತ್ತು ಪ್ರವೃತ್ತಿಯಲ್ಲಿಹವ್ಯಾಸಿಕಲಾವಿದರಾದದೇಮಣ್ಣ ಮೆಳವಂಕಿ ಮೂಲತಃ ಬೈಲಹೊಂಗಲ ತಾಲೂಕು ಹೊಳಿಹೊಸೂರ ಗ್ರಾಮದವರು. ಚಿತ್ರಕಲೆಯಲ್ಲಿ ಆರ್ಟ್ ಮಾಸ್ಟರ್ ಪದವಿಯನ್ನು ಪಡೆದು 2002ರಿಂದ ಹಿರೇಮುನವಳ್ಳಿ ಪ್ರೌಢಶಾಲೆಯಿಂದ ವೃತ್ತಿ ಜೀವನ ಪ್ರಾರಂಭಿಸಿದ ಅವರು ಕಳೆದ ಮೂರೂವರೆ ವರ್ಷಗಳಿಂದ ಸ್ಥಳೀಯ ಸರ್ಕಾರಿ ಪ್ರೌಢಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮಕ್ಕಳಿಗೆ ಚಿತ್ರಕಲೆಯನ್ನು ಕಲಿಸುವುದು ಒಂದು ಪವಿತ್ರವಾದ ಸೇವೆ ಎಂದು ನಂಬಿರುವ ಅವರು

> **ದೇಮಣ್ಣ ಮೆಳವಂಕಿ ಚಿತ್ರಕಲಾ ಶಿಕ್ಷಕರಾಗಿದ್ದರೂ ಶಾಲೆಯ ವಿದ್ಯಾರ್ಥಿಗಳಿಗೆ ಗಣಿತ, ವಿಜ್ಞಾನ, ಸಮಾಜ ವಿಷಯಗಳಲ್ಲಿ ಬರುವ ಚಿತ್ರಗಳನ್ನು ಸರಾಗವಾಗಿ ಬಿಡಿಸಿಕೊಡುವ ಕಲೆಯನ್ನು ಮಕ್ಕಳಿಗೆ ಹೇಳಿಕೊಡುವ ಮೂಲಕ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಈ ಹಿಂದೆ ಹಿರೇಮುನವಳ್ಳಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಜಿಲ್ಲಾ, ವಿಭಾಗ ಮತ್ತು ರಾಜ್ಯಮಟ್ಟದಲ್ಲಿ ಮಿಂಚಿ ಇಲಾಖೆಗೆ ಹೆಸರು-ಕೀರ್ತಿ ತಂದಿದ್ದಾರೆ.**
>
> ■ ರಾಮಪ್ಪ.ಪಿ ಬಿಇಒ ಖಾನಾಪುರ.

ಶೈಕ್ಷಣಿಕ ಪಠ್ಯಕ್ಕೆ ಸಂಬಂಧಿಸಿದಂತೆ ತಮ್ಮ ಭಿನ್ನ ವಿಭಿನ್ನ ಕಲಾಕೃತಿಗಳ ರಚನೆಯ ಮೂಲಕ ವಿವಿಧ ವಿಷಯಗಳು ಮಕ್ಕಳ ಮನಮುಟ್ಟುವಂತೆ ಗಮನಹರಿಸುತ್ತಿದ್ದಾರೆ. ಈ ಕಾರಣದಿಂದಲೇ ಅವರು ಶಾಲೆಯ ವಿದ್ಯಾರ್ಥಿಗಳ ಪಾಲಿನ ಅಚ್ಚುಮೆಚ್ಚಿನ ಶಿಕ್ಷಕರಾಗಿ ಗುರುತಿಸಿಕೊಂಡಿದ್ದಾರೆ.

ದೇಮಣ್ಣ ಅವರ ಕಲಾ ಸೇವೆಯನ್ನು ಪರಿಗಣಿಸಿದ ಬೆಂಗಳೂರಿನ ಕರ್ನಾಟಕ ಪ್ರತಿಭಾ ಅಕಾಡಮಿ ಭಾರತ ರತ್ನ ಡಾ. ರಾಧಾಕೃಷ್ಣನ್ ಪ್ರಶಸ್ತಿ ನೀಡಿ ಗೌರವಿಸಿದೆ. ಇದರ ಜೊತೆಗೆ ಶಿಕ್ಷಣ ಇಲಾಖೆಯಿಂದ ಪ್ರತಿಭಾನ್ವಿತ ಶಿಕ್ಷಕ ಪ್ರಶಸ್ತಿ, ಉತ್ತಮ ಚಿತ್ರಕಲಾವಿದ ಸೇರಿದಂತೆ ಹಲವು ಗೌರವಗಳು ಲಭಿಸಿವೆ. ಪ್ರತಿ ವರ್ಷ ಜರುಗುವ ಶಿಕ್ಷಕರ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆಗಳಲ್ಲಿ ರಾಜ್ಯಮಟ್ಟದಲ್ಲಿ ಸ್ಪರ್ಧಿಸಿ ಜಯಗಳಿಸಿದ್ದಾರೆ.

ವಿಜ್ಞಾನ ಕ್ಷೇತ್ರದಲ್ಲಿ ಭಾರತ ಸದಾ ಮುಂದು

ಚಿಕ್ಕೋಡಿ: ಮೂಲ ವಿಜ್ಞಾನ ಕ್ಷೇತ್ರದಲ್ಲಿ ಭಾರತ ಅತ್ಯುನ್ನತ ಶ್ರೇಣಿಯಲ್ಲಿದ್ದು, ರಕ್ಷಣೆ, ಬಾಹ್ಯಾಕಾಶ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಯಶಸ್ವಿ ಸಂಶೋಧನೆ ಮತ್ತು ಸಾಫಲ್ಯದಿಂದ ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ ಹೇಳಿದರು.

ಪಟ್ಟಣದ ಕೆಎಲ್‌ಇ ಸಂಸ್ಥೆಯ ಬಸಪ್ರಭು ಕೋರೆ ಪದವಿ ಮಹಾವಿದ್ಯಾಲಯದಲ್ಲಿ ವಿಜ್ಞಾನ ವಿಭಾಗದಿಂದ ಗುರುವಾರ ಹಮ್ಮಿಕೊಂಡ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡುತ್ತಾ, ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ಹಾಗೂ ಸಂಶೋಧನೆಗಳು ನಡೆಯುತ್ತಿವೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಸಂಶೋಧನೆ ಮಾಡಲು ಕೇಂದ್ರ ಸರ್ಕಾರ ನೂತನ ರಾಷ್ಟ್ರೀಯ ಶಿಕ್ಷಣ ಮೂಲಕ ಕಲಿಕೆ ಮತ್ತು ಸಂಶೋಧನೆ ಕ್ಷೇತ್ರದಲ್ಲಿ ಧನಸಹಾಯ ಹಾಗೂ ಪ್ರೋತ್ಸಾಹ ನೀಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕೊಲ್ಹಾಪುರದ ವಿಜ್ಞಾನಿ ಸಿ ಡಿ ಲೋಕಂಡೆ ಮಾತನಾಡಿ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಜೀವವಿಜ್ಞಾನಗಳಿಗೆ ಬಲವಾದ ನೆಲೆ ನಿರ್ಮಿಸಿದ ರಾಷ್ಟ್ರಗಳು ನೂತನ ತಂತ್ರಜ್ಞಾನ ಮತ್ತು ಕೈಗಾರಿಕಾ ಪ್ರಗತಿಯಲ್ಲಿ ಮುಂಚೂಣಿಯಲ್ಲಿವೆ. ನವೀಕರಿಸಬಹುದಾದ ಶಕ್ತಿ, ಔಷಧ, ಕೃಷಿ ಹಾಗೂ ಡಿಜಿಟಲ್ ಆರ್ಥಿಕತೆ, ಡೇಟಾ ವಿಶ್ಲೇಷಣೆ ಮುಂತಾದ ಕ್ಷೇತ್ರಗಳಲ್ಲಿ ಅಪಾರ ಪ್ರಮಾಣದ ಸಂಶೋಧನೆ, ಅವಿಷ್ಕಾರಗಳು ಜಗತ್ತಿನ ಮನುಕುಲದ ಒಳಿತಿಗೆ ಶ್ರಮಿಸುತ್ತಿವೆ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ರಾಣಿಚನ್ನಮ್ಮ ವಿವಿಯ ರಸಾಯನಶಾಸ್ತ್ರದ ಮುಖ್ಯಸ್ಥ ಪ್ರೊ ಜೆ ಮಂಜಣ್ಣ, ಸ್ಥಾನಿಕ ಆಡಳಿತ ಮಂಡಳಿ ಸದಸ್ಯ ಮಹೇಶ ಭಾತೆ, ಎಸ್ ಎಸ್ ಕೌಲಾಪುರೆ, ಎನ್ ಎಸ್ ವಂಟಮುತ್ತೆ, ಪ್ರೋ ಎಂ ಟಿ ಕುರಣೆ, ಉಪ ಪ್ರಾಚಾರ್ಯ ಸುಧೀರ ಕೋಟಿವಾಲೆ, ವಿನಾಯಕ ಮಂಜಲಾಪೂರ, ಎಂ ಆರ್ ಛಾಯಾ, ರಾಜೇಶ ನಾಯಕ, ಸುನೀಲ ಪಾಟೀಲ, ಶಾಂತಿನಾಥ ಲಠ್ಠೆ, ಎಸ್ ಎಸ್ ಪಾಟೀಲ, ಪ್ರದೀಪ ಸಂಗಪ್ಪಗೋಳ, ಪದ್ಮಶ್ರೀ ಚೌಗುಲೆ, ಶ್ರೇಯಾ ನಾಯಕ ಇತರರು ಇದ್ದರು.

ಕಾರ್ಮಿಕ ನೀತಿ ವಿರೋಧಿಸಿ ಪ್ರತಿಭಟನೆ

ರಾಮದುರ್ಗ: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ 4 ಹೊಸ ಕಾರ್ಮಿಕ ಕಾನೂನು ವಿರೋಧಿಸಿ ಗುರುವಾರ ಸಿಐಟಿಯು ನೇತೃತ್ವದಲ್ಲಿ ತಾಲೂಕಿನ ಖಾನಪೇಠ ಗ್ರಾಮದ ಧನಲಕ್ಷ್ಮೀ ಸಕ್ಕರೆ ಕಾರಖಾನೆ ಎದುರು ಹೊಸ ಸಂಹಿತೆಯ ಆದೇಶ ದಹನ ಮಾಡಿ ಪ್ರತಿಭಟನೆ ನಡೆಸಲಾಯಿತು.

ಹೊಸ ಕಾರ್ಮಿಕ ಕಾಯ್ದೆಯಿಂದ ಬಂಡವಾಳ ಶಾಹಿಗಳ ಜೇಬು ತುಂಬಲು ಹೊರಟಿರುವ ಮೋದಿ ಸರಕಾರ ವ್ಯವಹಾರ ಮಾಡಲು ಸುಲಭತೆ ಎಂದು ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿದೆ ಎಪ್ರೀಲ್ 1 ರಿಂದ ಜರಿಗೆ ಬಂದಿರುವ ಕಾನೂನು ಬೀದಿಗೆ ತಳ್ಳಿದೆ ಎಂದು ಕಾರ್ಮಿಕರು ಆಕ್ರೋಶ ಹೊರ ಹಾಕಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಜಿ.ಎಮ್. ಜೈನೇಖಾನ, ಕಟ್ಟಡ ಕಾರ್ಮಿಕರ ಸಂಘದ ಮುಖಂಡ ನಾಗಪ್ಪ ಸಂಗೊಳ್ಳಿ ಮಾತನಾಡಿದರು. ಶ್ರೀ ಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರ ಸಂಘದ ಅಧ್ಯಕ್ಷ ಮಹಾಂತೇಶ ಪಾಶ್ಚಾಪೂರ, ಕಾರ್ಯದರ್ಶಿ ಕೃ?ಣ್ಣಾ ಹೊಸೂರ, ಮುಖಂಡರಾದ ಹನಮಂತ ಜಾಧವ, ಚನ್ನವೀರ ಕಣವಿ, ಉಮೇಶ ಮೈಲಾರಿ, ಶಿವನಗೌಡ ಪಾಟೀಲ ಮತ್ತು ರಮೇಶ ಮೇಟಿ ಮುಂತಾದವರು ಭಾಗವಹಿಸಿದ್ದರು.



ಅರ್ಥಪೂರ್ಣ ಆಚರಣೆಗೆ ಸೂಚನೆ



ಕಾಗವಾಡ: ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ತಾಲೂಕಾಡಳಿತದಿಂದಅರ್ಥಪೂರ್ಣವಾಗಿಆಚರಿಸಲಾಗುವುದು.ಸಾರ್ವಜನಿಕರು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಹಶೀಲ್ದಾರ್ ರವಿಂದ್ರ ಹಾದಿಮನಿ ಹೇಳಿದರು.

ಪಟ್ಟಣದ ಬಸವ ನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡ ಜಯಂತಿಯ ಪೂರ್ವಭಾವಿ ಸಭೆಯ ಉದ್ದೇಶಿಸಿ ಮಾತನಾಡಿ,

ಪ್ರತಿ ವರ್ಷದಂತೆ ಈ ವರ್ಷವೂ ಇಬ್ಬರು ಮಹನೀಯರ ಜಯಂತಿಯನ್ನು ಏಪ್ರಿಲ್ 5 ಮತ್ತು14ರಂದು ಪ್ರತಿ ವರ್ಷದಕ್ಕಿಂತ ಈ ವರ್ಷ ಎಲ್ಲರು ಸೇರಿಕೊಂಡು ಅತ್ಯಂತ ಅದ್ದೂ ರಿಯಾಗಿ ಆಚರಿಸಿ ಅವರ ಕೊಡುಗೆಗಳನ್ನು ಇಂದಿನ ಪೀಳಿಗೆಗೆ ತಿಳಿಸುವಂತೆ ಅರ್ಥಪೂರ್ಣ ಕಾರ್ಯಕ್ರಮವನ್ನು ಮಾಡೋಣ ಎಂದು ಹೇಳಿದರು. ಸಭೆಗೆ ಬಾರದ ಕ್ಷೇತ್ರ ಶಿಕ್ಷಣಾಧಿಕಾರಿ ವಿರುದ್ಧ ಮುಖಂಡರು ಒಕ್ಕೊರಲಿನಿಂದ ಅವರ ವಿರುದ್ಧ ಕ್ರಮ ಜರಗಿಸುವಂತೆ ಆಗ್ರಹಿಸಿದರು.

ವಿದ್ಯಾರ್ಥಿಮುಖಂಡ ವಿವೇಕ ಕುರ್ಪೆ, ಸಮಾಜ ಕಲ್ಯಾಣಧಿಕಾರಿ ಪರಶುರಾಮ ಪತ್ತಾರ , ತಾಪಂ ಕಾರ್ಯ ನಿರ್ವಾಹಕ ಅಧಿಕಾರಿ ವಿರಣ್ಣಾ ವಾಲಿ, ಪಪಂ ಮುಖ್ಯಾಧಿಕಾರಿ ಪ್ರಸನ್ನ ಕಲ್ಯಾಣಶೆಟ್ಟಿ,ಮಹಾಂತೇಶ ಕವಲಾಪುರೆ, ಗ್ರೇಡ2 ತಹಶಿಲ್ದಾರ ರಶ್ಮಿ ಜಕಾತಿ, ಆರೋಗ್ಯಧಿಕಾರಿ ಪುಷ್ಪಲತಾ ಸುಣದಕಲ್ ಸೇರಿದಂತೆ ಮತ್ತಿತರರು ಇದ್ದರು.

ರಸ್ತೆ ಸುಧಾರಣೆ ಕಾಮಗಾರಿಗೆ ಚಾಲನೆ

ಚಿಕ್ಕೋಡಿ: ತಾಲೂಕಿನ ಸಿದ್ದಾಪೂರವಾಡಿ ಗ್ರಾಮದಲ್ಲಿ ಶಾಸಕ ಗಣೇಶ ಹುಕ್ಕೇರಿ ಹಾಗೂ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ ಮಂಜೂರಾದ 2 ಕೋಟಿ ರೂ. ಮೊತ್ತದಲ್ಲಿ ರಸ್ತೆ ಸುಧಾರಣಾ ಕಾಮಗಾರಿಗೆ ಗುರುವಾರ ಚಾಲನೆ ನೀಡಲಾಯಿತು. ಸಿದ್ದಾಪೂರವಾಡಿ-ಯಕ್ಸಂಬಾ ಪಟ್ಟಣದವರೆಗೆ 5.2 ಕಿ.ಮೀ ವರೆಗೆ ರಸ್ತೆಯ ಖಡೀಕರಣ ಹಾಗೂ ಡಾಂಬರೀಕರಣ ಕಾಮಗಾರಿಗೆ ಸ್ಥಳೀಯ ಮುಖಂಡರು ಭೂಮಿಪೂಜೆ ನೆರವೇರಿಸಿದರು.

ಈಸಂದರ್ಭದಲ್ಲಿಮುಖಂಡರಾದ ರಣಜೀತ ಶಿರಸೇಟ, ಪಾಂಡು ವಡ್ಡರ, ಅಶ್ವತ್ಥ ಶಿತೋಳೆ, ಸಂತೋಷ ಮಠದ, ರಾಜಾರಾಮ ಪಾಟೀಲ, ಕಲ್ಲಪ್ಪ ಉಮರಾಣೆ, ಭಗವಂತ ಪಾಟೀಲ, ಪ್ರಕಾಶ ರಾಚನ್ನವರ, ಭರತ ಕೋಳೆಕರ, ವಿವೇಕಾನಂದ ಕೋಳೆಕರ, ಅಲ್ಲಾಭಕ್ಷ ಮಾಲದಾರ ಮುಂತಾದವರು ಇದ್ದರು.



ಪುಸ್ತಕದಷ್ಟೇ ಸಾಮಾಜಿಕ ಜ್ಞಾನ ಮುಖ್ಯ



ತೆಲಸಂಗ: ಎನ್ನೆಸ್ಸೆಸ್ ಇದು ವ್ಯಕ್ತಿತ್ವ ವಿಕಸನದ ಒಂದು ಪಾಠಶಾಲೆ. ಇಂದು ನಾವು ಇಲ್ಲಿ ಸೇರಿರುವುದು ಕೇವಲ ಏಳು ದಿನಗಳ ಶಿಬಿರಕ್ಕಲ್ಲ, ಬದಲಿಗೆ ಸಮಾಜದೊಂದಿಗೆ ನಮ್ಮನ್ನು ನಾವು ಜೋಡಿಸಿಕೊಳ್ಳುವ ಒಂದು ಪವಿತ್ರ ಕಾರ್ಯಕ್ಕಾಗಿ ಎಂದು ಎನ್‌ಎಸ್‌ಎಸ್ ಅಧಿಕಾರಿಗಳಾದ ಜ್ಯೋತಿ ಎಸ್.ಎನ್ ಹೇಳಿದರು.

ಸಮೀಪದ ಬನ್ನೂರ ಗ್ರಾಮದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಆವರಣದಲ್ಲಿ ತೆಲಸಂಗದ ಎಸ್‌ಎಂವೈಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್ ಎಸ್‌ಎಸ್ ಘಟಕದ ವಿಶೇಷ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿ, ಒಬ್ಬ ವಿದ್ಯಾರ್ಥಿಗೆ ಪುಸ್ತಕದ ಜ್ಞಾನ ಎಷ್ಟು ಮುಖ್ಯವೋ, ಸಾಮಾಜಿಕ ಜ್ಞಾನವೂ ಅಷ್ಟೇ ಮುಖ್ಯ ಎಂದರು.

ಸಿಕಂದರ ಮುಜಾವರ, ಗುರುರಾಜ ಕಾಮನ, ಸಂಗು ದಾಶ್ಯಾಳ, ಪ್ರಾಂಶುಪಾಲ ಶಿವಕುಮಾರ ಕೆ., ರಮ್ಯಾ ಜೆ., ಡಾ.ಡಿ.ಬಿ.ಬಿರಾದರ, ಡಾ.ಸುಭಾಸ್ ಕಾಂಬಳೆ, ಡಾ.ಬಿ.ಆಯ್. ಮಠಪತಿ, ಶ್ವೇತಾ ಜುಗಳೆ, ವಿಶ್ವನಾಥ ಪಾಟೀಲ, ಶಿವಲಿಂಗ ಮಮಾಗಣಗೇರಿ, ಚಂದ್ರಶೇಖರ, ದಾದಾ ಮಾನಗಾಂವಿ, ಸಚೀನ ಅವಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಉತ್ತಮ ಆಹಾರ ಸೇವಿಸಿ: ಶ್ರೀಗಳು

ರಾಯಬಾಗ: ಪರಮಾತ್ಮ ನಮಗಾಗಿ ನಿಸರ್ಗದಲ್ಲಿ ಹಣ್ಣು ಹಂಪಲು, ಬೆಳೆ ಕಾಳುಗಳಂತಹ ಪೌಷ್ಟಿಕ ಆಹಾರ ನೀಡಿದ್ದು, ಅವುಗಳನ್ನು ಸೇವಿಸಿ ಉತ್ತಮ ಆರೋಗ್ಯ ಹೊಂದಬೇಕು ಎಂದು ನಂದಿಕುರಳಿ ಪಂಚಲಿಂಗೇಶ್ವರ ಮಠದ ವೀರಭದ್ರೇಶ್ವರ ಸ್ವಾಮೀಜಿ ಹೇಳಿದರು.

ಬುಧವಾರ ಸಂಜೆ ತಾಲೂಕಿನ ನಂದಿಕುರಳಿ ಗ್ರಾಮದ ಪಂಚಲಿಂಗೇಶ್ವರ ಮಠದ 39ನೇ ಶರಣ ಸಂಸ್ಕೃತಿ ಉತ್ಸವದಲ್ಲಿ ಪ್ರವಚನ ನೀಡಿ ಮಾತನಾಡಿದ ಅವರು, ಪಾಶ್ಚಾತ್ಯ ಆಹಾರ ಪದ್ಧತಿಗೆ ಮಾರು ಹೋಗಿರುವ ಇಂದಿನ ಯುವ ಜನಾಂಗ ಅನಾರೋಗ್ಯದಿಂದ ಬಳಲುತ್ತಿರುವುದು ಖೇದಕರ ಎಂದರು.

ಕೇಶ್ವಾನಂದ ಸ್ವಾಮಿಜೀ ಮಾತನಾಡಿ, ಸಾವಯುವ ಗೊಬ್ಬರ ಬಳಸಿ ಬೆಳೆಸಿದ ಆಹಾರ ಸೇವನೆಯಿಂದ ಆರೋಗ್ಯ ಉತ್ತಮವಾಗಿರುತ್ತದೆ. ಪ್ರತಿಯೊಬ್ಬರು ತಮ್ಮ ಆರೋಗ್ಯ ಮತ್ತು ಆಹಾರದ ಕಡೆಗೆ ಹೆಚ್ಚಿನ ಗಮನ ನೀಡಬೇಕೆಂದರು.

ಕಾರ್ಯಕ್ರಮದಲ್ಲಿ ಯಶವಂತ ಶಾಸ್ತ್ರೀ, ಶಂಕರಾನಂದ ಸ್ವಾಮಿಜೀ ಹಾಗೂ ಭಕ್ತಾದಿಗಳು ಪಾಲ್ಗೊಂಡಿದ್ದರು. ರಾತ್ರಿ ದಿಯಾ ಹೆಗ್ಡೆ ಹಾಗೂ ಸುಜಾತಾ ಕಲ್ಮೇಶ ಸಂಗಡಿಗರಿಂದ ಸಂಗೀತ ಜಾತ್ರೆ ಜರುಗಿತು.



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
09
ಬಾಗಲಕೋಟೆ
ಗರಿಷ್ಠ 35° ಕನಿಷ್ಠ 27°
ಶುಕ್ರವಾರ
3 ಏಪ್ರಿಲ್ 2026
ಹುಬ್ಬಳ್ಳಿ

ಕಿರುಸುದ್ದಿ

ಏ.5ರಂದು ಜಗಜೀವನರಾಂ ಜಯಂತಿ

ಬೀಳಗಿ: ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರ ಉಪ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿಯಾದ ಹಿನ್ನೆಲೆ ಏ.5ರಂದು ಜರುಗುವ ಡಾ. ಬಾಬು ಜಗಜೀವನರಾಂರವರ 119ನೇ ಜಯಂತಿ ತಾಲೂಕು ಆಡಳಿತದಿಂದ ಬೆಳಗ್ಗೆ 10ಗಂಟೆಗೆ ಡಾ.ಬಾಬು ಜಗಜೀವನರಾಂ ಭವನ ಬೀಳಗಿಯಲ್ಲಿ ಮಹಾನುಭಾವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಸರಳವಾಗಿ ಆಚರಿಸಲಾಗುವುದು ಎಂದು ಜಯಂತಿ ಉತ್ಸವ ಸಮಿತಿ ಅಧ್ಯಕ್ಷರು, ತಹಶೀಲ್ದಾರ್ ವಿನೋದ ಹತ್ತಳ್ಳಿ ತಿಳಿಸಿದ್ದಾರೆ.

ಸ್ವಯಂ ಜನಗಣತಿ ಆರಂಭ

ಕಮತಗಿ: ಭಾರತ ಜನಗಣತಿ 2027ರ ಅಂಗವಾಗಿ ಸ್ವಯಂ ಗಣತಿ ಸಾರ್ವಜನಿಕರಿಗೆ ಕಲಿಸಲಾಗಿದೆ. ಏ.1ರಿಂದ ಆರಂಭವಾದ ಈ ಸೌಲಭ್ಯ ಏ. 15ರ ವರೆಗೆ ಲಭ್ಯವಿರಲಿದೆ ಎಂದು ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಎಫ್.ಎನ್.ಹುಲ್ಲಿಕೇರಿ ತಿಳಿಸಿದ್ದಾರೆ. ಈ ವ್ಯವಸ್ಥೆಯ ಮೂಲಕ ನಾಗರಿಕರು ತಮ್ಮ ಮನೆ, ಕುಟುಂಬದ ಸದಸ್ಯರು, ಸೌಲಭ್ಯಗಳು ಹಾಗೂ ಆಸ್ತಿಗಳ ಕುರಿತು ಮಾಹಿತಿಯನ್ನು ಸ್ವತಃ ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ನೀಡಲಾಗಿದೆ. ಇದರಿಂದ ಜನಗಣತಿ ಪ್ರಕ್ರಿಯೆ ಹೆಚ್ಚು ವೇಗವಾಗಿ ಮತ್ತು ಸುಗಮವಾಗಿ ನಡೆಯುವ ನಿರೀಕ್ಷೆ ಇದೆ. ಸಾರ್ವಜನಿಕರ ಸೌಲಭ್ಯಕ್ಕಾಗಿ ಭಾರತೀಯ ರಿಜಿಸ್ಟ್ರಾರ ಜನರಲ್ ಮತ್ತು ಜನಗಣತಿ ಆಯುಕ್ತರ ಕಚೇರಿ ವತಿಯಿಂದ ವಿಶೇಷ ವೆಬ್ ಪೋರ್ಟಲ್ ಅಭಿವೃದ್ಧಿಪಡಿಸಲಾಗಿದ್ದು, ನಾಗರಿಕರು https://se.census.gov.in ವಿವರಗಳನ್ನು ದಾಖಲಿಸಬಹುದು. ಈ ಹಂತದಲ್ಲಿ ಮನೆಗಳ ಸ್ಥಿತಿ, ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಮೂಲಭೂತ ಸೌಲಭ್ಯಗಳ ಕುರಿತ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಜನರು ಯಾವುದೇ ತಪ್ಪು ಮಾಹಿತಿ ನೀಡದೆ ನಿಖರವಾದ ವಿವರಗಳನ್ನು ಒದಗಿಸುವ ಮೂಲಕ ಈ ಮಹತ್ವದ ರಾಷ್ಟ್ರೀಯ ಕಾರ್ಯಕ್ಕೆ ಸಹಕರಿಸಬೇಕು ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ.

ಏ.30ರೊಳಗೆ ಆಸ್ತಿ ತೆರಿಗೆ ಪಾವತಿಸಿದರೆ ಶೇ.5ರಷ್ಟು ರಿಯಾಯಿತಿ: ಜಾಧವ್

ಇಳಕಲ್: ಸ್ಥಳೀಯ ನಗರಸಭೆಗೆ ಸಾರ್ವಜನಿ ಕರು ತಮ್ಮ ಆಸ್ತಿಗೆ ಸಂಬಂಧಿಸಿದ ಪ್ರಸಕ್ತ ಸಾಲಿನ ತೆರಿಗೆಯನ್ನು ಏ.30ರ ಒಳಗೆ ಪಾವತಿಸಿ ಶೇ.5ರಷ್ಟು ರಿಯಾಯಿತಿ ಪಡೆಯಿರಿ ಎಂದು ಇಳಕಲ್ ನಗರಸಭೆಯ ಪೌರಾಯುಕ್ತ ಶ್ರೀನಿವಾಸ ಜಾಧವ ತಿಳಿಸಿದ್ದಾರೆ.ಮೇ ಮತ್ತು ಜೂನ್ ತಿಂಗಳಲ್ಲಿ ಆಸ್ತಿ ತೆರಿಗೆ ಪಾವತಿಸಿದರೆ ಯಾವುದೇ ರಿಯಾಯಿತಿ ನೀಡುವುದಿಲ್ಲ ಹಾಗೂ ಶೇ.2ರಷ್ಟು ದಂಡ ವಿಧಿಸಲಾಗುವುದು. ನೀರಿನ ಕರ ಬಾಕಿ ಉಳಿಸಿಕೊಂಡು ಹಾಗೂ ಅನಧಿಕೃತ ಜೋಡಣೆ ಪಡೆದಿದ್ದಲ್ಲಿ ಸಂಪರ್ಕವನ್ನು ಕಡಿತಗೊಳಿಸಿ ಕಾನೂನು ಕ್ರಮ ಜರುಗಿಸ ಲಾಗುವುದು ನಗರಸಭೆಯ ವಾಣಿಜ್ಯ ಮಳಿ ಗೆಗಳ ಬಾಡಿಗೆದಾರರು ಬಾಕಿ ಉಳಿಸಿ ಕೊಂಡಲ್ಲಿ ಬೇಗನೆ ಪಾವತಿ ಮಾಡಿಸುವಂತೆ ಸೂಚಿಸಿದ್ದಾರೆ. ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಆಸ್ತಿ ಮಾಲಿಕರು ನಿಗದಿತ ಅವಧಿಯಲ್ಲಿ ತೆರಿಗೆಯನ್ನು ತುಂಬಿ ರಿಯಾಯಿತಿ ಸೌಲಭ್ಯ ಪಡೆದುಕೊಂಡು ನಗರಸಭೆಯ ಅಭಿವೃದ್ಧಿಗೆ ಸಹಕರಿಸಬೇಕು ಎಂದು ನಗರಸಭೆ ಪೌರಾಯುಕ್ತ ಶ್ರೀನಿವಾಸ ಜಾಧವ ಮತ್ತು ಕಂದಾಯ ಅಧಿಕಾರಿ ಪರಶುರಾಮ ನಾರಾಯಣ ತಿಳಿಸಿದ್ದಾರೆ.

ಅಭಿವೃದ್ಧಿಯೇ ಗೆಲುವಿಗೆ ಪೂರಕ

ಬಾಗಲಕೋಟೆ: ದಿ.ಎಚ್.ವೈ.ಮೇಟಿ ಅವರ ಕಾರ್ಯಗಳು ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರ ಗೆಲುವಿಗೆ ಪೂರಕವಾಗಲಿವೆ ಎಂದು ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಚರಂತಿಮಠ ಹೇಳಿದರು.

ನಗರದ ವಿವಿಧೆಡೆ ಗುರುವಾರ ಸಂಜೆ ಪ್ರಚಾರ ಕೈಗೊಂಡು ಅವರು ಮಾತನಾಡಿ, ಎಲ್ಲ ಕಡೆ ಬಿಜೆಪಿ ಬಗ್ಗೆ ಆಕ್ರೋಶ ವ್ಯಕ್ತವಾಗುತ್ತಿದೆ. ಕಾಂಗ್ರೆಸ್ ಸರಕಾರದ ಭಾಗ್ಯಗಳು ಬಡವರ ಕೈ ಹಿಡಿದಿವೆ. ಜನಪರ ಆಡಳಿತದಿಂದ ಕಾಂಗ್ರೆಸ್ ಗೆಲುವು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಚಿವ ಆರ್.ಬಿ.ತಿಮ್ಮಾಪೂರ, ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ನಾಗರಾಜ ಹದ್ಲಿ, ಶಿವಕುಮಾರ ನಂದಿಕೋಲಮಠ, ಆನಂದ ಜಿಗಜಿನ್ನಿ, ಸಂತೋಷ ಹೊಕ್ರಾಣಿ, ಸಂಜೀವ ವಾಡಕರ, ಬಸವರಾಜ ಅಂಬಿಗೇರ, ಸುಧಾ ಪಾಟೀಲ, ರಕ್ಷಿತಾ ಈಟಿ ಇದ್ದರು.

ಸಿಇಒ ಭೇಟಿ

ಗುಳೇದಗುಡ್ಡ: ಜಿಪಂ ಸಿಇಒ ಶಶಿಧರ ಕುರೇರ ಅವರು ಗುರುವಾರ ಪಟ್ಟಣದಲ್ಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ, ಪರೀಕ್ಷಾ ಕೇಂದ್ರಗಳಲ್ಲಿನ ವ್ಯವಸ್ಥೆ ಪರಿಶೀಲಿಸಿದರು. ಪಟ್ಟಣದ ಬಾಲಕರ ಸರ್ಕಾರಿ ಪ್ರೌಢಶಾಲೆ ಹಾಗೂ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢಶಾಲೆ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿದ ಅವರು, ಪರೀಕ್ಷೆಯ ಪಾರದರ್ಶಕತೆ ಮತ್ತು ನಿಷ್ಪಕ್ಷಪಾತತೆ ಕಾಪಾಡಲು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದರು. ಪರೀಕ್ಷಾ ಸಿಬ್ಬಂದಿಗೆ ಸೂಕ್ತ ಮಾರ್ಗದರ್ಶನ ನೀಡಿ, ಯಾವುದೇ ಅಕ್ರಮಗಳಿಗೆ ಅವಕಾಶ ನೀಡಬಾರದು ಎಂದು ಸೂಚಿಸಿದರು. ತಾಪಂ ಇಒ ಮಲ್ಲಿಕಾರ್ಜುನ ಬಡಿಗೇರ, ಸಹಾಯಕ ನಿರ್ದೇಶಕ ರಾಮಚಂದ್ರ ಮೇತ್ರಿ ಇದ್ದರು.



ಬಾದಾಮಿ: ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಅವರು ಗುರುವಾರ ಪರೀಕ್ಷೆಯ ಕೊನೆಯ ದಿನ ಬಾದಾಮಿ ಹಾಗೂ ಗುಳೇದಗುಡ್ಡದ ತಾಲೂಕಿನ 10 ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು. ತಾಪಂ ಇಒ ಸತೀಶ ಮಾಕೊಂಡ, ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ, ನೋಡಲ್ ಅಧಿಕಾರಿ ಬಿ.ಕೆ.ಚಿಮಲ್, ಪರೀಕ್ಷಾ ಕೇಂದ್ರದ ಅಧೀಕ್ಷಕರು ಹಾಜರಿದ್ದರು.

ಸಂಭ್ರಮದ ಹನುಮ ಜಯಂತಿ: ಗದೆ ಪೂಜೆ

ಮಹಾಲಿಂಗಪುರ: ಸನಾತನ ಸಂಸ್ಥೆ ಮತ್ತು ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಸ್ಥಳೀಯ ಮಾರುತಿ ದೇವಾಲಯದಲ್ಲಿ ಗದೆ ಪೂಜೆ ನೆರವೇರಿಸಿ ಹಿಂದೂ ರಾಷ್ಟ್ರ ಸ್ಥಾಪನೆಯ ಪ್ರತಿಜ್ಞೆ ಮಾಡಲಾಯಿತು. ಪ್ರಭು ಶ್ರೀರಾಮಚಂದ್ರ, ವೀರ ಹನುಮಂತರಾಯಪ್ಪ ಸಾಕ್ಷಿಯಾಗಿ ನಾವು ಪ್ರತಿಜ್ಞೆ ಮಾಡುತ್ತಿದ್ದೇವೆ, ದೇವತೆ, ದೇಶ, ಮತ್ತು ಧರ್ಮ ಯುಗಳ ಯಾವುದೇ ರೀತಿಯ ವಿಡಂಬನೆಯನ್ನು ನಾವು ಸಹಿಸುವುದಿಲ್ಲ. ಪ್ರೈ ಶ್ರೀರಾಮ, ದೇಶ ಮತ್ತು ಧರ್ಮದ ಮೇಲೆ ಬಂದಿರುವ ಪ್ರತಿಯೊಂದು ಸಂಕಟವನ್ನು ತೀವ್ರ ಪ್ರತಿಕಾರ ಮಾಡಿ ಹಿಮ್ಮೆಟ್ಟಿಸಲು ನೀವೇ ನಮಗೆ ಬಲ ನೀಡಿ. ನಮ್ಮ ಪೂರ್ವಜರು ತೋರಿಸಿಕೊಟ್ಟ ಪರಂಪರೆ ನಾವು ಅಭಿಮಾನದಿಂದ ಗೌರವಿಸುವೆವು, ಅವರು ನಿರ್ಮಿಸಿರುವ ಧರ್ಮ ಗ್ರಂಥ, ಸಂಸ್ಕೃತಿ ಪರಂಪರೆ ಮುಂತಾದವುಗಳನ್ನು ನಾವು ಚಾಚೂ ತಪ್ಪದೆ ಪಾಲಿಸುವೆವು. ಹಿಂದೂ ರಾಷ್ಟ್ರ ಸ್ಥಾಪನೆ ಆಗುವ ತನಕ ನಾವು ಶಾಂತವಾಗಿ ಕುಳಿತುಕೊಳ್ಳುವುದಿಲ್ಲ ಇನ್ನು ಒಂದೇ ಗುರಿ ಹಿಂದು ರಾಷ್ಟ್ರ ಹಿಂದೂ ರಾಷ್ಟ್ರ, ಹಿಂದೂ ರಾಷ್ಟ್ರ ಎಂಬ ಪ್ರತಿಜ್ಞೆ ಮಾಡಿದರು. ಮುಖಂಡರಾದ ಮಹಾಲಿಂಗಪ್ಪ ಕಂಕಣವಾಡಿ, ರವಿ ಜವಳಗಿ, ರಾಘವೇಂದ್ರ ಗರಗಟಗಿ, ಮಹಾಲಿಂಗ ಹಾವನಳ್ಳಿ, ಧರ್ಮರಾಜ ಪೂಜಾರಿ, ಶ್ರೀನಿಧಿ ಕುಲಕರ್ಣಿ, ರಾಘು ಪವಾರ, ಹೇಮಂತ ಗುರವ, ರಾಘು ಶಿರೋಳ, ಬಸವರಾಜ ಮುರಾರಿ, ಸಾಗರ ಪರೀಟ, ಭರತ ಕದ್ದಿಮನಿ, ಹನಮಂತ ಮಾದರ, ಲಕ್ಷ್ಮೀ ಹಳ್ಳಿ, ಶೋಭಾ ಅಂಬಿ, ಸಾಗರ ಹಿಕಡಿ, ಮಹಾಲಿಂಗ ಬೀಳಗಿ ಶಿವಾನಂದ ಹುಣಶ್ಯಾಳ, ರಾಜು ಘಟ್ಟೆಪ್ಪನವರ, ಪ್ರಜ್ವಲ ಯಾದವಾಡ, ಚೇತನ ಅವರಾದಿ, ಮಹಾಲಿಂಗ ಕೊಡತಿ ಸೇರಿದಂತೆ ಇತರರಿದ್ದರು.



ಮಹಾಲಿಂಗಪುರ: ಸನಾತನ ಸಂಸ್ಥೆ ಮತ್ತು ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಸ್ಥಳೀಯ ಮಾರುತಿ ದೇವಾಲಯದಲ್ಲಿ ಗದೆ ಪೂಜಿ ನೆರವೇರಿಸಿ ಹಿಂದೂ ರಾಷ್ಟ್ರ ಸ್ಥಾಪನೆಯ ಪ್ರತಿಜ್ಞೆ ಮಾಡಲಾಯಿತು. ಮಹಾಲಿಂಗಪ್ಪ ಕಂಕಣವಾಡಿ, ರವಿ ಜವಳಗಿ, ರಾಘವೇಂದ್ರ ಗರಗಟಗಿ, ಮಹಾಲಿಂಗ ಹಾವನಳ್ಳಿ, ಧರ್ಮರಾಜ ಪೂಜಾರಿ, ಶ್ರೀನಿಧಿ ಕುಲಕರ್ಣಿ, ರಾಘು ಪವಾರ, ಹೇಮಂತ ಗುರವ, ರಾಘು ಶಿರೋಳ, ಬಸವರಾಜ ಮುರಾರಿ, ಸಾಗರ ಪರೀಟ, ಭರತ ಕದ್ದಿಮನಿ, ಹನಮಂತ ಮಾದರ, ಲಕ್ಷ್ಮೀ ಹಳ್ಳಿ ಇತರರಿದ್ದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಭರ್ಜರಿ ಪ್ರಚಾರ | ಪೂಜಾರ ಹೇಳಿಕೆ

ಅಧಿಕಾರದಲ್ಲಿದ್ದರೂ ಕಾಂಗ್ರೆಸ್‌ಗೆ ಭಯ

ಬಾಗಲಕೋಟೆ: ಅಧಿಕಾರದಲ್ಲಿದ್ದರೂ ಸೋಲಿನ ಭಯದಿಂದ ಮುಖ್ಯಮಂತ್ರಿ ಉಪಮುಖ್ಯ ಮಂತ್ರಿಗಳು ಬಾಗಲಕೋಟೆಯಲ್ಲಿ ಬೀಡು ಬುಟ್ಟಿದ್ದು ಬಿಜೆಪಿ ಅಲೆಯಿಂದ ಹತಾಶರಾಗಿ ತಲೆಬುಡ ಇಲ್ಲದ ಸುಳ್ಳು ಹೇಳಿಕೆ ನೀಡುತ್ತಿದ್ದಾರೆ. ಅವರು ಏನೇ ಮಾಡಿದರೂ 27 ಸಾವಿರ ಮತಗಳ ಅಂತರದಲ್ಲಿ ವೀರಣ್ಣ ಚರಂತಿಮಠ ಗೆಲ್ಲಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಹೇಳಿದರು.



ಉಪಚುನಾವಣೆ ನಿಮಿತ್ತ ನಗರದ ವಾರ್ಡ ನಂ.17ರಲ್ಲಿ ಬಿಜೆಪಿ ಮತಪ್ರಚಾರ ಮಾಡಿ ಮಾತನಾಡಿದ ಅವರು, ನಗರ ಮತ್ತು ಗ್ರಾಮೀಣ ಭಾಗದಲ್ಲಿ ಮತಯಾಚನೆಯಲ್ಲಿ ಅದ್ದೂರಿ ಸ್ವಾಗತ ಸಿಗುತ್ತಿದೆ. ಮತದಾರರು ಬಿಜೆಪಿಗೆ ನಿಶ್ಚಿತವಾಗಿ ಮತದಾನ ಮಾಡುವ ಭರವಸೆ ನೀಡುತ್ತಿದ್ದಾರೆ. ಉಪ ಮುಖ್ಯಮಂತ್ರಿಗಳು ಬಾಗಲಕೋಟೆಗೆ ಬಂದ ತಕ್ಷಣ ವೀರಣ್ಣ ಚರಂತಿಮಠ ಅವರ ಪರವಾದ ಅಲೆ ಕಂಡು ಹತಾಶರಾಗಿ ಸುಳ್ಳು ಆರೋಪಗಳನ್ನು ಹೊರಿಸುತ್ತಿದ್ದು ಜನರ ದಾರಿ ತಪ್ಪಿಸಲು ಹೊರಟಿದ್ದಾರೆ ಎಂದರು.

ಸಂಸದ ಗೋವಿಂದ ಕಾರಜೋಳ ಮಾತನಾಡಿ, ಕಾಂಗ್ರೆಸ್ ದುರಾಡಳಿತಕ್ಕೆ ರಾಜ್ಯ ಬೇಸತ್ತಿದೆ. ಮುಖ್ಯಮಂತ್ರಿ ಉಪ ಮುಖ್ಯಮಂತ್ರಿಗಳು ಜನರನ್ನು ಹೆದರಿಸುವ ಕೆಲಸ ಮಾಡುತ್ತಿದ್ದಾರೆ. ಬಾಗಲಕೋಟೆಗೆ ಬೇಕಾಗಿರುವುದು ಗುಂಡಾಗಿರಿಯಲ್ಲ, ಅಭಿವೃದ್ಧಿ ಕೆಲಸ ಅನ್ನುವುದು ಅವರಿಗೆ ಗೊತ್ತಿಲ್ಲ. ಮತದಾರರನ್ನು ಬೆದರಿಸಿದರೆ ಜನ ಅವರಿಗೆ ತಕ್ಕ ಉತ್ತರ ಕೊಡುತ್ತಾರೆ. ವೀರಣ್ಣ ಚರಂತಿಮಠ ಅವರು ಮೂರು ಸಾವಿರ ಕೋಟಿಗಿಂತ ಹೆಚ್ಚು ಅನುದಾನ ತಂದಿದ್ದಾರೆ. ಸೋಲುವ ಭಯದಿಂದ ಸಿಎಂ ಡಿಸಿಎಂ ಬಂದಿದ್ದಾರೆ. ಭ್ರಷ್ಟಾಚಾರದ ಹಣ ತಂದು ಹಂಚಿದರೆ ಜನ ಕಾಂಗ್ರೆಸ್ ಗೆ ಮತ ನೀಡಲ್ಲ, ದುಡಿಯುವ ಎತ್ತು ಯಾವುದು ಎಂದು ಜನಕ್ಕೆ ಗೊತ್ತಿದೆ. ಕಾಂಗ್ರೆಸ್ ಸುಳ್ಳು ಆರೋಪಗಳಿಗೆ ಸರಿಯಾದ ಉತ್ತರ ಮತದಾನದಲ್ಲಿ ಸಿಗಲಿದೆ ಎಂದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಮಾತನಾಡಿ, ಸರಕಾರ ಮೆಡಿಕಲ್ ಕಾಲೇಜು ಘೋಷಣೆ ಮಾಡಿದ್ದರೂ ಇಲ್ಲಿಯವರೆಗೆ ನಿರ್ಮಾಣ ಕಾರ್ಯ ಶುರುಮಾಡಲು ಆಗಿಲ್ಲ. ಚುನಾವಣೆ ಮುಂದಿಟ್ಟುಕೊಂಡು ಈಗ ಅಡಿಗಲ್ಲು ಹಾಕಿದ್ದಾರೆ. ಸರಕಾರ ಮನಸ್ಸು ಮಾಡಿದರೆ ಒಂದು ಮೆಡಿಕಲ್ ಕಾಲೇಜು ನಿರ್ಮಾಣ ಮಾಡಲು ವರ್ಷಗಳು ಬೇಕಿಲ್ಲ, ಬಿವಿವಿ ಸಂಘದಿಂದ ನಾವೇ 20ಕ್ಕೂ ಹೆಚ್ಚು ಮೆಡಿಕಲ್ ಕಾಲೇಜುಗಳನ್ನು ನಿರ್ಮಾಣ ಮಾಡಿದ್ದೇವೆ. ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು, ಕೆರೆತುಂಬಿಸುವಕೆಲಸ, ನವನಗರದಲ್ಲಿ ಸರಕಾರಿ ಪಾಲಿಟೆಕ್ನಿಕ್ ಕಾಲೇಜು, ಜಿಲ್ಲಾ ಕ್ರೀಡಾಂಗಣದ ದುರಸ್ತಿ, ಜಿಲ್ಲಾಡಳಿತ ಭವನ ಕಛೇರಿ ನವೀಕರಣ, ಸರಕಾರಿ ಪದವಿ ಮಹಾವಿದ್ಯಾಲಯ, ತೋಟಗಾರಿಕಾ ವಿಶ್ವವಿದ್ಯಾಲಯ ಇವೆಲ್ಲವೂಗಳನ್ನು ಬಿಜೆಪಿ ಮಾಡಿದೆ. ಅಭಿವೃದ್ಧಿ ಪಾಠವನ್ನು ನಮಗೆ ಮಾಡುವುದನ್ನು ಬಿಟ್ಟು ತಾವು ಕಲಿತುಕೊಳ್ಳಲಿ. ಕೇವಲ ಉಪಚುನಾವಣೆಗಾಗಿ ಸರಕಾರದ ಕೆಲಸಗಳನ್ನು ಬಿಟ್ಟು ಐದು ದಿನ ಇಲ್ಲಿ ಕೂತುಕೊಳ್ಳುವುದರಲ್ಲಿ ಏನಿದೆ. ಅಭಿವೃದ್ಧಿ ಪರವಾದ ಚರ್ಚೆಗೆ ಬರುವುದಾದರೆ ಬರಲಿ ನಾವು ಸಿದ್ದರಿದ್ದೇವೆ ಎಂದರು.

ಶಾಸಕ ಸಿದ್ದು ಸವದಿ, ಮಾಜಿ ಶಾಸಕ ಮಹಾದೇವಪ್ಪ ಯಾದವಾಡ ಇದ್ದರು.

ಕಾಂಗ್ರೆಸ್ ಗೆಲುವು ನಿಶ್ಚಿತ: ಪಾಟೀಲ

ಬಾಗಲಕೋಟೆ: ಉಪಚುನಾವಣೆ ಸಂದರ್ಭದಲ್ಲಿ ಮತದಾರರ ಪಟ್ಟಿಯಲ್ಲಿ ಸಾವಿರಾರು ಜನರ ಹೆಸರುಗಳನ್ನು ಅಕ್ರಮವಾಗಿ ಸೇರ್ಪಡೆ ಮಾಡಿಲಾಗಿದ್ದು, ಈ ಬಗ್ಗೆ ಈಗಾಗಲೇ ರಾಜ್ಯ ಮತ್ತು ಜಿಲ್ಲಾ ಚುನಾವಣೆ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ಬಿಜೆಪಿ ವಾಮಮಾರ್ಗದ ಮೂಲಕ ಅನೇಕ ಷಡ್ಯಂತ್ರ ರಚಿಸಿದರೂ ಸಹ ಕೊನೆಗೆ ಕಾಂಗ್ರೆಸ್ ಗೆಲುವು ಗ್ಯಾರಂಟಿ ಎಂದು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಹೇಳಿದರು.

ನಗರದಲ್ಲಿ ಗುರುವಾರ ಉಪಚುನಾವಣೆ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿ.ಎಚ್.ವೈ. ಮೇಟಿ ಅವರ ಅಭಿವೃದ್ಧಿ ಕಾರ್ಯ, ಪಂಚ ಗ್ಯಾರಂಟಿಗಳು ಕಾಂಗ್ರೆಸ್ ಗೆಲುವಿಗೆ ಶ್ರೀರಕ್ಷೆಯಾಗಲಿವೆ. ಆದರೆ, ಬಿಜೆಪಿ ವಾಮ ಮಾರ್ಗವನ್ನು ಬಳಸಿ ಚುನಾವಣೆಯಲ್ಲಿ ಗೆಲುವು ಸಾಧಿಸುವ ಕುತಂತ್ರ ಮಾಡುತ್ತಿದೆ. ಈ ಕುತಂತ್ರ ಫಲಿಸುವುದಿಲ್ಲ. ಸಾಧನೆಯನ್ನು ಇಟ್ಟುಕೊಂಡು ನಾವು ಪ್ರಚಾರ ಮಾಡಬೇಕೇ ಹೊರತು, ಮತದಾರರ ಪಟ್ಟಿಯಲ್ಲಿ ಡುಪ್ಲಿಕೇಟ್ ಮತದಾರರನ್ನು ಸೇರಿಸಿ ಚುನಾವಣೆ ಮಾಡುವುದು ಸರಿಯಲ್ಲ, ಬಿಜೆಪಿಯವರು ಎಷ್ಟೇ ಕುತಂತ್ರ ಮಾಡಿದರೂ ಗೆಲುವು ನಮ್ಮದೆ ಎಂದರು.

ಅಕ್ರಮ ಮತಪಟ್ಟಿ ಕುರಿತು ಚುನಾವಣಾಧಿಕಾರಿಗಳು ವಿಶೇಷ ಮುತವರ್ಜಿ ವಹಿಸಿ ಖೊಟ್ಟಿ ಹೆಸರುಗಳನ್ನು ಕಡಿಮೆ ಮಾಡಬೇಕು ಮತ್ತು ಖೊಟ್ಟಿ ಮತದಾನ ತಡೆಯುವ ನಿಟ್ಟಿನಲ್ಲಿ ಗಂಭೀರ ಕ್ರಮ ಕೈಗೊಳ್ಳಬೇಕು. ಅಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಹೆಚ್ಚಿನ ಭದ್ರತೆ ಒದಗಿಸಬೇಕು. ಸಿಸಿಟಿವಿ ಕ್ಯಾಮೆರಾ, ಸ್ಟ್ಯಾಟಿಕ್ ಕ್ಯಾಮೆರಾ ಅಳವಡಿಸಬೇಕ ಸಿ.ಐ.ಎಸ್.ಎಫ್ ಭದ್ರತಾ ತುಕಡಿಗಳನ್ನು ನಿಯೋಜಿಸಬೇಕು. ಬಾಗಲಕೋಟೆ ನಗರ ವ್ಯಾಪ್ತಿಯ ಮತಗಟ್ಟೆಗಳಲ್ಲಿ ಎರಡೆರಡು ಸಲ ಹೆಸರು ನೋಂದಾವಣೆ ಮಾಡಿಕೊಂಡಿರುವ ಮತದಾರರ ಬಗ್ಗೆ ಕುಲಂಕಶವಾಗಿ ಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿದರು.

ಮಾಜಿ ಶಾಸಕ ಪ್ರೊ.ರಾಜು ಆಲಗೂರ, ಕೆಪಿಸಿಸಿ ಪ್ರಚಾರ ಸಮಿತಿ ಬಾಗಲಕೋಟೆ ಜಿಲ್ಲಾಧ್ಯಕ್ಷ ನಾಗರಾಜ ಹದ್ಲಿ, ಜಿಲ್ಲಾ ಕಾಂಗ್ರೆಸ್ ವಕ್ತಾರ ಚಂದ್ರಶೇಖರ ರಾಠೋಡ, ವಿಜಯಪುರ ವಿಡಿಎ ಅಧ್ಯಕ್ಷ ಡಾ.ಗಂಗಾಧರ ಸಂಬಣ್ಣಿ, ಎನ್‌ಎಸ್‌ಯುಐ ರಾಜ್ಯಾಧ್ಯಕ್ಷ ಕೀರ್ತಿ ಗಣೇಶ, ಪ್ರಧಾನ ಕಾರ್ಯದರ್ಶಿ ಸದ್ದಾಂ ಕುಂಟೋಜಿ ಉಪಸ್ಥಿತರಿದ್ದರು.



ಜಾತ್ರೆಗಳು ಸಾಮಾಜಿಕ ಸಾಮರಸ್ಯದ ಪ್ರತೀಕ

ಬೀಳಗಿ: ಕನ್ನಡ ಸಾಂಸ್ಕೃತಿಕ ಲೋಕ ಶ್ರೀಮಂತಗೊಳಿಸಿ, ನಾಡಿನ ಪರಂಪರೆ ಹೆಚ್ಚಿಸಿರುವ ಜಾತ್ರೆಗಳು ಸಾಮಾಜಿಕ ಸಾಮರಸ್ಯದ ಪ್ರತೀಕವಾಗಿವೆ ಎಂದು ಸಾಹಿತಿ ಡಾ.ಚಂದ್ರಶೇಖರ ಕಾಳನ್ನವರ ಹೇಳಿದರು.

ತಾಲೂಕಿನ ನಾಗರಾಳ ಗ್ರಾಮದ ಕಪ್ಪರ ಪಡಿಯಮ್ಮದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಅ.ಭಾ.ಸಾ.ಪ ತಾಲೂಕು ಘಟಕ ಬೀಳಗಿ, ಕ.ಜಾ.ಪ ತಾಲೂಕು ಘಟಕ ಬೀಳಗಿ ಸಯುಂಕ್ತಾಶ್ರಯದಲ್ಲಿ ನಡೆದ ಶರಣ ಸಾಂಸ್ಕೃತಿಕ ವೈಭವ ಮತ್ತು ಜಾನಪದ ಕಲಾ ಮಹೋತ್ಸವ ಉದ್ಘಾಟಿಸಿ ಮಾತನಾಡಿದರು.

ನಾಗರಾಳ ಗ್ರಾಮ ಮತ್ತು ದಿಗಂಬರೇಶ್ವರ ಮಠವು ನಾಡಿನಲ್ಲಿ ಭಾವೈಕ್ಯತೆ ಬೆಳೆಸುವ, ಉಳಿಸುವ ಕಾರ್ಯ ಮಾಡುತ್ತಿದೆ. ಆ ಮೂಲಕ ಸಾಹಿತ್ಯ, ಸಾಂಸ್ಕೃತಿಕ ಪರಂಪರೆಗೆ ಅಪಾರ ಕೊಡುಗೆ ನೀಡುತ್ತಾ ಬಂದಿದೆ. ಈ ಗ್ರಾಮದಲ್ಲಿ ನಡೆಯುವ ನೆಲಮೂಲ ಸಂಸ್ಕೃತಿಯ ರೈತ ಪರಂಪರೆಯ ದನದ ಜಾತ್ರೆ ಇಡೀ ಉತ್ತರ ಕರ್ನಾಟಕದಲ್ಲಿಯೇ ತುಂಬಾ ಪ್ರಸಿದ್ಧಿ ಪಡೆದಿದೆ ಎಂದರು.ನಾಡಿನ ಶರಣ ಸಂಸ್ಕೃತಿ ಪರಂಪರೆ, ಜಾನಪದರ ಬದುಕಿನ ಸಾಂಸ್ಕೃತಿಕ ಕಲೆಗಳನ್ನು ಉಳಿಸಿ ಮತ್ತು ಬೆಳೆಸುವ ಕಾರ್ಯವನ್ನು ನಾಗರಾಳದ ಕಪ್ಪರ ಪಡಿಯಮ್ಮದೇವಿಯ ಜಾತ್ರೆಯ ಮೂಲಕ ಪ್ರತಿವರ್ಷವು ಗ್ರಾಮದ ಸಾಂಸ್ಕೃತಿಕ ಸಂಘಟಕರು, ಗುರು ಹಿರಿಯ ಮಾಡಿಕೊಂಡು ಬಂದಿರುವುದು ಮಾದರಿಯಾಗಿದೆ ಎಂದರು.

ಕಲ್ಮಠದ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ನಮ್ಮ ನೆಲದ ಜಾತ್ರೆಗಳು ಧಾರ್ಮಿಕ ಮತ್ತು ಸಾಂಸ್ಕೃತಿಕದ ಭಾಗವಾಗಿವೆ ಎಂದರು. ನಿವೃತ್ತ ಕೃಷಿ ಅಧಿಕಾರಿ ಪಿ.ಡಿ.ಜತ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾಗರಾಳ ಗ್ರಾಮ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕವಾಗಿ ಶ್ರೀಮಂತವಾದ ಪರಂಪರೆ ಸಂಪ್ರದಾಯ ಹೊಂದಿದೆ ಎಂದು ಹೇಳಿದರು. ಕಸಾಪ ತಾಲೂಧ್ಯಕ್ಷ ಗುರುರಾಜ ಲೂತಿ ಆಶಯ ನುಡಿ ಹೇಳಿದರು. ನಾಗರಾಳ ದಿಗಂಬರೇಶ್ವರ ಮಠದ ಶೇಷಪ್ಪಯ್ಯ ಸ್ವಾಮಿಗಳು, ಬೀಳಗಿ ಬ್ರಹನ್ಮಠದ ಶಿವಾನಂದ ದೇವರು, ಬೀಳಗಿ ಹುಚ್ಚೇಶ್ವರ ಮಠದ ಫಕೀರಯ್ಯ ಸ್ವಾಮಿಗಳು, ಶ್ರೀಮಠದ ನಿಂಗಪ್ಪಯ್ಯ ಸ್ವಾಮಿಗಳು ನೇತೃತ್ವ ವಹಿಸಿ ಆಶೀರ್ವಚನ ನೀಡಿದರು. ಅಭಾಸಾಪ ತಾಲೂಕಾಧ್ಯಕ್ಷ ಕಾಶಿನಾಥ ಸೋಮನಕಟ್ಟಿ, ಕಜಾಪ ತಾಲೂಕಾಧ್ಯಕ್ಷ ಶೇಖರ ಗೊಳಸಂಗಿ, ಚಿದಾನಂದ ಜಡಿಮಠ, ಸಿದ್ದು ಸೋಮನಕಟ್ಟಿ, ನಿಂಗರಾಜ ಕಂಠಿ, ಪಡಿಯಪ್ಪ ಕೊಟ್ನಳ್ಳಿ, ದಾನಪ್ಪ ಮುಂಡಗನೂರ, ಶ್ರೀವರ ಗೊಳಸಂಗಿ, ಅವಿನಾಶ ಜತ್ತಿ ಮತ್ತಿತರಿದ್ದರು.



ಆಸ್ಪತ್ರೆಗೆ ತೊಂದರೆ ಕೊಡುವವರ ವಿರುದ್ಧ ಕ್ರಮಕ್ಕೆ ಮನವಿ

ಬಾದಾಮಿ: ಕೆಲವು ಅನಪೇಕ್ಷಿತ ಅನಧಿಕೃತ ವ್ಯಕ್ತಿಗಳು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಫೋಟೋ ಹಾಗೂ ವಿಡಿಯೋ ಚಿತ್ರಿಕರಣ ಮಾಡುವ ಮೂಲಕ ವೈದ್ಯರ ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿರುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ ಐ.ಎಂ.ಎ.ಮತ್ತು ಐ.ಎಫ್.ಐ.ಸಂಘಟನೆ ವತಿಯಿಂದ ತಹಶೀಲ್ದಾರ್ ಎಸ್.ಎಫ್.ಬೊಮ್ಮನ್ನವರ ಮತ್ತು ಸಿಪಿಐ ಕರಿಯಪ್ಪ ಬನ್ನೆ ಅವರಿಗೆ ಮನವಿ ಸಲ್ಲಿಸಲಾಯಿತು.

ವೈದ್ಯರ ಹಾಗೂ ರೋಗಿಗಳ ಫೋಟೋಗಳನ್ನು ತೆಗೆಯುವದು ಹಾಗೂ ವಿಡಿಯೋಗಳನ್ನು ಮಾಡಿ ಸಾಮಾಜಿಕ ಜಾಲತಾನದಲ್ಲಿ ಹರಿಬಿಡುತ್ತಿದ್ದಾರೆ. ಇದರಿಂದಾಗಿ ಎಲ್ಲಾ ವೈದ್ಯರಿಗೆ ಮಾನಸಿಕವಾಗಿ ಬಹಳಷ್ಟು ಹಿಂಸೆ ಆಗುತ್ತಿದ್ದು ರೋಗಿಗಳಿಗೆ ಒಳ್ಳೆಯ



ಸೇವೆ ಕೊಡಲು ತೊಂದರೆಯಾಗುತ್ತಿದೆ. ಇದರಿಂದ ಪದೆ ಪದೆ ನಮ್ಮ ಕರ್ತವ್ಯಕ್ಕೆ ಅಡ್ಡಿಯಾಗುತ್ತಿದೆ. ಆದ ಕಾರಣ ತಾವು ದಯಾ ಮಾಡಿ ಫೋಟೋ ಮತ್ತು ವಿಡಿಯೋ ತೆಗೆಯುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ನಮಗೆ ಯಾವುದೇ ಅಂಜಿಕೆ ಇಲ್ಲದೆ ಒಳ್ಳೆಯ ಸೇವೆಯನ್ನು ಕೊಡಲು ತಾವು ಅನುವು ಮಾಡಿಕೊಡಬೇಕು. ನಮ್ಮ ಬಾದಾಮಿ ತಾಲೂಕಿನ ಎಲ್ಲ ಆಸ್ಪತ್ರೆ ಹಾಗೂ ಕ್ಲಿನಿಕ್‌ಗಳನ್ನು ಬಂದ್ ಮಾಡಿ ನಮ್ಮ ಸೇವೆ ಹಿಂಪಡೆದು, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಇವರ ಕಚೇರಿ ಮುಂದೆ ಅನಿರ್ದಿಷ್ಟಾವಧಿ ಧರಣಿ ಕೂಡುತ್ತೇವೆಂದು ತಮಗೆ ತಿಳಿಸಲು ಬಯಸುತ್ತೇವೆ ಹಾಗೂ ಇದರಿಂದಾಗಿ ತಾಲೂಕಿನ ರೋಗಿಗಳಿಗೆ ತೊಂದರೆ ಆದಲ್ಲಿ ನಾವು ಹೊಣೆಗಾರರಲ್ಲ ಎಂದು ಮನವಿ ಸಲ್ಲಿಸಿದರು.

ಐ.ಎಂ.ಎ.ಅಧ್ಯಕ್ಷ ಡಾ.ಆರ್.ಸಿ.ಭಂಡಾರಿ, ಕಾರ್ಯದರ್ಶಿ ಡಾ.ಚಂದ್ರಶೇಖರ ನೀರಲಗಿ, ಎ.ಎಫ್.ಐ.ಅಧ್ಯಕ್ಷ ಡಾ.ವಿಜಯಾ ಹೊಸಳ್ಳಿ, ಕಾರ್ಯದರ್ಶಿ ಡಾ.ಶ್ರೀಧರ ದೂಗಳದ, ತಾಲೂಕು ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಶ್ರೀಧರ ಫತ್ತೇಪೂರ, ಕಾರ್ಯದರ್ಶಿ ಪ್ರದೀಪ ಆಳಂದ, ಸೇರಿದಂತೆ ಮೂರು ಸಂಘಟನೆಗಳು ಎಲ್ಲ ಸದಸ್ಯರು ಉಪಸ್ಥಿತರಿದ್ದರು.

ಶಾಸಕ ಕಾಶಪ್ಪನವರಿಂದ ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚನೆ

ಅಮೀನಗಡ: ಬಾಗಲಕೋಟೆ ಲೋಕಸಭಾ ಉಪಚುನಾವಣೆಯ ಹಿನ್ನೆಲೆ ಪಟ್ಟಣದಲ್ಲಿ ಶಾಸಕ ವಿಜಯಾನಂದ ಕಾಶಪ್ಪನವರ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರ ಪರವಾಗಿ ಮನೆ ಮನೆಗೆ ಭೇಟಿ ನೀಡಿ ಮತಯಾಚನೆ ಮಾಡಲಾಯಿತು.

ಪಟ್ಟಣದ ಕುರುವಿನ ಶೆಟ್ಟಿ ಸಮಾಜದ ಮಂಗಳ ಭವನದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ನೇಕಾರರ ಹಿತರಕ್ಷಣೆ ಮತ್ತು ಕೈಮಗ್ಗ ವೃತ್ತಿಗೆ ಶಕ್ತಿ ತುಂಬುವ ಕುರಿತು ಪ್ರಮುಖ ಆಶ್ವಾಸನೆ ನೀಡಿದರು. ರೈತರ ಸಾಲ ಮನ್ನಾ ಮಾಡಿದ ಮಾದರಿಯಲಲಿ ನೇಕಾರರ ಸಂಕಷ್ಟಕ್ಕೆ ಸ್ಪಂದಿಸಿ ಅವರ ಸಾಲ ಮನ್ನಾ ಮಾಡಿದ ಕೀರ್ತಿ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲುತ್ತದೆ. ಇಂದಿನ ಆಧುನಿಕ ಯುಗದಲ್ಲೂ ನೇಕಾರರು ಸಮಾಜದ ಅವಿಭಾಜ್ಯ ಅಂಗವಾಗಿದ್ದಾರೆ. ಅವರ ವೃತ್ತಿಯನ್ನು ಪ್ರೋತ್ಸಾಹಿಸಲು ಈಗಾಗಲೇ ಹತ್ತಾರು ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದರು.

ಸಭೆಯ ನಂತರ ಕಾರ್ಯಕರ್ತರೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ



ಸಂಚರಿಸಿದ ಶಾಸಕರು, ಸರ್ಕಾರದ ಜನಪರ ಯೋಜನೆಗಳನ್ನು ಜನರಿಗೆ ತಲುಪಿಸಿದರು. ಅಭಿವೃದ್ಧಿ ಕಾರ್ಯಗಳನ್ನು ಬೆಂಬಲಿಸಲು ಉಮೇಶ್ ಮೇಟಿ ಅವರನ್ನು ಅತಿಹೆಚ್ಚಿನ ಮತಗಳ ಅಂತರದಿಂದ ವಿಜಯೀಭವನಗೊಳಿಸಬೇಕೆಂದು ಅವರು ಮತದಾರರಲ್ಲಿ ಮನವಿ ಮಾಡಿದರು. ಸ್ಥಳೀಯ ಕಾಂಗ್ರೆಸ್ ಮುಖಂಡರು, ಕುರುವಿನ ಶೆಟ್ಟಿ ಸಮಾಜದ ಪ್ರಮುಖರು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಶಿಕ್ಷಣ ಜೊತೆಗೆ ಕೌಶಲ್ಯ ರೂಢಿಸಿಕೊಳ್ಳಿ



ರನ್ನ ಬೆಳಗಲಿ: ಪಟ್ಟಣದ ಸರ್ಕಾರಿ ಪ್ರೌಢ ಶಾಲೆ ಮತ್ತು ಪಿಎಂಶ್ರೀ ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆ ಜನತಾ ಪ್ಲಾಟ್ ಆಶ್ರಯದಲ್ಲಿ ಶಾಲಾ ಆವರಣದಲ್ಲಿ ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು ಯೋಜನೆಯ ಅಡಿಯಲ್ಲಿ ಆಟೋಮೊಬೈಲ್ ಕುರಿತು ಒಂದು ದಿನದ ಕಾರ್ಯಾಗಾರ ನಡೆಯಿತು.


ಮಹಾಲಿಂಗಪುರ ಪಾಲಿಟೆಕ್ನಿಕ್ ಪ್ರೊ.ಪ್ರವೀಣ ಅವರಾದಿ ಮಾತನಾಡಿ, ಶಿಕ್ಷಣ ಜೊತೆಗೆ ಕೌಶಲ್ಯ ರೂಡಿಸಿಕೊಳ್ಳಿ. ಪ್ರಸ್ತುತ ದಿನಗಳಲ್ಲಿ ತಾಂತ್ರಿಕ ಜ್ಞಾನ ವಿಜ್ಞಾನ ತುಂಬಾ ಬೆಳೆಯುತ್ತಿದೆ. ಸ್ಪರ್ಧಾತ್ಮಕ ಯುಗಕ್ಕೆ ಗಟ್ಟಿಗೊಳ್ಳಬೇಕಾದರೆ ಕೌಶಲ್ಯ ರೂಢಿಸಿಕೊಂಡು ಅಭಿವೃದ್ಧಿಪಡಿಸಿಕೊಳ್ಳುವ ಮಾರ್ಗವನ್ನು ನಾವೇ ಹುಡುಕಿಕೊಳ್ಳಬೇಕು. ಎಸ್ಸೆಸ್ಸೆಲ್ಸಿ ನಂತರ ಮುಂದೇನು ಎಂಬ ಪ್ರಶ್ನೆಗೆ ಪಾಲಕ ಪೋಷಕರು ಗೊಂದಲಕ್ಕೆ ಒಳಗಾಗಿದ್ದಾರೆ. ವಿದ್ಯಾರ್ಥಿಗಳ ಅಭಿವೃದ್ಧಿ ಆಸಕ್ತಿ ಕಲಿಕೆಗೆ ಪ್ರೇರಣೆ ನೀಡುತ್ತದೆ. ಆ ದಿಶೆಯಲ್ಲಿ ಆಟೋಮೊಬೈಲ್ ಒಂದು ಕೌಶಲ್ಯ ಕಲಿಕೆಯಾಗಿದೆ. ಸ್ವಯಂ ಉದ್ಯೋಗ ಮಾಡುವುದರ ಜೊತೆಗೆ ನಮ್ಮ ಕುಟುಂಬ ನಿರ್ವಹಣೆಗೆ ಅನುಕೂಲವಾಗುತ್ತದೆ ಎಂದರು.ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯನಿ ಎಸ್.ಎಸ್.ಉದಪುಡಿ ಮಾತನಾಡಿ, ವಿದ್ಯಾರ್ಥಿಗಳು ಕಾರ್ಯಾಗಾರದ ಅನುಕೂಲತೆ ಪಡೆಯಬೇಕೆಂದರು. ಆರ್.ಎಸ್.ಹಗಳಗಾರ ಪಿಎಂಶ್ರೀ ಶಾಲೆಯ ಮುಖ್ಯೋಪಾಧ್ಯಾಯಿನಿ, ಚಿತ್ರಕಲಾ ಶಿಕ್ಷಕ ಬಿ.ಪಿ.ಚೋಪ್ಡೆ ಮಾತನಾಡಿದರು. ಶಿಕ್ಷಕರಾದ ಆರ್.ವೈ.ನಾರೋಗೋಳ, ಜಿ.ವೈ.ಭಜಂತ್ರಿ, ಎಸ್.ಎಸ್.ಕಾಯಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ರೇವಣಸಿದ್ಧ ಶಿವಶರಣರ ರಥೋತ್ಸವ

ಗುಳೇದಗುಡ್ಡ: ಪಟ್ಟಣದ ಅಕ್ಕಲಕೋಟೆಯ ರಾಜಯೋಗಿ ರೇವಣಸಿದ್ಧ ಶಿವಶರಣರ ಮಠದ ಜಾತ್ರಾಮಹೋತ್ಸವ ನಿಮಿತ್ತ ಅಪಾರ ಭಕ್ತರ ನಡುವೆ ಅದ್ದೂರಿಯಾಗಿ ರಥೋತ್ಸವ ಗುರುವಾರ ನಡೆಯಿತು. ಬೆಳಗ್ಗೆ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳು ನಡೆದವು. ಮಧ್ಯಾಹ್ನ ಶ್ರೀಗಳ ಅಡ್ಡಪಲ್ಲಕ್ಕಿ ಮೆರವಣಿಗೆ ನಡೆಯಿತು. ನಂತರ ಕೈಲಾಸ ಮಂಟಪ ಪೂಜೆ ನಡೆಯಿತು. ಆಳಂದದ ಶಿವಶರಣಮಠದ ಚನ್ನಬಸವಪಟ್ಟದೇವರು, ಮೈಂದರಗಿಯ ಅಭಿನವ ರೇವಣಸಿದ್ಧ ಶಿವಶರಣರು, ನೀರಲಕೇರಿಯ ಘನಲಿಂಗ ಸ್ವಾಮಿಗಳು, ಸೋಮಯ್ಯ ಶಾಸ್ತ್ರೀಗಳು, ಗುರಪ್ಪಗೌಡ ಪಾಟೀಲ, ಲಕ್ಷ್ಮಣ ದಡ್ಡಿ, ಬಿ.ಬಿ.ವಜ್ರಬಂಡಿ, ಮಲ್ಲಿಕಾರ್ಜುನ ಮುದೆನೂರ, ರಾಮಸ್ವಾಮಿ, ಮಲ್ಲಿಕಾರ್ಜುನ ಸೂಡಿ, ನಾಗೇಶ ಸಿದ್ದಣ್ಣವರ, ಪುರುಷೋತ್ತಮ ಗಂಡಿ,ನಾರಾಯಣಪ್ಪ ಚಿತ್ರಗಾರ, ಬಸವಂತಪ್ಪ, ಶರಣಪ್ಪ ದಿಂಡಿ, ಬಸಪ್ಪ ದಿಂಡಿ, ಸಂಗಪ್ಪ ರಕ್ಕಸಗಿ, ಮೇಟಿ ಸೇರಿದಂತೆ ಗುಳೇದಗುಡ್ಡ ಕೋಟೆಕಲ್, ಪರ್ವತಿ, ಸಂಗಾಪೂರ, ಮಂಗಳಗುಡ್ಡ, ಸೇರಿದಂತೆ ವಿವಿಧ ಗ್ರಾಮಗಳ ಭಕ್ತರು ಪಾಲ್ಗೊಂಡಿದ್ದರು.



ರಕ್ತದಾನ ಮಹತ್ವದ ಜಾಗೃತಿ



ಬಾದಾಮಿ: ಪಟ್ಟಣದ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ ಎಸ್.ಬಿ.ಮಮದಾಪೂರ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆಯ ಘಟಕದ ಸಹಯೋಗದಲ್ಲಿ 2025-26ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರವನ್ನು ದತ್ತು ಗ್ರಾಮ ಕೆಂದೂರದಲ್ಲಿ ಎರಡನೇ ದಿನ ಗುರುವಾರ ಜಿಲ್ಲಾ ರಕ್ತ ಭಂಡಾರ ಘಟಕದ ವೈದ್ಯಾಧಿಕಾರಿ ಪಾಂಡುರಂಗ ದೊಡ್ಡಮನಿ ಮಾತನಾಡಿ ರಕ್ತದಾನದ ಮಹತ್ವ ತಿಳಿಸಿದರು. ಎನ್‌ಎಸ್‌ಎಸ್ ಕಾರ್ಯಕ್ರಮಧಿಕಾರಿ ಬಸವರಾಜ ಕಟ್ಟಿಮನಿ ಹಾಗೂ ಜಿಲ್ಲಾ ರಕ್ತ ಭಂಡಾರದ ಆಪ್ತ ಸಮಾಲೋಚಕ ಶ್ರೀಪಾದ ಮಾಳಗಿ ಹಾಗೂ ದುರ್ಗೇಶ್ ಭೋವಿ ಉಪಸ್ಥಿತರಿದ್ದರು.ದಾವಣಗೆರೆಯ ಶತಕಗಳ ಸರದಾರ ಕರ್ನಾಟಕದ ಬ್ಲಡ್ ಮ್ಯಾನ್ ಎಂದೇ ಖ್ಯಾತಿ ಪಡೆದ ಶಿವಕುಮಾರ್ ಮಹಡಿಮನಿ ಇವರು 106 ಬಾರಿ ರಕ್ತದಾನ ಮಾಡಿ ಜೀವನ ಮುಡಿಪಾಗಿಟ್ಟಿದ್ದಾರೆ. ಎನ್‌ಎಸ್‌ಎಸ್ ಸ್ವಯಂಸೇವಕರು ಒಟ್ಟು 18 ಯೂನಿಟ್ ನೀಡಿದರು.

ತುಳಸಿಗಿರೀಶನಿಗೆ 'ತೊಟ್ಟಿಲೋತ್ಸವ'

ಕಲಾದಗಿ: ಸಮೀಪದ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ತುಳಸಿಗಿರಿಯ ಮಾರುತೇಶ್ವರ ದೇವಸ್ಥಾನದಲ್ಲಿ ಗುರುವಾರದಂದು 'ಹನುಮ ಜಯಂತಿ'ಯನ್ನು ಶ್ರದ್ಧಾ-ಭಕ್ತಿ ಹಾಗೂ ಸಂಭ್ರಮೋಲ್ಲಾಸದಿಂದ ಆಚರಿಸಲಾಯಿತು.

ದೇವಾಲಯದ ಪೂಜಾರ ಬಂಧುಗಳು ಬೆಳಗಿನ ಜಾವ 4 ಗಂಟೆಯ ಹೊತ್ತಿಗೆ ಹನುಮಂತದೇವರಿಗೆ ವಿಶೇಷ ಅಭಿಷೇಕ, ವಿಳ್ಳೆದೆಲೆ ಅಲಂಕಾರ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಮುಂಜಾನೆ ಸುಮಂಗಲೆಯರ ಸಮ್ಮುಖದಲ್ಲಿ ಹನುಮಂತದೇವರ 'ತೊಟ್ಟಿಲೋತ್ಸವ'ವನ್ನು ನೆರವೇರಿಸಿ ಜೋಗುಳ ಹಾಡಿ ಹೆಸರುಗಳನ್ನಿಟ್ಟು ಆರತಿ ಮಾಡಿದರು. ತೊಟ್ಟಿಲೋತ್ಸವದ ನಂತರ ಬಹು ಹೊತ್ತು ದೇವಾಲಯದ ಆವರಣದಲ್ಲಿ



ವಿವಿಧೆಡೆಗಳಿಂದ ಆಗಮಿಸಿದ ಸೇವಾಕರ್ತರಿಂದ ದೇವಾಲಯಕ್ಕೆ ಬಂದ ಭಕ್ತರಿಗೆ ಪ್ರಸಾದವಾಗಿ ಸಿಹಿ ತಿನಿಸುಗಳನ್ನು ವಿತರಿಸಿದರು. ತೊಟ್ಟಿಲೋತ್ಸವದ ನಡೆದ ನವರಂಗವನ್ನು ವಿಶೇಷವಾಗಿ ಅಲಂಕಾರಗೊಳಿಸಲಾಗಿತ್ತು ಜೊತೆಗೆ ಇಡೀ ದೇವಾಲಯವನ್ನು ತಳೀರು ತೋರಣಗಳಿಂದ ಅಲಂಕರಿಸಿದ್ದು ಗಮನಸೆಳೆಯಿತು.

ಅಪಾರ ಭಕ್ತಸಮೂಹ: ಗುರುವಾರದಂದು ಬೆಳಗಿನ ಜಾವದಿಂದ ಇಡೀ ದಿನ ದೇವಾಲಯದಲ್ಲಿ ಅಪಾರ ಜನಸ್ತೋಮ ಕಂಡು ಬಂತು. ನಾನಾ ಕಡೆಗಳಿಂದ ಆಗಮಿಸಿದ್ದ ಭಕ್ತರು ಸರತಿ ಸಾಲಿನಲ್ಲಿ ನಿಂತು ಹನುಮಂತದೇವರ ದರ್ಶನ ಪಡೆದು ಧನ್ಯತೆಯನ್ನು ಪಡೆದರು. ನಾಡಿನ ಅನೇಕ ಗಣ್ಯರು ದೇವಾಲಯಕ್ಕೆ ಭೇಟಿ ನೀಡಿ ಹನುಮಂತದೇವರ ದರ್ಶನ ಪಡೆದರು.

ಕಿರುಸುದ್ದಿ



ನಾಲತವಾಡ: ಪಟ್ಟಣ ಪಂಚಾಯತಿಯಲ್ಲಿ ಅಕ್ಕಮಹಾದೇವಿ ಜಯಂತಿ ಆಚರಣೆ ಮಾಡಲಾಯಿತು. ಮುಖ್ಯಾಧಿಕಾರಿ ಈರಣ್ಣ ಕಣ್ಣೂರ, ಪಪಂ ಉಪಾಧ್ಯಕ್ಷ ಬಸವರಾಜ ಗಂಗನಗೌಡರ(ಗಡ್ಡಿ), ರಮೇಶ ಆಲಕೊಪ್ಪರ, ಸವಿತಾ ವಿರಕ್ತಮಠ, ವಿರೇಶ ದೊಡಮನಿ (ಜೆಇ), ವೀರೇಶ ತಂಗಡಗಿ, ಮುದ್ದೇಬಿಹಾಳ ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಹನುಮಂತರಾಯ ಕುರಿ, ಶಿವರುದ್ರಯ್ಯ ಹಿರೇಮಠ, ಸದ್ದಾಮ ಹುಸೇನ ತಂಗಡಗಿ ಇದ್ದರು.

ಇಂದು ವಾರ್ಷಿಕೋತ್ಸವ

ಕೊಲ್ಹಾರ: ಪಟ್ಟಣದ ಎಂ.ಜೆ ಶಾಲಾ ವಾರ್ಷಿಕೋತ್ಸವದ ಕಾರ್ಯಕ್ರಮವು ಏ.3ರಂದು ಶುಕ್ರವಾರ ಸಂಜೆ 4.30 ಆಯೋಜಿಸಲಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥ ಚಾಂದ ಗಿರಗಾಂವಿ ತಿಳಿಸಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮತ್ತು ಮಾಜಿ ಬಾಲಿವುಡ್ ನಟ ಆರಿಫ್ ಖಾನ್ ಆಗಮಿಸಲಿದ್ದು, ಕಾರ್ಯಕ್ರಮದಲ್ಲಿ ಬಶೀರ್ ಗಿರಗಾಂವಿ, ಸಂಗಮೇಶ ಜಂಗಮಶೆಟ್ಟಿ, ಅಶ್ವಿನಿ ಹಿರೇಮಠ, ಪಿಎಸ್ಐ ಅಶೋಕ ನಾಯಕ ಉಪಸ್ಥಿತರಿರುವರು ಎಂದು ತಿಳಿಸಿದ್ದಾರೆ.

ನೀರಿಲ್ಲದ ಪರಿಸ್ಥಿತಿಗೆ ಬೇಸರ

ಮುದ್ದೇಬಿಹಾಳ: ತಾಲೂಕಿನ ಸರಹದ್ದಿನಲ್ಲಿ ಆಲಮಟ್ಟಿ ಮತ್ತು ನಾರಾಯಣಪುರ ಆಣೆಕಟ್ಟು ಕೇವಲ ಮೂವತ್ತು ಕಿ.ಮಿ ದೂರದಲ್ಲಿ ಇದ್ದರೂ ಸುತ್ತಲಿನ ಕಾಲುವೆಗಳು ಬತ್ತಿ ಹೋಗಿ, ಜಾನುವಾರಗಳು ಕುಡಿಯಲು ನೀರು ಇಲ್ಲ, ಕೆರೆಗಳು ಬತ್ತಿ ಹೋಗಿ ಬೆಳೆಗಳಿಗೆ ತೊಂದರೆಯಾಗಿದೆ ಎಂದು ರೈತ ಮುಖಂಡ ಮಹಾಂತಗೌಡ ಬಿರಾದಾರ ಬೇಸರ ವ್ಯಕ್ತಪಡಿಸಿದ್ದಾರೆ.



ಕೃಷ್ಣಾ ನದಿ ಹಿನ್ನಿರಿನಲ್ಲಿ ಬರುವ ತಾಲೂಕಿನ ಕೆಲವು ಜಮೀನುಗಳು ನೀರಿನಲ್ಲಿ ಮುಳುಗಡೆಯಾಗಿ ಸಾವಿರಾರು ರೈತರು ನಿರಾಶ್ರಿತರಾಗಿದ್ದಾರೆ. ದೊಡ್ಡ ಕಾಲುವೆಗಳು ನಿರ್ಮಾಣವಾಗಿದ್ದರು ಇನ್ನೂವರೆಗೆ ಉಪಕಾಲವೇ, ಹೊಲ ಗಾಲುವೆ ನಿರ್ಮಾಣವಾಗಿದೆ ರೈತರು ಒಣ ಬೇಸಾಯ ಮಾಡುವ ಪರಿಸ್ಥಿತಿ ಇದ್ದು, ಕೆಲವು ಭಾಗದಲ್ಲಿ ನಿರ್ಮಾಣವಾಗಿರುವ ಕಾಲುವೆಗಳಲ್ಲಿ ಬೇಸಿಗೆಯಲ್ಲಿ ನೀರು ಹರಿಯುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಚಿಮ್ಮಲಗಿ, ಮುಳವಾಡ ಹಾಗೂ ನಾಗರಬೆಟ್ಟ ಏತ ನೀರಾವರಿ ಯೋಜನೆಗಳು ಹಾಗೂ ಕಾಲುವೆ ಯೋಜನೆಗಳು ಅಪೂರ್ಣವಾಗಿದ್ದು, ನಾಲ್ಕು ದಶಕದ ಹಿಂದೆ ಪೂರ್ಣವಾಗಬೇಕಿದ್ದ ಮೊದಲ ಹಂತದ ನೀರಾವರಿ ಇನ್ನುವರೆಗೂ ಸಂಪೂರ್ಣ ಆಗಿಲ್ಲ. ಬೇಸಿಗೆಯಲ್ಲಿ ಕಾಲುವೆಗಳಲ್ಲಿ ನೀರು ಇಲ್ಲ, ದನ ಕರುಗಳಿಗೆ ತೊಂದರೆಯಾಗಿದೆ. ಹೀಗಾಗಿ ಕೆಬಿಜೆನಲ್ ಅಧಿಕಾರಿಗಳು, ಜನ ಪ್ರತಿನಿಧಿಗಳು ಕಾಲುವೆಗೆ ನೀರು ಹರಿಸುವ ಕೆಲಸ ಮಾಡಬೇಕೆಂದು ಆಗ್ರಹಿಸಿದರು.

ಚರಂತಿಮಠ ನನಗೆ ಅತ್ಯಂತ ಆತ್ಮೀಯರು: ಯತ್ನಾಳ

ವಿಜಯಪುರ: ವೀರಣ್ಣ ಚರಂತಿಮಠ ಅವರು ನನಗೆ ಅತ್ಯಂತ ಆತ್ಮೀಯರು, ನಮ್ಮ ಕಷ್ಟ ಸುಖದಲ್ಲಿ ಜೊತೆಗಿದ್ದಾರೆ. ರಾಜಕಾರಣದಲ್ಲಿ ಕೃತಜ್ಞತೆ ಇರಬೇಕು ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು. ಯತ್ನಾಳ ವಾಪಸ್ ಬಿಜೆಪಿಗೆ ಸೇರಬೇಕಿದೆ. ಅದಕ್ಕೆ ಇದೆಲ್ಲ ಮಾಡುತ್ತಿದ್ದಾರೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿಕೆ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, ನನಗೆ ಉಚ್ಚಾಟನೆ ಮಾಡಿಸಿದ್ದು ಯಾರು, ಇದು ಅವರ ಚುನಾವಣೆ ಅಲ್ಲ, ಭಾರತೀಯ ಜನತಾ ಪಕ್ಷದ ಚುನಾವಣೆ ಇದು. ರಾಜಕಾರಣದಲ್ಲಿ ಯಾವ ಪಕ್ಷ ನಮ್ಮನ್ನ ಬೆಳೆಸಿದೆ ಅದಕ್ಕೆ ಕೃತಜ್ಞರಾಗಿರಬೇಕು ಎಂದರು.



ಯಾವುದೋ ಒಂದು ಕುಟುಂಬದ ಸಲುವಾಗಿ ಪಕ್ಷಕ್ಕೆ ದ್ರೋಹ ಮಾಡುವುದು, ನಮಗೆ ಉಪಕಾರ ಮಾಡಿದವರಿಗೆ ದ್ರೋಹ ಮಾಡಿ ರಾಜಕಾರಣ ಮಾಡುವುದು ಅರ್ಥವಿಲ್ಲ, ಸಿದ್ದರಾಮಯ್ಯ ಹಾಗೂ ಎಂ.ಬಿ.ಪಾಟೀಲ ಹೇಳ್ತಾರ ಸ್ವಾಭಿಮಾನ ಇದ್ದರೆ ಯತ್ನಾಳ್ ಪ್ರಚಾರಕ್ಕೆ ಹೋಗಬಾರದು ಎಂದು. ಎಂ.ಬಿ.ಪಾಟೀಲರಿಗೆ ಸ್ವಾಭಿಮಾನ ಇದ್ದರೆ ಅವರು ಸಹಿತ ಬಾಗೇವಾಡಿಯಲ್ಲಿ ಪ್ರಚಾರಕ್ಕೆ ಹೋಗಬಾರದು ಎಂದರು. ನನಗೆ ಬಿಜೆಪಿ ಪಕ್ಷದ ಋಣ ಇದೆ, ಜೊತೆಗೆ ಹಿಂದೂ ಕಾರ್ಯಕರ್ತರು ಕರೆಯುತ್ತಿದ್ದಾರೆ ಹೀಗಾಗಿ ಹೋಗುತ್ತಿರುವೆ. ಆದರೆ ನನಗೆ ದಾವಣಗೇರೆಯಲ್ಲಿ ಆಹ್ವಾನ ನೀಡಿಲ್ಲ, ಹೀಗಾಗಿ ಹೋಗಲ್ಲ ಎಂದರು. ನಾನು ಹೇಳುತ್ತೇನೆ 2028ಕ್ಕೆ ನಮ್ಮ ಕೈಯಲ್ಲಿ ಕೊಡರಿ ಯೋಗಿ ಆದಿತ್ಯನಾಥ್ ಅವರ ತರಹದ ಆಡಳಿತ ತರುವೆ ಎಂದರು.



ಕೊಲ್ಹಾರ: ಸಮೀಪದ ಕಾಖಂಡಕಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಳೆದ ಏಳು ವರ್ಷದಿಂದ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಶಿಕ್ಷಕ ರಾಜಶೇಖರಯ್ಯ ಮಳಯ್ಯ ಮಠಪತಿ ಅವರಿಗೆ ಸನ್ಮಾನಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ಬಂದೇನವಾಜ್ ಗುರಾತೆ, ರಾಮನಗೌಡ ಪಾಟೀಲ, ಉಮೇಶ ಸೊನ್ನದ, ಶಾಲೆಯ ಮುಖ್ಯ ಗುರುಮಾತೆ ಲಲಿತಾ ಕೋರಿ ಹಾಗೂ ಸಿಆರ್‌ಪಿ ಬಸವರಾಜ ಜಿಲ್ಲಿ, ಸದಸ್ಯರು ಹಾಗೂ ಸಿಬ್ಬಂದಿ ಇದ್ದರು.

ಅಂಬೇಡ್ಕರ್ ಹಬ್ಬ ಸಾಂಸ್ಕೃತಿಕ ಹಬ್ಬವಾಗಲಿ

ವಿಜಯಪುರ: ನಗರ ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ನಡೆದಾಡಿದ ನಗರವಾಗಿದೆ. ನಮ್ಮ ಹೆಮ್ಮೆಯ ವಿಜಯಪುರದಲ್ಲಿ ಎರಡನೇ ವರ್ಷದ ಅಂಬೇಡ್ಕರ್ ಹಬ್ಬ ನಡೆಯುತ್ತಿರುವುದು ಸಂತಸ ತಂದಿದೆ. ಈ ಹಬ್ಬ ವಿಜಯಪುರ ಜಿಲ್ಲೆಯ ಸಾಂಸ್ಕೃತಿಕ ಹಬ್ಬವಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ನಗರದ ಗೃಹ ಕಚೇರಿಯಲ್ಲಿ ಅಂಬೇಡ್ಕರ್ ಹಬ್ಬದ ಪೋಸ್ಟರ್ ಬಿಡುಗಡೆ ಮಾಡಿ ಅವರು ಮಾತನಾಡಿದರು. ಎರಡನೇ ವರ್ಷದ ಈ ಅರ್ಥಪೂರ್ಣ ಕಾರ್ಯಕ್ರಮ ಯಶಸ್ವಿಗೊಳಿಸಲು ಎಲ್ಲರೂ ಶ್ರಮಿಸೋಣ. ನಾನು ಕೂಡ ಅಂಬೇಡ್ಕರ್ ಹಬ್ಬದ ಭಾಗವಾಗಿ ಬರುತ್ತಿರುವೆ, ಅದೇ ರೀತಿ ಜಿಲ್ಲೆಯ ಜನಸಾಮಾನ್ಯರು ಕೂಡ ನಾಲ್ಕು ದಿನ ಅಂಬೇಡ್ಕರ್ ಹಬ್ಬದಲ್ಲಿ ಪಾಲ್ಗೊಳ್ಳುವ ಮೂಲಕ ಬುದ್ಧ, ಬಸವ, ಅಂಬೇಡ್ಕರ್ ಚಿಂತನೆಗಳೊಂದಿಗೆ ಮಹಾತ್ಮ ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ಫಾತಿಮಾ ಶೇಖರಂತಹ ಮಹನೀಯರನ್ನು ನೆನೆಯುವ ಕಾರ್ಯ ಮಾಡೋಣ. ಇಂತಹ ಸಮಾಜ ಸುಧಾರಕ ಮಹನೀಯರನ್ನು ನೆನೆಯುವ ಕಾರ್ಯಮಾಡುತ್ತಿರುವ ದಲಿತ ವಿದ್ಯಾರ್ಥಿ ಪರಿಷತ್ ಹಾಗೂ ಜಿಲ್ಲೆಯ ವಿವಿಧ ಪ್ರಗತಿಪರ ಸಂಘ ಸಂಸ್ಥೆಗಳ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಶ್ರೀನಾಥ ಪೂಜಾರಿ, ರಾಜೇಂದ್ರ ನಾಯಕ, ಡಾ.ಬಿ.ಎಂ.ಬಿರಾದಾರ, ಪ್ರಭು ಮಲ್ಲಿಕಾರ್ಜುನ ಮಠ, ಅಬ್ದುಲ್ ರಜಾಕ್ ಹೊರ್ತಿ, ಜಾಕೀರ್ ಅಗ್ರೊ ಇದ್ದರು.



ವಿಜಯಪುರ: ನಗರದಲ್ಲಿ ಎರಡನೇ ವರ್ಷದ ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಹಬ್ಬವನ್ನು ಆಚರಿಸುತ್ತಿರುವ ಹಿನ್ನೆಲೆ ನಗರದ ಗೃಹ ಕಚೇರಿಯಲ್ಲಿ ಅಂಬೇಡ್ಕರ್ ಹಬ್ಬದ ಪೋಸ್ಟರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಬಿಡುಗಡೆ ಮಾಡಿದರು. ಶ್ರೀನಾಥ ಪೂಜಾರಿ, ರಾಜೇಂದ್ರ ನಾಯಕ, ಡಾ.ಬಿ.ಎಂ.ಬಿರಾದಾರ, ಪ್ರಭು ಮಲ್ಲಿಕಾರ್ಜುನ ಮಠ, ಅಬ್ದುಲ್ ರಜಾಕ್ ಹೊರ್ತಿ, ಜಾಕೀರ್ ಅಗ್ರೊ ಇದ್ದರು.

ಪೊಲೀಸ್ ಕಲ್ಯಾಣ, ಧ್ವಜ ದಿನಾಚರಣೆ ಕಾರ್ಯಕ್ರಮ

ಪೊಲೀಸರ ಕಾರ್ಯ ಅನನ್ಯ: ಡಿಸಿ

ವಿಜಯಪುರ: ವರ್ಷದುದ್ದಕ್ಕೂ ಸದಾ ಒತ್ತಡದ ಮಧ್ಯೆಯೇ ಕಾರ್ಯನಿರ್ವಹಿಸುತ್ತ ಸಾರ್ವಜನಿಕರ ನೆಮ್ಮದಿಯ ಜೀವನಕ್ಕಾಗಿ, ಅಪರಾಧ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಪೊಲೀಸರು ಶ್ರಮಿಸುವ ಕರ್ತವ್ಯಕ್ಕೆ ಬೆಲೆ ಕಟ್ಟಲಾಗದು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಹೇಳಿದರು.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಗುರುವಾರ ಹಮ್ಮಿಕೊಂಡ ಪೊಲೀಸ್ ಕಲ್ಯಾಣ ಹಾಗೂ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸದಾ ಸಮಾಜದ ಒಳಿತಿಗಾಗಿ ಯಾವ ಪ್ರತಿಫಲಾಪೇಕ್ಷೆಯಿಲ್ಲದೇ ಹಗಲಿರುಳು ಶ್ರಮಿಸುವ ಪೊಲೀಸರು ಕಾರ್ಯ ಜನಮೆಚ್ಚುಗೆಗೆ ಪಾತ್ರವಾಗಿದೆ. ಜಿಲ್ಲೆಯ ಪೊಲೀಸರ ಕಾರ್ಯದಕ್ಷತೆಗೆ ಹೆಸರುವಾಸಿಯಾಗಿದ್ದಾರೆ. ಇದಕ್ಕೆ ತಾಜಾ ನಿದರ್ಶನವೇ ಇತ್ತೀಚೆಗಷ್ಟೇ ಜಿಲ್ಲೆಯ ಐವರು ಪೊಲೀಸ್ ಅಧಿಕಾರಿ, ಸಿಬ್ಬಂದಿ ಮುಖ್ಯಮಂತ್ರಿಗಳ ಪದಕಕ್ಕೆ ಭಾಜನವಾಗಿದ್ದು, ಹೆಮ್ಮೆ ತರುವುದರ ಜೊತೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರ ದಕ್ಷ ಕಾರ್ಯವೈಖರಿಗೆ ಸಾಕ್ಷಿಯಾಗಿದೆ ಎಂದರು.

ಸಾರ್ವಜನಿಕರ ಶಾಂತಿ- ನೆಮ್ಮದಿಗಾಗಿ ಪೊಲೀಸ್ ಇಲಾಖೆ ಸಿಬ್ಬಂದಿ ಹಗಲಿರುಳು ತಮ್ಮ ಕರ್ತವ್ಯ ಮೀಸಲಿಡುತ್ತಾರೆ. ಕಾನೂನು ಸುವ್ಯವಸ್ಥೆ ಕಾಪಾಡುವ ಜೊತೆಗೆ, ಪ್ರಕೃತಿ ವಿಕೋಪದಂತಹ ಘಟನೆಗಳಲು ಘಟಿಸಿದಾಗ, ಅಪರಾಧ ಪ್ರಕರಣ ನಡೆಯದಂತೆ ತಡೆಗಟ್ಟುತ್ತಾರೆ. ಮಾತ್ರವಲ್ಲ ತುರ್ತು ಸಂದರ್ಭಗಳಲ್ಲಿ ಜೀವದ ಹಂಗು ತೊರೆದು ಸಾರ್ವಜನಿಕರ ನೆಮ್ಮದಿಗೋಸ್ಕರ ಮಿಡಿಯುವ ಪೊಲೀಸರ ಕಾರ್ಯ ಅದು ಕಾರ್ಯವಲ್ಲ, ಬದಲಿಗೆ ಅದು ಸಾರ್ವಜನಿಕರ ವಿಶ್ವಾಸ ಹಾಗೂ ನೆಮ್ಮದಿಯ ಜೀವನದ ಆಶಾಭಾವ ಎಂದರು.



ಪೊಲೀಸ್ ಕಲ್ಯಾಣ ನಿಧಿಯಿಂದ ಪೊಲೀಸ್ ಸಮುದಾಯ ಭವನ, ಕ್ರೀಡಾ ಕ್ಷೇತ್ರಕ್ಕೆ ಒತ್ತು ನೀಡಿದ್ದಾರೆ. ಸೇವೆಯಲ್ಲಿರುವ ಹಾಗೂ ನಿವೃತ್ತ ಪೊಲೀಸರ ಕಲ್ಯಾಣಕ್ಕಾಗಿ ಜಿಲ್ಲಾ ಪೊಲೀಸ್ ಇಲಾಖೆ ಈ ನಿಧಿ ವಿನಿಯೋಗಿಸುವ ಮೂಲಕ ನೈತಿಕ ಬೆಂಬಲ ನೀಡುತ್ತಿರುವುದರಿಂದ ಮತ್ತಷ್ಟು ಅವರ ಆತ್ಮಬಲ ವೃದ್ಧಿಯಾಗಿದೆ.

■ **ಡಾ.ಆನಂದ ಕೆ. ಜಿಲ್ಲಾಧಿಕಾರಿ**

ಜಿಪಂ ಸಿಇಒ ರಿಷಿ ಆನಂದ ಮಾತನಾಡಿ, ಜಿಲ್ಲೆಯ ಕಾನೂನು ಸುವ್ಯವಸ್ಥೆ ಗಟ್ಟಿಗೊಳಿಸುವಲ್ಲಿ ಪೊಲೀಸರ ಕಾರ್ಯ ಅಪ್ರತಿಮವಾಗಿದೆ. ಕಾನೂನು ಸುವ್ಯವಸ್ಥೆ ಹಾಗೂ ಸಾರ್ವಜನಿಕ ಸುರಕ್ಷತೆ ಕಾಪಾಡಿ ಸಮಾಜದಲ್ಲಿ ನೆಮ್ಮದಿಯ ಜೀವನಕ್ಕೆ ಕಾರಣವಾಗಿದೆ. ಪೊಲೀಸರ ಕಾರ್ಯ ಸರಳವಲ್ಲ ಅದೊಂದು, ಅತ್ಯಂತ ಕಠಿಣ ಕೆಲಸ. ನಾವೆಲ್ಲ ನೋಡಿದ್ದೇವೆ. ಅಪರಾಧ ತಡೆ ಸೇರಿದಂತೆ ಯಾವುದೇ ಅಪರಾಧ ತಡೆಗೆ ತುರ್ತು ಸ್ಪಂದನೆ ಪೊಲೀಸರದ್ದಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಈ ದಿನದಂದು ಹೆಚ್ಚು ಶ್ರದ್ಧಾಪೂರ್ವಕವಾಗಿ, ರಚನಾತ್ಮಕವಾಗಿ ಮತ್ತು ನಿಷ್ಠೆಯೊಂದಿಗೆ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ ಎಂದರು.

ನಿವೃತ್ತ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಸ್.ಕೆ. ಮಾರಿಹಾಳ ಧ್ವಜವಂದನೆ ಸ್ವೀಕರಿಸಿದರು.

ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಟಿ. ಮಲ್ಲೇಶ, ಐಆರ್‌ಬಿ ಡೆಪ್ಯೂಟಿ ಕಮಾಂಡೆಂಟ್ ರಾಚಪ್ಪ ಕಾಜಗಾರ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮನಗೌಡ ಹಟ್ಟಿ, ಡಿವೈಎಸ್ಪಿ ನಾಗರಾಜ ಡಿ. ಇದ್ದರು. ನಿವೃತ್ತ ಶಿಕ್ಷಕ ಎಚ್.ಎ. ಮಮದಾಪುರ ಹಾಗೂ ದಶರಥ ನಿರೂಪಿಸಿದರು.

ಭಾಗ್ಯವಂತರ ಮದುವೆ ಸಾಮೂಹಿಕ ವಿವಾಹ

ಇಂಡಿ: ಸಾಮೂಹಿಕ ವಿವಾಹಗಳಲ್ಲಿ ಆರ್ಥಿಕ ಹೊರೆ ತಪ್ಪಿಸಲು ಸಾಧ್ಯ. ಸಾಮೂಹಿಕ ಮದುವೆಗಳು ಬಡವರ ದುರ್ಬಲರ ಮದುವೆಯಲ್ಲ, ಭಾಗ್ಯವಂತರ ಮದುವೆಗಳಾಗಿವೆ. ಈಗಿನ ಯುವಸಮೂಹ ಹೆಚ್ಚು ಹೆಚ್ಚಾಗಿ ಸಾಮೂಹಿಕ ವಿವಾಹಗಳಲ್ಲಿ ಮದುವೆಯಾಗಲು ಮುಂದೆ ಬರಬೇಕಿದೆ ಎಂದು ಶಿರಶ್ಯಾಡ ಸಂಸ್ಥಾನ ಹಿರೇಮಠದ ಅಭಿನವ ಮುರುಗೇಂದ್ರ ಶಿವಾಚಾರ್ಯ ಹೇಳಿದರು.

ತಾಲೂಕಿನ ಇಂಗಳಗಿ ಗ್ರಾಮದಲ್ಲಿ ಅಲ್ಲಮಪ್ರಭು ದೇವರ, ಹನುಮ ದೇವರ ಜಯಂತಿ ಹಾಗೂ ಗೈಬುಸಾಬ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ನವದಂಪತಿಗಳು ಕನಿಷ್ಠ ನಾಲ್ಕು ಮಕ್ಕಳನ್ನು ಹೇರುವ ಶಪಥ ಮಾಡಬೇಕು. ನಿಮ್ಮ ಉದರದಿಂದ ಜನಿಸಿದ ಒಂದು ಮಗು ದೇಶ ಸೇವೆಗಾಗಿ, ಒಂದು ಮಗು ಧರ್ಮ ರಕ್ಷಣೆಗೆ, ಇನ್ನೊಂದು ಮಗು ಸಮಾಜದ ರಕ್ಷಣೆಗೆ ಮತ್ತೊಂದು ಮಗು ನಿಮ್ಮ ರಕ್ಷಣೆಗೆ ಹೀಗೆ ನಾಲ್ಕು ಮಕ್ಕಳನ್ನು ಹೆರಬೇಕು ಎಂದರು.

ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಬಸವಂತರಾಯಗೌಡ ಪಾಟೀಲ ಚಾಲನೆ ನೀಡಿ ಮಾತನಾಡಿ, ಇಂಗಳಗಿ ಗ್ರಾಮದ ಜಾತ್ರ ಕಮಿಟಿಯವರು ಕಳೆದ ಹಲವು ವರ್ಷಗಳಿಂದ ಪ್ರತಿ ವರ್ಷ ಸಾಮೂಹಿಕ ವಿವಾಹಗಳನ್ನು ಹಮ್ಮಿಕೊಳ್ಳುತ್ತಿರುವ ಉತ್ಸಾಹ ಇನಷ್ಟು ವೃದ್ದಿಸಲಿ. ಇದರಿಂದಾಗಿ ಬಡ ಜನರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಅಲ್ಲಮಪ್ರಭು ದೇವಸ್ಥಾನ ಕಮಿಟಿಯವರು ಮಾಡುತ್ತಿರುವ ಅವರ ಈ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಇಂಡಿ ಓಂಕಾರ ಆಶ್ರಮದ ಡಾ.ಸ್ವರೂಪಾನಂದ ಸ್ವಾಮೀಜಿ, ಆಳೂರ-ಚಳಕಾಪುರ ಸಿದ್ಧಾರೂಢ ಆಶ್ರಮದ ಶಂಕರಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರಭು ಹೊಸಮನಿ ಮಾತನಾಡಿದರು. ತಾಪಂ ಮಾಜಿ ಸದಸ್ಯ ಕಲ್ಲನಗೌಡ ಬಿರಾದಾರ, ವಜ್ರಕಾಂತ ಹೂಗಾರ, ಅಶೋಕ ಕುಲಕರ್ಣಿ, ಯಲ್ಲಪ್ಪ ಸಾತಲಗಾಂವ, ಅರ್ಜುನ ಜಾಧವ, ಗುರುಬಾಳ ಪೂಜಾರಿ, ಜಲದಪ್ಪ ಪೂಜಾರಿ, ಭೀಮು ರಾಠೋಡ ಇದ್ದರು.

ಅಣ್ಣಪ್ಪ ಅಹಿರಸಂಗ, ಸುಭಾಸ ಘೋರಾತ, ಬಸವರಾಜ ಜಾಧವ, ಉಮೇಶ ಬಳಬಟ್ಟಿ, ಭೀಮು ವಾಲೀಕಾರ, ಉಮೇಶ ಚವ್ಹಾಣ, ರಾಜು ಚಾಬುಕಸವಾರ, ಪ್ರಭು ಚಾಬುಕಸವಾರ, ಜಕ್ಕಪ್ಪ ಪೂಜಾರಿ, ಸದಾಶಿವ ಅಹಿರಸಂಗ, ವಿಷ್ಣು ವಾಘಮೋರೆ, ಅಶೋಕ ಬಳಬಟ್ಟಿ, ರಾಜಕುಮಾರ ಚಾಬುಕಸವಾರ, ಸರ್ವೇಶ ಹಂಡಗೆ ಇದ್ದರು. 7 ನವಜೋಡಿಗಳು ದಾಂಪತ್ಯಕ್ಕೆ ಕಾಲಿಟ್ಟರು.



ಕಾರ್ಮಿಕರು ದೇಶದ ಆಸ್ತಿ: ಬಸಯ್ಯ ಹಿರೇಮಠ

ವಿಜಯಪುರ: ಕಾರ್ಮಿಕರು ದೇಶದ ಆಸ್ತಿ, ರಾಷ್ಟ್ರ ನಿರ್ಮಾಣದಲ್ಲಿ ಕಾರ್ಮಿಕರ ಪಾತ್ರ ಅನನ್ಯವಾಗಿದೆ ಎಂದು ಸಿದ್ದೇಶ್ವರ ಸಂಸ್ಥೆಯ ಚೇರ್ಮನ್ ಬಸಯ್ಯ ಹಿರೇಮಠ ಹೇಳಿದರು.

ನಗರದ ಜೋರಾಪುರ ಪೇಟೆಯ ಶಂಕರಲಿಂಗ ದೇವಸ್ಥಾನದ ಆವರಣದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಹಮ್ಮಿಕೊಂಡ ಅಸಂಘಟಿತರಿಗೆ ಕಾರ್ಮಿಕರ ಕಾರ್ಡ್ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಕಾರ್ಮಿಕರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಲಾಭ ಪಡೆದುಕೊಳ್ಳುವ ನಿಟ್ಟಿನಲ್ಲಿ ಸ್ಮಾರ್ಟ್ ಕಾರ್ಡ್ ಅಗತ್ಯ. ಅಂತಹ ಸ್ಮಾರ್ಟ್ ಕಾರ್ಡ್ ಬಾಗಿಲಿಗೆ ಒದಗಿಸುವ ಕಾರ್ಯ ನಡೆಯುತ್ತಿರುವುದು ಸಂತಸದ ಸಂಗತಿ ಎಂದರು.

ನಿವೃತ್ತ ಪೊಲೀಸ್ ಉಪ ಅಧೀಕ್ಷಕ ಬಸವರಾಜ್ ಚೌಕಿಮಠ ಮಾತನಾಡಿ, ಕಾರ್ಮಿಕರು ಸರ್ಕಾರದ ಸೌಲಭ್ಯಗಳನ್ನು ಸದುಪಯೋಗ ಪಡೆಯಬೇಕು. ವಾರ್ಡ್ ಪ್ರತಿನಿಧಿಸುವ ಶಿವರುದ್ರ ಬಾಗಲಕೋಟ ತನ್ನ ವಾರ್ಡ್ ವ್ಯಾಪ್ತಿಯಲ್ಲಿ ಪಿಂಚಣಿ ಅದಾಲತ್ ಸೇರಿ ವಿವಿಧ ಜನಪರ ಹಲವವು ಕಾರ್ಯಕ್ರಮ ಸಂಘಟಿಸಿ ಸರ್ಕಾರದ ಸೌಲಭ್ಯಗಳನ್ನು ಸಕಾಲಕ್ಕೆ ಜನರಿಗೆ ಒದಗಿಸುವ ನಿಟ್ಟಿನಲ್ಲಿ ನಿರಂತರ ಶ್ರಮಿಸುತ್ತಿದ್ದಾರೆ. ಅಲ್ಲದೇ, ಹಲವು ಸಾಮಾಜಿಕ ಭದ್ರತಾ ಯೋಜನೆಗಳು ಫಲಾನುಭವಿಗಳಿಗೆ ದೊರಕಿಸಲು ಅವರ ಪಾತ್ರ ಅನನ್ಯವಾಗಿದ್ದು, ಅವರ ಜನಸೇವೆ ಹೀಗೆ ಮುಂದುವರೆಯಲಿ ಎಂದರು.

ಪಾಲಿಕೆ ಸದಸ್ಯ ಶಿವರುದ್ರ ಬಾಗಲಕೋಟ ಮಾತನಾಡಿ, ವಾರ್ಡ್ ಪ್ರಗತಿಯ ಜತೆಗೆ ಸರ್ಕಾರದ ಸೌಲಭ್ಯಗಳು ಜನರಿಗೆ ಸಕಾಲಕ್ಕೆ ದೊರಕಬೇಕು ಎಂಬ ಆಶಯ ನನ್ನದು. ಈ ಆಶಯದ ಭಾಗವಾಗಿ ಈ ಕಾರ್ಯಕ್ರಮ ಸಂಘಟಿಸಲಾಗಿದೆ ಎಂದು ಹೇಳಿದರು.

300ಕ್ಕೂ ಅಧಿಕ ಕಾರ್ಮಿಕರಿಗೆ ಸ್ಮಾರ್ಟ್‌ಕಾರ್ಡ್ ವಿತರಿಸಲಾಯಿತು. ಕಾರ್ಮಿಕ ನಿರೀಕ್ಷಕ ಮಲ್ಲಿಕಾರ್ಜುನ ಕಾಮಠಾಣ, ಅನಿಲ್ ರಾಠೋಡ, ಮಹೇಶ ಹೇರಲಗಿ, ವಿರೂಪಾಕ್ಷಪ್ಪ ಶಾಬಾದಿ, ಸೂರಪ್ಪ ಮಿರ್ಜಿ, ವಿಶ್ವನಾಥ ಬೀಳಗಿ, ವೀರಭದ್ರ ಹೇರಲಗಿ, ರುದ್ರಗೌಡ ಪಾಟೀಲ, ಶಂಕರ ಬನ್ನೂರು, ಅಮರ ಗರುಡಕರ, ಗೋಪಿ ಹೊಟ್ಕರ, ಶ್ರೀನಿವಾಸ ಶಹಪುರ, ರಾಮು ಭಜಂತ್ರಿ, ಸುಧೀರ ಪವಾರ, ಶಶಿಕಾಂತ ಬೋವಿ, ದಾಕ್ಷಾಯಿಣಿ ಮಠಪತಿ, ದಾನಮ್ಮ ಮಹಾಜನ, ರಮೇಶ್ ಕೊಕಟ್ನೂರ್, ಎಂ.ಕೆ. ಮನಗೊಂಡ, ಪಾವಡಪ್ಪ ಗಿಡವೀರ, ಮಲ್ಲಿಕಾರ್ಜುನ ಹೇರಲಗಿ, ಈರಪ್ಪ ಕುರ್ಲೆ ಇದ್ದರು.



ವಲಸೆ ಮಾರವಾಡಿಗಳ ವ್ಯಾಪಾರದ ಮೇಲೆ ನಿಗಾ ವಹಿಸಲು ಒತ್ತಾಯ

ನಾಲತವಾಡ: ಪಟ್ಟಣದಲ್ಲಿ ಕಳೆದ 15 ವರ್ಷಗಳಿಂದ ಬೀಡು ಬಿಟ್ಟ ಬಟ್ಟೆ, ಸ್ಟೀಲ್, ಕಿರಾಣಿ ಹಾಗೂ ಎಲೆಕ್ಟ್ರಿಕಲ್ ವ್ಯಾಪಾರದ ವಲಸೆ ಮಾರವಾಡಿಗಳು ಮನಬಂದಂತೆ ದರ ವಸೂಲಿ ಮತ್ತು ಕಳಪೆ ವಸ್ತುಗಳನ್ನು ಮಾರಾಟ ಮಾಡುವ ಮೂಲಕ ಗ್ರಾಹಕರಿಗೆ ವಂಚಿಸುತ್ತಿದ್ದು, ಇವರ ವ್ಯಾಪಾರದ ಮೇಲೆ ನಿಗಾ ವಹಿಸುವ ಮೂಲಕ ಮೋಸ ಹೋಗುವ ಗ್ರಾಹಕರನ್ನು ಉಳಿಸಬೇಕು ಎಂದು ಒತ್ತಾಯಿಸಿ ಸ್ಥಳಿಯ ಕೆಪಿಸಿಸಿ ಘಟಕದ ಬೀದಿ ವ್ಯಾಪಾರಸ್ಥರ ಸಂಘದ ತಾಲೂಕಾಧ್ಯಕ್ಷರಾದ ಮೈಬೂಬ ಕುಳಗೇರಿ ಉಪತಹಶೀಲ್ದಾರ ಎನ್.ಬಿ.ಮಾವಿನಮಟ್ಟಿ ಹಾಗೂ ಮುದ್ದೇಬಿಹಾಳದ ಆದಾಯ ತೆರಿಗೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಪ್ರತಿ ಉಡುಪುಗಳು, ಸ್ಟೀಲ್, ಕಿರಾಣಿ, ತೂಕದಲ್ಲಿ ಮೋಸ ಸೇರಿ ನಿಗಧಿತ ದರಕ್ಕಿಂತ ದುಪ್ಪಟ್ಟು ದರ ವಿಧಿಸಿ ಹಣ ಗಳಿಕೆಯತ್ತ ಮುಖ ಮಾಡಿದ್ದಾರೆ. ಪ್ರತಿ ಗ್ರಾಹಕರಿಗೆ ತಾವು ಮಾರಾಟ ಮಾಡಿದ ವಸ್ತುಗಳಿಗೆ ರಶೀದಿ ಕೊಡುತ್ತಿಲ್ಲ, ನಕಲಿ ಬಿಳಿ ಚೀಟಿ ನೀಡಿ ಕಳುಹಿಸುತ್ತಾರೆ, ಅತೀ ಅಗ್ಗದ ವಸ್ತುಗಳಿದ್ದರೂ ಮುಗ್ದ ಗ್ರಾಹಕರಿಗೆ ವಂಚಿಸಿ ದರ ವಸೂಲಿ ಮಾಡುತ್ತಾರೆ ಹಾಗೂ ಮಾರವಾಡಿಗಳು ತಮ್ಮ ಅಂಗಡಿ ಮತ್ತು ಗೋದಾಮುಗಳಲ್ಲಿ ಮಿತಿ ಮೀರಿ ಬಟ್ಟೆ, ಸ್ಟೀಲ್, ಕಿರಾಣಿ ಸೇರಿ ದಾಸ್ತಾನು ಸಂಗ್ರಹಿಸಿದ್ದಾರೆ, ವ್ಯಾಪಾರದ ಹೆಸರಲ್ಲಿ ಮುಗ್ದ ಗ್ರಾಹಕರು ದರಕ್ಕೆ ಬೆಚ್ಚಿ ಬೀಳುವಂತಾಗಿದ್ದು ಆದಾಯ ತೆರಿಗೆ ಮತ್ತು ತಹಶೀಲ್ದಾರರು ಶೀಘ್ರವೇ ಆಯಾ ಅಂಗಡಿಗಳಿಗೆ ಭೇಟಿ ನೀಡಿ ದಾಸ್ತಾನು ಮತ್ತು ಅವರು ಖರೀದಿಸಿದ ಮೂಲಕ ದರದ ಪುಸ್ತಕ ಪರಿಶೀಲನೆ ಮಾಡಿ ನಮಗೆ ಉತ್ತರಿಸಬೇಕು ಎಂದು ಮನವಿ ಸಲ್ಲಿಸಿದರು.



ಮೈಬೂಬ ಕುಳಗೇರಿ, ಕಂದಾಯ ನಿರೀಕ್ಷಕ ವಿ.ವಿ.ಅಂಬಿಗೇರ, ಮಹಿಬೂಬ ನಾಡದಾಳ, ಅಕ್ರಮಸಾಬ್ ನಾಡದಾಳ, ಪ್ರವೀಣ ತತಬೀರಿ, ರಾಘು ಇಲಕಲ್, ಬಾಬಾಜಾನ್, ಮರೆಪ್ಪ ಚಲವಾದಿ, ಆಶೀಫ್ ನಿಡಗುಂದಿ, ಯಾಸೀನ ಅತ್ತಾರ, ನಾಸೀರ ಆರೇಶಂಕರ ಇದ್ದರು.

ಜಗಜೀವನರಾಂ, ಅಂಬೇಡ್ಕರ್ ಅರ್ಥಪೂರ್ಣ ಜಯಂತಿಗೆ ನಿರ್ಧಾರ

ದೇವರಹಿಪ್ಪರಗಿ: ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ರವರ 135ನೇ ಜಯಂತಿ ಹಾಗೂ ಹಸಿರು ಕ್ರಾಂತಿಯ ಹರಿಕಾರ ಭಾರತದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಂ 119ನೇ ಜಯಂತಿ ಏ.5ರಂದು ಹಾಗೂ ಏ.14ರಂದು ಜಯಂತಿ ಆಚರಿಸಲಾಗುವುದು ಎಂದು ತಹಶೀಲ್ದಾರ್ ನಿಂಗಣ್ಣ ಬಿರಾದಾರ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದ ಸಭಾಂಗಣದಲ್ಲಿ ಮಂಗಳವಾರ ದಂದು ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಮ್ ಅವರ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅಧಿಕಾರಿಗಳು ತಮಗೆ ನೀಡಿದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸೂಚಿಸಿದರು.

ಪಟ್ಟಣದ ಪ್ರಮುಖ ವೃತ್ತಗಳಲ್ಲಿರುವ ಮಹನೀಯರಿಗೆ ಮಾಲಾರ್ಪಣೆ ಮತ್ತು ಪುಷ್ಪಾರ್ಚನೆಮ, ಭವ್ಯ ಮೆರವಣಿಗೆ ವಿವಿಧ ಕಲಾತಂಡಗಳು ಮತ್ತು ಜಾನಪದ ಮೇಳಗಳೊಂದಿಗೆ ಪ್ರಮುಖ ರಸ್ತೆಗಳಲ್ಲಿ ಭಾವಚಿತ್ರಗಳ ಮೆರವಣಿಗೆ, ಪ್ರಮುಖ ವೃತ್ತಗಳು ವಿದ್ಯುತ್ ದೀಪಾಲಂಕಾರ ಮಾಡುವುದರ ಕುರಿತು ಚರ್ಚಿಸಲಾಯಿತು. ಸಮಾಜ ಮುಖಂಡರು ಹಾಗೂ ಅಧಿಕಾರಿಗಳು ಜಯಂತಿ ಕುರಿತು ತಮ್ಮ ಸಲಹೆ ಸೂಚನೆ ನೀಡಿದರು.



ತಾಪಂ ಇಒ ಭಾರತಿ ಚೆಲುವಯ್ಯ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಭವಾನಿ ಪಾಟೀಲ, ಬಿಇಒ ಎಂ.ಬಿ.ಯಡ್ರಾಮಿ, ಸಿಡಿಪಿಒ ಅನೀಲ ಹಳ್ಳಿ, ಅಕ್ಷರ ದಾಸೋಹ ಅಧಿಕಾರಿಗಳಾದ ಅರವಿಂದ ಡೋಣೂರ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಬಿ.ಗಡಗಿ, ಸದಾಸಿವ ಗುಡಿಮನಿ, ಮುಖಂಡರುಗಳಾದ ರಾವುತ್ ತಳಕೇರಿ, ಜಾನು ಗುಡಿಮನಿ, ಸಿ.ಕೆ.ಕುದರಿ, ಎಸ್.ಎನ್.ಬಸವರಡ್ಡಿ, ಸಂಗಪ್ಪ ತಡವಲ್, ರಾಹುಲ್ ದೊಡಮನಿ, ಕಸಾಪ ನಿಕಟಪೂರ್ವ ಅಧ್ಯಕ್ಷ ಜಿ.ಪಿ.ಬಿರಾದಾರ, ಕಂದಾಯ ಶಿರಸ್ತೇದಾರ ಸುರೇಶ ಮ್ಯಾಗೇರಿ ಸೇರಿದಂತೆ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಅನೇಕರು ಇದ್ದರು.

ಬಡವರಿಗೆ ಹಣ್ಣು-ಹಂಪಲು ವಿತರಣೆ



ಚಡಚಣ: ಮಾತೋಶ್ರೀ ಹೇಮಾವತಿ ಹೆಗ್ಗಡೆ ಅಮ್ಮನವರ ಹುಟ್ಟುಹಬ್ಬದ ಪ್ರಯುಕ್ತ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಚಡಚಣ ತಾಲೂಕಿನ ನಿರ್ಗತಿಕರು ಹಾಗೂ ಹಿರಿಯ ಮಹಿಳೆಯರ ಮನೆ ಮನೆಗೆ ಹೋಗಿ ಹಣ್ಣು ಹಂಪಲು ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಎಂದು ನಟರಾಜ ಎಲ್.ಎಂ ಹೇಳಿದರು.

ತಾಲೂಕಿನ ಯೋಜನಾಧಿಕಾರಿ ನಟರಾಜ ಎಲ್.ಎಂ ಮಾತನಾಡಿ, ಮಾತೋಶ್ರೀ ಹೇಮಾವತಿ ಅಮ್ಮನವರ ಕನಸಿನ ಕೂಸಾದ ವಾತ್ಸಲ್ಯ ಕಾರ್ಯಕ್ರಮವು ನಿರ್ಗತಿಕರು ಹಾಗೂ ವಯೋವೃದ್ಧರಿಗೆ ನೆರವಾಗುವ ಉದ್ದೇಶದಿಂದ ಜಾರಿಗೆ ತರಲಾಗಿದ್ದು, ಇದು ಅತ್ಯಂತ ಮಾನವೀಯ ಸೇವೆಯಾಗಿದೆ ಎಂದು ಹೇಳಿದರು.

ಇಂಡಿ ಹಾಗೂ ಚಡಚಣ ತಾಲೂಕುಗಳಲ್ಲಿ ಒಟ್ಟು 128 ನಿರ್ಗತಿಕರಿಗೆ ಪ್ರತಿತಿಂಗಳು 1000 ಮಾಶಾಸನವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ನೀಡಲಾಗುತ್ತಿದೆ. ಜೊತೆಗೆ 5 ಜನರಿಗೆ ಮನೆ ನಿರ್ಮಾಣ ಕಾರ್ಯವೂ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ವಲಯದ ಮೇಲ್ವಿಚಾರಕ ಮಹಾಂತೇಶ ವಿ.ಎ.,ಗಣ್ಯರಾದ ವಿಕಾಸ್ ಪಾಟೀಲ, ಡಾ.ರಾಮಕೃಷ್ಣ ಕುಲಕರ್ಣಿ, ಸಮನ್ವಯ ಅಧಿಕಾರಿ ಜಯಶ್ರೀ, ಸೇವಾ ಪ್ರತಿನಿಧಿಗಳಾದ ವಿಮಲಾ ಗೌಡ್ನೂರ, ಲಕ್ಷ್ಮಿ ಮಠಪತಿ, ಫಲಾನುಭವಿಗಳು ಇದ್ದರು.

ಕಾಯಕಯೋಗಿ ಶಿವಕುಮಾರ ಸ್ವಾಮೀಜಿ

ವಿಜಯಪುರ: ಡಾ.ಶಿವಕುಮಾರ ಸ್ವಾಮೀಜಿ ಅನ್ನ, ಅಕ್ಷರ, ಜ್ಞಾನ ಎಂಬ ತ್ರಿವಿಧ ದಾಸೋಹದ ಮೂಲಕ ಲಕ್ಷಾಂತರ ಬಡ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿ, ಸಮಾಜಕ್ಕೆ ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಮಾರ್ಗದರ್ಶನ ನೀಡಿದ ಕಾಯಕಯೋಗಿ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ತಾಲೂಕಿನ ನಾಗಠಾಣ ಗ್ರಾಮದಲ್ಲಿ ಬುಧವಾರ ಹಮ್ಮಿಕೊಂಡ ಡಾ.ಶಿವಕುಮಾರ ಸ್ವಾಮಿಗಳ 119 ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪೂಜ್ಯರ ಜೀವನ ಸಂದೇಶಗಳನ್ನು ನಾವು ಅನುಸರಿಸಿ ಸದ್ಗತಿಯಿಂದ ಸತ್ಯ ಜೀವನ ನಡೆಸಬೇಕು. ಬೆಳೆದ ಕೈಗಳಿಂದ ಹಸಿದ ಹೊಟ್ಟೆಗೆ ಉಣಬಡಿಸುವ ಸೇತುವೆಯಾಗಿ ಅವರು ಸದಾ ದಾಸೋಹ ಪ್ರಜ್ಞೆಯ ಪ್ರತೀಕವಾಗಿದ್ದರು ಎಂದರು.

ಶಿಕ್ಷಕ ಸಚಿನ್ ಅವಟಿ ಮಾತನಾಡಿ, ಬಡವರು, ದೀನರು, ಶೋಷಿತರಿಗೆ ತ್ರಿವಿಧ ದಾಸೋಹ ನೀಡುವ ಮೂಲಕ ಲಕ್ಷಾಂತರ ಕುಟುಂಬಗಳಲ್ಲಿ ಆರದ ಮಹಾಜ್ಯೋತಿಯಾದ ಡಾ.ಶಿವಕುಮಾರ ಸ್ವಾಮೀಜಿ ಅವರು ಸಾರಿದ ಬದುಕಿನ ನೀತಿ, ಸಂದೇಶ ಪಾಲಿಸುವ ಮೂಲಕ ಅತ್ಯುತ್ತಮ ಜೀವನ ಕಟ್ಟಿಕೊಳ್ಳಬೇಕು ಎಂದರು. ಬೀರದೇವರ ಪಟ್ಟದ ಗುರು ಗೂಳಪ್ಪ ಪೂಜಾರಿ ಸಾನ್ನಿಧ್ಯ ವಹಿಸಿದ್ದರು. ಪಿಕೆಪಿಎಸ್ ಉಪಾಧ್ಯಕ್ಷ ಪ್ರಭಾಕರ ಅರಕೇರಿ, ಹಣಮಂತ ಬಕಾಟಿ, ರಾಮಚಂದ್ರ ಚೌಧರಿ, ವೀರೇಶ ಹುಣಶ್ಯಾಳ, ಮಂಜುನಾಥ ಹಳ್ಳಿ ಇದ್ದರು.



ಸಂಭ್ರಮದ ಹನುಮ ಜಯಂತಿ ಆಚರಣೆ



ಬಸವನಬಾಗೇವಾಡಿ: ಪಟ್ಟಣದ ಉತ್ತರಾದಿಮಠದಲ್ಲಿ ಹನುಮ ಜಯಂತಿ ಆಚರಿಸಲಾಯಿತು. ಬುಧವಾರ ಬೆಳಗ್ಗೆ ಶಾಸ್ತ್ರೋಕ್ತ ರೀತಿಯಲ್ಲಿ ಹನುಮನ ತೊಟ್ಟಿಲೋತ್ಸವ ಜರುಗಿತು. ಕಾರ್ಯಕ್ರಮದ ಅಂಗವಾಗಿ ಬೆಳಗ್ಗೆಯಿಂದಲೇ ಮಾರುತೇಶ್ವರನಿಗೆ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ವಾಯುಸ್ತುತಿ ಪುನಶ್ಚರಣ, ಪವಮಾನ ಹೋಮ, ರಥೋತ್ಸವ ಹಾಗೂ ಸತ್ಯನಾರಾಯಣ ಪೂಜೆ ಸೇರಿ ಧಾರ್ಮಿಕ ಕಾರ್ಯಕ್ರಮಗಳನ್ನು ವೈಭವದಿಂದ ಆಚರಿಸಲಾಯಿತು.

ನಂತರ ಪಂ.ಪೂ.ನರಹರಿ ಆಚಾರ್ಯ ಜೋಶಿ (ಮುತ್ತಗಿ) ಅವರು ಪ್ರವಚನದಲ್ಲಿ ಮಾತನಾಡಿ ಆಂಜನೇಯನ ನಾಮಸ್ಮರಣೆ ನಿತ್ಯವೂ ನಮ್ಮಲ್ಲಿರಬೇಕು, ಶಕ್ತಿ, ವಾಕ್ಪಟುತ್ವ, ಸಾಹಸ ಮುಂತಾದವುಗಳನ್ನು ಅವನ ನಾಮಸ್ಮರಣೆಯಿಂದ ಪಡೆದುಕೊಳ್ಳಲು ಸಾಧ್ಯ ಎಂದು ತಿಳಿಸಿ ಹನುಮಂತ ಎಂದರೆ ಭಕ್ತಿ, ನಿಷ್ಠೆ, ಮತ್ತು ಕಾರ್ಯದಕ್ಷತೆಯ ಅದ್ಭುತ ಸಂಗಮವಾಗಿದ್ದು ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಅವನ ಸಾಹಸಗಳು ನಮಗೆ ಕಷ್ಟ ಎದುರಿಸುವ ಧೈರ್ಯ ನೀಡಲಿ. ಹಾಗೂ ಎಲ್ಲರ ಮನದಲ್ಲೂ ಜ್ಞಾನದ ದೀಪವನ್ನು ಬೆಳಗಿಸಲೆಂದು ಪ್ರಾರ್ಥಿಸಿದರು. ಅರ್ಚಕ ವಾದಿರಾಜಾಚಾರ್ಯ ಯಜುರ್ವೇದಿ, ಕಾರ್ಯದರ್ಶಿ ವಸಂತರಾವ ಕುಲಕರ್ಣಿ, ವಿಠ್ಠಲರಾವ ಕುಲಕರ್ಣಿ ವೈದ್ಯ, ಎ.ಆರ್. ಕುಲಕರ್ಣಿ, ಪ್ರಲ್ಹಾದರಾವ ಕುಲಕರ್ಣಿ, ರಾಮಾಚಾರ್ಯ ಯಜುರ್ವೇದಿ ಇದ್ದರು. ಸದ್ಭಕ್ತರಾದ ಗಿರೀಶ ಕುಲಕರ್ಣಿ ಹಾಗೂ ಹರೀಶ ಕುಲಕರ್ಣಿ(ಚಟ್ನಳ್ಳಿ) ಕಾರ್ಯಕ್ರಮ ನಿರ್ವಹಿಸಿದ್ದರು.

ಗ್ರಾಮೀಣ ಭಾಗದಲ್ಲಿ ನಾಟಕ ಬೆಳೆಸಿ

ಝಳಕಿ: ಗ್ರಾಮೀಣ ಪ್ರದೇಶಗಳಲ್ಲಿ ನಾಟಕ ಕಲೆಯಾಗಿ ಉಳಿಸಿ ಬೆಳೆಸಿರಿ ಎಂದ ಯುವ ಉದ್ದಿಮೆದಾರ ವಿಶ್ವನಾಥ ಪಾಟೀಲ ಏಳಗಿ ಹೇಳಿದರು.

ಸಮೀಪದ ಗೋಟ್ಯಾಳ ಗ್ರಾಮದಲ್ಲಿ ನಡೆದ ಜೈ ಹನುಮಾನ ದೇವರ ಜಾತ್ರಾಮಹೋತ್ಸವ ಪ್ರಯುಕ್ತ ತವರಮನೆ ಕುಂಕುಮ ಅರ್ಥಾತ್ ದೈವಸಂಕಲ್ಪ ಗೆದ್ದರವಾರು ಸುಂದರ ಸಾಮಾಜಿಕ ನಾಟಕ ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಕಲೆ ಕಲೆಯಾಗಿ ಉಳಿಸಿ ನಾಟಕಕ್ಕೆ ಭಾಷಗೆ ತಕ್ಕಂತೆ ಕಲೆ ನೃತ್ಯ ತಕ್ಕಂತೆ ಕಲೆಯಾಗಿರಬೇಕು. ಒಳ್ಳೆಯ ಕಲೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಉಳಿಸಿ ಬೆಳೆಸಿರಿ ಎಂದು ಹೇಳಿದರು.

ದಿವ್ಯ ಸಾನ್ನಿಧ್ಯ ಯೋಗರಾಜ ಹಿರೇಮಠ, ಜಾತ್ರಾ ಕಮಿಟಿ ಅಧ್ಯಕ್ಷ ಚನ್ನಪ್ಪ ಮೇತ್ರಿ, ಶ್ರೀನಿವಾಶ ಕುಲಕರ್ಣಿ, ಸಣ್ಣಪ್ಪ ತಳವಾರ, ವಿನೋದ ಶಿರಶ್ಯಾಡ, ಸಿದ್ದು ಸಾಹುಕಾರ ಕಾಪಸೆ, ಸತೀಶಗೌಡ ಹತ್ತಿ, ಸಿದ್ದಾರಾಮ ಲೋಣಿ, ನಿಂಗಣ್ಣಗೌಡ ಪಾಟೀಲ, ಅಣ್ಣಸಾಬ ನಧಾಫ್ ಅಪ್ಪಸಾಬ ಮುಲ್ಲಾ,ರಾಜು ಕೋಳಿ, ಅಪ್ಪಾರಾಯ ಕೋಳಿ, ಉಮೇಶ ಕಾರಕಲ್ಲ, ಅಮಸಿದ್ದ ಡಾಳೆ, ಸಮಸ್ತ ಗ್ರಾಮಸ್ಥರು ಉಪಸ್ಥಿತರಿದ್ದರು.



ಕಿರುಸುದ್ದಿ

ಶ್ರದ್ಧಾ, ಭಕ್ತಿಯಿಂದ ನಡೆದ ಹನುಮ ಜಯಂತಿ

ಗಂಗಾವತಿ: ಸಮಾಜದ ಸಂಘಟನೆಗೆ ಧಾರ್ಮಿಕ ಆಚರಣೆಗಳು ಅತ್ಯಂತ ಮಹತ್ವದ್ದು ಆಗಿವೆ ಎಂದು ಶ್ರೀಯೋಗಿಶ್ವರ ಯಜ್ಞವಲ್ಕ ಸೇವಾ ಟ್ರಸ್ಟಿನ ಅಧ್ಯಕ್ಷ ಮುರಳಿದರ ಕುಲಕರ್ಣಿ ಹೇಳಿದರು. ಅವರು ಟ್ರಸ್ಟ್ ನೇತೃತ್ವದಲ್ಲಿ ಗುರುವಾರ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಆಚರಣೆಯಲ್ಲಿ ಸೂಕ್ತ ಹವನ ಪೂರ್ಣಾಹುತಿಯನ್ನು ನೆರವೇರಿಸಿ ಮಾತನಾಡಿದರು.

ಹಾಲು ದಶಕಗಳಿಂದ ದೇವಸ್ಥಾನದಲ್ಲಿ ಪ್ರತಿ ವರ್ಷ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬರಲಾಗಿದ್ದು, ಮುಂದಿನ ದಿನಗಳಲ್ಲಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಆಸ್ತಿಕ ಬಂಧುಗಳು ಸಹಕಾರ ನೀಡುವಂತೆ ಕೋರಿದರು.

ಆಂಜನೇಯ ಸ್ವಾಮಿಗೆ ಪಂಚಾಮೃತ ಅಭಿಷೇಕ ವಾಯುಸ್ತುತಿ ಪಾರಾಯಣ ಸೇರಿದಂತೆ ಬೇವಿನಹಾಳ ಪ್ರಹ್ಲಾದ ಆಚಾರ್, ಪ್ರವಚನ ಮಹಿಳೆಯರಿಂದ ಭಜನೆ ಇತರೆ ಧಾರ್ಮಿಕ ಪೂಜಾ ಕಾರ್ಯಕ್ರಮಗಳನ್ನು ಪ್ರದೀಪ್ ಆಚಾರ ಅವರು ನೇರವೇರಿಸಿದರು. ಸೇವಾ ಕಾರ್ಯಕರ್ತ ರೇಣುಕಾ ದಂಪತಿ ಶ್ರೀನಿವಾಸ್ ಕುಲಕರ್ಣಿ, ಆನಂದ ಕೆಇಬಿ ರಾಘವೇಂದ್ರ ಮೇಗೂರು, ತಿರುಮಲರಾವ್ ಲಯದುನಿಸಿ ಸೆರಿದಂತೆ ಅಪಾರ ಭಕ್ತಾದಿಗಳು ಪಾಲ್ಗೊಂಡಿದ್ದರು.

ಗಾವರಾಳ ಶಾಲೆಗೆ 'ಸೂಕ್ಷ್ಮ ದರ್ಶಕ' ಕೊಡುಗೆ



ಕುಕನೂರು: ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾವರಾಳ ಶಾಲೆಗೆ 2025-26ನೇ ಸಾಲಿನ 7ನೇ ತರಗತಿ ವಿದ್ಯಾರ್ಥಿಗಳು ಶಿಕ್ಷಣಕ್ಕೆ ಅನುಕೂಲವಾಗುವ ಅತ್ಯಾಧುನಿಕ ಸೂಕ್ಷ್ಮ ದರ್ಶಕ ಯಂತ್ರವನ್ನು ಕೊಡುಗೆಯಾಗಿ ನೀಡಿದ್ದಾರೆ. ನಂತರ ವಿದ್ಯಾರ್ಥಿಗಳು ಮಾತನಾಡಿ, ಇಂದಿನ ಶಾಲೆಯಲ್ಲಿ ಸೂಕ್ಷ್ಮ ದರ್ಶಕ ಯಂತ್ರಗಳು ಬಹಳ ಮುಖ್ಯವಾಗಿ ಶಾಲೆಗೆಬೇಕು ವಿದ್ಯಾರ್ಥಿಗಳು ಇದರ ಬಳಕೆಯನ್ನು ಮಾಡಿಕೊಂಡು ಶಿಕ್ಷಣವನ್ನು ಮುಂದುವರಿಯಲಿ ಎಂದು ಹೇಳಿದರು. ಎಸ್‌ಡಿಎಂಸಿ ಅಧ್ಯಕ್ಷರಾದ ರಾಮಣ್ಣ ಈಳಿಗೆರೆ, ಮುಖ್ಯೋಪಾಧ್ಯಾಯರಾದ ಶರಣಪ್ಪ ಎಚ್., ಶಿಕ್ಷಕರುಗಳಾದ ಖಾಜಾಸಾಬ ಹೊಸಳ್ಳಿ, ನಾಗರಾಜ ಹನಸಿ, ಮಹೇಶ್ವರ ಜಡಿಮಠ, ಬಸವರಾಜ ಉಪ್ಪಿನ, ರಾಜೇಶ್ವರಿ ಗುರು ಮಾತೆ ಹಾಗೂ 7ನೇ ತರಗತಿ ವಿದ್ಯಾರ್ಥಿಗಳು ಹಾಜರಿದ್ದರು.

ಹನುಮ ಜಯಂತಿ: ಧಾರ್ಮಿಕ ಕಾರ್ಯಕ್ರಮ

ಗಂಗಾವತಿ: ನಗರದ ಲಕ್ಷ್ಮೀಕ್ಯಾಂಪ್‌ನಲ್ಲಿರುವ ಪ್ರಸಿದ್ಧ ಶ್ರೀಘಂಟೆ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಹನುಮ ಜಯಂತಿ ಪ್ರಯುಕ್ತ ಗುರುವಾರ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ಜರುಗಿತು. ಮುಂಜಾನೆಯಿಂದಲೇ ಹನುಮಂತನಿಗೆ ಪಂಚಾಮೃತ ಅಭಿಷೇಕ, ನವಗ್ರಹ ಪೂಜೆ ಸೇರಿದಂತೆ ವಿವಿಧ ವಿಶೇಷ ಪೂಜೆಗಳನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು.



ದೇವಾಲಯದ ಸಮಿತಿ ವತಿಯಿಂದ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಾವಿರಾರು ಭಕ್ತರು ಸರದಿಯಲ್ಲಿ ನಿಂತು ಸ್ವಾಮಿಯ ದರ್ಶನ ಪಡೆದು ನಂತರ ಪ್ರಸಾದ ಸ್ವೀಕರಿಸಿದರು.ಲಕ್ಷ್ಮೀಕ್ಯಾಂಪ್ ಮಾತ್ರವಲ್ಲದೆ ಸುತ್ತಮುತ್ತಲಿನ ವಾರ್ಡ್‌ಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ, ಗಂಟೆ ಆಂಜನೇಯನಿಗೆ ಹರಕೆ ತೀರಿಸಿ ಆಶೀರ್ವಾದ ಪಡೆದರು.

ಉಚ್ಛಾಯ: ನಿಗದಿತ ಶುಭ ಮುಹೂರ್ತದಲ್ಲಿ ಮಾರುತಿಯ ಉತ್ಸವ ಮೂರ್ತಿಯನ್ನು ಅಲಂಕೃತ ರಥದಲ್ಲಿ ಪ್ರತಿಷ್ಠಾಪಿಸಿ, ಭಕ್ತರ ಜೈಕಾರದ ನಡುವೆ ಉಚ್ಛಾಯಕ್ಕೆ ಚಾಲನೆ ನೀಡಲಾಯಿತು. ಸಮಿತಿಯ ಅಧ್ಯಕ್ಷ ಶಿವಪ್ಪ ಯಲಬುರ್ಗಿ, ಸದಸ್ಯರಾದ ನವೀನ್ ಮಾಲಿಪಾಟೀಲ್, ಮಂಜುನಾಥ ಯಡೆಗೌಡರ್, ಸಂಗಪ್ಪ ಚಲುವಾದಿ, ರಮೇಶ್ ಮಡಿವಾಳ್, ಗೋವಿಂದ ಚಿಲಕಟ್, ಮಲ್ಲಪ್ಪ ಉಪಾಧ್ಯ, ಬಸವರಾಜ್ ಕುರುಬರ್, ಕುಮಾರ್ ಇಳಿಗೇರ್, ಮಹಾದೇವಸ್ವಾಮಿ, ಸಂಗಪ್ಪ ಸೇರಿದಂತೆ ಹಲವರಿದ್ದರು.



ಗಂಗಾವತಿ: ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಆಚರಣೆಯಲ್ಲಿ ಶ್ರೀಯೋಗಿಶ್ವರ ಯಜ್ಞವಲ್ಕ ಸೇವಾ ಟ್ರಸ್ಟಿನ ಅಧ್ಯಕ್ಷ ಮುರಳಿದರ ಕುಲಕರ್ಣಿ ಅವರು ಸೂಕ್ತ ಹವನ ಪೂರ್ಣಾಹುತಿಯನ್ನು ನೆರವೇರಿಸಿ ಮಾತನಾಡಿದರು.

ಕಾಶಿ ವಿಶ್ವನಾಥ ದೇವರ ಕಳಸಾರೋಹಣ

ಕುಷ್ಟಗಿ: ತಾಲೂಕಿನ ಹಿರೇಮನ್ನಾಪುರದಲ್ಲಿ ಕಾಶಿ ವಿಶ್ವನಾಥ ದೇವರ ಕಳಸಾರೋಹಣ, ಜಾತ್ರಾ ಮಹೋತ್ಸವ ಹಾಗೂ ಶರಣಬಸವೇಶ್ವರ ಪುರಾಣ ಮಂಗಲೋತ್ಸವ ಕಾರ್ಯಕ್ರಮ ಸಡಗರ ಸಂಭ್ರಮದಿಂದ ಗುರುವಾರ ಜರುಗಿತು.

ಜಾತ್ರಾ ಮಹೋತ್ಸವದ ಅಂಗವಾಗಿ ಬೆಳಗಿನ ಜಾವ ದೇವರಿಗೆ ವಿಶೇಷ ಪೂಜೆ, ಅಭಿಷೇಕ, ಅಲಂಕಾರ ಮತ್ತು ಮಹಾಮಂಗಳಾರತಿ ನೆರವೇರಿಸಲಾಯಿತು. ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿ ದೇವರ ದರ್ಶನ ಪಡೆದರು.

ಕಾಶಿ ವಿಶ್ವನಾಥ ದೇವರ ಕಳಶಾರೋಹಣ, ಜಾತ್ರಾ ಮಹೋತ್ಸವ ಹಾಗೂ ಶರಣಬಸವೇಶ್ವರ ಪುರಾಣ ಮಂಗಲೋತ್ಸವ ಕಾರ್ಯಕ್ರಮದ ಅಂಗವಾಗಿ 10 ಜೋಡಿಗಳ ಸಾಮೂಹಿಕ ವಿವಾಹಗಳು ನಡೆದವು.

ಕರಿಬಸವ ಶ್ರೀಗಳು ಮಾತನಾಡಿ, ಸಾಮೂಹಿಕ ವಿವಾಹಗಳು ಬಡವರ ಮದುವೆಗಳಲ್ಲಾ ಭಾಗ್ಯವಂತರ ಮದುವೆಗಳು ಸಮಾಜಮುಖಿ ಕಾರ್ಯಗಳಾಗಿದ್ದು ದುಂದುವೆಚ್ಚಕ್ಕೆ ಕಡಿವಾಣ ಹಾಕಲು ಸಾಧ್ಯ ಎಂದರು. ಗುಡದೂರ ನಿಲಕಂಠಯ್ಯ ತಾತನವರು ಮಾತನಾಡಿದರು. ಗಣ್ಯರಾದ ದೊಡ್ಡಯ್ಯ ಗದ್ದಡಕಿ, ಕಳಕಪ್ಪ ಪುರದ, ಮಂಡಲಿಕಪ್ಪ ಬಡಕುಂಟಿ, ದೊಡ್ಡಬಸಯ್ಯ ಹಿರೇಮಠ ಬಸವರಾಜ ಮೇಳಿ, ಸಣ್ಣಪ್ಪ ಲೈನದ, ಕಳಕಪ್ಪ ಪುರದ, ಕಳಕಪ್ಪ ಬಳೂಟಗಿ, ದೇವಪ್ಪ ಗಂಗನಾಳ, ನಾಗಪ್ಪ ಜಿಗಜಿನ್ನಿ, ಶಿವಾನಂದಯ್ಯ ಹಿರೇಮಠ, ಸಂಗನಗೌಡ ಕೊಡಗಲಿ, ಇಮಾಮಸಾಬ ಗರಡಿಮನಿ, ಗವಿಸಿದ್ದಪ್ಪ ಸಾಹುಕಾರ, ಕಲ್ಲಯ್ಯ ಶಾಸ್ತ್ರಿಗಳು, ಬಾಶುಸಾಬ ಜಿನ್ನದ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.



ಕುಷ್ಟಗಿ: ತಾಲೂಕಿನ ಹಿರೇಮನ್ನಾಪುರದಲ್ಲಿ ಕಾಶಿ ವಿಶ್ವನಾಥ ದೇವರ ಕಳಶಾರೋಹಣ, ಜಾತ್ರಾ ಮಹೋತ್ಸವ ಹಾಗೂ ಶರಣಬಸವೇಶ್ವರ ಪುರಾಣ ಮಂಗಲೋತ್ಸವ ಕಾರ್ಯಕ್ರಮ ಸಡಗರ ಸಂಭ್ರಮದಿಂದ ಗುರುವಾರ ಜರುಗಿತು.

ಜಿಲ್ಲಾದ್ಯಂತ ಹನುಮ ಜಯಂತಿ ಆಚರಣೆ | ತಂಪು ಪಾನೀಯ ವ್ಯವಸ್ಥೆ

ಹನುಮನ ಮೂರ್ತಿಯ ಶೋಭಾಯಾತ್ರೆ

ಕಲಬುರಗಿ: ನಗರದಲ್ಲಿ ಹನುಮ ಜಯಂತಿ ಹಿನ್ನೆಲೆ ಕೇಸರಿ ನಂದನ ಯುವ ಬ್ರಿಗೇಡ್ ವತಿಯಿಂದ ಜಿಲ್ಲೆಯ ಮಠಾಧೀಶರು, ಗಣ್ಯರ ನೇತೃತ್ವದಲ್ಲಿ 15 ಅಡಿ ಎತ್ತರದ ಹನುಮ ಮೂರ್ತಿಯ ಅದ್ದೂರಿ ಶೋಭಾಯಾತ್ರೆ, ಸಕಲ ವಾದ್ಯ ವೈಭವ ಹಾಗೂ ಸಾಂಸ್ಕೃತಿಕ ತಂಡದ ಕಲಾ ಪ್ರದರ್ಶನದೊಂದಿಗೆ ಅದ್ದೂರಿಯಾಗಿ ನೆರವೇರಿತು.

ನಗರದ ಹೊರವಲಯದ ಆಳಂದ ಚೆಕ್ ಪೋಸ್ಟ್ ಬಳಿಯಿಂದ ಶಿವಸೇನೆಯ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಸೇರಿದಂತೆ ಹಲವು ಮಠಾಧೀಶರು ಹನುಮನಿಗೆ ಪೂಜೆ ಸಲ್ಲಿಸುವ ಶೋಭಾಯಾತ್ರೆಗೆ ಚಾಲನೆ ನೀಡಿದ್ದು, ನಗರದ ದೇವಿ ನಗರ, ಶೆಟ್ಟಿ ಟಾಕೀಸ್, ಸುಪರ್ ಮಾರ್ಕೆಟ್ ಮೂಲಕ ಸಾಗಿ, ಜಗತ್ ವೃತ್ತದಲ್ಲಿ ಮೆರವಣಿಗೆ ಸಂಪನ್ನಗೊಂಡಿತು.

ನಗರಾದ್ಯಂತ ಹನುಮ ಜಯಂತಿ ಸಂಭ್ರಮ: ಭಕ್ತಿ, ಶಕ್ತಿ ಹಾಗೂ ನಿಷ್ಠೆಯ ಪ್ರತೀಕವಾದ ಹನುಮ ಜಯಂತಿಯನ್ನು ಇಂದು ನಗರ ಮತ್ತು ಜಿಲ್ಲೆಯ ವಿವಿಧೆಡೆ ಅತ್ಯಂತ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು. ನಗರದ ಪ್ರಸಿದ್ಧ ಕೋರಂಟಿ ಹನುಮಾನ್ ದೇವಸ್ಥಾನ ಸೇರಿ ಹತ್ತಾರು ಮಂದಿರಗಳಲ್ಲಿ ಬೆಳ್ಳಂಬೆಳಗ್ಗೆಯಿಂದಲೇ ಭಕ್ತರು ಸರತಿ ಸಾಲಿನಲ್ಲಿ ನಿಂತು ಮಾರುತಿಯ ದರ್ಶನ ಪಡೆದರು.

ನಗರದ ಪ್ರಶಾಂತ ನಗರ, ಶಕ್ತಿನಗರ, ಕೂಟನೂರ್ (ಡಿ) ಗ್ರಾಮದ ವಿಜಯವಿದ್ಯಾಲಯ ಬಡಾವಣೆ, ಬ್ರಹ್ಮಪುರ ಹಾಗೂ ಕೆಜಿಎನ್ ಬಡಾವಣೆ ಸೇರಿದಂತೆ ವಿವಿಧ ಭಾಗಗಳಲ್ಲಿ ಹನುಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಪ್ರಶಾಂತ ನಗರದ ಮಂದಿರದಲ್ಲಿ ಸೂರ್ಯೋದಯ ಕಾಲಕ್ಕೆ 'ತೊಟ್ಟಿಲು ಉತ್ಸವ' ನೆರವೇರಿತು. ಪಂಚಾಮೃತ ಅಭಿಷೇಕ, ಪವಮಾನ ಹೋಮ ಹಾಗೂ ಸತ್ಯನಾರಾಯಣ ಪೂಜೆಯ ನಂತರ ಪಲ್ಲಕ್ಕಿ ಉತ್ಸವ ಜರುಗಿತು. ಅರ್ಚಕ ಗುಂಡಾಚಾರ್ಯ ನರಿಬೋಳ ಅವರು ಹನುಮಂತನ ನಿಸ್ವಾರ್ಥ ಸೇವೆಯ ಕುರಿತು ಮಾರ್ಮಿಕವಾಗಿ ಪ್ರವಚನ ನೀಡಿದರು.

ನಗರದ ಹೊರವಲಯದ ಕೂಟನೂರ್ ಡಿ.ಗ್ರಾಮದ ವಿಜಯವಿದ್ಯಾಲಯ ಬಡಾವಣೆಯಲ್ಲಿರುವ ಶ್ರೀಜಾಗೃತ ಹನುಮಾನ್ ಸನ್ನಿಧಿಯಲ್ಲಿ ಹನುಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಏ.1ರ ರಾತ್ರಿಯಿಂದಲೇ ಆರಂಭವಾದ ಭಜನೆ ಕಾರ್ಯಕ್ರಮ ಏ.2ರ ಬೆಳಗಿನ ಜಾವದವರೆಗೆ ನಿರಂತರವಾಗಿ ನಡೆಯಿತು. ವಿಶೇಷ ಅಭಿಷೇಕ ಹಾಗೂ ಭವ್ಯವಾದ 'ತೊಟ್ಟಿಲು ಸೇವೆ' ಜರುಗಿತು. ಸೇವಾ ಸಮಿತಿಯ ಸದಸ್ಯರು ಮತ್ತು ಬಡಾವಣೆಯ ಭಕ್ತಾದಿಗಳು ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

ಬ್ರಿಗೇಡ್ ಅಧ್ಯಕ್ಷ ಆನಂದ, ಗಂಗಾಧರ್ ಕುಲಕರ್ಣಿ, ಶಶಿಕಾಂತ ದ್ವಿಕ್ಷಿತ,ರಾಕೇಶ್ ಜಮಾದಾರ್, ಮಣಿಕಂಠ ರಾಠೋಡ, ಮಹೇಶ್ ಚೌಹಾಣ್ ಸೇರಿದಂತೆ ನೂರಾರು ಗಣ್ಯರು ಶೋಭಾಯಾತ್ರೆಗೆ ಚಾಲನೆ ನೀಡಿದರು.ಶೋಭಾತ್ರೆಯಲ್ಲಿ ಸಾವಿರಾರು ಹನುಮ ಭಕ್ತರು ಪಾಲ್ಗೊಂಡಿದ್ದರು.



ಭಕ್ತಾದಿಗಳಿಗೆ ಅನ್ನ ಪ್ರಸಾದ ಸೇವೆ

ಹನುಮ ಜಯಂತಿಯ ಪ್ರಯುಕ್ತ ನಗರದ ವಿವಿಧ ಮಂದಿರಗಳಲ್ಲಿ ದರ್ಶನಕ್ಕೆ ಆಗಮಿಸಿದ ಭಕ್ತರಿಗಾಗಿ ಅನ್ನ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಪ್ರಶಾಂತ ನಗರ, ಕೂಟನೂರ್ ಡಿ ಹಾಗೂ ಶಕ್ತಿನಗರದ ದೇವಸ್ಥಾನಗಳಲ್ಲಿ ಪೂಜೆಯ ನಂತರ ಸಾವಿರಾರು ಭಕ್ತರು ಸಾಲಿನಲ್ಲಿ ನಿಂತು ಪ್ರಸಾದ ಸ್ವೀಕರಿಸಿದರು. ಭಕ್ತಾದಿಗಳ ಹಸಿವು ನೀಗಿಸುವ ಈ ಅನ್ನದಾಸೋಹ ಸೇವೆಯು ಹಬ್ಬದ ಸಂಭ್ರಮಕ್ಕೆ ಮತ್ತಷ್ಟು ಮೆರುಗು ನೀಡಿತು. ವಿವಿಧ ದೇವಸ್ಥಾನ ಸಮಿತಿಗಳ ವತಿಯಿಂದ ಈ ಸೇವೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲಾಯಿತು.

ಅಕ್ಕ ಮಹಾದೇವಿಯ ಆದರ್ಶ ಅಳವಡಿಸಿಕೊಳ್ಳಿ

ಕೊಪ್ಪಳ: ನಮ್ಮ ಸಮಾಜವನ್ನು ಜಾತಿ ಮತ್ತು ವರ್ಗ ರಹಿತ ನಿರ್ಮಾಣದ ಆಶಯವನ್ನು ಶಿವಶರಣೆ ಅಕ್ಕ ಮಹಾದೇವಿ ಹೊಂದಿದ್ದರು ಎಂದು ಪ್ರಾಚಾರ್ಯ ಡಾ.ಗಣಪತಿ ಲಮಾಣಿ ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶಿವಶರಣೆ ಅಕ್ಕ ಮಹಾದೇವಿ ಜಯಂತಿ ಆಚರಿಸಿ ಅವರು ಮಾತನಾಡಿದರು.

ಅಕ್ಕ ಮಹಾದೇವಿಯವರು 12ನೇ ಶತಮಾನದ ವಚನಕಾರರಲ್ಲಿ ಪ್ರಮುಖರು. ಇವರು ವಚನಗಳ ಮೂಲಕ ಸಮಾಜದಲ್ಲಿರುವ ಅಸಮಾನತೆಯನ್ನು ಸಮಾಜಕ್ಕೆ ತಿಳಿಸುತ್ತ ಜನರನ್ನು ಜಾಗೃತಿ ಗೊಳಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಗವಿಸಿದ್ದಪ್ಪ ಮುತ್ತಾಳ ಮಾತನಾಡಿ, ಅಕ್ಕ ಮಹಾದೇವಿಯವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಉಡುತಡಿ ಗ್ರಾಮದಲ್ಲಿ ಜನಿಸಿದರು. ಇವರ ಕಾಲ ಸುಮಾರು ಕ್ರಿ.ಶ.1130ರಿಂದ 1160ರ ಅವಧಿ ಆಗಿದೆ. ಇವರು ಲೌಕಿಕತೆಯನ್ನು ಬಿಟ್ಟು ಅಲೌಕಿಕತೆ ಕಡೆಗೆ ಗಮನ ಕೊಟ್ಟರು. ನಾವೆಲ್ಲರೂ ಅಕ್ಕ ಮಹಾದೇವಿ ಅವರ ತತ್ವಗಳನ್ನು, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದು ಹೇಳಿದರು.

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಹುಲಿಗೆಮ್ಮ ಅವರು ಮಾತನಾಡುತ್ತ ಅಕ್ಕ ಮಹಾದೇವಿ ಅವರು ಸುಮಾರು 430 ವಚನಗಳನ್ನು ರಚಿಸಿದ್ದಾರೆ. ಇವರ ವಚನಗಳು ಸರಳ, ಸುಂದರ ಮತ್ತು ಆಧ್ಯಾತ್ಮಿಕತೆಯಿಂದ ಕೂಡಿವೆ. ಇವರು ಶ್ರೀಶೈಲ ಚನ್ನ ಮಲ್ಲಿಕಾರ್ಜುನ ಅವರನ್ನು ತನ್ನ ಪತಿ ಎಂದು ಸ್ವೀಕರಿಸಿದ್ದರು. ಇವರು ಕನ್ನಡ ಮೊದಲ ಕವಿಯತ್ರಿಯಾಗಿದ್ದಾರೆ. ಅಕ್ಕ ಮಹಾದೇವಿ ನಮಗೆಲ್ಲರಿಗೂ ಮಾದರಿ ಎಂದು ವಿವರಿಸಿದರು.

ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಡಾ.ನರಸಿಂಹ ಅವರು ಮಾತನಾಡುತ್ತ ಅಕ್ಕ ಮಹಾದೇವಿ ಅವರು ತಮ್ಮ ವಚನಗಳಲ್ಲಿ ಜಾತಿಯತೆ, ವರ್ಗ, ಲಿಂಗ ತಾರತಮ್ಯ ಮತ್ತು ಧರ್ಮ ಬೇಧಭಾವಗಳ ಕುರಿತು ವಚನಗಳನ್ನು ರಚಿಸಿದ್ದಾರೆ ಎಂದು ತಿಳಿಸಿದರು. ಕಾಲೇಜಿನ ಪ್ರಾಧ್ಯಾಕರಾದ ನಾಗರತ್ನ ತಮ್ಮಿನಾಳ, ವಿಠೋಬ, ಡಾ.ಮಲ್ಲಿಕಾರ್ಜುನ, ಡಾ.ಪ್ರದೀಪ್ ಕುಮಾರ್, ಶುಭ, ಸುಮಿತ್ರಾ, ಸುಮಯ್ಯ, ಅಲ್ಲಭಕ್ಷ, ಹನುಮಪ್ಪ, ಶಿವಪ್ರಸಾದ್ ಹಾದಿಮನಿ, ಅನಿಲ ಪವಾರ, ರುದ್ರಾಕ್ಷಿ, ಡಾ.ಸುಧಾಕರ್, ಡಾ.ನಾಗಭೂಷಣಮ್ಮ, ಡಾ.ಸಂಗಪ್ಪ ಬ್ಯಾಳಿ ಹಾಗೂ ಕಾಲೇಜಿನ ಎಲ್ಲ ಅತಿಥಿ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಕ್ರೀಡೆಯಲ್ಲಿ ಸೋಲು-ಗೆಲುವು ಮುಖ್ಯವಲ್ಲ



ಯಲಬುರ್ಗಾ: ಕ್ರಿಕೆಟ್ ಕೇವಲ ಆಟವಲ್ಲ, ಇದು ದೈಹಿಕ ಫಿಟ್‌ನೆಸ್ ಮಾನಸಿಕ ಶಿಸ್ತು ಮತ್ತು ತಂಡದ ಮನೋಭಾವವನ್ನು ಬೆಳೆಸುವ ಸಮಗ್ರ ಕ್ರೀಡೆಯಾಗಿದೆ ಎಂದು ಉಪನ್ಯಾಸಕ ಜಯದೇವಗೌಡ ಪೊಲೀಸ್‌ಪಾಟೀಲ ಹೇಳಿದರು.

ತಾಲೂಕಿನ ಕರಮುಡಿ ಗ್ರಾಮದ ಶ್ರೀಹುಚ್ಚೀರೇಶ್ವರ ಜಾತ್ರಾಮಹೋತ್ಸವದ ಅಂಗವಾಗಿ ಕರಮುಡಿ ಕ್ರಿಕೆಟ್ ಪ್ರಿಮಿಯರ್ ಲೀಗ್ ಸೀಸನ್-05 ಉದ್ಘಾಟಿಸಿ ಮಾತನಾಡಿದ ಅವರು ಕ್ರಿಕೆಟ್ ಆಡುವುದರಿಂದ ಓಡುವುದು. ಬ್ಯಾಟಿಂಗ್ ಮತ್ತು ಫೀಲ್ಡಿಂಗ್ ಮೂಲಕ ದೈಹಿಕ ಫಿಟ್‌ನೆಸ್ ಮತ್ತು ದೇಹದ ಸಮನ್ವಯ ಸುಧಾರಿಸುತ್ತದೆ ಎಂದರು.

ಕ್ರಿಕೆಟ್ ಸಾಮಾಜಿಕ ಕೌಶಲ್ಯಗಳನ್ನು ಸುಧಾರಿಸುವ ಜತೆಗೆ ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ಜೀವನದಲ್ಲಿ ಜಯ-ಅಪಜಯಗಳನ್ನು ಸಮಾನವಾಗಿ ಸ್ವೀಕರಿಸುವ ಗುಣವನ್ನು ಕಲಿಸುತ್ತದೆಂದು, ಶೈಕ್ಷಣಿಕ ಮತ್ತು ಕ್ರೀಡೆಗಳ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಮತ್ತು ಸಮಗ್ರ ಶಿಕ್ಷಣವನ್ನು ಒದಗಿಸುವ ಕ್ರೀಡೆಗಳನ್ನು ಗುರುತಿಸುವ ಕಾರ್ಯವಾಗಬೇಕು ಎಂದು ಹೇಳಿದರು.

ಪ್ರಾಥಮಿಕ ಶಾಲೆಯ ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಇಮಾಮ್ ಗುಳೇದಗುಡ್ಡ ಮಾತನಾಡಿ ಕ್ರೀಡೆ ದೈಹಿಕ, ಮಾನಸಿಕ ಬೆಳವಣಿಗೆಗೆ ಸದೃಢವಾಗಿದೆ ಎಂದರು.

ಕರಮುಡಿ ಗ್ರಾಪಂ ಅಧ್ಯಕ್ಷ ಲಿಂಗರಾಜ ಅಶೋಕ ಉಳ್ಳಾಗಡ್ಡಿ ಸಭೆ ಅಧ್ಯಕ್ಷತೆ ವಹಿಸಿದ್ದರು.

ಪರಸಪ್ಪ ಲಮಾಣಿ, ಡಾ.ಕೆ.ಮಂಜುನಾಥ ಕುಕನೂರ, ಮಾಜಿ ಗ್ರಾಪಂ ಅಧ್ಯಕ್ಷ ಶಿವಪುತ್ರಪ್ಪ ಮಲ್ಲಿಗವಾಡದ, ಹಿರಿಯ ಮುಖಂಡರಾದ ಕಳಕಪ್ಪ ಮಾಸ್ತರಕುರಿ, ನಿವೃತ್ತ ಶಿಕ್ಷಕ ಮುರ್ತುಜಾ ಮುಜಾವರ ಶಿಕ್ಷಕ ಡಾ.ಗೌಡಪ್ಪ ಬಲಕುಂದಿ, ಗ್ರಾಪಂ ಸದಸ್ಯರಾದ ರಾಮಣ್ಣ ಹೊಕ್ಕಳದ, ಮೈಲಾರಪ್ಪ ಪಲ್ಲೇದ, ಯುವ ಮುಖಂಡರಾದ ಬಸನಗೌಡ ಪಾಟೀಲ, ಉಮೇಶ ಕುಕನೂರು, ವೀರಣ್ಣ ಮಾನಶೆಟ್ಟಿ, ಶರಣಗೌಡ ದಳಪತಿ, ಮಹಿಮೂಸಾಬ ಹಿರೇಮನಿ, ರವಿಚಂದ್ರನ್ ಕೆಂಚರಡ್ಡಿ, ಕರ್ನಾಟಕ ಯುವಕ ಮಂಡಳದ ಅಧ್ಯಕ್ಷ ನಿಖಿಲ ಗೊಂಗಡಶೆಟ್ಟಿ, ಹುಸೇನಸಾಬ ನಧಾಪ್ ಹಾಗೂ ಕ್ರಿಕೆಟ್ ತಂಡಗಳು ಸಿ.ಎಚ್ .ಪಾಟೀಲ, ಟೈಗರ್ಸ್ ಗೇಮ್ ಸ್ವಿಂಗರ್ಸ್, ವೇದಾ ಭಾರತ ಚಾಲುಕ್ಯ ಲಯನ್ಸ್, ಅಲ್ಟಿಮೇಟ್ ಫೈಟರರ್ಸ್, ತಂಡದ ನಾಯಕ ವೀರೇಶ ಗೌಡರ,ಸಿರಾಜ್ ನದಾಫ್, ಶಿವರಾಜ ನಿಡಶೇಸಿ, ವಸಂತ ಕರಮುಡಿ, ಮಂಜು ಗದಗಿನಮಠ, ಮತ್ತು ಆಟಗಾರರು ಮತ್ತು ಕ್ರೀಡಾ ಅಭಿಮಾನಿಗಳು ಇದ್ದರು.

ನಗರಗಡ್ಡಿ ಶಾಂತಲಿಂಗೇಶ್ವರ ರಥೋತ್ಸವ

ಮುನಿರಾಬಾದ್: ಶಿವಪುರ ಬಳಿಯ ತುಂಗಭದ್ರ ತೀರದ ಶಾಂತಲಿಂಗೇಶ್ವರ ಸಂಸ್ಥಾನ ಮಠದ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಬುಧವಾರ ಸಂಜೆ ವಿವಿಧ ವಾದ್ಯ ಮೇಳದೊಂದಿಗೆ ಭಕ್ತರು ಸಂಭ್ರಮದಿಂದ ರಥವನ್ನು ಎಳೆದರು.

ಜಾತ್ರಾ ಮಹೋತ್ಸವದ ಅಂಗವಾಗಿ ಬುಧವಾರ ಬೆಳಿಗ್ಗೆ ಮೈನಳ್ಳಿ ಹಿರೇಮಠದ ಸಿದ್ದೇಶ್ವರ ಶಿವಾಚಾರ್ಯರ ಮಾರ್ಗದರ್ಶನ ದಲ್ಲಿ 12 ಜಂಗಮ ವಟುಗಳಿಗೆ ಅಯ್ಯಾಚಾರ ದೀಕ್ಷೆ ನಡೆಯಿತು. ಭಕ್ತರು ಶಾಂತಲಿಂಗೇಶ್ವರ ಕರ್ತೃ ಗದ್ದುಗೆಯ ದರ್ಶನ ಪಡೆದರು. ಅನ್ನಸಂಪರ್ಪಣೆ ನಡೆಯಿತು.

ಸಂಜೆ ನಡೆದ ಧರ್ಮ ಸಭೆಯಲ್ಲಿ ಆಶೀರ್ವಚನ ನೀಡಿದ ಸಿದ್ದೇಶ್ವರ ಶಿವಾಚಾರ್ಯರು, ಈ ಮಠದ ಶಾಂತಲಿಂಗೇಶ್ವರ ಸ್ವಾಮೀಜಿ ಅವರು ಜಾತ್ರೆಯ ನೆಪದಲ್ಲಿ ನಿಮ್ಮನ್ನು ಕರೆಸಿ ಅಧ್ಯಾತ್ಮ ಮತ್ತು ನಿಸರ್ಗದ ಪಾಠ ಕಲಿಸುತ್ತಾರೆ. ಭಕ್ತರ ಪ್ರೀತಿ ಮತ್ತು ಭಕ್ತಿ ತುಂಬಿದ ಮನಸ್ಸುಗಳು ಸೇರಿ ರಥವನ್ನು ಎಳೆಯುತ್ತವೆ. ರಥವನ್ನು ಸುರಕ್ಷಿತವಾಗಿ ಎಳೆಯುವಂತೆ, ಮನುಷ್ಯನ ದೇಹ ಕೂಡ ಎರಡು ಗಾಲಿಯ ರಥ ಇದ್ದಂತೆ ಎಂದರು.

ಸಂತೆಕಲ್ಲೂರು ಮಠದ ಮಹಾಂತ ದೇವರು, ಹೂವಿನಹಡಗಲಿ ಗವಿಸಿದ್ದೇಶ್ವರ ಶಾಖಾ ಮಠದ ಹಿರಿ ಶಾಂತವೀರ ಸ್ವಾಮೀಜಿ, ವ್ಂರಿಯಂವ್ಮ್ನ್ಹ್ಳ್ಯಂ ಮಲ್ಲಿಕಾರ್ಜುನ ಸ್ವಾಮೀಜಿ, ಹ್ಗ್ರಿಬ್ೊವ್ಮ್ನ್ಹ್ಳ್ಯಂ ಹಾಲಸಿದ್ದೇಶ್ವರ ಸ್ವಾಮೀಜಿ, ಶ್ರೀಶೈಲ ಶಾಖಾಮಠದ ಕುಮಾರ ಪಂಡಿತಾರಾಧ್ಯ ಸ್ವಾಮೀಜಿ ಮಾತನಾಡಿದರು. ಮಠದ ಪೀಠಾಧಿಪತಿ ಶಾಂತಲಿಂಗೇಶ್ವರ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷ ಚಂದ್ರಪ್ಪ ಬಿಸನಳ್ಳಿ, ಉದ್ಯಮಿ ಕೆ.ಎಂ.ಸೈಯ್ಯದ್, ಸೋಮಶೇಖರ ಹಿಟ್ನಾಳ, ಕೂಕನಪಳ್ಳಿಯ ವಿಜಯಕುಮಾರ ಕರಡಿ ಸೇರಿದಂತೆ ಹಲವು ಗಣ್ಯರು ಇದ್ದರು. ಶರಣಪ್ಪ ಆನೆಗೊಂದಿ ನಿರೂಪಿಸಿದರು. ಶೇಖರಪ್ಪ ಚಕ್ರಸಾಲಿ ಪ್ರಾರ್ಥಿಸಿದರು. ಸಮೀರ ಸ್ವಾಗತಿಸಿದರು.



ಪ್ರಾಣಿ, ಪಕ್ಷಿಗಳಿಗೂ ಬದುಕುವ ಹಕ್ಕಿದೆ



ಸಿಂಧನೂರು: ಪರಿಸರದಲ್ಲಿ ಮನುಷ್ಯನಷ್ಟೇ ಪ್ರಾಣಿ, ಪಕ್ಷಿಗಳಿಗೂ ಬದುಕುವ ಹಕ್ಕಿದೆ ಎಂದು ಬಂಗಾರಿ ಕ್ಯಾಂಪಿನ ಸಿದ್ಧಾಶ್ರಮದ ಸದಾನಂದ ಶರಣರು ಸಲಹೆ ನೀಡಿದರು.

ನಗರದ ರಾಜೇಂದ್ರಕುಮಾರ ಮೆಮೋರಿಯಲ್ ಪ್ರಾಥಮಿಕ ಶಾಲೆಯಲ್ಲಿ ವನಸಿರಿ ಫೌಂಡೇಶನ್ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಏಪ್ರಿಲ್ ಫೂಲ್‌ಗೆ ವಿದಾಯ ಹೇಳಿ ಏಪ್ರಿಲ್ ಕೂಲ್ ಆಚರಿಸೋಣ, ಪಕ್ಷಿಗಳಿಗೆ ಗುಟುಕು ನೀರಿನ ಅರವಟ್ಟಿಗೆ ಉದ್ಘಾಟನೆ ಕಾರ್ಯಕ್ರಮ ಹಾಗೂ ತುಮಕೂರು ಸಿದ್ಧಗಂಗಾ ಮಠದ ಲಿಂಗೈಕ್ಯ ಡಾ.ಶಿವಕುಮಾರ ಸ್ವಾಮೀಜಿ ಅವರ ಜನ್ಮದಿನದ ಪ್ರಯುಕ್ತ ಅನ್ನದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರಾಣಿ-ಪಕ್ಷಿಗಳ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬ ಮನುಷ್ಯರ ಆದ್ಯ ಕರ್ತವ್ಯವಾಗಿದೆ. ಆದರೆ ಮೊಬೈಲ್ ತರಂಗಗಳಿಂದ ಹಾಗೂ ಪರಿಸರ, ಅರಣ್ಯ ನಾಶದಿಂದ ಪಕ್ಷಿಗಳೇ ಮಾಯವಾಗಿರುವುದು ದುರಂತದ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.

ನಂತರ ಹಿರಿಯ ವಕೀಲ ಎಂ.ಅಮರೇಗೌಡ ಮಾತನಾಡಿ, ಹಲವು ವರ್ಷಗಳಿಂದ ನಗರದ ಮುಖ್ಯ ರಸ್ತೆಗಳು, ವಾರ್ಡ್‌ಗಳು, ಶಾಲಾವರಣ, ಗ್ರಾಮೀಣ ಪ್ರದೇಶಗಳಲ್ಲಿ 50 ಸಾವಿರಕ್ಕೂ ಅಧಿಕ ಗಿಡಗಳನ್ನು ನೆಟ್ಟು ಅವುಗಳನ್ನು ಸಂರಕ್ಷಣೆ ಮಾಡುತ್ತಿರುವ ವನಸಿರಿ ಫೌಂಡೇಶನ್ ಸಂಸ್ಥಾಪಕ ಅಮರೇಗೌಡ ಮಲ್ಲಾಪುರ ಮತ್ತು ಅವರ ತಂಡದ ಕಾರ್ಯ ಶ್ಲಾಘನೀಯ ವಾದದ್ದು, ಅವರ ಪರಿಸರ ಮತ್ತು ಪ್ರಾಣಿ, ಪಕ್ಷಿಗಳ ಸಂರಕ್ಷಣಾ ಕಾರ್ಯಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಹೇಳಿದರು.

ಈಶ್ವರಿ ವಿಶ್ವವಿದ್ಯಾಲಯದ ಪಾರ್ವತಿ ಅಕ್ಕ, ಬಿಜೆಪಿ ಮುಖಂಡ ಕೆ.ಕರಿಯಪ್ಪ, ಕಾಂಗ್ರೆಸ್ ಮುಖಂಡ ರಾಜೇಂದ್ರಗೌಡ ಬಾದರ್ಲಿ, ರಾಜೇಂದ್ರ ಕುಮಾರ ಮೆಮೋರಿಯಲ್ ಶಾಲೆಯ ಅಧ್ಯಕ್ಷ ಅಶೋಕಗೌಡ ಗದ್ರಟಗಿ, ಪರಿಸರ ಮಾಲಿನ್ಯ ಕಚೇರಿಯ ಅಧಿಕಾರಿ ಗಿರೀಶ್, ಪತ್ರಕರ್ತ ಚಂದ್ರಶೇಖರ ಬೆನ್ನೂರು, ವನಸಿರಿ ಫೌಂಡೇಶನ್ ಸಂಸ್ಥಾಪಕ ಅಮರೇಗೌಡ ಮಲ್ಲಾಪುರ, ಸದಸ್ಯರಾದ ಶಂಕ್ರಗೌಡ ಎಲೆ ಕೂಡ್ಲಿಗಿ, ರಮೇಶ ಕುನ್ನಟಗಿ, ರುದ್ರಗೌಡ, ಶಿಕ್ಷಕ ಶಿವರಾಜ ಮತ್ತಿತರರು ಉಪಸ್ಥಿತರಿದ್ದರು.

ಪೊಲೀಸ್ ಧ್ವಜದಿಂದ ಕಾನೂನು ಪಾಲನೆ

ರಾಯಚೂರು: ಪೊಲೀಸ್ ಧ್ವಜ ದಿನಾಚರಣೆ ಗುರುವಾರ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಜರುಗಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನಿವೃತ್ತ ಆರಕ್ಷಕ ಉಪ ನಿರೀಕ್ಷಕ ಬಸವರಾಜ ಮಾತನಾಡಿ, ಪೊಲೀಸರು ಎಲ್ಲಿ ಕರ್ತವ್ಯ ನಿರ್ವಹಿಸುತ್ತಾರೋ ಅಲ್ಲಿ ಧ್ವಜ ಇರುತ್ತದೆ. ಪೊಲೀಸ್ ಧ್ವಜದ ಗೌರವ ಎತ್ತಿ ಹಿಡಿಯುವುದು ಪೊಲೀಸರ ಕರ್ತವ್ಯ ಎಂದರು.



ಇಂದು ಪೊಲೀಸ್ ಇಲಾಖೆಗೆ ಮಹತ್ವದ ದಿನವಾಗಿದ್ದು, 1965ರ ಏ.2ರಂದು ಕರ್ನಾಟಕದಲ್ಲಿ ಪೊಲೀಸ್ ಪಡೆ ಅಧಿಕೃತವಾಗಿ ರಚನೆಯಾದ ನೆನಪಿಗಾಗಿ ಈ ದಿನವನ್ನು ಕರ್ನಾಟಕ ರಾಜ್ಯ ಎಲ್ಲ ಜಿಲ್ಲಾ ಕೇಂದ್ರದಲ್ಲಿ ಆಚರಣೆಯನ್ನು ಮಾಡುತ್ತಾ ಬಂದಿವೆ. ಈ ಧ್ವಜವು ಶಿಸ್ತು, ಕರ್ತವ್ಯ ನಿಷ್ಠೆ, ಕಾನೂನು ಪಾಲನೆ ಮತ್ತು ರಕ್ಷಣೆಯ ಸಂಕೇತವಾಗಿದೆ. ಸಮಾಜದಲ್ಲಿ ಸಾರ್ವಜನಿಕರು ಮತ್ತು ಪೊಲೀಸರ ನಡುವಿನ ಬಾಂಧವ್ಯವನ್ನು ಬೆಳೆಸಲು ಅತಿ ಮುಖ್ಯವಾಗಿದೆ. ಇದನ್ನು ಪ್ರತಿ ವರ್ಷ ಪೊಲೀಸ್ ಧ್ವಜ ಟಿಕೆಟ್‌ಗಳನ್ನು ಮಾರಾಟ ಮಾಡಿ ಅದರಿಂದ ಬರುವ ಹಣವನ್ನು ಪೊಲೀಸ್ ಕಲ್ಯಾಣ ನಿಧಿಗೆ ಜಮಾ ಮಾಡಲಾಗುತ್ತದೆ ಎಂದರು.

ಎಸ್ಪಿ ಅರುಣಾಂಗ್ಶು ಗಿರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆಯನ್ನು ಹಾಗೂ ನಿವೃತ್ತ ಪೊಲೀಸ್ ಅಧಿಕಾರಿಗಳ ಕಲ್ಯಾಣ ದಿನವನ್ನು ಪ್ರತಿ ವರ್ಷ ಏ.2ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಆಚರಿಸಲಾಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ದಿನದ 24 ಗಂಟೆಗಳ ಕಾಲ ವಿಶ್ರಾಂತಿವಿಲ್ಲದೆ ಕರ್ತವ್ಯ ನಿರ್ವಹಿಸಿ, ಸಾರ್ವಜನಿಕರ ಆಸ್ತಿ ರಕ್ಷಣೆ ಮತ್ತು ಕಾನೂನು ಸುವ್ಯವಸ್ಥೆಯಲ್ಲಿ ತೊಡಗಿರುವ ಅಂಶ ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ ಎಂದರು.

ಎಎಸ್ಪಿ ಕುಮಾರಸ್ವಾಮಿ, ಜಿ.ಹರೀಶ್, ಡಿವೈಎಸ್ಪಿ ಪ್ರಮಾನಂದ ಘೋರಕೆ, ದತ್ತಾತ್ರೇಯ ಕಾರ್ನಾಡ್, ಸಿಪಿಐಗಳಾದ ಸಾಬಯ್ಯ, ಸೋಮಶೇಖರ, ಹನುಮಂತ ನಾಯಕ, ಮಹಾದೇವ ಪಂಚಮುಖಿ, ಬಸವರಾಜ ತೇರಿ, ಈರೇಶ ನಾಯಕ, ಬಸಪ್ಪ ಬಿಳಿಗೇರಿ, ಅಮರೇಶ ಜಗರಕಲ್, ರಂಗನಾಥ ಕೋಟೆ, ಪಿಎಸ್‌ಐಗಳಾದ ತಿಮ್ಮಣ್ಣ ನಾಯಕ, ಹುಲಿಗೇಶ್, ಸಣ್ಣ ವಿರೇಶ್, ಸಿದ್ದಪ್ಪ, ಮಹಮ್ಮದ್ ಇಸಾಕ್, ಉದಯ ಕುಮಾರ್, ಬಾಹುಬಲಿ, ಶ್ರೀಕಾಂತ್, ಬೀರಣ್ಣ, ನಾರಾಯಣ ಸೇರಿದಂತೆ ಇತರರು ಇದ್ದರು.

ಅದ್ದೂರಿ ಹನುಮ ಜಯಂತ್ಯುತ್ಸವ

ಹಟ್ಟಿಚಿನ್ನದಗಣಿ: ಹಟ್ಟಿಚಿನ್ನದಗಣಿಗೆ ಸಮೀಪದ ವಂದಲಿ ಗ್ರಾಮದ ಬಲಭೀಮ ದೇವಸ್ಥಾನದಲ್ಲಿ ಹನುಮ ಜಯಂತಿ ನಿಮಿತ್ತ ಗುರುವಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ಬೆಳಿಗ್ಗೆ 4ಕ್ಕೆ ಬಲಭೀಮ ದೇವರಿಗೆ ವಿಶೇಷ ಪಂಚಾಮೃತ ಅಭಿಷೇಕ, ಎಲೆಪೂಜೆ, ಅಲಂಕಾರ, 10 ಗಂಟೆಗೆ ತೊಟ್ಟಿಲೋತ್ಸವ, ಸತ್ಯನಾರಾಯಣ ಪೂಜೆ 11.30ಕ್ಕೆ ಭಜನಾ ಮಂಡಳಿಯೊಂದಿಗೆ ರಥೋತ್ಸವ, ದೀಡ್ ನಮಸ್ಕಾರ, ಗಂಡಾರ್ತಿ ಹೊರುವುದು, ಮಹಾಮಂಗಳಾರತಿ, ಮಧ್ಯಾಹ್ನ ತೀರ್ಥ ಪ್ರಸಾದ ಕಾರ್ಯಕ್ರಮಗಳು ನಡೆದವು. ಧಾರ್ಮಿಕ ಕಾರ್ಯಕ್ರಮಗಳನ್ನು ನರಸಿಂಹಾಚಾರ್ಯ ಜೋಷಿ ಗುಡದೂರ್ ನೆರವೇರಿಸಿದರು.

ಹಟ್ಟಿಚಿನ್ನದಗಣಿ ಪೊಲೀಸ್ ಠಾಣೆ ಸಿಪಿಐ ಶಿವಾನಂದ್ ಗಾಣಿಗೇರ್, ಗುರುಗುಂಟಾ ಗ್ರಾಮದ ವೆಂಕಟೇಶ್ವರ ಮಹಿಳಾ ಭಜನಾ ಮಂಡಳಿಯ ಸದಸ್ಯರು ಹಾಗೂ ಹಟ್ಟಿ, ಲಿಂಗಸುಗೂರು, ರಾಯಚೂರು, ದೇವದುರ್ಗ, ಪಾತಾಪೂರ್, ಗುರುಗುಂಟಾ ಸೇರಿ ವಿವಿಧ ಪ್ರದೇಶಗಳಿಂದ ಅಸಂಖ್ಯಾತ ಭಕ್ತರು ನೆರೆದಿದ್ದರು. ದೇವಸ್ಥಾನ ಸಮಿತಿಯವರು, ಪವಮಾನ ಧಾರ್ಮಿಕ ಸಮಿತಿ ಪದಾಧಿಕಾರಿಗಳು ಗ್ರಾಮಸ್ಥರು ಇದ್ದರು.



ಕಾಲುವೆ ಸ್ವಚ್ಛಗೊಳಿಸಿ ಕೆರೆಗೆ ನೀರು ಬಿಡಿ



ಮಾನ್ವಿ: ಪುರಸಭೆಯಿಂದ ಪಟ್ಟಣದಲ್ಲಿ ಕಳೆದ 6 ತಿಂಗಳಿಂದ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದ್ದರು. ಕೂಡ ಅನೇಕ ಬಾರಿ ಮನವಿ ಸಲ್ಲಿಸಿದರೂ ಕೂಡ ಯಾವುದೇ ಕ್ರಮ ಕೈಗೊಂಡಿಲ್ಲ ಮಾಜಿ ಶಾಸಕ ಗಂಗಾಧರ ನಾಯಕ ಹೇಳಿದರು.

ಪಟ್ಟಣದ ತುಂಗಭದ್ರ ಕಾಲುವೆಯನ್ನು ಪರಿಶೀಲಿಸಿ ಮಾತನಾಡಿದ ಅವರು, ಪಟ್ಟಣದ ಜನರಿಗೆ ಕುಡಿಯುವ ನೀರಿಗಾಗಿ ರಬ್ಬಣಕಲ್ ಗ್ರಾಮದಲ್ಲಿ ಕುಡಿಯುವ ನೀರಿನ ಕೆರೆಯಲ್ಲಿ ನೀರಿನ ಮಟ್ಟ ಸಂಪೂರ್ಣವಾಗಿ ಕುಸಿದಿದ್ದು ಸರ್ಕಾರದಿಂದ ಕುಡಿಯುವ ನೀರಿಗಾಗಿ ತುಂಗಭದ್ರ ಜಲಾಶಯದಿಂದ ಕಾಲುವೆ ಮೂಲಕ ನೀರನ್ನು ಬಿಡಲಾಗುತ್ತಿದೆ. ಆದರೆ ರಬ್ಬಣಕಲ್ ಕೆರೆಗೆ ನೀರು ತುಂಬಿಸುವ ಪಟ್ಟಣದ ಕಾಲುವೆಯ ಎರಡು ಕಡೆಯ ಮನೆಗಳವರು ತಮ್ಮ ತ್ಯಾಜ್ಯ ನೀರನ್ನು ಹಾಗೂ ಚರಂಡಿ ನೀರನ್ನು ಕಾಲುವೆಗೆ ಬಿಡುತ್ತಿರುವುದರಿಂದ ಕಾಲುವೆಯ ನೀರು ಕಲುಷಿತವಾಗಿದ್ದು ಕಲುಷಿತವಾಗಿರುವ ನೀರನ್ನು ಕಾಲುವೆಗೆ ತುಂಬಿಸುವುದರಿಂದ ಕೆರೆಯ ನೀರು ಮಲಿನವಾಗುತ್ತದೆ ಹಾಗೂ ಕುಡಿಯುವುದಕ್ಕೆ ಯೋಗ್ಯವಾಗಿರುವುದಿಲ್ಲ. ಕೂಡಲೇ ಪುರಸಭೆ ಮುಖ್ಯಾಧಿಕಾರಿಗಳು ಕಾಲುವೆಯ ಸ್ವಚ್ಛತೆಗೆ ಕ್ರಮ ಕೈಗೊಳ್ಳಬೇಕು ಇಲ್ಲದೆ ಇದ್ದಲ್ಲಿ ಪಟ್ಟಣದ ಜನರ ಆರೋಗ್ಯ ಹಾಳಗಲಿದೆ ಮುಂದಿನ ದಿನಗಳಲ್ಲಿ ಬಿಜೆಪಿ ಪಕ್ಷದ ನೂರಾರು ಕಾರ್ಯಕರ್ತರು ಪುರಸಭೆ ಹಾಗೂ ತಹಶೀಲ್ದಾರ್ ಕಚೇರಿಗೆ ಬೀಗಹಾಕಿ ಪ್ರತಿಭಟನೆ ನಡೆಸಲಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ಪಕ್ಷದ ಮುಖಂಡರಾದ ಜೆ.ಸುಧಕರ್, ಗುರುಸಿದ್ದಪ್ಪ ಕಣೂರು, ವಿಶ್ವನಾಥ ರಾಯಪ್ಪ ವಕೀಲರು, ಈರಣ್ಣ ಸೇರಿದಂತೆ ಇನ್ನಿತರರು ಇದ್ದರು.

ಕಿರುಸುದ್ದಿ

ಆಂಜನೇಯ ಸ್ವಾಮಿ ದೇವಸ್ಥಾನ ಲೋಕಾರ್ಪಣೆ



◆**ಕುರುಗೋಡು:** ಸಮೀಪದ ಮುದಟ್ಟನೂರು ಗ್ರಾ.ಪಂನ ಹಾವಿನಹಾಳು ಗ್ರಾಮದ ಶ್ರೀಆಂಜನೇಯ ಸ್ವಾಮಿಯ ನೂತನ ದೇವಸ್ಥಾನ ಲೋಕಾರ್ಪಣೆ ಹಾಗೂ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಪುರೋಹಿತರಾದ ರಂಗನಾಥ ಆಚಾರ್ಯ ಸಾಲುಗುಂದಿ ವೆಂಕಟೇಶ್ ಜೋಷಿ ಅವರ ನೇತೃತ್ವದಲಿ ಅದ್ದೂರಿಯಾಗಿ ಕಳೆದ ಎರಡು ದಿನಗಳಿಂದ ವಿವಿಧ ಧಾರ್ಮಿಕ ಜರುಗಿದವು.

ಗುರುವಾರ ದೇವಸ್ಥಾನ ಉದ್ಘಾಟನೆ ಮೂರ್ತಿ ಪ್ರತಿಷ್ಠಾಪನೆ ನಿಮ್ಮಿತ್ತ, ಬೆಳಿಗ್ಗೆಯಿಂದ ದೇವಸ್ಥಾನದಲ್ಲಿ ಹೋಮ ಹವನ ಪಂಚಾಮೃತ ಅಭಿಷೇಕ, ಬಿಲ್ವಾರ್ಚನೆ, ಕುಂಕುಮಾಭಿಷೇಕ ಕುಂಕುಮಾರ್ಚನೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ದೇವರ ಮೂರ್ತಿಗೆ ವಿವಿಧ ಹೂವುಗಳಿಂದ ಅಲಂಕಾರ ಸೇವೆ ನಡೆದವು. ಡೊಳ್ಳುಗಳ, ಕಯ ನಿನಾದದ ಮಧ್ಯೆ, ಕುಂಭ ಹೊತ್ತು ಮೆರವಣಿಗೆ ನಡೆಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಮೆರವಣಿಗೆ ನಂತರ ದೇವಸ್ಥಾನಕ್ಕೆ ಆಗಮಿಸಿ ಕಳಸಾರೋಹಣ ನೆರವೇರಿತು. ಭಕ್ತರಿಗೆ ಅನ್ನಸಂತರ್ಪಣೆ ಜರುಗಿತು.ಟ್ರಸ್ಟ್ ಅಧ್ಯಕ್ಷ ಎಚ್.ಕೆ.ಸತ್ಯನಾರಾಯಣರಾವ್, ಉಪಾಧ್ಯಕ್ಷರಾದ ಪಿ ಸತ್ಯನಾರಾಯಣ, ಸದಸ್ಯರಾದ ಎಚ್. ಮಹೇಶ್ ಭರತ್, ಬೀಮನಾಯ್ಕ, ಹನುಮನಾಯಕ ಪಂಪನಗೌಡ, ಹುಸೇನಪ್ಪ, ಎಂ.ರಾಮಣ್ಣ, ಗಂಗಪ್ಪ, ಮರೇಗೌಡ, ಶರಣಪ್ಪ,ಕಾಡಪ್ಪ, ಮಲ್ಲಿಕಾರ್ಜುನ, ಮುಖಂಡರುಹಾಗೂ ಸಮೀಪದ ಮುದಟ್ನೂರು, ಎಮ್ಮಿಗನೂರು, ಚಿಟಿಗಿನಹಳ್, ಎಚ್.ವೀರಾಪುರ, ಅರ್ಜುನ್ ಕ್ಯಾಂಪ್, ನಾಗರಾಜ ಕ್ಯಾಂಪು, ಮುಸ್ಟಗಟ್ಟೆ, ಗೆಣಿಕೆಹಾಳ್, ಕ್ಯಾದಿಗೆಹಾಳ್, ಚನ್ನಪಟ್ಟಣ ಗ್ರಾಮದ ನೂರಾರು ಭಕ್ತರು ಇದ್ದರು.

ಅಯ್ಯಪ್ಪ ಸ್ವಾಮಿಗೆ ವಿಶೇಷಪೂಜೆ

◆**ಗಾದಿಗನೂರು:** ಗ್ರಾಮದ ಶ್ರೀಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಪವಿತ್ರ ಆರಾಟ್ಟು ಉತ್ಸವದ ಅಂಗವಾಗಿ ಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಊರಿನ ಭಕ್ತಾದಿಗಳು ಸೇರಿಕೊಂಡು ಅಯ್ಯಪ್ಪ ಸ್ವಾಮಿಗೆ ಬೆಳಗ್ಗೆ ಅಭಿಷೇಕ ಪುಷ್ಪಾರ್ಚನೆ ಹಾಗೂ ಸಹಸ್ರನಾಮಾವಳಿಗಳನ್ನು ಪಠಿಸುವುದರ ಮುಖಾಂತರ ದೇವಸ್ಥಾನದಲ್ಲಿ ಪೂಜಾ ಕಾರ್ಯಕ್ರಮಗಳು ನೆರವೇರಿದವು. ಸಂಜೆ ಊರಿನ ಭಕ್ತಾದಿಗಳು ಸೇರಿಕೊಂಡು ಅಯ್ಯಪ್ಪ ಸ್ವಾಮಿಗೆ ವಿಶೇಷ ಪೂಜೆ ನೆರವೇರಿಸುವುದರ ಮುಖಾಂತರ ದೇವಸ್ಥಾನದಲ್ಲಿ ನೆರೆದಿದ್ದ ಭಕ್ತರು ಅಯ್ಯಪ್ಪನ ಶರಣ ಘೋಷಣೆಗಳನ್ನು ಹೇಳುತ್ತಾ ಅಯ್ಯಪ್ಪ ಸ್ವಾಮಿಗೆ ಪಡಿಪೂಜೆ ಗುರುಸ್ವಾಮಿಗಳಾದ ಕೆ.ಎಂ.ವೇದಮೂರ್ತಿ ಗುರುಸ್ವಾಮಿ ಹಾಗೂ ಎನ್.ದೊಡ್ಡನಗೌಡ ಗುರುಸ್ವಾಮಿಗಳ ನೇತೃತ್ವದಲ್ಲಿ ಕಾರ್ಯಕ್ರಮಗಳು ಜರುಗಿದವು. ಬಂದಿರುವ ಭಕ್ತರಿಗೆ ಪ್ರಸಾದ ವ್ಯವಸ್ಥೆಯನ್ನು ಊರಿನ ಅಯ್ಯಪ್ಪ ಸ್ವಾಮಿ ಭಕ್ತಾದಿಗಳು ತನು-ಮನ ಧನದಿಂದ ಕಾರ್ಯಕ್ರಮ ನೆರವೇರಿಸಿದರು.ಅಯ್ಯಪ್ಪ ಸ್ವಾಮಿ ಸೇವಾ ಟ್ರಸ್ಟಿನ ಸದಸ್ಯರು ಭಾಗವಹಿಸಿದ್ದರು.



ಸ್ವಯಂ ಗಣತಿ: ಮಾಹಿತಿ ದಾಖಲಿಸಿದ ಡಿಸಿ

◆**ಬಳ್ಳಾರಿ:** ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ಜನ ಗಣತಿ 2027ರ ಅಂಗವಾಗಿ ಸ್ವಯಂ ಗಣತಿ ವ್ಯವಸ್ಥೆ ಪರಿಚಯಿಸಿದ್ದು, ಗುರುವಾರ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಅವರು ನೂತನ ಜಿಲ್ಲಾಡಳಿತ ಭವನದ ತಮ್ಮ ಕಚೇರಿಯಲ್ಲಿ ಲ್ಯಾಪ್ ಟಾಪ್ ಮೂಲಕ ಸ್ವಯಂ ಗಣತಿ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಮಾಹಿತಿ ದಾಖಲಾತಿ ಪೂರ್ಣಗೊಳಿಸಿದರು.'ನಮ್ಮ ಜನಗಣತಿ – ನಮ್ಮ ಅಭಿವೃದ್ಧಿ' ಎಂಬ ಧ್ಯೇಯ ವಾಕ್ಯದೊಂದಿಗೆ ಸರ್ಕಾರ ಜನಗಣತಿ 2027 ಹಮ್ಮಿಕೊಂಡಿದ್ದು, ಈ ಹಿನ್ನೆಲೆ ಸರ್ಕಾರ ಸ್ವಯಂಗಣತಿ ವ್ಯವಸ್ಥೆಯನ್ನು ಪರಿಚಯಿಸಿದೆ. ಈ ಪ್ರಕ್ರಿಯೆ ಅತ್ಯಂತ ಸರಳ ಮತ್ತು ಸುರಕ್ಷಿತವಾಗಿದ್ದು, ನಾಗರಿಕರು ಯಾವುದೇ ಆತಂಕವಿಲ್ಲದೇ ಸ್ವಯಂ ಮಾಹಿತಿಯನ್ನು ದಾಖಲಿಸಬಹುದಾಗಿದೆ.2026ರ ಏ.15ರವರೆಗೆ ಎಲ್ಲ ನಾಗರಿಕರು ಅಧಿಕೃತ ಪೋರ್ಟಲ್ https://se.census.gov.in ಮೂಲಕ ತಮ್ಮ ಮಾಹಿತಿಯನ್ನು ಆನ್ ಲೈನ್‌ನಲ್ಲಿ ದಾಖಲಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.





ಕೊಟ್ಟೂರು: ಹಗರಿಬೊಮ್ಮನಹಳ್ಳಿ ಮಂಡಲ ಮಟ್ಟದ ಬಿಜೆಪಿ ಪ್ರಶಿಕ್ಷಣ ವರ್ಗವು ಕೊಟ್ಟೂರು ಮಹಾಶಕ್ತಿ ಕೇಂದ್ರದಲ್ಲಿ ಯಶಸ್ವಿಯಾಗಿ ನೆರವೇರಿತು. ಈ ಪ್ರಶಿಕ್ಷಣ ವರ್ಗದಲ್ಲಿ ಬಳ್ಳಾರಿ ಜಿಲ್ಲಾ ಸಹ ಪ್ರಭಾರಿಗಳಾದ ಚನ್ನಬಸವನಗೌಡ ಪಾಟೀಲ, ಜಿಲ್ಲಾಧ್ಯಕ್ಷ ಸಂಜೀವ್ ರೆಡ್ಡಿ, ಬಲ್ಲಾಹುಣಸಿ ರಾಮಣ್ಣ, ಮಂಡಲ ಅಧ್ಯಕ್ಷ ಬೆಣಕಲ್ ಪ್ರಕಾಶ್, ನಗರ ಘಟಕ ಅಧ್ಯಕ್ಷ ಅಂಗಡಿ ಪಂಪಾಪತಿ, ಜಿಲ್ಲಾ ಹಾಗೂ ಮಂಡಲ ಮತ್ತು ಕೊಟ್ಟೂರು ಮಹಾ ಶಕ್ತಿ ಕೇಂದ್ರದ ಎಲ್ಲ ಪದಾಧಿಕಾರಿಗಳಿದ್ದರು.

ಆರೋಗ್ಯ ಜಾಗೃತಿ: ಡಾ.ಅನುಪಮಗೆ ಸನ್ಮಾನ

◆**ಬಳ್ಳಾರಿ:** ಇತ್ತೀಚೆಗೆ ಮಹಿಳಾ ಆರೋಗ್ಯ ಸುದ್ದಿಗಳು ರೋಗ ತಡೆಗಟ್ಟುವಿಕೆಯಲ್ಲಿ ಗಮನಾರ್ಹ ಪ್ರಗತಿಗಳ ಮೇಲೆ ಕೇಂದ್ರೀಕರಿಸುತ್ತಿವೆ. ಇದರಲ್ಲಿ ಎಂಡೊಮೆಟ್ರಿಯೋಸಿಸ್ ಆರಂಭಿಕ ಗುರುತಿಸುವಿಕೆಯ ಅಧ್ಯಯನಗಳು ಸೇರಿವೆ. ಪ್ರಮುಖ ಪ್ರವೃತ್ತಿಗಳು ಭಾರತದಲ್ಲಿ ಆರೋಗ್ಯ ಸೇವೆಯ ಪ್ರವೇಶವನ್ನು ಸುಧಾರಿಸುವುದು ಸೇರಿವೆ ಎಂದು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ವೈದ್ಯೆ ಡಾ.ಬಿ.ಕೆ.ಅನುಪಮ ಸುಂದರ್ ಅವರು ಹೇಳಿದರು.

ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ರಾವ್ ಬಹದ್ದೂರ್ ವೈ.ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಹಿಳಾಕೋಶ ಹಾಗೂ ಬಳ್ಳಾರಿಯ ಪ್ರಸೂತಿ ಸಮಾಜದ (ಎಫ್ ಒಜಿಎಸ್) ಆಶ್ರಯದಲ್ಲಿ ಮಹಿಳೆಯರಿಗೆ, ವಿದ್ಯಾರ್ಥಿನಿಯರಿಗೆ ಹಮ್ಮಿಕೊಂಡಿದ್ದ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಎಂಡೊಮೆಟ್ರಿಯೋಸಿಸ್ ಧೀರ್ಘಕಾಲದ, ಆಗಾಗ್ಗೆ ನೋವಿನಿಂದ ಕೂಡಿದ ಖಾಯಿಲೆಯಾಗಿದೆ. ಸಂತಾನೋತ್ಪತ್ತಿ ವಯಸ್ಸಿನ ಸುಮಾರು ಶೇ.10ರಷ್ಟು ಮಹಿಳೆಯರ ಮೇಲೆ ಪರಿಣಾಮ ಬೀರುತ್ತಿದೆ. ಇದು ತೀವ್ರ ಮುಟ್ಟಿನ ನೋವು, ಧೀರ್ಘಕಾಲದ ಶ್ರೇಣಿಯ ನೋವು, ಬಂಜೆತನ ಮತ್ತು ಆಯಾಸಕ್ಕೆ ಕಾರಣವಾಗಲಿದೆ ಎಂದರು. ಪ್ರಸೂತಿ, ಸ್ತ್ರೀರೋಗ ತಜ್ಞ ವೈದ್ಯರಾದ ಡಾ.ಲಕ್ಷ್ಮೀ ಪಾವನ ಅವರು ಮಾತನಾಡಿದರು. ಮಹಿಳಾ ಕೋಶದ ಸಂಯೋಜಕಿ ಡಾ.ಎಂ.ಎಸ್.ಶೋಭಾ ಸೇರಿದಂತೆ ಇತರರಿದ್ದರು. ನಂತರ ಡಾ.ಬಿ.ಕೆ.ಅನುಪಮ ಸುಂದರ್ ಅವರಿಗೆ ಹಾಗೂ ಡಾ.ಲಕ್ಷ್ಮೀ ಪಾವನ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.



ಬಳ್ಳಾರಿ: ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ರಾವ್ ಬಹದ್ದೂರ್ ವೈ.ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಹಿಳಾಕೋಶ ಹಾಗೂ ಬಳ್ಳಾರಿಯ ಪ್ರಸೂತಿ ಸಮಾಜದ (ಎಫ್ ಒಜಿಎಸ್) ಆಶ್ರಯದಲ್ಲಿ ಮಹಿಳೆಯರಿಗೆ, ವಿದ್ಯಾರ್ಥಿನಿಯರಿಗೆ ಹಮ್ಮಿಕೊಂಡಿದ್ದ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ವೈದ್ಯೆ ಡಾ.ಬಿ.ಕೆ.ಅನುಪಮ ಸುಂದರ್ ಮಾತನಾಡಿದರು.

ಪೊಲೀಸ್ ಧ್ವಜ ದಿನಾಚರಣೆ | ಅರುಣಕುಮಾರ ಸಲಹೆ

ದೈಹಿಕ, ಮಾನಸಿಕವಾಗಿ ಸದೃಢರಾಗಿ

◆**ಯಾದಗಿರಿ:** ಕಾನೂನು ಸುವ್ಯವಸ್ಥೆ ಕಾಪಾಡುವ ಹಾಗೂ ಸಾರ್ವಜನಿಕರ ಆಸ್ತಿ ಪಾಸ್ತಿ ರಕ್ಷಣೆಯಲ್ಲಿ ಕರ್ತವ್ಯನಿರತರಾಗಿರುವ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವಂತೆ ನಿವೃತ್ತ ಆರಕ್ಷಕ ಪೊಲೀಸ್ ಅಧೀಕ್ಷಕ ಅರುಣಕುಮಾರ್ ಕೊಳೂರ ಸಲಹೆ ನೀಡಿದರು.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಇಂದು ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ದಿನದ 24 ಗಂಟೆಗಳ ಕಾಲ ಒತ್ತಡದಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ತಮ್ಮ ಕೌಟುಂಬಿಕ ಜೀವನ ಸರಿಯಾಗಿರುವಂತೆ ನೋಡಿಕೊಂಡು ಅವರ ಯೋಗಕ್ಷೇಮದ ಜೊತೆಗೆ ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಂಡಲ್ಲಿ ಕರ್ತವ್ಯ ಸುಸೂತ್ರವಾಗಿ ನಿಭಾಯಿಸಲು ಸಾಧ್ಯ ಎಂದು ಹೇಳಿದರು.

ಕಾನೂನು ಸುವ್ಯವಸ್ಥೆ ಕಾಪಾಡಲು,ಅಪರಾಧ ತಡೆಯಲು ಹಗಲಿರುಳು ಶ್ರಮಿಸುವ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಸಾರ್ವಜನಿಕರೊಂದಿಗೆ ಉತ್ತಮವಾಗಿ, ಸೌಜನ್ಯಯುತವಾಗಿ ವರ್ತಿಸಬೇಕು. ಠಾಣೆಗೆ ನ್ಯಾಯ ಕೋರಿ ಬರುವ ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಮಕ್ಕಳೊಂದಿಗೆ ಸಹನೆಯಿಂದ ಉತ್ತಮವಾಗಿ ವ್ಯವಹರಿಸಬೇಕು. ಇದರಿಂದ ಇಲಾಖೆ ಗೌರವ ಹೆಚ್ಚುವ ಜತೆಗೆ ಸಾರ್ವಜನಿಕರಲ್ಲಿಯೂ ರಕ್ಷಣೆಯ ಭಾವನೆ ಮೂಡುತ್ತದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಎಎಸ್ಪಿ ಧರಣೇಶ ಎಸ್ .ಪಿ., ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆ-2026ರ ವರದಿ ವಾಚನ ಮಾಡಿ, ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆಯನ್ನು ಪ್ರತಿ ವರ್ಷ ಏ.2ರಂದು ರಾಜ್ಯಾದ್ಯಂತ ಆಚರಿಸಲಾಗುತ್ತಿದೆ ಎಂದು ವಿವರಿಸಿದರು.

ಎಸ್ಪಿ ಪೃಥ್ವಿಕ್ ಶಂಕರ್ ಮಾತನಾಡಿ, ಪೊಲೀಸ್ ಇಲಾಖೆಯಲ್ಲಿ ದಿನದ 24 ಗಂಟೆಗಳ ಕಾಲ ವಿಶ್ರಾಂತಿಯಿಲ್ಲದೆ, ಸಾರ್ವಜನಿಕರ ಜೀವನ ರಕ್ಷಣೆ, ಆಸ್ತಿ ಪಾಸ್ತಿ ರಕ್ಷಣೆ, ಮತ್ತು ಕಾನೂನು ಸುವ್ಯವಸ್ಥೆ ಕರ್ತವ್ಯದಲ್ಲಿ ತೊಡಗಿರುವ ಪೊಲೀಸ್ ಅಧಿಕಾರಿ, ಸಿಬ್ಬಂದಿ ಹಾಗೂ ಸಾರ್ವಜನಿಕರ ನಡುವೆ ಸಂಬಂಧವನ್ನು ಉತ್ತಮಗೊಳಿಸಲು ಪೊಲೀಸ್ ಧ್ವಜ ದಿನವನ್ನು ಆಚರಿಸಲಾಗುತ್ತದೆ ಎಂದರು.

ರಾಷ್ಟ್ರಧ್ವಜ ಹಾಗೂ ಪೊಲೀಸ್ ಧ್ವಜಕ್ಕೆ ಗೌರವ ಸಲ್ಲಿಸಲಾಯಿತು. ಧ್ವಜ ಚೀಟಿ ವಿತರಿಸಲಾಯಿತು. ನಿವೃತ್ತ ಪಿಎಸ್ಐಗಳಾದ ದೇವೇಂದ್ರಪ್ಪ ಧೂಳಖೇಡ, ಶಿವಕಾಂತ, ಭೀಮರಾಯ, ನಾನಾಗೌಡ, ಎಎಸ್ಐ ಭೀಮ ಶೆಟ್ಟಿ, ನಿವೃತ್ತ ಎಪಿಸಿ ಶಿವಮತ್ರ ಇವರನ್ನು ಸನ್ಮಾನಿಸಲಾಯಿತು.

ಡಿವೈಎಸ್ಪಿಗಳಾದ ಭರತ್ ಕುಮಾರ್ ತಳವಾರ, ಜಾವೇದ್ ಇನಾಂದಾರ್, ಸುರೇಶ್ ಉಪಸ್ಥಿತರಿದ್ದರು. ಸಂತೋಷ್ ನಿರೂಪಿಸಿದರು. ಪೆರೇಡ್ ಕಮಾಂಡರ್ ಲಚ್ಚಪ್ಪ ಚವ್ಹಾಣ ಅವರ ನೇತೃತ್ವ ದ ಕವಾಯತು ಗಮನ ಸೆಳೆಯಿತು.



ಆಧುನಿಕ ತಾಂತ್ರಿಕ ಜಗತ್ತಿನಲ್ಲಿ ಇಂದು ಇಂಟರ್ನೆಟ್, ಫೇಸ್ಬುಕ್, ಸಾಮಾಜಿಕ ಜಾಲತಾಣಗಳಲ್ಲಿ ಗಣನೀಯ ಬೆಳವಣಿಗೆಯಾಗಿದ್ದು ಪೊಲೀಸ್ ಸಿಬ್ಬಂದಿಗಳೂ ತಮ್ಮ ಕರ್ತವ್ಯದಲ್ಲಿ ಬದಲಾವಣೆ ತಂದುಕೊಳ್ಳಬೇಕು. ಆದರಂತೆ ಯಾವುದೇ ಮುಜುಗರಗಳಿಗೆ ಅವಕಾಶ ನೀಡದೆ ಜಾಗರೂಕತೆಯಿಂದ ಹಾಗೂ ತಾಳ್ಮೆಯಿಂದ ಕರ್ತವ್ಯ ನಿಭಾಯಿಸಬೇಕು.

■ **ಅರುಣಕುಮಾರ ಕೊಳೂರು, ನಿವೃತ್ತ ಆರಕ್ಷಕ ಪೊಲೀಸ್ ಅಧಿಕ್ಷಕ**

ಸ್ವಯಂ ಗಣತಿ ಪೂರ್ಣಗೊಳಿಸಲು ಕೈಜೋಡಿಸಿ

◆**ಸಿರುಗುಪ್ಪ:** ನಗರಸಭೆಯ ವ್ಯಾಪ್ತಿಯಲ್ಲಿ ನಡೆಯುವ ಜನಗಣತಿ ನಮ್ಮ ದೇಶದ ಭವಿಷ್ಯ ರೂಪಿಸುವ ಮಹತ್ವದ ಕಾರ್ಯ ಇದಾಗಿದ್ದು, ಇದು ದತ್ತಾಂಶ ಆಧಾರಿತ ನಿರ್ಧಾರಗಳಿಗೆ ಸಹಾಯ ಮಾಡಲಿದೆ.

ಆರೋಗ್ಯ ಶಿಕ್ಷಣ ವಸತಿ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸಂಪನ್ಮೂಲದ ಸಮರ್ಪಕ ಅಂಚಿಗೆಗೆ ದಾರಿ ತೋರಿಸುತ್ತದೆ. 2027ರ ಜನಗಣತಿ ನಿಮಿತ್ತ ನಾವು ಸ್ವಯಂಗಣತಿ ವ್ಯವಸ್ಥೆಯನ್ನು ಪರಿಚಯಿಸಿದ್ದೇವೆ. 2026 ಏ.1ರಿಂದ 15ರವರೆಗೆ ಪ್ರತಿ ಕುಟುಂಬವು ತಮ್ಮ ಮಾಹಿತಿಯನ್ನು ಆನ್‌ಲೈನ್ https://secensus.gov.in ನಲ್ಲಿ ಭರ್ತಿ ಮಾಡಬಹುದು ಎಂದು ನಗರಸಭೆಯ ಪೌರಾಯುಕ್ತರು ಹಾಗೂ 2027 ಜನಗಣತಿ ನೋಡಲ್ ಅಧಿಕಾರಿ ಗಂಗಾಧರ ತಿಳಿಸಿದ್ದಾರೆ.



ಈ ಪ್ರಕ್ರಿಯೆ ಸರಳ ಮತ್ತು ಸುರಕ್ಷಿತವಾಗಿದೆ, ಮೊಬೈಲ್ ಫೋನ್ ಸಂಖ್ಯೆ ಮತ್ತು ಓಟಿಪಿ ಮೂಲಕ ಸುಲಭವಾಗಿ ಈ ಪ್ರಕ್ರಿಯೆ ಪೂರ್ಣಗೊಳಿಸಬಹುದು. ಇದರಲ್ಲಿ ನಿಮ್ಮ ಭಾಗವಹಿಸುವಿಕೆ ಅತ್ಯಂತ ಮುಖ್ಯ ಕರ್ನಾಟಕದ ಅಭಿವೃದ್ಧಿಗೆ ನಿಮ್ಮ ಕೊಡುಗೆ, ಇಂದು ನೀವು ನೀಡುವ ನಿಖರ ಮಾಹಿತಿ ನಾಳೆಯ ಉತ್ತಮ ನೀತಿಗಳು ಸೇವೆಗಳಿಗೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ಆಧಾರವಾಗುತ್ತದೆ. 2026 ಏ.16ರಿಂದ ಮೇ 15ರವರೆಗೆ ಗಣತಿದಾರರು ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಾರೆ. ಈ ಗಣತಿಯಲ್ಲಿ ಯಾರೂ ಬಿಟ್ಟು ಹೋಗದಂತೆ ನಾವು ಖಚಿತಪಡಿಸುತ್ತೇವೆ ಎಂದಿದ್ದಾರೆ.



ಕಲಬುರಗಿ: ಜಿಲ್ಲೆಯ ಆಳಂದ ತಾಲೂಕಿನ ಸುಕ್ಷೇತ್ರ ಝುಳಕಿ (ಬಿ) ಗ್ರಾಮದ ಆರಾಧ್ಯ ದೈವ ಶ್ರೀಭೋಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಗುರುವಾರ ಅಡವಿ ಭೋಗೇಶ್ವರನ ಬಳಿ ಅದ್ದೂರಿಯಾಗಿ ಉಚ್ಚಾಯಿ ಕಾರ್ಯಕ್ರಮ ನೆರವೇರಿತು. ಗ್ರಾಮದ ಸಾವಿರಾರು ಭಕ್ತರು ಉಪಸ್ಥಿತರಿದ್ದರು.

ಮೃತ ಕುಟುಂಬಸ್ಥರಿಗೆ ಶಾಸಕ ಚವ್ಹಾಣ ಸಾಂತ್ವನ

◆**ಬೀದರ:** ಔರಾದ(ಬಿ) ತಾಲೂಕಿನ ಬೋರಾಳ ಗ್ರಾಮದಲ್ಲಿ ನಡೆದ ದುರ್ಘಟನೆಯಲ್ಲಿ ಕೊಟ್ಟಿಗೆಗೆ ಬೆಂಕಿ ತಗುಲಿ ಪ್ರಾಣ ಕಳೆದುಕೊಂಡ ಶಂಕರ ಈರಗೊಂಡ ಮೇತ್ರೆ ಅವರ ಮನೆಗೆ ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಗುರುವಾರ ಭೇಟಿ ನೀಡಿ ಸಾಂತ್ವನ ಹೇಳಿದರು.

ಕುಟುಂಬಸ್ಥರುದುಃಖವನ್ನು ಹಂಚಿಕೊಂಡರು. ಘಟನೆಯ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ. ಘಟನೆಯಿಂದ ಬಹಳಷ್ಟು ನೋವಾಗಿದೆ. 45ಕ್ಕೂ ಹೆಚ್ಚು ಮೇಕೆಗಳು ಮತ್ತು ಸಂಗ್ರಹಿಸಿಟ್ಟಿದ್ದ ದವಸ ಧಾನ್ಯಗಳೆಲ್ಲವೂ ಸುಟ್ಟು ಹೋಗಿವೆ. ಇಂತಹ ಅಕಾಲಿಕ ದುರ್ಘಟನೆ ಸಂಭವಿಸಬಾರದು. ದೇವರು ಮೃತರ ಆತ್ಮಕ್ಕೆ ಶಾಂತಿ ನೀಡಲಿ ಮತ್ತು ಕುಟುಂಬಕ್ಕೆ ಈ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸಿದರು.

ಕುಟುಂಬದ ಮುಖ್ಯ ಆಧಾರವಾಗಿದ್ದ ವ್ಯಕ್ತಿಯನ್ನು ಕಳೆದುಕೊಂಡಿರುವುದು ದೊಡ್ಡ ನಷ್ಟವಾಗಿದ್ದು, ಈ ಸಂಕಷ್ಟದ ಸಮಯದಲ್ಲಿ ತಮ್ಮಿಂದ ಸಾಧ್ಯವಿರುವ ಎಲ್ಲಾ ಸಹಾಯ ಒದಗಿಸಲಾಗುವುದು. ಸರ್ಕಾರದಿಂದ ಸೂಕ್ತ ಪರಿಹಾರ ದೊರಕಿಸಲು ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದರು. ಇದೇ ವೇಳೆ ಕುಟುಂಬಸ್ಥರಿಗೆ ವೈಯಕ್ತಿಕ ಧನಸಹಾಯ ಮಾಡಿದರು.

ಬಾದಲಗಾಂವ ಗ್ರಾಮಕ್ಕೆ ಭೇಟಿ: ಕೃಷಿ ಚಟುವಟಿಯಲ್ಲಿ ತೊಡಗಿದ ವೇಳೆ ಆಕಸ್ಮಿಕವಾಗಿ ಸಿಡಿಲು ಬಡಿದು ಮೃತಪಟ್ಟ ಬಾದಲಗಾಂವ ಗ್ರಾಮದ ರಾಹುಲ ಭಾಸ್ಕರ ಅವರ ಮನೆಗೆ ಶಾಸಕರು ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ವೈಯಕ್ತಿಕ ಧನಸಹಾಯ ಮಾಡಿದರು.

ಕುಟುಂಬದ ಏಕೈಕ ಆದಾಯ ಮೂಲವಾಗಿರುವ ಯುವಕ ನಿಧನರಾಗಿರುವುದು ಭಾರೀ ಆಘಾತವನ್ನುಂಟುಮಾಡಿದೆ. ನಾನು ನಿಮ್ಮ ಕುಟುಂಬದ ಜೊತೆಗಿದ್ದೇನೆ. ಇಂತಹ ಸಂದರ್ಭದಲ್ಲಿ ಕುಟುಂಬಸ್ಥರು ಧೈರ್ಯ ಕಳೆದುಕೊಳ್ಳಬಾರದು. ನಾನು ಎಲ್ಲ ರೀತಿಯ ಸಹಕಾರ ನೀಡುತ್ತೇನೆ. ಸರ್ಕಾರ ದಿಂದಲೂ ಶೀಘ್ರ ಪರಿಹಾರ ಒದಗಿಸಲು ಪ್ರಯತ್ನಿಸುವೆ ಎಂದು ಭರವಸೆ ನೀಡಿದರು. ತಹಶೀಲ್ದಾರರಾದ ಮಹೇಶ ಪಾಟೀಲ, ಮುಖಂಡರಾದ ಶಿವಾಜಿರಾವ ಪಾಟೀಲ ಮುಂಗನಾಳ, ಯಾದುರಾವ ಮೇತ್ರೆ, ಅನೀಲ ನಾರಾಯಣಪೂರ, ದಾಮೋದರ ಶೇರಿಕಾರ, ಮಧುಸುಧನ ಬಿರಾದಾರ, ಜನಾರ್ಧನ ಪಾಟೀಲ, ಉದ್ಧವ್ ಪಾಟೀಲ, ಬಜರಂಗ ಪಾಂಡ್ರೆ, ಗಣಪತಿ ಇತರರಿದ್ದರು.



ಎಲ್ಲೆಂದರಲ್ಲಿ ಕಸ ಎಸೆಯಬೇಡಿ: ಗಂಗಣ್ಣ



◆**ಹಗರಿಬೊಮ್ಮನಹಳ್ಳಿ:** ಕಸವನ್ನು ಎಲ್ಲೆಂದರಲ್ಲಿ ಎಸೆಯದೇ ಸ್ವಚ್ಛತೆ ಕಾಪಾಡಿ ಸಾಂಕ್ರಾಮಿಕ ರೋಗಗಳು ಹರಡದಂತೆ ಜಾಗ್ರತೆ ವಹಿಸಿರಿ ಎಂದು ಪುರಸಭೆ ಸದಸ್ಯ ಬಿ.ಡಿ.ಗಂಗಾಧರ ತಿಳಿಸಿದರು. ಪಟ್ಟಣದ ಪುರಸಭೆ ವ್ಯಾಪ್ತಿಯ 16ನೇ ವಾರ್ಡ್‌ನ ಕೆವಿಒಆರ್ ಕಾಲೋನಿ ವ್ಯಾಪ್ತಿಯ ಶ್ರೀಪತ್ರಿ ಬಸವೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಇಲ್ಲಿನ ನಿವಾಸಿಗಳಿಗೆ ಮನೆ ಮನೆಗೆ ತೆರಳಿ ಸ.ಸು.350 ಕ್ಕೂ ಹೆಚ್ಚು ಕಸದ ಬುಟ್ಟಿಗಳನ್ನು ವಿತರಿಸಿದರು. ಬಳಿಕ ಮಾತನಾಡಿ, ಕೆವಿಒಆರ್ ಕಾಲೋನಿಯ ನಿವಾಸಿಗಳಿಗೆ ಪ್ರತಿ ಮನೆಗೆ ಎರಡು ಕಸದ ಬುಟ್ಟಿಗಳನ್ನು ವಿತರಿಸಲಾಗಿದೆ. ಸಾರ್ವಜನಿಕರು ಈ ಬುಟ್ಟಿಗಳಲ್ಲಿ ಹಸಿ ಕಸ, ಒಣ ಕಸವನ್ನು ಬೇರ್ಪಡಿಸಿ ಈ ಕಸದ ಬುಟ್ಟಿಯಲ್ಲಿ ಹಾಕಿ ನಿಮ್ಮ ನಿಮ್ಮ ಮನೆಯಲ್ಲಿ ಕಸವನ್ನು ಎಲ್ಲೆಂದರಲ್ಲಿ ಹಾಕದೇ ಪುರಸಭೆಯ ಕಸದ ವಾಹನಕ್ಕೆ ಹಾಕಿ ಸ್ವಚ್ಛತೆಗೆ ಸಹಕರಿಸಿ ಎಂದರು. ಪುರಸಭೆ ಆರೋಗ್ಯ ನಿರೀಕ್ಷಕಿ ಜಯಲಕ್ಷ್ಮೀ, ನೈರ್ಮಲ್ಯ ಮೇಸ್ತ್ರಿ ಮುಖಂಡ ಎಸ್.ಅಂಬಣ್ಣ, ಅರ್ಚಕ ಕೊಟ್ರಯ್ಯ, ಪ್ರದೀಪ್ ಮಹಿಳೆಯರು ಸ್ಥಳೀಯ ನಾಗರಿಕರು ಪೌರ ಕಾರ್ಮಿಕರು ಇದ್ದರು.

ಗುರುರಾಜ ಅಧಿಕಾರ ಸ್ವೀಕಾರ

◆**ಯಲಬುರ್ಗಾ:** ಸಮೀಪದ ಬೇವೂರು ಪೊಲೀಸ್ ಠಾಣೆಗೆ ಬುಧವಾರ ನೂತನ ಪಿಎಸ್ಐ ಆಗಿ ಗುರುರಾಜ ಟಿ.ಯಾದವ ಅವರು ಅಧಿಕಾರ ಸ್ವೀಕರಿಸಿದರು. ಈ ಹಿಂದೆ ಅವರು ಕುಕನೂರು ಪೊಲೀಸ್ ಠಾಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇದೀಗ ಬೇವೂರು ಠಾಣೆಗೆ ವರ್ಗಾವಣೆಯಾಗಿದ್ದಾರೆ. ಅಧಿಕಾರ ಸ್ವೀಕರಿಸಿದ ನಂತರ ಮಾತನಾಡಿದ ಅವರು, ಠಾಣಾ ವ್ಯಾಪ್ತಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ತಮ್ಮ ಮೊದಲ ಆದ್ಯತೆಯಾಗಿದ್ದು, ಸಾರ್ವಜನಿಕರ ಸಹಕಾರದೊಂದಿಗೆ ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕುವುದಾಗಿ ಹೇಳಿದರು. ಪೊಲೀಸ್ ಸಿಬ್ಬಂದಿ, ಸಾರ್ವಜನಿಕರು ನೂತನ ಪಿಎಸ್ಐ ಅವರನ್ನು ಸ್ವಾಗತಿಸಿದರು.



ವೀರಭದ್ರೇಶ್ವರ ಸ್ವಾಮಿಯ ಅಗ್ನಿ ಮಹೋತ್ಸವ

◆**ಹೂವಿನಹಡಗಲಿ:** ಪ್ರತಿ ವರ್ಷದಂತೆ ಹಂಪಿ ಹುಣ್ಣಿಮೆ ನಿಮಿತ್ತ ತಾಲೂಕಿನ ಹೊಳಗುಂದಿಯಲ್ಲಿ ಗುರುವಾರ ಬೆಳಿಗ್ಗೆ 12ಗಂಟೆಗೆ ವೀರಭದ್ರೇಶ್ವರ ಸ್ವಾಮಿಯ ಅಗ್ನಿ ಮಹೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು.

ದೇಗುಲದಲ್ಲಿ ಬೆಳಿಗ್ಗೆ ವಿಶೇಷ ಪೂಜೆ, ಅಭಿಷೇಕ ನಡೆಸಲಾಗಿತ್ತು. ಪುಷ್ಪಾಲಂಕೃತ ಪಲ್ಲಕ್ಕಿಯಲ್ಲಿ ವೀರಭದ್ರೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ಸಮಾಳ, ನಂದಿಕೋಲು, ಮಂಗಳ ವಾದ್ಯಗಳ ಭವ್ಯ ಮೆರವಣಿಗೆಯ ಮೂಲಕ ಬಾವಿಹಳ್ಳಿಯಲ್ಲಿ ಗಂಗೆ ಪೂಜೆ ನಂತರ ದೇಗುಲದ ಬಳಿ ಕರೆತರಲಾಯಿತು.

ಇದೇ ವೇಳೆ ಪುರವಂತರು ಸ್ವಾಮಿಯ ಮಹಿಮೆಯ ವಡಪುಗಳನ್ನು ಹೇಳುತ್ತಾ ಕಲಾ ಪ್ರದರ್ಶನ ನೀಡಿದರು. ಹರಕೆ ಹೊತ್ತ ಭಕ್ತರು ಶಸ್ತ್ರ ಹಾಕಿಸಿಕೊಂಡು ಭಕ್ತಿಯ ಪರಾಕಾಷ್ಠೆ ಮೆರೆದರು.

ವೀರಭದ್ರೇಶ್ವರ ದೇವಾಲಯ ಬಳಿ ಅಣಿಗೊಳಿಸಿದ್ದ ಅಗ್ನಿಕುಂಡಕ್ಕೆ ಸಾಂಪ್ರದಾಯಿಕ ಪೂಜೆ ನೆರವೇರಿಸುತ್ತಿದ್ದಂತೆ ಸ್ವಾಮಿಯ ಪಲ್ಲಕ್ಕಿ ಹೊತ್ತ ಭಕ್ತರು ಅಗ್ನಿ ಕುಂಡದಲ್ಲಿ ನಡೆದರು. ನಂತರ ಹರಕೆ ಹೊತ್ತ ಭಕ್ತರು ನಿಗಿನಿಗಿ ಕೆಂಡ ತುಳಿದು ಭಕ್ತಿಯನ್ನು ಸಮರ್ಪಿಸಿದರು. ಅಗ್ನಿ ಹಾಯುವ ಕಾರ್ಯಕ್ರಮ ನೋಡಲು ಜನರು ಆಗಮಿಸಿದ್ದರು. ನಂತರ ಅನ್ನಸಂತರ್ಪಣೆ ಏರ್ಪಡಿಸಿದ್ದರು. ದೇವಸ್ಥಾನ ಸಮಿತಿ ಅಧ್ಯಕ್ಷ ಮುದೇಗೌಡ್ರ ಪ್ರಕಾಶ್, ಸೇರಿದಂತೆ ಸರ್ವ ಸದಸ್ಯರು, ಸ್ಥಳೀಯ ಮುಖಂಡರು ಇದ್ದರು.



ಶ್ರೀಗಳ ಅದ್ದೂರಿ ಅಡ್ಡ ಪಲ್ಲಕ್ಕಿ ಉತ್ಸವ

◆**ಕೊಟ್ಟೂರು:** ತಾಲೂಕಿನ ಹರಾಳು ಗ್ರಾಮದಲ್ಲಿ ಉಜ್ಜಯಿನಿ ಸದ್ಧರ್ಮ ಪೀಠದ ಜಗದ್ಗುರು ಶ್ರೀಸಿದ್ಧಲಿಂಗ ಶಿವಾಚಾರ್ಯ ರಾಜದೇಶೀಕೇಂದ್ರ ಭಗವತ್ಪಾದ ಮಹಾಸ್ವಾಮಿಗಳ ಅಡ್ಡ ಪಲ್ಲಕ್ಕಿ ಮಹೋತ್ಸವ ಗುರುವಾರ ಸಂಜೆ ಅದ್ದೂರಿಯಾಗಿ ಜರುಗಿತು.

ಗ್ರಾಮದಲ್ಲಿ ದೇವಸ್ಥಾನದ ಕಳಸಾರೋಹಣ. ಮೂರ್ತಿಗಳ ಮತ್ತು ಕರಿಗಲ್ಲು ಪ್ರತಿಷ್ಠಾಪನ ಕಾರ್ಯಕ್ರಮದ ಪ್ರಯುಕ್ತ ಹಮ್ಮಿಕೊಂಡಿದ್ದ ಉತ್ಸವದಲ್ಲಿ ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು. ಸಂಜೆ ಜಗದ್ಗುರುಗಳು ಗ್ರಾಮಕ್ಕೆ ಆಗಮಿಸುತ್ತಿದಂತೆ ಮಹಿಳೆಯರು ಕಳಸ ಬೆಳಗಿ ಬರ ಮಾಡಿಕೊಂಡರು. ನಂತರ ಪಲ್ಲಕಿಯಲ್ಲಿ ಸ್ವಾಮಿಗಳು ಆಸೀನರಾಗುತ್ತಿದಂತೆ ಜಯಘೋಷ ಮಾಡುತ್ತಾ ಭಕ್ತರು ಪಲ್ಲಕಿ ಹೊತ್ತು ಸಾಗಿದರು. ಸಮಾಳ ನಂದೀಕೋಲು, ಡೊಳ್ಳು, ಹಲಗೆ, ಡ್ರಮ್ಸ್ ಗಳ ಬಡಿತಕ್ಕೆ ಯುವಕರು ಹೆಜ್ಜೆ ಹಾಕಿದರು. ಗ್ರಾಮದ ಸುತ್ತ ಸಾಗಿದ ಉತ್ಸವ ದೇವಸ್ಥಾನ ಬಳಿ ಬಂದು ಸಮಾಪ್ತಿ ಗೊಂಡಿತು. ದೇವಸ್ಥಾನಗಳ ಸಮಿತಿಯವರು, ಮುಖಂಡರು ಇದ್ದರು. ಗ್ರಾಮದ ಹಾಗೂ ಸುತ್ತಲಿನ ಹಳ್ಳಿಗಳ ಜನರು ಉತ್ಸವದಲ್ಲಿ ಭಾಗವಹಿಸಿದ್ದರು.



ದವನದ ಹುಣ್ಣಿಮೆ: ವಿವಿಧ ಪೂಜೆ

◆**ಬಳ್ಳಾರಿ:** ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಸಿಡಿಗಿನಮೊಳ ಗ್ರಾಮದ ಶ್ರೀಶಾಕಾಂಬರಿ ದೇವಿ ದೇವಾಲಯದಲ್ಲಿ

ದವನದ (ಹಂಪಿ) ಹುಣ್ಣಿಮೆ ನಿಮಿತ್ತ ಗುರುವಾರ ವಿವಿಧ ಪೂಜೆಗಳು ವಿಜೃಂಭಣೆಯಿಂದ ನಡೆದವು.



ಶ್ರೀಬನಶಂಕರಿ ದೇವಿಗೆ ವಿಶೇಷ ಪೂಜೆ, ರುದ್ರಾಭಿಷೇಕ, ಪಂಚಮಾಮೃತ ಅಭಿಷೇಕ, ದೇವಿಗೆ ವಿಶೇಷ ಅಲಂಕಾರ, ಹೋಮ-ಹವನ, ಲಲಿತಾ ಸಹಸ್ರನಾಮ ಪಾರಾಯಣ , ಮಂತ್ರಪುಷ್ಪಂ, ದೇವಿ ಸ್ತುತಿ ಬನಶಂಕರಿ ಸ್ತೋತ್ರ, ಬನಶಂಕರಿ ಅಷ್ಟೋತ್ತರ ಪಾರಾಯಣ, ಮಹಾಲಕ್ಷ್ಮೀ ಅಷ್ಟಕ, ದೇವಿ ಖಡ್ಗಮಾಲಾ ಸ್ತೋತ್ರಂ, ಲಿಂಗಾಷ್ಟಕ, ಕುಂಕುಮಾರ್ಚನೆ, ಹೋಮ ಪೂರ್ಣಾಹುತಿ, ಮಹಾ ಮಂಗಳಾರತಿ, ಭಕ್ತರಿಗೆ ಮಹಾಪ್ರಸಾದ ವಿನಿಯೋಗ ಸೇರಿದಂತೆ ವಿವಿಧ ಪೂಜಾ ಕಾರ್ಯಕ್ರಮಗಳು ನಡೆದವು. ಶಿಡಿನಮೊಳ ಗ್ರಾಮದ ಮಂಡೆರು ತಿಪ್ಪಯ್ಯ ಮತ್ತು ಕಾರೇಕಲ್ಲು ಗ್ರಾಮದ ವಿಶಾಲಾಕ್ಷಿ ಕುಟುಂಬದವರು, ಹೋಮ ಪೂಜೆ ಹಾಗೂ ದಾಸೋಹ ಸೇವೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು.

ಪ್ರತಿ ಹುಣ್ಣಿಮೆ ದಿನದಂದು ದೇವಾಲಯದಲ್ಲಿ ದಾಸೋಹ ಸೇವೆ ಇರಲಿದೆ, ದಾಸೋಹಕ್ಕೆ ಸಹಾಯ ಮಾಡುವ ಭಕ್ತರು ಧನ-ಧಾನ್ಯರೂಪದಲ್ಲಿ ಸಹಾಯ ಮಾಡಬಹುದು ಎಂದು ದೇಗುಲ ಸಮಿತಿ ತಿಳಿಸಿದ್ದಾರೆ.

ಪೊಲೀಸರ ಕರ್ತವ್ಯ ಶೌರ್ಯದ ಪ್ರತೀಕ: ಸಲೀಂ ಪಾಷಾ

◆**ವಿಜಯನಗರ:** ಪೊಲೀಸರ ಶೌರ್ಯ, ತ್ಯಾಗ ಮತ್ತು ಸಾರ್ವಜನಿಕರು ಅವರ ಮೇಲಿಟ್ಟ ನಂಬಿಕೆಯ ಪ್ರತೀಕ ದಿನವಾಗಿದೆ ಎಂದು ನಿವೃತ್ತ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲೀಂ ಪಾಷಾ ಹೇಳಿದರು.

ಹೊಸಪೇಟೆಯ ಟಿಬಿ ಡ್ಯಾಂನಲ್ಲಿರುವ ಜಿಲ್ಲಾ ಪೊಲೀಸ್ ಮೈದಾನದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಪೊಲೀಸ್ ಧ್ವಜ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಅಪರಾಧಗಳ ಸ್ವರೂಪ ಬದಲಾಗುತ್ತಿದೆ. ಸೈಬರ್ ಕ್ರೈಂ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಅಪರಾಧ ಕೃತ್ಯಗಳು ನಡೆಯುತ್ತಿದ್ದು, ಪೊಲೀಸರ ಕೆಲಸದ ಒತ್ತಡ ಹೆಚ್ಚುತ್ತಿದೆ. ಯಾವುದೇ ಗಲಾಟೆ, ಗಲಭೆಗಳು ನಡೆದ ಬಳಿಕ ಘಟನಾ ಸ್ಥಳದಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ. ಆದರೆ, ನಮ್ಮಲ್ಲಿರುವ ಬೀಟ್ ಪೊಲೀಸರ ಮೂಲಕ ಬರುವ ಸುಳಿವು ಆಧರಿಸಿ ಮುಂಜಾಗ್ರಾ ಕ್ರಮ ಜರುಗಿಸಿದರೆ, ಗಲಬೆಗಳಿಗೆಕಡಿವಾಣಹಾಕಬಹುದು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಶ್ರೀಹರಿ ಬಾಬು, ಸಂತೋಷ್ ಚೌಹ್ವಾಣ್, ಕೋದಂಡ ಪಾಣಿ ಮೂವರು ಅಧಿಕಾರಿಗಳಿಗೆ ಮುಖ್ಯಮಂತ್ರಿ ಪದಕ ದೊರೆತಿರುವುದು ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಮಾತನಾಡಿ, ವಿಜಯನಗರ ಜಿಲ್ಲಾ ಪೊಲೀಸ್ ಘಟಕವು ತನ್ನ ಅಧಿಕಾರಿಗಳು ಮತ್ತು ಸಿಬ್ಬಂದಿಯ ಹಿತರಕ್ಷಣೆಗಾಗಿ 2025-26ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ವಿವಿಧ ಕಲ್ಯಾಣ ಕಾರ್ಯಕ್ರಮಗಳ ವಿವರಗಳನ್ನು ಬಿಡುಗಡೆ ಮಾಡಿದೆ. ಸಿಬ್ಬಂದಿಗಾಗಿ ವಾರ್ಷಿಕ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿದೆ. ಆರೋಗ್ಯ ಭಾಗ್ಯ ಯೋಜನೆಯಡಿ 2025 ಏಪ್ರಿಲ್ 1 ರಿಂದ ಈವರೆಗೆ ಒಟ್ಟು 268 ಜನರು (ಸಿಬ್ಬಂದಿ ಮತ್ತು ಕುಟುಂಬದವರು) ವಿವಿಧ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದಿದ್ದಾರೆ. ಪೊಲೀಸ್ ಕಲ್ಯಾಣ ನಿಧಿಯಿಂದ ಪೊಲೀಸ್ ಮಕ್ಕಳ ವಿದ್ಯಾಭ್ಯಾಸಕ್ಕಾಗಿ 1.25 ಲಕ್ಷ, ಅಧಿಕಾರಿ, ಸಿಬ್ಬಂದಿ ಮತ್ತು ಅವರ ಕುಟುಂಬದವರಿಗೆ ಕನ್ನಡಕ ಖರೀದಿಗಾಗಿ 71,540, ರೂ. 4 ಜನರಿಗೆ ಮರಣೋತ್ತರ ಸಹಾಯಧನವಾಗಿ 60 ಸಾವಿರ ರೂ. ಹಾಗೂ 21 ವಿವಿಧ ದರ್ಜೆಯ ಅಧಿಕಾರಿ ಮತ್ತು ಸಿಬ್ಬಂದಿಗೆ ಸನ್ಮಾನಕ್ಕಾಗಿ 1.05 ಲಕ್ಷ ರೂ. ಸೇರಿ 12.61ಲಕ್ಷ ರೂ. ಧನಸಹಾಯ ನೀಡಲಾಗಿದೆ.

ಕಾರ್ಯಕ್ರಮದ ಆರಂಭ ದಲ್ಲಿ ಇಲಾಖೆಯ 6 ತುಕಡಿ ಗಳಿಂದ ಆಕರ್ಷಕ ಪೆರೇಡ್ ನಡೆಸಲಾಯಿತು.

ಎಎಸ್ಪಿ ಮಂಜುನಾಥ್ ಸ್ವಾಗತಿಸಿದರು. ಪೊಲೀಸ್ ಉಪಾಧೀಕ್ಷಕ ಡಾ.ಮಂಜುನಾಥ್ ವಂದಿಸಿದರು.